ಮಂಗಳೂರು

ಶನಿವಾರ, 20 ಜೂನ್ 2026

ಸಂಪುಟ 48, ಸಂಚಿಕೆ 93, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫುಟ್‌ಪಾತ್‌ನಲ್ಲಿ ನಡೆ ಮೂಲಭೂತ ಹಕ್ಕು | ೦೨
ಇಂದು ಬಂಗಾಳಕ್ಕೆ ಪ್ರಧಾನಿ ಮೋದಿ | ೦೨
ಟ್ರಂಪ್‌ಗೆ ಮೆಲೋನಿ ಛೀಮಾರಿ | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮಘೆ

ದಿನದ ಮಾತು

ಒಬ್ಬನಲ್ಲಿ ನೆಲೆಸಿರುವ ಉತ್ಸಾಹವೇ ಅವನ ಸ್ಥಿರವಾದ ಆಸ್ತಿ ಆಗುತ್ತದೆ.
▲ತಿರುವಳ್ಳುವರ್

ಸಂಸ್ಕಾರ ಬಯಸುವ ವಿಶುದ್ಧ ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಟೆಲಿಗ್ರಾಮ್ ನಿಷೇಧವನ್ನು ಎತ್ತಿಹಿಡಿದ ದಿಲ್ಲಿ ಹೈಕೋರ್ಟ್

• **ಹೊಸದಿಲ್ಲಿ:** ನೀಟ್–ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ ಜೂ.22ರವರೆಗೆ ಟೆಲಿಗ್ರಾಮ್ ಮೇಲೆ ಕೇಂದ್ರ ಸರ್ಕಾರ ಹೇರಿದ್ದ ತಾತ್ಕಾಲಿಕ ನಿಷೇಧವನ್ನು ದಿಲ್ಲಿ ಹೈಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ. ಟೆಲಿಗ್ರಾಮ್ ಸಲ್ಲಿಸಿದ್ದ ದೂರನ್ನು ದಿಲ್ಲಿ ನ್ಯಾಯಪೀಠ ತಿರಸ್ಕರಿಸಿದೆ. ಜೂ.30ರವರೆಗೆ ಮೆಸೇಜ್ ಎಡಿಟಿಂಗ್ ಸೌಲಭ್ಯ ನಿರ್ಬಂಧಿಸಲು ಕೇಂದ್ರ ಸರ್ಕಾರ ಆದೇಶಿಸಿತ್ತು. ಕೇಂದ್ರ ಸರ್ಕಾರ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅನ್ವಯದಲ್ಲಿ ಟೆಲಿಗ್ರಾಮ್ ಮೇಲೆ ನಿಷೇಧ ಹೇರಿದ ಪ್ರಕ್ರಿಯೆ ನ್ಯಾಯಬದ್ಧವಾಗಿದೆ ಎಂದು ನ್ಯಾಯಮೂರ್ತಿ ತೇಜಸ್ ಕರಿಯಾ ಅವರ ನೇತೃತ್ವದ ನ್ಯಾಯಪೀಠ ಹೇಳಿದೆ.

ಜಪಾನ್‌ನಲ್ಲಿ 5 ದಿನಗಳ ಭಗವದ್ಗೀತಾ ಮಹೋತ್ಸವ

• ಪುಟ ೨

ಕರಾವಳಿ ಪ್ರದೇಶದಲ್ಲಿಯೇ ಸಚಿವ ಸಂಪುಟ ಸಭೆ: ಡಿಕೆಶಿ ಘೋಷಣೆ

• **ಬೆಂಗಳೂರು:** ರಾಜ್ಯದ ಕರಾವಳಿ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ಕರಾವಳಿ ಪ್ರದೇಶದಲ್ಲಿಯೇ ಸಚಿವ ಸಂಪುಟ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಕರಾವಳಿ ಪ್ರವಾಸೋದ್ಯಮ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಸಿಆರ್‌ಝಡ್ ಹಾಗೂ ಅರಣ್ಯ ಇಲಾಖೆಯಿಂದ ಉಂಟಾಗುತ್ತಿರುವ ತಾಂತ್ರಿಕ ಸಮಸ್ಯೆಗಳ ಕುರಿತು 15 ರಿಂದ 20 ದಿನಗಳೊಳಗೆ ಸಮಗ್ರ ವರದಿ ಸಿದ್ಧಪಡಿಸಿ, ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳನ್ನೂ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹೂಡಿಕೆದಾರರಿಗೆ ಸುಗಮ ಮತ್ತು ಸರಳ ವ್ಯವಸ್ಥೆ ಕಲ್ಪಿಸಬೇಕು. ವಿವಿಧ ಇಲಾಖೆಗಳ ಅನುಮತಿಗಳಿಂದ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸಿ, ಏಕಗವಾಕ್ಷಿ

➡ಪುಟ ೯



ನೀಟ್ ಮರುಪರೀಕ್ಷೆ, ಸಂಪೂರ್ಣ ಸುರಕ್ಷತೆ

• ಪುಟ ೨

ಸುದ್ದಿ ಸಮಗ್ರ

ಗೃಹಲಕ್ಷ್ಮಿಯರಿಗೆ ಧ್ವನಿ ಸಂದೇಶ | ಅನ್ಯರಾಜ್ಯ ಖಾತೆಗೆ ತಡೆ: ಸಿಎಂ

ರಾಜ್ಯದವರಿಗೇ ಗ್ಯಾರಂಟಿ

• **ಬೆಂಗಳೂರು:** ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲ್‌ಗೆ ವಾಯ್ಸ್ ಮೆಸೇಜ್ ಮೂಲಕ ಖಚಿತಪಡಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಜರುಗಿದ ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆ ನಡೆಸಿದ ಅವರು, ಫಲಾನುಭವಿಗಳ ಬ್ಯಾಂಕ್ ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರೆ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಇವುಗಳಿಗೆ ತಡೆ ಹಾಕಬೇಕು. ನಮ್ಮ ರಾಜ್ಯದ ಯೋಜನೆಗಳು ನಮ್ಮ ರಾಜ್ಯದ ಫಲಾನುಭವಿಗಳಿಗೆ ಮಾತ್ರ ಸಿಗಬೇಕು. ಇತರೆ ರಾಜ್ಯದ ಮತದಾರರಿಗೆ ಯೋಜನೆಯ ಲಾಭ ಆಗುತ್ತಿದೆ. ಇದನ್ನು ತಡೆಯಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.



ಎಜಿ ವರದಿ ಬಗ್ಗೆ ಚರ್ಚೆ: ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ. ಮೂರು ಲಕ್ಷ ಕಂತುಗಳಲ್ಲಿ ಒಟ್ಟು 60 ಕೋಟಿ ರೂ. ಹೋಗಿದೆ ಎನ್ನುವ ಬಗ್ಗೆ ಎಜಿ ಅವರ ವರದಿ ಬಂದಿದೆ. ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದನ್ನು ಎಜಿ ವರದಿಯಲ್ಲಿ ಉಲ್ಲೇಖವಾಗಿದೆ. ಹಿಂದೆ ಪಡೆದ ಅರ್ಜಿಗಳಲ್ಲಿ ಉಲ್ಲೇಖವಾಗಿರುವ ಅಂಶಗಳ ನೈಜತೆ ಬಗ್ಗೆ ಪರಿಶೀಲನೆ ನಡೆಸದಿರುವ ಬಗ್ಗೆ ಪ್ರಸ್ತಾಪಿಲಾಯಿತು. ಶಕ್ತಿ ಯೋಜನೆಯು ಮೇ ಅಂತ್ಯದವರೆಗೆ 763 ಕೋಟಿ ಟ್ರಿಪ್ ಯೋಜನೆಯ ಫಲಾನುಭವಿಗಳಾಗಿದ್ದು, ಅವರಿಗೆ ವಿನಿಯೋಗಿಸಲಾದ ಟಿಕೆಟ್ ಮೌಲ್ಯ 20047.69 ಕೋಟಿ ರೂ.ಗಳು.

➡ಪುಟ ೪

> **ಅನುಕೂಲಸ್ಥರು ಯಾರಾದರೂ ಗ್ಯಾರಂಟಿ ಯೋಜನೆಗಳನ್ನು ಸ್ವಯಂಪ್ರೇರಿತವಾಗಿ ಬಿಟ್ಟು ಕೊಡುವ ಮೂಲಕ ಇತರೆ ಅರ್ಹ ಫಲಾನುಭವವಿಗಳಿಗೆ ನೆರವಾಗಲು ಮುಂದಾದರೆ ಅಂತಹವರನ್ನು ಪ್ರೋತ್ಸಾಹಿಸಬೇಕು.**
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ



ಸಭೆಯ ಮುಖ್ಯಾಂಶ

1. ಎಸ್‌ಐಆರ್ ಸಂದರ್ಭದಲ್ಲಿ ಫಲಾನುಭವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು.
2. ಅನ್ನಭಾಗ್ಯ ಯೋಜನೆಯಲ್ಲಿ 11561 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾವಣೆ
3. ಜುಲೈ 2023ರಿಂದ ಡಿಸೆಂಬರ್ 2024ರವರೆಗೆ ಒಟ್ಟು 72,02,33,970 ಫಲಾನುಭವಿಗಳಿಗೆ ಒಟ್ಟು 11561.05 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ವರ್ಗಾವಣೆ
4. 2025ನೇ ಫೆಬ್ರವರಿಯಿಂದ ಇಲ್ಲಿಯವರೆಗೆ ಒಟ್ಟು 4,44,67,942 ಫಲಾನುಭವಿಗಳಿಗೆ ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಲ್ಲಿ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿ ವಿತರಣೆ
5. ಕಾಳಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಅಕ್ರಮ ಮಾರಾಟ ವಾಗುತ್ತಿರುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು

ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿರುವುದನ್ನು ಪತ್ತೆಯಾಗಿದೆ. ಈ ರೀತಿ ದುರುಪಯೋಗ ಆಗಬಾರದು. ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಹೋದ ತಕ್ಷಣ ಆ ಹಣ ಸಾಲದ ಮೊತ್ತಕ್ಕೆ ಜಮೆ ಆಗಿಬಿಡುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಇಂತಹ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದು ಸಿಎಂ ಸೂಚಿಸಿದರು. ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಿದ್ದರು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ, ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು ಎಂದು ಡಿಕೆಶಿ ಅಭಿಪ್ರಾಯಪಟ್ಟರು.

ಗೃಹಲಕ್ಷ್ಮಿ
ಗೃಹ ಜ್ಯೋತಿ

➡ಪುಟ ೪

ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ

ಸತ್ಯಾಸತ್ಯತೆ ತಿಳಿಯಲು ತಂಡ ರಚಿಸಿದ ಬಿಜೆಪಿ

• **ಬೆಂಗಳೂರು:** ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆಯಲ್ಲಿ ಗುರುವಾರ ನಡೆದ ಮತದಾನ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ನಡೆಸಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಬಿಜೆಪಿ, ಅಡ್ಡ ಮತದಾನದ ಸತ್ಯಾಸತ್ಯತೆ ಮತ್ತು ವಾಸ್ತವಿಕತೆಯನ್ನು ತಿಳಿಯಲು ತಂಡ ರಚಿಸಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮತ್ತು ಶಾಸಕ ಮಹೇಶ್ ಟೆಂಗಿನಕಾಯಿ ಅವರನ್ನೊಳಗೊಂಡ ತಂಡ ರಚಿಸಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆದೇಶ ಹೊರಡಿಸಿದ್ದಾರೆ. ಈ ತಂಡವು ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ಜೂ.25ರೊಳಗೆ ನೀಡಲು ವಿಜಯೇಂದ್ರ ಸೂಚಿಸಿದ್ದಾರೆ.





> **ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ.**
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮೊದಲೇ ತಿಳಿದಿತ್ತು: ಎಚ್ಡಿಕೆ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಯುತ್ತದೆ ಎಂಬುದು ಮೊದಲೇ ತಿಳಿದಿತ್ತು. ಆದರೆ, ಇದರಿಂದ ನಾನು ವಿಚಲಿತನಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

• **ಬೆಂಗಳೂರು:** ಮುಂದಿನ ವಾರ ಬಂದು ಭೇಟಿ ಮಾಡುವಂತೆ ಕೇಂದ್ರದ ನಾಯಕರು ಸೂಚಿಸಿದ್ದಾರೆ. ಆ ಸಮಯದಲ್ಲಿ ವರದಿ ನೀಡುತ್ತೇವೆ. ಅಡ್ಡ ಮತದಾನ ಮಾಡಿದವರು ಮುಂದೆ ಶಾಸಕರಾಗದಂತೆ ನೋಡಿಕೊಳ್ಳುತ್ತೇವೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡ್ಡ ಮತದಾನ ಮಾಡಿದ್ದು ಯಾರೆಂದು ತಿಳಿಯಲು ಸ್ವಲ್ಪ ಸಮಯ ಬೇಕಾಗುತ್ತದೆ. ಕೆಲವರು ಹಣ ಪಡೆದು ಮತ ಚಲಾಯಿಸಿದ್ದಾರೆ. ಕೋಟ್ಯಂತರ ಹಣ ಹಾಗೂ ಅನುದಾನದ ವಿಚಾರ ಹೊರಬರಲಿದೆ. ಅಡ್ಡ ಮತದಾನ ಮಾಡಿರುವುದರ ಬಗ್ಗೆ ಹಲವು ಮಾಹಿತಿ ಬಂದಿದೆ. ಈ ಬಗ್ಗೆ ಸಮಿತಿ ರಚಿಸಿದ್ದು, ಸತ್ಯ ಹೊರಬರಲಿದೆ. ಪಕ್ಷಕ್ಕೆ ಚೂರಿ ಹಾಕಿದ ಖದೀಮರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಮತದಾನದ ಸಮಯದಲ್ಲಿ ಯಾರು ಎಲ್ಲಿದ್ದರು, ಯಾರು ಯಾರೊಂದಿಗೆ ಮಾತಾಡಿದ್ದರು ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ.

➡ಪುಟ ೪

ಕರ್ನಾಟಕದ ವಿರುದ್ಧ ಅಸೆಂಬ್ಲಿಯಲ್ಲಿ ಸರ್ವಾನುಮತ ನಿರ್ಣಯ

ಮೇಕೆದಾಟುಗೆ ತ.ನಾಡು ಅಡ್ಡಗಾಲು

• **ಚೆನ್ನೈ:** ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವ ಉದ್ದೇಶದ ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ತಮಿಳುನಾಡು ಮತ್ತೊಮ್ಮೆ ಅಡ್ಡಗಾಲು ಹಾಕಿದೆ. ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತ ನಿರ್ಣಯ ಅಂಗೀಕರಿಸಿದೆ.



ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಡಿಸಿದ ನಿರ್ಣಯಕ್ಕೆ ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್, ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಸೇರಿದಂತೆ ಎಲ್ಲ ಪಕ್ಷಗಳ ಸದಸ್ಯರು ಬೆಂಬಲ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದರೂ, ತಮಿಳುನಾಡು ಕಾಂಗ್ರೆಸ್ ಘಟಕ ನಿರ್ಣಯವನ್ನು ಬೆಂಬಲಿಸಿರುವುದು ಗಮನ ಸೆಳೆದಿದೆ. ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರ ಏಕಪಕ್ಷೀಯವಾಗಿ ಪ್ರಯತ್ನಿಸುತ್ತಿದೆ.

➡ಪುಟ ೪

ಯಾವುದೇ ಅನುಮತಿ ನೀಡದಂತೆ ಕೇಂದ್ರಕ್ಕೆ ತ.ನಾಡು ಒತ್ತಾಯ



> **ಮೇಕೆದಾಟು ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಂಡಿಲ್ಲವೆ.**
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

ಪಿಎಂ–ವಿಕಸಿತ ಭಾರತ ಉದ್ಯೋಗ ಯೋಜನೆಗೆ ವೇಗ: ಮೋದಿ

70 ಲಕ್ಷಕ್ಕೂ ಹೆಚ್ಚು ಯುವಕರಿಗೆ ನೌಕರಿ

• **ಹೊಸದಿಲ್ಲಿ:** ಪಿಎಂ–ವಿಕಸಿತ ಭಾರತ್ ಉದ್ಯೋಗ ಯೋಜನೆಯಲ್ಲಿ (ಪಿಎಂ–ವಿಬಿಆರ್‌ವೈ) ದೇಶಾದ್ಯಂತ ಇದುವರೆಗೆ 70 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಲಭಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ತಿಳಿಸಿದರು. ಇದೇ ವೇಳೆ 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದಿಂದ 2,400 ಕೋಟಿ ರೂ. ಪ್ರೋತ್ಸಾಹಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ಜಮಾ ಮಾಡಿದರು.

ಕಳೆದ ವರ್ಷದ ಆಗಸ್ಟ್‌ನಲ್ಲಿ ಆರಂಭವಾದ ಈ ಯೋಜನೆ ಮೊದಲ ಬಾರಿಗೆ ಉದ್ಯೋಗ ಪಡೆಯುವ ಯುವಕರಿಗೆ ನೆರವು ನೀಡುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸುವ ಗುರಿ ಹೊಂದಿದೆ.

➡ಪುಟ ೪



- ಫಲಾನುಭವಿಗಳ ಖಾತೆಗೆ 2,400 ಕೋಟಿ ರೂ. ಪ್ರೋತ್ಸಾಹಧನ ಜಮೆ
- 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ
- ಸಾಮಾಜಿಕ ಭದ್ರತೆಯ ವ್ಯಾಪ್ತಿ ವಿಸ್ತರಣೆ

ಭಾರತ ತಲುಪಿದ ದಿಶಾ ಹಡಗು

• **ಹೊಸದಿಲ್ಲಿ:** ಮಾಲ್ಟಾ ಧ್ವಜ ಹೊಂದಿರುವ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಸಾಗಣೆ ಹಡಗು ದಿಶಾ ಶುಕ್ರವಾರ ಬೆಳಗ್ಗೆ ಗುಜರಾತ್‌ನ ದಹೇಜ್ ಬಂದರಿಗೆ ಸುರಕ್ಷಿತವಾಗಿ ತಲುಪಿದೆ. ಹಡಗು ಪೆಟ್ರೋನೆಟ್ ಎಲ್‌ಎನ್‌ಜಿ ಜೆಟ್ಟಿಯಲ್ಲಿ ಯಶಸ್ವಿಯಾಗಿ ಲಂಗರು ಹಾಕಿರುವುದಾಗಿ ಭರೂಚ್ ಬಂದರು ಪ್ರಾಧಿಕಾರ ತಿಳಿಸಿದೆ. 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸಾಗಿಸುತ್ತಿದ್ದ ದಿಶಾ ಹಡಗು, ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿ ಭಾರತಕ್ಕೆ ತಲುಪಿರುವುದು ಮಹತ್ವದ ಬೆಳವಣಿಗೆಯಾಗಿದೆ. ಗುಜರಾತ್‌ನ ದಹೇಜ್‌ನಲ್ಲಿರುವ ಎಲ್‌ಎನ್‌ಟಿ ಟರ್ಮಿನಲ್ ಪ್ರಮುಖ ಅನಿಲ ಆಮದು ಕೇಂದ್ರಗಳಲ್ಲಿ ಒಂದಾಗಿದೆ. ಆಮದು ಮಾಡಿಕೊಂಡ ಎಲ್‌ಎನ್‌ಜಿಯನ್ನು ಕೈಗಾರಿಕೆಗಳು, ವಿದ್ಯುತ್ ಉತ್ಪಾದನಾ ಘಟಕಗಳು, ದೇಶೀಯ ಬಳಕೆಯಲ್ಲಿ ಬಳಸಲು ವಿವಿಧ ರಾಜ್ಯಗಳಿಗೆ ವಿತರಿಸಲಾಗುತ್ತದೆ.

ಹಾರ್ಮುಜ್ ದಾಟಿ ಸುರಕ್ಷಿತವಾಗಿ ಬಂದ ಎಲ್‌ಎನ್‌ಐ ಹಡಗು

➡ಪುಟ ೪

ಬೆಂಗಳೂರಿನಲ್ಲಿ ವಿಶ್ವ ದಾಖಲೆಯ ಕಾರ್ಯಕ್ರಮ

ಹಸಿರೀಕರಣಕ್ಕಾಗಿ 15 ಲಕ್ಷ ಸಸಿ

• **ಬೆಂಗಳೂರು:** ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ ಇದುವರೆಗೆ ಕೈಗೊಳ್ಳಲಾದ ಅತಿದೊಡ್ಡ ನಗರ ಹಸಿರೀಕರಣ ಕಾರ್ಯಕ್ರಮಗಳಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮವೂ ಒಂದಾಗಿದ್ದು, ಇದು ವಿಶ್ವ ದಾಖಲೆಯಾಗಲಿದೆ, ನಗರದ ಪ್ರತಿಯೊಬ್ಬ ನಾಗರಿಕರೂ ಈ ಐತಿಹಾಸಿಕ ಅಭಿಯಾನದ ಪಾಲುದಾರರಾಗಬೇಕು ಎಂದು ಬಿಡಿಎ ಅಧ್ಯಕ್ಷ, ಶಾಸಕ ಎನ್. ಎ.ಹ್ಯಾರಿಸ್ ತಿಳಿಸಿದರು.



ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇದೇ 27ರಂದು ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ನಗರದಾದ್ಯಂತ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಟೊಂಕಕಟ್ಟಿ ನಿಂತಿದ್ದೇವೆ. ಈ ಅಭಿಯಾನವು ಪರಿಸರ ಸುಸ್ಥಿರತೆಯತ್ತ ಬೆಂಗಳೂರಿನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ತಿಳಿಸಿದರು.

15 ಲಕ್ಷ ಸಸಿಗಳ ನೆಡುವ ಈ ಬೃಹತ್ ಕಾರ್ಯಕ್ರಮವು ಬೆಂಗಳೂರಿನ ಹಸಿರು ಹೊದಿಕೆಯನ್ನು ವಿಸ್ತರಿಸುವುದು, ನಗರ ಉಷ್ಣತೆಯ ಪರಿಣಾಮವನ್ನು ತಗ್ಗಿಸುವುದು.

➡ಪುಟ ೪



> **ಬಿಡಿಎ ವತಿಯಿಂದ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವುದು ಕೇವಲ ಸಸಿ ನೆಡುವ ಕಾರ್ಯಕ್ರಮವಲ್ಲ; ಇದು ನಮ್ಮ ನಗರದ ಪರಿಸರ ಭವಿಷ್ಯವನ್ನು ಸುರಕ್ಷಿತಗೊಳಿಸುವ ಜನಾಂದೋಲನವಾಗಿದೆ. 15 ಲಕ್ಷ ಸ್ಥಳೀಯ ಸಸಿಗಳ ನೆಡುವ ಮೂಲಕ ನಾವು ಭವಿಷ್ಯದ ಪೀಳಿಗೆಗಳಿಗೆ ಶಾಶ್ವತ ಹಸಿರು ಪರಂಪರೆಯನ್ನು ನಿರ್ಮಿಸುತ್ತಿದ್ದೇವೆ.**
> ■ ಎನ್.ಎ.ಹ್ಯಾರಿಸ್, ಬಿಡಿಎ ಅಧ್ಯಕ್ಷ, ಶಾಸಕ

ಮೋದಿ ವಿದೇಶ ಪ್ರವಾಸ ಅತ್ಯಂತ ಫಲಪ್ರದ: ಬಿಜೆಪಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರ ಇತ್ತೀಚಿನ ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸವನ್ನು ಬಿಜೆಪಿ ಅತ್ಯಂತ ಫಲಪ್ರದ ಎಂದು ಬಣ್ಣಿಸಿದ್ದು, ಅದರ ಸಕಾರಾತ್ಮಕ ಹಾಗೂ ದೂರಗಾಮಿ ಪರಿಣಾಮಗಳು ಮುಂದಿನ ದಿನಗಳಲ್ಲಿ ಭಾರತದಲ್ಲಿ ಸ್ಪಷ್ಟವಾಗಿ ಗೋಚರಿಸಲಿವೆ ಎಂದು ತಿಳಿಸಿದೆ. ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಮಾತನಾಡಿ, ಈ ಪ್ರವಾಸವು ಭಾರತದ ಆರ್ಥಿಕ ಬೆಳವಣಿಗೆ, ತಂತ್ರಜ್ಞಾನ, ಬಾಹ್ಯಾಕಾಶ, ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಿಗೆ ಹೊಸ ದಿಕ್ಕು ನೀಡಿದೆ ಎಂದರು. ಪೂರ್ವ ಯುರೋಪಿನ ಸ್ಲೊವಾಕಿಯಾ ಜತೆ ಮಹತ್ವದ ಸಂಬಂಧ ಸ್ಥಾಪನೆ ಆಗಿರುವುದು ಬಹುಆಯಾಮದ ಸಾಧನೆ ಎಂದರು.



➡ಪುಟ ೪

ಯೋಗದಿನದಲ್ಲಿ ಭಾಗಿ | ಯೋಜನೆಗೆ ಚಾಲನೆ

ಇಂದು ಪ.ಬಂಗಾಳಕ್ಕೆ ಪ್ರಧಾನಿ ಮೋದಿ ಭೇಟಿ

ಕೋಲ್ಕತ್ತಾ: ಪ್ರಧಾನಿ ನರೇಂದ್ರ ಮೋದಿಯವರು ಎರಡು ದಿನಗಳ ಪಶ್ಚಿಮ ಬಂಗಾಳ ಪ್ರವಾಸದಲ್ಲಿದ್ದು, ಶನಿವಾರ ಕೃಷಿ ಕಲ್ಯಾಣ ಹಾಗೂ ರಕ್ಷಣಾ ಯೋಜನೆಗಳ ಸಹಿತ ಹಲವು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮಾಡಲಿದ್ದಾರೆ. ಭಾನುವಾರ ಸಾರ್ವಜನಿಕರ ಜತೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ವಿಧಾನಸಭಾ ಚುನಾವಣೆಯ ಬಳಿಕ ಪಶ್ಚಿಮ ಬಂಗಾಳಕ್ಕೆ ಮೋದಿಯವರ ಮೊದಲ ಭೇಟಿ ಇದಾಗಿದೆ.

ಅಭಿವೃದ್ಧಿ, ಕೃಷಿ, ರಾಷ್ಟ್ರೀಯ ಭದ್ರತೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವ ವ್ಯಾಪಕ ಯೋಜನೆಗಳಿಗಾಗಿ ಪಶ್ಚಿಮ ಬಂಗಾಳವನ್ನು ಆಯ್ಕೆ ಮಾಡುವ ಮೂಲಕ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯದ ಮೇಲಿನ ತನ್ನ ಬದ್ಧತೆಯನ್ನು ಒತ್ತಿಹೇಳಲು ಹಾಗೂ ರೈತರು, ಯುವಜನತೆ ಮತ್ತು ಮಧ್ಯಮ ವರ್ಗ ಸೇರಿದಂತೆ ಪ್ರಮುಖ ಮತದಾರ ವರ್ಗಗಳೊಂದಿಗೆ ತನ್ನ ಸಂಪರ್ಕ ಬಲಪಡಿಸಲು ಪ್ರಯತ್ನಿಸುತ್ತಿದೆ ಎಂದು ರಾಜ್ಯ ಬಿಜೆಪಿ ನಾಯಕ ಹೇಳಿದ್ದಾರೆ.

ಮೀನುಗಾರಿಕಾ ಬಂದರು ಉದ್ಘಾಟನೆ: ಮೀನುಗಾರರು ಮತ್ತು ವ್ಯಾಪಾರಿಗಳಿಗೆ ಸುಧಾರಿತ ಮಾರುಕಟ್ಟೆ ಸೌಲಭ್ಯಕ್ಕಾಗಿ ಮೀನುಗಾರಿಕಾ ಮೂಲಸೌಕರ್ಯವನ್ನು ಕೇಂದ್ರ ಸರ್ಕಾರ ಉತ್ತೇಜಿಸಲಿದೆ. ಸೌತ್ 24 ಪರಗಾಣಸ್‌ನಲ್ಲಿ ಮೀನುಗಾರಿಕೆ ವಿಸ್ತರಿಸಲಾಗುವುದು. ಬಿರಭಮ್‌ನ ಸೈಂಥಿಯಾದಲ್ಲಿ ನೂತನ ಮೀನು ಮಾರುಕಟ್ಟೆ ನಿರ್ಮಿಸಲಾಗಿದೆ.

ಈ ಬಾರಿ ಕೋಲ್ಕತ್ತಾದಲ್ಲಿ ಯೋಗ: ಪ್ರತಿ ವರ್ಷವೂ ಮೋದಿ ವಿಭಿನ್ನ ನಗರಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಾರ್ವಜನಿಕರ ಜತೆ ಆಚರಿಸುತ್ತಾರೆ. ಈ ಬಾರಿ ಕೋಲ್ಕತ್ತಾದಲ್ಲಿ ಪ್ರಧಾನಿ ನೇತೃತ್ವದಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಥೀಮ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗುವುದು. ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಮೋದಿ ನೇತೃತ್ವದ ಪ್ರಮುಖ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

3 ಯುದ್ಧನೌಕೆಗಳ ನಿಯೋಜನೆ ನಾಳೆ: ಭಾನುವಾರ ಪ್ರಧಾನಿ ಮೋದಿ ಮೂರು ಯುದ್ಧನೌಕೆಗಳನ್ನು ನೌಕಾಸೇನೆಯಲ್ಲಿ ನಿಯೋಜಿಸಲಿದ್ದಾರೆ. ಇವುಗಳು ಸಾಗರೋತ್ತರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೆ ಹಾಗೂ ಜಲಾಂತರ್ಗಾಮಿ ವಿರೋಧಿ ಸಾಮರ್ಥ್ಯ ಹೊಂದಿವೆ.

ನೀಟ್ ಮರುಪರೀಕ್ಷೆ, ಸಂಪೂರ್ಣ ಸುರಕ್ಷತೆ

ನಾಳೆ ನೀಟ್(ಯುಜಿ) ಮರುಪರೀಕ್ಷೆ

22.79 ಲಕ್ಷ ವಿದ್ಯಾರ್ಥಿಗಳ ನೋಂದಣಿ

- ಎನ್‌ಟಿಎ, ಕೇಂದ್ರ ಸರ್ಕಾರದಿಂದ ಹಲವು ಮುನ್ನೆಚ್ಚರಿಕಾ ಕ್ರಮ
- 551 ದೇಶೀಯ, 14 ವಿದೇಶಿ ನಗರಗಳಲ್ಲಿ ಮರುಪರೀಕ್ಷೆ



22.79 ಲಕ್ಷ-ನೀಟ್ ಪರೀಕ್ಷಾರ್ಥಿಗಳು

14 ವಿದೇಶಿ ಪರೀಕ್ಷಾ ನಗರಗಳು

551 ಭಾರತದ ಪರೀಕ್ಷಾ ನಗರಗಳು

ಜೂ.22ರವರೆಗೆ ಟೆಲಿಗ್ರಾಮ್ ನಿಷೇಧ

ಪ್ರಶ್ನೆಪತ್ರಿಕೆ ಸೋರಿಕೆಯಿಲ್ಲದೆ ಜೂ.21ರಂದು ನೀಟ್ ಮರುಪರೀಕ್ಷೆಯನ್ನು ನಡೆಸಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜೂ.22ರವರೆಗೆ ಟೆಲಿಗ್ರಾಮ್ ಮೆಸೆಂಜರ್ ಆ್ಯಪ್ ಮೇಲೆ ತಾತ್ಕಾಲಿಕ ನಿಷೇಧವನ್ನು ಹೇರಿದೆ. ಎನ್‌ಟಿಎ ಪ್ರಕಾರ, ಟೆಲಿಗ್ರಾಮ್ ಅನ್ನು ದುರುಪಯೋಗ ಮಾಡಿಕೊಂಡು ಅಪರಾಧಿಗಳು ನಕಲಿ ಪ್ರಶ್ನೆಪತ್ರಿಕೆ ಮೂಲಕ ಅಭ್ಯರ್ಥಿಗಳ ದಾರಿ ತಪ್ಪಿಸುವ ಹಲವು ಚಾನೆಲ್‌ಗಳಿದ್ದವು. 200ಕ್ಕೂ ಅಧಿಕ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ಆ್ಯಪ್‌ನಿಂದ ತೆರವುಗೊಳಿಸಿದೆ. ಪೇಪರ್ ಲೀಕ್ಡ್ ನೀಟ್, ರಿ-ನೀಟ್ 2026 ಮತ್ತು ಪ್ರೈವೇಟ್ ಮಾಫಿಯಾ ಹೆಸರಿನ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳು ನಕಲಿ ಪ್ರಶ್ನೆಪತ್ರಿಕೆ ಮಾರಾಟ ಮಾಡುತ್ತಿದ್ದವು ಎಂದು ತಿಳಿದುಬಂದಿದೆ.

ನೀಟ್(ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ಇಲ್ಲಿಯವರೆಗೆ ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ. 22.79 ಲಕ್ಷ ಪರೀಕ್ಷಾರ್ಥಿಗಳು ನೀಟ್ ಮರುಪರೀಕ್ಷೆ ಬರೆಯಲಿದ್ದಾರೆ. ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಪುನರುಚ್ಚರಿಸುತ್ತದೆ. ಈ ಬಾರಿ ಯಾವುದೇ ಸೋರಿಕೆ ಅಥವಾ ತಪ್ಪುಗಳು ಆಗದಂತೆ ನೋಡಿಕೊಳ್ಳಲು ಎನ್‌ಟಿಎ ಮತ್ತು ಕೇಂದ್ರ ಸರ್ಕಾರ ಹಲವು ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿವೆ. ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿಷೇಧ, ಐಎಎಫ್ ಹೆಲಿಕಾಪ್ಟರ್‌ಗಳ ಮೂಲಕ ಪ್ರಶ್ನೆಪತ್ರಿಕೆಗಳ ಸಾಗಣೆ, ಪೇಪರ್ ಸೆಟ್ಟರ್ಸ್ ಲಾಕ್‌ಡೌನ್, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ನಿಯೋಜನೆ ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಭದ್ರತಾ ಸಿಬ್ಬಂದಿ ಕಣ್ಗಾವಲು ನಡೆಸುತ್ತಾರೆ. ಕೇಂದ್ರ ಸರ್ಕಾರ ಮತ್ತು ಎನ್‌ಟಿಎ ತೆಗೆದುಕೊಂಡ ಸುರಕ್ಷತಾ ಕ್ರಮಗಳು ಹಾಗೂ ಪರೀಕ್ಷಾರ್ಥಿಗಳಿಗೆ ನೀಡಿದ ಮಾರ್ಗಸೂಚಿಗಳೇನು? ಇಲ್ಲಿದೆ ಸಂಕ್ಷಿಪ್ತ ಮಾಹಿತಿ.

ಪ್ರಶ್ನೆಪತ್ರಿಕೆ ಸಾಗಣೆಗೆ ಸಿ-17 ಗ್ಲೋಬ್‌ಮಾಸ್ಟರ್!

ರಹಸ್ಯ ಪ್ರಶ್ನೆಪತ್ರಿಕೆಗಳನ್ನು ಭಾರತೀಯ ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ಸರಕು ವಿಮಾನಗಳ ಮೂಲಕ ದೇಶದ ಸುಮಾರು 18ರಿಂದ 20 ಪ್ರಾದೇಶಿಕ ಕೇಂದ್ರಗಳಿಗೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆ. ರಸ್ತೆ ಸಂಪರ್ಕ ಕಡಿಮೆ ಇರುವ ಹಾಗೂ ದುರ್ಗಮ ಪ್ರದೇಶಗಳಿಗೆ ಎಂಐ-17 ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ. 674 ನಗರ ಸಂಯೋಜಕರು ಹಾಗೂ 6,669 ಸ್ವತಂತ್ರ ವೀಕ್ಷಕರು ಪರೀಕ್ಷಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ. ಕೆಲವೆಡೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಐಎಎಫ್ ಹೆಲಿಕಾಪ್ಟರ್‌ಗಳನ್ನು ಬಳಸಿ ಏರ್‌ಲಿಫ್ಟ್ ಮಾಡಲಾಗಿದ್ದು, ಯಾವುದೇ ಸೋರಿಕೆ ಆಗದಿರಲು ಕೇಂದ್ರ ಸರ್ಕಾರ ಈ ಸುರಕ್ಷತಾ ಕ್ರಮ ತೆಗೆದುಕೊಂಡಿದೆ ಎಂದು ವರದಿ ಹೇಳಿದೆ.

ನೀಟ್ ಪೇಪರ್ ಸೆಟ್ಟರ್‌ಗಳ ಲಾಕ್‌ಡೌನ್

ಯಾವುದೇ ಪ್ರಶ್ನೆಪತ್ರಿಕೆಗಳ ಸೋರಿಕೆಯನ್ನು ತಡೆಗಟ್ಟಲು ನೀಟ್ ಪೇಪರ್ ಸೆಟ್ಟರ್‌ಗಳನ್ನು ಕಟ್ಟುನಿಟ್ಟಾದ ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಅವರಿಗೆ ಮೊಬೈಲ್ ಫೋನ್ ಅಥವಾ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಿಲ್ಲ.

ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ನಿಯೋಜನೆ

ಪರೀಕ್ಷಾ ಕೇಂದ್ರಗಳ ಸುರಕ್ಷತೆಗಾಗಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಸಿಆರ್‌ಪಿಎಫ್ ಮತ್ತು ಸಿಐಎಸ್‌ಎಫ್ ಎರಡೂ ಸಿಎಪಿಎಫ್ ಪಡೆಗಳಿಗೆ ಪ್ರಶ್ನೆಪತ್ರಿಕೆ ಸಾಗಣೆ ಜವಾಬ್ದಾರಿ ವಹಿಸಲಾಗಿದೆ.

ವಿಶೇಷ ಸೌಲಭ್ಯಗಳು



ಪರೀಕ್ಷಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು, ಸ್ಯಾನಿಟೇಶನ್, ಮೆಡಿಕಲ್ ವ್ಯವಸ್ಥೆ ಹಾಗೂ ವೇಗದಲ್ಲಿ ವೆರಿಫಿಕೇಶನ್ ನಡೆಸಲು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಒಂದು ವೇಳೆ ವಿದ್ಯುತ್ ಸಮಸ್ಯೆ ಎದುರಾದರೆ ಎಂಬ ಕಾರಣಕ್ಕೆ ಪವರ್ ಬ್ಯಾಕ್ ಅಪ್ ಇರಲಿದೆ.

ಇಂದು ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್

ದೇಶಾದ್ಯಂತ ನಿಗದಿಯಾಗಿರುವ ನೀಟ್ ಯುಜಿ 2026ರ ಮರುಪರೀಕ್ಷೆಗೂ ಮುನ್ನ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿ) ಶನಿವಾರ ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್(ಅಣಕು ಪರೀಕ್ಷೆ) ನಡೆಸಲಿದೆ. ಮರುಪರೀಕ್ಷೆಯ ಸುಗಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮಾಕ್‌ಡ್ರಿಲ್ ಆಯೋಜಿಸಲಾಗುತ್ತಿದೆ. ಪೂರ್ಣ ಪ್ರಮಾಣದ ಪೂರ್ವಾಭ್ಯಾಸವು ಬೆಳಗ್ಗೆ 9 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಡೆಯುತ್ತದೆ. ಪ್ರಶ್ನೆ ಪತ್ರಿಕೆಗಳ ವಿತರಣೆಯಿಂದ ಹಿಡಿದು ಉತ್ತರ ಪತ್ರಿಕೆಗಳ ಸಂಗ್ರಹಣೆ ಮತ್ತು ಸಾಗಣೆಯವರೆಗೆ ಪರೀಕ್ಷಾ ಪ್ರಕ್ರಿಯೆಯ ಪ್ರತಿಯೊಂದು ಹಂತವನ್ನು ಇದರಲ್ಲಿ ನಡೆಸಲಾಗುತ್ತದೆ.



ಪರೀಕ್ಷಾ ದಿನದ ಮಾರ್ಗಸೂಚಿ

ಪರೀಕ್ಷಾ ದಿನದ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಪರೀಕ್ಷಾರ್ಥಿಗಳಿಗೆ ಎನ್‌ಟಿಎ ಸಲಹೆ ನೀಡಿದೆ. ಪರೀಕ್ಷಾ ಪ್ರವೇಶಾತಿ ಕಾರ್ಡ್, ಗುರುತಿನ ಚೀಟಿ, ಫೋಟೋ ಮತ್ತು ಮಳೆ ಕಾರಣದಿಂದ ಅಗತ್ಯವಿದ್ದರೆ ಪಾರದರ್ಶಕ ಪ್ಲಾಸ್ಟಿಕ್ ಬಳಸಬಹುದು. ಎಲ್ಲಾ ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನ ಭದ್ರತಾ ಪರಿಶೀಲನೆಗೆ ಒಳಗಾಗಲೇಬೇಕು. ತಿಳಿ ಬಣ್ಣದ ಮತ್ತು ಅರ್ಧ ತೋಳಿನ ಬಟ್ಟೆಗಳನ್ನು ಧರಿಸಬೇಕು. ಹೈ-ಹೀಲ್ ಪಾದರಕ್ಷೆ ಮತ್ತು ಶೂಗಳನ್ನು ಧರಿಸದಿರಲು, ಸ್ಲಿಪ್ಪರ್ಸ್ ಅಥವಾ ಸಾಮಾನ್ಯ ಪಾದರಕ್ಷೆಗಳನ್ನು ಧರಿಸಲು ಹಾಗೂ ಪಾರದರ್ಶಕ ನೀರಿನ ಬಾಟಲಿ ಬಳಸಲು ಶಿಫಾರಸು ಮಾಡಲಾಗಿದೆ. ರಿಪೋರ್ಟಿಂಗ್ ಸಮಯಕ್ಕೂ ಮುಂಚಿತವಾಗಿ ನೀಟ್ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ತಲುಪುವಂತೆ ಸಲಹೆ ನೀಡಲಾಗಿದೆ. ಪರೀಕ್ಷೆಯಲ್ಲಿ ಒಎಂಆರ್ ಶೀಟ್ ತುಂಬಿಸಲು ಪೆನ್ ತರುವಂತೆ ಸೂಚಿಸಲಾಗಿದೆ. ಎಲೆಕ್ಟ್ರಾನಿಕ್ ಗ್ಯಾಜೆಟ್ಸ್, ಮೊಬೈಲ್ ಫೋನ್ಸ್, ಸ್ಮಾರ್ಟ್ ವಾಚ್, ಬ್ಲೂಟೂತ್ ಡಿವೈಸ್, ಇಯರ್‌ಫೋನ್ಸ್ ಮತ್ತು ಸಂವಹನಕ್ಕೆ ಬಳಸುವ ಯಾವುದೇ ಉಪಕರಣಗಳನ್ನು ನಿಷೇಧಿಸಲಾಗಿದೆ. ಲೋಹ, ದೊಡ್ಡ ಬೆಲ್ಟ್ ಬಕಲ್‌ಗಳು, ದೊಡ್ಡ ಬಟನ್‌ಗಳು, ದೊಡ್ಡ ಆಭರಣ ಇತ್ಯಾದಿ ಪರೀಕ್ಷಾ ಕೇಂದ್ರಕ್ಕೆ ತರುವುದನ್ನು ನಿಷೇಧಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು. ಪರೀಕ್ಷಾ ಕೇಂದ್ರಗಳ ಎಲ್ಲಾ ಗೇಟ್‌ಗಳಲ್ಲಿ ಸುರಕ್ಷತೆ, ಪರಿಶೀಲನೆ ಹೆಚ್ಚಿಸಲಾಗಿದೆ.

ಫುಟ್‌ಪಾತ್ ನಡಿಗೆ ಮೂಲಭೂತ ಹಕ್ಕು

ಹೊಸದಿಲ್ಲಿ: ಸುರಕ್ಷಿತವಾಗಿ ಹಾಗೂ ನಿರಾತಂಕವಾಗಿ ಫುಟ್‌ಪಾತ್‌ನಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಪಾದಚಾರಿಗಳು ಫುಟ್‌ಪಾತ್‌ನಲ್ಲಿ ನಡೆಯುವ ಹಕ್ಕಿಗೇ ಮೊದಲ ಆದ್ಯತೆ ನೀಡಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅತುಲ್ ಎಸ್. ಚಾಂದುರ್ಕರ್ ಅವರ ನ್ಯಾಯಪೀಠ ಈ ತೀರ್ಪು ನೀಡಿದ್ದು, ನಡೆಯುವ ಹಕ್ಕು ಸಂವಿಧಾನದ 19(1)(ಡಿ) ವಿಧಿಯಲ್ಲಿ ಖಾತರಿಪಡಿಸಿರುವ ಮುಕ್ತ ಸಂಚಾರದ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಜತೆಗೆ ಸಂವಿಧಾನದ 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ಇದು ರಕ್ಷಣೆ ಪಡೆದಿದೆ ಎಂದು ಹೇಳಿದೆ.

ರಸ್ತೆಯೊಂದು ಅಸ್ತಿತ್ವದಲ್ಲಿದ್ದರೆ, ಅದರ ಪಕ್ಕದಲ್ಲಿ ಪಾದಚಾರಿಗಳಿಗಾಗಿ ಪ್ರತ್ಯೇಕವಾಗಿ ಗುರುತಿಸಲಾದ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸಲಾದ ಫುಟ್‌ಪಾತ್ ಇರಲೇಬೇಕು. ಇದನ್ನು ಒದಗಿಸುವುದು ಆಡಳಿತ ವ್ಯವಸ್ಥೆಯ ಜಾರಿಗೊಳಿಸಬಹುದಾದ ಕರ್ತವ್ಯವಾಗಿದೆ. ಫುಟ್‌ಪಾತ್‌ನಲ್ಲಿ ನಡೆಯುವ ನಾಗರಿಕನ ಮೂಲಭೂತ ಹಕ್ಕು, ಯಾಂತ್ರಿಕ ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಮಿಗಿಲಾದುದು ಎಂದು ನ್ಯಾಯಪೀಠ ಹೇಳಿದೆ.

ಚಕ್ರಗಳು ಮನುಷ್ಯನನ್ನೇ ಬದಿಗೆ ತಳ್ಳಿವೆ: ನಗರಗಳು ಮತ್ತು ಪಟ್ಟಣಗಳ ಯೋಜನೆಯಲ್ಲಿ ದೀರ್ಘಕಾಲದಿಂದ ವಾಹನಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಪಾದಚಾರಿಗಳನ್ನು ಕಡೆಗಣಿಸಲಾಗಿದೆ ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಚಕ್ರಗಳ ಮೇಲಿನ ಸಂಚಾರವೇ ನಮ್ಮ ಕಲ್ಪನೆಯನ್ನು ಆವರಿಸಿಕೊಂಡ ಪರಿಣಾಮವಾಗಿ, ನಗರಾಡಳಿತಗಳು ವಾಹನಗಳಿಗೆ ಅನುಕೂಲಕರವಾದ ರಸ್ತೆಗಳ ನಿರ್ಮಾಣದಲ್ಲೇ ತೊಡಗಿಕೊಂಡಿವೆ. ಫುಟ್‌ಪಾತ್‌ಗಳು ವಾಹನಗಳ ಅತಿಕ್ರಮಣಕ್ಕೆ ಒಳಗಾಗಿದ್ದು, ಪಾದಚಾರಿಗಳನ್ನೇ ವಾಹನ ಚಾಲಕರಿಗೆ ತೊಂದರೆ ಉಂಟುಮಾಡುವವರಂತೆ ಕಾಣಲಾಗುತ್ತಿದೆ. ಈ ಮನೋಭಾವ ಇನ್ನು ಮುಂದೆ ನಿಲ್ಲಬೇಕು ಎಂದು ನ್ಯಾಯಪೀಠ ಖಡಕ್ ಸಂದೇಶ ನೀಡಿದೆ.

ಯಾರ ಹೊಣೆ?: ಫುಟ್‌ಪಾತ್‌ಗಳನ್ನು ಗುರುತಿಸುವುದು, ನಿರ್ಮಿಸುವುದು, ನಿರ್ವಹಿಸುವುದು ಮತ್ತು ಅತಿಕ್ರಮಣದಿಂದ ರಕ್ಷಿಸುವ ಹೊಣೆ ನಗರಾಭಿವೃದ್ಧಿ ಪ್ರಾಧಿಕಾರಗಳು, ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು ಹಾಗೂ ಗ್ರಾಮ ಪಂಚಾಯಿತಿಗಳ ಮೇಲಿದೆ ಎಂದು ನ್ಯಾಯಾಲಯ ಹೇಳಿದೆ.

ಕಿರುಸುದ್ದಿ

ಜಪಾನ್‌ನಲ್ಲಿ 5 ದಿನಗಳ ಭಗವದ್ಗೀತಾ ಮಹೋತ್ಸವ

ಟೋಕಿಯೊ: ಜಪಾನ್ ರಾಜಧಾನಿ ಟೋಕಿಯೊದಲ್ಲಿ ಶುಕ್ರವಾರದಿಂದ ಐದು ದಿನಗಳ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ ನಡೆಯಲಿದೆ. ಭಾರತದ ಶಾಶ್ವತ ಸಾಂಸ್ಕೃತಿಕ ಪರಂಪರೆ ಮತ್ತು ಭಗವದ್ಗೀತೆಯ ಸಾರ್ವತ್ರಿಕ ಸಂದೇಶವನ್ನು ಜಾಗತಿಕ ವೇದಿಕೆಯಲ್ಲಿ ಉತ್ತೇಜಿಸುವಲ್ಲಿ ಈ ಕಾರ್ಯಕ್ರಮವು ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಲಿದೆ. ಜಪಾನ್‌ನಲ್ಲಿ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ (ಐಜಿಎಂ)-2026 ಅನ್ನು ಶುಕ್ರವಾರದಿಂದ ಜೂ.23 ವರೆಗೆ ನಡೆಸಲಾಗುತ್ತಿದೆ.

ಇಬ್ಬರು ಶಂಕಿತ ಉಗ್ರ ಸಹಚರರ ಬಂಧನ

ಶ್ರೀನಗರ: ಜಮ್ಮು-ಕಾಶ್ಮೀರ ಪೊಲೀಸರು ಕಿಶ್ತ್ವಾರ್ ಜಿಲ್ಲೆಯಲ್ಲಿ ಇಬ್ಬರು ಶಂಕಿತ ಭಯೋತ್ಪಾದಕ ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ. ಭಯೋತ್ಪಾದಕರ ಜತೆ ನಂಟು ಹೊಂದಿರುವ ರಾಷ್ಟ್ರ ವಿರೋಧಿ ಶಕ್ತಿಗಳು ಮತ್ತು ಬೆಂಬಲ ಜಾಲಗಳ ಮೇಲೆ ಪತ್ತೆ ಹಚ್ಚುವ ತನಿಖೆಯ ಭಾಗವಾಗಿ ಈ ಬಂಧನ ನಡೆದಿದೆ. ಈ ಮೂಲಕ ಈ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ನಾಲ್ಕಕ್ಕೆ ತಲುಪಿದೆ. ಕಿಶ್ತ್ವಾರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಬಂಧನಗಳನ್ನು ಮಾಡಲಾಗಿದೆ. ಕಿಶ್ತ್ವಾರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ನರೇಶ್ ಸಿಂಗ್, ನಿಖರವಾದ ತನಿಖೆಯ ನಂತರ, ಪೊಲೀಸರು ಅರಣ್ಯ ಇಲಾಖೆಯ ಸರ್ಕಾರಿ ಉದ್ಯೋಗಿ ತಾರಿಕ್ ಅಹ್ಮದ್ ಗಿನೂ ಮತ್ತು ದಾಚಾನ್‌ನ ತಾಂಡರ್ ನಿವಾಸಿಗಳಾದ ಮೊಹಮ್ಮದ್ ಇಕ್ಬಾಲ್‌ನನ್ನು ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದ ಮೇಲೆ ಬಂಧಿಸಿದ್ದಾರೆ ಎಂದು ಹೇಳಿದರು.

ನಿಯಾಮೆ ಸೇನಾ ನೆಲೆಗೆ ದಾಳಿ: 13 ಮಂದಿ ಸಾವು

ನಿಯಾಮೆ: ನೈಜರ್ ರಾಜಧಾನಿ ನಿಯಾಮೆ ನಗರದಲ್ಲಿನ ವಿಮಾನ ನಿಲ್ದಾಣ ಮತ್ತು ಸೇನಾ ನೆಲೆಯ ಮೇಲೆ ಅಲ್ ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕ ನಡೆಸಿದ ಬಾಂಬ್ ದಾಳಿಯಲ್ಲಿ 11 ಭದ್ರತಾ ಸಿಬ್ಬಂದಿ ಹಾಗೂ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ. ಈ ದಾಳಿಯ ಹೊಣೆಯನ್ನು ಅಲ್-ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕವಾದ ಇಸ್ಲಾಮಿಕ್ ಸ್ಟೇಟ್ ಸಹೇಲ್ ಪ್ರಾವಿನ್ಸ್ ವಹಿಸಿಕೊಂಡಿದೆ. ಭದ್ರತಾ ಪಡೆಗಳು ದಾಳಿಕೋರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದು, ಹಲವರನ್ನು ಬಂಧಿಸಿ, ಶಸ್ತ್ರಾಸ್ತ್ರಗಳನ್ನು ವಶಪಡಿಸಿವೆ. ಈ ಘಟನೆ ಆಫ್ರಿಕಾದಲ್ಲಿ ಮುಂದುವರಿದ ಭದ್ರತಾ ಅಸ್ಥಿರತೆ ಹಾಗೂ ವಿವಿಧ ಜಿಹಾದಿ ಉಗ್ರ ಸಂಘಟನೆಗಳ ನಡುವಿನ ಪೈಪೋಟಿಯನ್ನು ಸ್ಪಷ್ಟಗೊಳಿಸಿದೆ.

ಸಮರತಂತ್ರ ಸಾಧನಗಳ ಅರ್ಹತೆಯಲ್ಲಿ ರಾಜಿಯಿಲ್ಲ

ಹೊಸದಿಲ್ಲಿ: 2014ರಲ್ಲಿ ಬರೇ 46ಸಾವಿರ ಕೋಟಿ ರೂಗಳಿಗೆ ಸೀಮಿತವಾಗಿದ್ದ ಭಾರತದ ರಕ್ಷಣಾ ಉತ್ಪಾದನೆ 2025-26ರಲ್ಲಿ 1,78,000 ಕೋಟಿ ರೂ.ಮೀರಿದೆ ಎಂದು ಹೆಮ್ಮೆ ವ್ಯಕ್ತಪಡಿಸಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್, ಸಾಂಪ್ರದಾಯಿಕ ಸಮರತಂತ್ರಗಳು 1947ರಲ್ಲಿ ಹೊಂದಿದ್ದ ವಿಶ್ವಾಸಾರ್ಹತೆ ಮತ್ತು ಪ್ರಸ್ತುತತೆಯನ್ನು ಇಂದಿಗೂ ಉಳಿಸಿಕೊಂಡಿವೆ ಎಂದು ಹೇಳಿದ್ದಾರೆ. ತನ್ನ ಅವಶ್ಯಕತೆಗಳನ್ನು ಸ್ವಂತ ಸಾಮರ್ಥ್ಯದಿಂದ ಈಡೇರಿಸಿಕೊಳ್ಳಬಲ್ಲ ರಾಷ್ಟ್ರವು ಖಂಡಿತವಾಗಿ ಆತ್ಮವಿಶ್ವಾಸದಿಂದ ಮುಂದೆ ಸಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದ ಅಂಬಾಝರಿಯಲ್ಲಿ, ಯಂತ್ರ ಇಂಡಿಯಾ ಲಿಮಿಟೆಡ್ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ, 10ಸಾವಿರ ಟನ್ ಸಾಮರ್ಥ್ಯದ ಅಲ್ಯೂಮಿನಿಯಂ ಬಿಡಿಭಾಗಗಳಿಗೆ ಸಂಬಂಧಪಟ್ಟ ಅತ್ಯಾಧುನಿಕ ಘಟಕಕ್ಕೆ ಭೂಮಿಪೂಜೆ ನೆರವೇರಿಸಿ ಸಚಿವರು ಮಾತನಾಡಿದರು. ದುರ್ಲಭ ಅಲ್ಯೂಮಿನಿಯಂ ಬಿಡಿಭಾಗಗಳ ಆಮದು ಮೇಲಿನ ಅವಲಂಬನೆಯನ್ನು ಹೊಸ ಸೌಕರ್ಯವು ಕುಗ್ಗಿಸಲಿದೆ. ಸಮರಗಳ ಸಂದರ್ಭ ಪೂರೈಕೆ ವ್ಯವಸ್ಥೆ ಸಹಜವಾಗೇ ಅಸ್ತವ್ಯಸ್ತಗೊಳ್ಳುತ್ತದೆ. ಅಂತಹ ಸನ್ನಿವೇಶಗಳಲ್ಲಿ ಆವಶ್ಯ ವಸ್ತುಗಳನ್ನು ದೇಶೀಯವಾಗಿ ಉತ್ಪಾದಿಸಲು ಪ್ರತಿಯೊಂದು ದೇಶವೂ ಬಯಸುವುದು ಸಹಜವೆಂದು ಸಚಿವ ಸಿಂಗ್ ನುಡಿದರು.

ಸಾಂಪ್ರದಾಯಿಕ ಸಮರತಂತ್ರಗಳು ಸ್ವಾತಂತ್ರ್ಯ ಸಂದರ್ಭ ಹೊಂದಿದ್ದ ವಿಶ್ವಾಸಾರ್ಹತೆಯನ್ನು ಇಂದಿಗೂ ಕಾಯ್ದುಕೊಂಡಿವೆ ಮತ್ತು 2047ರ ವೇಳೆಯೂ ತಮ್ಮ ನಿರ್ಣಾಯಕತೆಯನ್ನು ಎತ್ತಿಹಿಡಿಯಲಿವೆ ಎಂದರು.

ಅಯೋಧ್ಯೆ ದೇಣಿಗೆ ನಿಧಿ: ತಪ್ಪಿತಸ್ಥರಿಗೆ ಶಿಕ್ಷೆ ಖಚಿತ

ಲಖನೌ: ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಪ್ರಕರಣದಲ್ಲಿ ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ, ಅವರನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ರಾಮ ಮಂದಿರದ ದೇಣಿಗೆ ನಿಧಿಯನ್ನು ದುರುಪಯೋಗಪಡಿಸಿಕೊಂಡ ಆರೋಪದ ಕುರಿತು ತನಿಖೆಗೆ ಎಸ್‌ಐಟಿ ರಚಿಸಿದ ಬೆನ್ನಲ್ಲೇ ಆದಿತ್ಯನಾಥ್ ಅವರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ.

ದೇವಾಲಯದ ಪಟ್ಟಣದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ, ಭಗವಾನ್ ರಾಮನ ಭಕ್ತರ ಭಾವನೆಗಳಿಗೆ ನೋವುಂಟುಮಾಡುವಂತಹ ಹೇಳಿಕೆಗಳನ್ನು ನೀಡದಂತೆ ಜನರನ್ನು ಒತ್ತಾಯಿಸಿದರು. ಟ್ರಸ್ಟ್‌ನ ಕೋರಿಕೆ ಮೇರೆಗೆ ನಾವು ಎಸ್‌ಐಟಿ ತನಿಖೆಗೆ ಆದೇಶಿಸಿದ್ದೇವೆ. ಎಸ್‌ಐಟಿ ತನಿಖೆಯು 15 ದಿನಗಳಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸುತ್ತದೆ ಎಂದರು. ನಾನು ಒಂದು ವಾರದೊಳಗೆ ಪ್ರಾಥಮಿಕ ವರದಿಯನ್ನು ಪಡೆಯುತ್ತೇನೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರನ್ನು ಬಿಡಲಾಗುವುದಿಲ್ಲ ಎಂದು ಹೇಳಿದರು. ಭಗವಾನ್ ರಾಮನ ಜನ್ಮಸ್ಥಳದಲ್ಲಿ ದೇವಾಲಯಕ್ಕಾಗಿ 500 ವರ್ಷಗಳ ಹೋರಾಟವನ್ನು ನೆನಪಿಸಿಕೊಂಡ ಯೋಗಿ, ಅಯೋಧ್ಯೆಯಲ್ಲಿ ಭವ್ಯವಾದ ದೇವಾಲಯದ ಕನಸನ್ನು ನನಸಾಗಿಸಲು ಭಗವಾನ್ ರಾಮನು ಕಲಿಸಿದ ತಾಳ್ಮೆ ಮತ್ತು ಘನತೆಯನ್ನು ಭಕ್ತರು ಪ್ರದರ್ಶಿಸಿದ್ದಾರೆ ಎಂದು ಹೇಳಿದರು. ಈಗ ಇದು ಕೇವಲ 15 ದಿನಗಳ ವಿಷಯವಾಗಿದೆ. ಸತ್ಯ ಹೊರಬರಲು ಅದೇ ತಾಳ್ಮೆ ಮತ್ತು ಘನತೆಯನ್ನು ಕಾಪಾಡಿಕೊಳ್ಳಿ ಎಂದು ಅವರು ಹೇಳಿದರು.

ಕದನವಿರಾಮ ನವೀಕರಣಕ್ಕೆ ಇಸ್ರೇಲ್-ಲೆಬನಾನ್ ಅಸ್ತು

ಹೊಸದಿಲ್ಲಿ: ಅಮೆರಿಕ-ಇರಾನ್ ನಡುವಿನ ಸ್ವಿಜರ್‌ಲೆಂಡ್ ಮಾತುಕತೆ ರದ್ದಾದ ಬಳಿಕ ಇಸ್ರೇಲ್-ಲೆಬನಾನ್ ಕದನ ವಿರಾಮ ಒಪ್ಪಂದವನ್ನು ನವೀಕರಿಸಲು ಒಪ್ಪಿಕೊಂಡಿವೆ. ಅಮೆರಿಕ-ಇರಾನ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ ನಂತರವೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು.

ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಸಮರ್ಥಿಸಿಕೊಂಡಿದೆ. ಶುಕ್ರವಾರ ಎರಡೂ ಪಕ್ಷಗಳು ಕದನ ವಿರಾಮ ಒಪ್ಪಂದ ನವೀಕರಿಸಲು ಒಪ್ಪಿವೆ. ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದೆ. ಶುಕ್ರವಾರ ಸಂಜೆ 4 ಗಂಟೆಗೆ ಕದನ ವಿರಾಮ ನವೀಕರಿಸಲು ಉಭಯ ರಾಷ್ಟ್ರಗಳು ಒಪ್ಪಿಕೊಂಡಿದ್ದವು. ಆದರೆ ಇಸ್ರೇಲ್ ಇನ್ನಷ್ಟು ವೈಮಾನಿಕ ದಾಳಿ ನಡೆಸಿದ್ದು, 150ಕ್ಕೂ ಅಧಿಕ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿದೆ. ಇಸ್ರೇಲ್ ದಾಳಿಗೆ 47 ನಾಗರಿಕರು ಮೃತಪಟ್ಟಿದ್ದಾರೆ ಮತ್ತು 97 ಮಂದಿ ತೀವ್ರ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ನಾಲ್ವರು ಇಸ್ರೇಲಿ ಯೋಧರು ಮೃತಪಟ್ಟಿದ್ದಾರೆಂದು ವರದಿಯಾಗಿದೆ. ಲೆಬನಾನ್ ವಿಚಾರದಲ್ಲಿ ಅಮೆರಿಕ-ಇಸ್ರೇಲ್ ಭಿನ್ನಾಭಿಪ್ರಾಯವೇ ಈ ಒಮ್ಮತಕ್ಕೆ ಕಾರಣವೆನ್ನಲಾಗಿದೆ.

ಹತಾಶೆಯಿಂದ ಒಪ್ಪಿದ ಇರಾನ್: ಹತಾಶೆಯಿಂದ ಇರಾನ್ ಮಧ್ಯಂತರ ಒಪ್ಪಂದ ಒಪ್ಪಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹೇಳಿದ್ದಾರೆ. ಇದೇ ವೇಳೆ ಷರತ್ತುಗಳನ್ನು ಅಮೆರಿಕ ಉಲ್ಲಂಘಿಸಿದರೆ, ನಮ್ಮ ಕೈ ಟ್ರಿಗರ್ ಮೇಲಿಟ್ಟು ಸಿದ್ಧವಾಗಿದ್ದೇವೆ ಎಂದು ಇರಾನ್ ಸೇನೆ ಹೇಳಿದೆ.

ಟ್ರಂಪ್ ಹೇಳಿಕೆಗೆ ಮೆಲೋನಿ ಛೀಮಾರಿ

ವಾಷಿಂಗ್ಟನ್: ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಜಿ7 ಶೃಂಗಸಭೆಯಲ್ಲಿ ತಮ್ಮೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳಲು ಬೇಡಿಕೊಂಡಿದ್ದರು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ ,ಮೆಲೋನಿ ಖಾರವಾಗಿ ತಿರುಗೇಟು ನೀಡಿದ್ದಾರೆ. ಈ ಹೇಳಿಕೆ ಸಂಪೂರ್ಣ ಸುಳ್ಳು ಮತ್ತು ಕಟ್ಟುಕಥೆ ಎಂದು ಹೇಳಿದ್ದಾರೆ. ಇಟಲಿ ಟಿವಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ನಾನು ಮೆಲೋನಿ ಜತೆ ಮಾತನಾಡಬೇಕಾದ ಅಗತ್ಯವಿರಲಿಲ್ಲ. ಅವರು ನನ್ನೊಂದಿಗೆ ಫೋಟೋ ತೆಗೆಸಿಕೊಳ್ಳಲು ತುಂಬಾ ಕೇಳಿಕೊಂಡಿದ್ದರು ಎಂದಿದ್ದಾರೆ. ಟ್ರಂಪ್ ಅವರ ಈ ಹೇಳಿಕೆ ಇಟಲಿಯಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ನಾನು ಅಥವಾ ಇಟಲಿ ಎಂದಿಗೂ ಬೇಡಿಕೊಳ್ಳುವುದಿಲ್ಲ ಎಂದು ಮೆಲೋನಿ ವೀಡಿಯೊ ಸಂದೇಶದಲ್ಲಿ ಹೇಳಿಕೊಂಡಿದ್ದಾರೆ.

ಮ್ಯಾಕ್ರಾನ್‌ಗೆ ಕಲಂಕಾರಿ ಮಹಾಭಾರತ ಚಿತ್ರಕಲೆ | ಫಿಕೊಗೆ ಕಾಶ್ಮೀರಿ ಗಾಲಿಚೆ

ಭಾರತೀಯ ಸಂಸ್ಕೃತಿಯ ಉಡುಗೊರೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸದ ವೇಳೆ ಅಲ್ಲಿನ ನಾಯಕರಿಗೆ ಭಾರತದ ಶ್ರೀಮಂತ ಕಲೆ, ಸಂಸ್ಕೃತಿ, ವೈದ್ಯಕೀಯ ಪರಂಪರೆ ಹಾಗೂ ಪ್ರಾದೇಶಿಕ ಆಹಾರ ವೈವಿಧ್ಯವನ್ನು ಪ್ರತಿಬಿಂಬಿಸುವ ವಿಶಿಷ್ಟ ಉಡುಗೊರೆಗಳನ್ನು ನೀಡಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರಿಗೆ ಆಂಧ್ರಪ್ರದೇಶದ ಕಲಂಕಾರಿ ಶೈಲಿಯಲ್ಲಿ ರಚಿಸಲಾದ ಮಹಾಭಾರತದ ಚಿತ್ರಕಲೆಯನ್ನು ಮೋದಿ ಉಡುಗೊರೆಯಾಗಿ ನೀಡಿದ್ದಾರೆ. ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರಿ ರೇಷ್ಮೆ ಗಾಲಿಚೆ ಹಾಗೂ ಅಲ್ಲಿನ ಸಂಸತ್ ಸ್ಪೀಕರ್ ರಿಚರ್ಡ್ ರಾಸಿ ಅವರಿಗೆ ಬಿಹಾರದ ಸಾಂಪ್ರದಾಯಿಕ ಸಿಹಿ ತಿಂಡಿ ಠೇಕುವಾ ನೀಡಲಾಗಿದೆ.

ಆರು ತಿಂಗಳ ಪರಿಶ್ರಮದ ಕಲಾಕೃತಿ: ಮ್ಯಾಕ್ರಾನ್ ಅವರಿಗೆ ನೀಡಲಾದ ಮಹಾಭಾರತದ ಕಲಂಕಾರಿ ಚಿತ್ರವನ್ನು ಸಾಂಪ್ರದಾಯಿಕ ಲೇಖನಿ ಚಿತ್ರಣ ವಿಧಾನ ಬಳಸಿ ಕೈಯಿಂದ ರಚಿಸಲಾಗಿದೆ. ಇದನ್ನು ಪೂರ್ಣಗೊಳಿಸಲು ಸುಮಾರು ಆರು ತಿಂಗಳು ಬೇಕಾಗಿದೆ. ಮಹಾಭಾರತದ



ಕರ್ತವ್ಯ, ನ್ಯಾಯ, ಧೈರ್ಯ ಮತ್ತು ನೈತಿಕ ಆಯ್ಕೆಯ ಸಂದೇಶಗಳನ್ನು ಚಿತ್ರದಲ್ಲಿ ಬಿಂಬಿಸಲಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ನೀಡಿದ ಕರ್ತವ್ಯಪ್ರಜ್ಞೆ, ಆತ್ಮಸಂಯಮ ಮತ್ತು ಆಂತರಿಕ ಶಕ್ತಿಯ ಬೋಧನೆಯನ್ನೂ ಕಲಾಕೃತಿಯಲ್ಲಿ ಪ್ರಮುಖವಾಗಿ ಚಿತ್ರಿಸಲಾಗಿದೆ.

ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರ ಕಣಿವೆಯ, ವಿಶೇಷವಾಗಿ ಶ್ರೀನಗರ ಪ್ರದೇಶದ ಪ್ರಸಿದ್ಧ ಕೈಗಂಟಿನ ರೇಷ್ಮೆ ಗಾಲಿಚೆಯನ್ನು ನೀಡಲಾಗಿದೆ. ನೈಸರ್ಗಿಕ ರೇಷ್ಮೆ ಯಿಂದ ತಯಾರಿಸಲಾದ ಈ ಗಾಲಿಚೆಯಲ್ಲಿ ಹೂವು, ಬಳ್ಳಿ, ಮಾವಿನಕಾಯಿ ಹಾಗೂ ಪದಕಾಕಾರದ ಸೂಕ್ಷ್ಮ ವಿನ್ಯಾಸಗಳಿವೆ. ಅಂದ, ಬಾಳಿಕೆ ಮತ್ತು ಕಲಾತ್ಮಕತೆಯ ಸಂಗಮವಾಗಿರುವ ಕಾಶ್ಮೀರಿ ರೇಷ್ಮೆ ಗಾಲಿಚೆಗಳು ಜಗತ್ತಿನಾದ್ಯಂತ ಐಷಾರಾಮಿ ಗೃಹಾಲಂಕಾರ ವಸ್ತು ಗಳಾಗಿಯೂ, ಕಲಾಕೃತಿಗಳಾಗಿಯೂ ಪ್ರಸಿದ್ಧಿ ಪಡೆದಿವೆ.

ಸ್ಲೊವಾಕ್ ಅಧ್ಯಕ್ಷರಿಗೆ ಡೋಕ್ರಾ ಜಿಂಕೆ: ಸ್ಲೊವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರಿಗೆ ಹಿತ್ತಾಳೆಯಿಂದ ತಯಾರಿಸಲಾದ ಡೋಕ್ರಾ ಜಿಂಕೆಗಳ ಜೋಡಿಯನ್ನು ಉಡುಗೊರೆಯಾಗಿ ನೀಡಲಾಗಿದೆ. ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಬುಡಕಟ್ಟು ಕುಶಲಕರ್ಮಿಗಳು ಶತಮಾನಗಳಿಂದ ಅನುಸರಿಸಿಕೊಂಡು ಬಂದಿರುವ ಪುರಾತನ ಲೋಹ ಎರಕದ ಕಲೆಯನ್ನು ಇದು ಪ್ರತಿನಿಧಿಸುತ್ತದೆ. ಪೆಲ್ಲೆಗ್ರಿನಿ ಅವರಿಗೆ ಛತ್ರಪತಿ ಸಂಭಾಜಿನಗರದ ಹಿಮ್ರೂ ರೇಷ್ಮೆ ಟೈ ಮತ್ತು ಜೇಬು ವಸ್ತ್ರದ ಜೋಡಿಯನ್ನೂ ನೀಡಲಾಗಿದೆ. ರಾಜಸ್ಥಾನದ ಪ್ರತಾಪಗಢ ಜಿಲ್ಲೆಯ ಸಾಂಪ್ರದಾಯಿಕ ಥೇವಾ ಕಲೆಯ ವಿನ್ಯಾಸ ಹೊಂದಿರುವ ಕೈಕೊಂಡಿಗಳನ್ನೂ ಸ್ಲೊವಾಕ್ ಅಧ್ಯಕ್ಷರಿಗೆ ನೀಡಲಾಗಿದೆ.

ಭಾರತೀಯರನ್ನುದ್ದೇಶಿಸಿ ಮೋದಿ ಮಾತು

ವಿಶ್ವಾಸಾರ್ಹ ಪಾಲುದಾರ

ಪ್ಯಾರಿಸ್: ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಪಾಲುದಾರನಾಗಿ ಭಾರತ ಹೊರಹೊಮ್ಮುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತುಂಬು ಹೆಮ್ಮೆ -ಹರ್ಷ ವ್ಯಕ್ತಪಡಿಸಿದ್ದಾರೆ. ಭಾವೀ ಪೀಳಿಗೆಗೆ ಅವಕಾಶಗಳ ತೆರೆದಿಡಬಲ್ಲ, ಆವಿಷ್ಕಾರ ಮತ್ತು ಅಭಿವೃದ್ಧಿಗೆ ಪ್ರೇರಣಾದಾಯಿ ರಂಗಗಳಲ್ಲಿ ರಾಷ್ಟ್ರವು ಧಾರಾಳ ಹೂಡಿಕೆ ಹೂಡುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ರಾಷ್ಟ್ರದ ಮತ್ತು ರಾಷ್ಟ್ರವಾಸಿ ಜನರ ಆಶೋತ್ತರಗಳು ನವಶೃಂಗವನ್ನು ಸ್ಪರ್ಶಿಸುತ್ತಿರುವ ಹಾಗೂ ಭಾರತವು ತನ್ನ ಭವ್ಯ ಭವಿಷ್ಯವನ್ನು ರೂಪಿಸುತ್ತಿರುವಂತಹ ರಾಷ್ಟ್ರದ ಯಾನದಲ್ಲಿದೊಂದು ವರ್ಣನಾಯೋಗ್ಯ ಅಥವಾ ವ್ಯಾಖ್ಯಾನಾರ್ಹ ಕಾಲಘಟ್ಟವಾಗಿದೆ ಎಂದು ಪ್ಯಾರಿಸ್‌ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ



ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ವ್ಯಾಪಾರವೊಂದೇ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ನಿರ್ಧರಿಸುವ ಕಾಲವಿತ್ತು. ಆದರೆ ಇಂದು ವ್ಯಾಪಾರದ ಜತೆ ವಿಶ್ವಾಸಾರ್ಹತೆ ಕೂಡ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ ವಿಶ್ವಾಸಾರ್ಹ ಪೂರೈಕೆ ವ್ಯವಸ್ಥೆಯನ್ನು ಬಯಸುತ್ತಿದೆ. ಪ್ರತೀ ರಾಷ್ಟ್ರವೂ ಸ್ಥಿರ ಪಾಲುದಾರಿಕೆ ಬಯಸುತ್ತಿದೆ.

ಕಿರುಸುದ್ದಿ

ಸಿಎ ಅಂತಿಮ ಪರೀಕ್ಷೆಯಲ್ಲಿ ಶಮ ಉತ್ತೀರ್ಣ

ಬಂಟ್ವಾಳ: ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಮೇ 2026ರಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ಬಂಟ್ವಾಳ ಸಮೀಪದ ಅಜೆಕಲ ನಿವಾಸಿ ಬಿ.ಮಹಾಬಲ ಸಪಲ್ಯ – ಶ್ಯಾಮಲಾ ದಂಪತಿ ಪುತ್ರಿ ಶಮ ಎಂ. ಅವರು ಯಶಸ್ವಿಯಾಗಿ ಉತ್ತೀರ್ಣರಾಗಿದ್ದಾರೆ. ಈಕೆ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬಂಟ್ವಾಳ ವಿದ್ಯಾಗಿರಿ ಎಸ್.ವಿ.ಎಸ್ ಆಂಗ್ಲ ಮಾಧ್ಯಮ ಶಾಲೆ,ಪಿಯುಸಿ ಶಿಕ್ಷಣವನ್ನು ಬಂಟ್ವಾಳ ಎಸ್.ವಿ.ಎಸ್ ಪಿಯು ಕಾಲೇಜಿನಲ್ಲಿ ಪೂರ್ಣಗೊಳಿಸಿದ್ದು, ಅವರು ತಮ್ಮ ಸಿಎ ಫೌಂಡೇಶನ್ ಹಾಗೂ ಸಿಎ ಇಂಟರ್ಮೀಡಿಯೇಟ್ ಶಿಕ್ಷಣವನ್ನು ಮಂಗಳೂರಿನ ಕೆ.ವಿ.ಸಿ ಅಕಾಡೆಮಿಯಲ್ಲಿ ಪೂರ್ಣಗೊಳಿಸಿದ್ದಾರೆ.



ನಾಳೆ ಎಸ್‌ಪಿವೈಎಸ್‌ಎಸ್ ದ.ಕ. ವತಿಯಿಂದ ಯೋಗ ದಿನಾಚರಣೆ

ಮಂಗಳೂರು: ಎಸ್‌ಪಿವೈಎಸ್‌ಎಸ್ ದ.ಕ. ವತಿಯಿಂದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಯುಷ್ ಇಲಾಖೆ ಮತ್ತು ದ.ಕ ಜಿಲ್ಲಾಡಳಿತ ಸಹಯೋಗದೊಂದಿಗೆ ಮಂಗಳೂರಿನ ಪ್ರಜಾಸೌಧ ಹಾಗೂ ಪುತ್ತೂರು ತೆಂಕಿಲ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ಜೂ.21ರಂದು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 5 ರಿಂದ 6:30 ರವರೆಗೆ ಯೋಗಾಭ್ಯಾಸ ನಡೆಯಲಿದೆ. ಬೆಳಗ್ಗೆ 7:30 ರಿಂದ 8:30 ರವರೆಗೆ ದ.ಕ ಜಿಲ್ಲಾಧಿಕಾರಿ ಕಚೇರಿ ಪ್ರಜಾಸೌಧದಿಂದ ಮಹಾವೀರ ಸರ್ಕಲ್ ವರೆಗೆ 'ಯೋಗ ಪರಿಚಯ ಪರಿಕ್ರಮ' ಪರಿಕಲ್ಪನೆಯಲ್ಲಿ 'ಯೋಗ ನಡಿಗೆ' ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯೋಗದ ಮೂಲಕ ಆರೋಗ್ಯದ ಪ್ರಯೋಜನವನ್ನು ಪಡೆಯಬೇಕಾಗಿ ಸಂಘಟಕರು ವಿನಂತಿಸಿದ್ದಾರೆ.

ಬ್ರಹ್ಮಕುಮಾರೀಸ್ ವತಿಯಿಂದ ಉಚಿತ 'ಯೋಗ, ಯೋಗಾಸನ' ಶಿಬಿರ


ಮಂಗಳೂರು: ಬ್ರಹ್ಮಕುಮಾರೀಸ್ ಮಂಗಳೂರು ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ 10 ದಿನಗಳ ಉಚಿತ 'ಯೋಗ ಮತ್ತು ಯೋಗಾಸನ' ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರವು ಜೂ. 21 ರಿಂದ 30ರವರೆಗೆ ಪ್ರತಿದಿನ ಸಂಜೆ 6 ರಿಂದ 7.30ರವರೆಗೆ ಬ್ರಹ್ಮಕುಮಾರೀಸ್ ವಿಶ್ವಶಾಂತಿ ಮಂದಿರ, ಗಣೇಶ ದೇವಸ್ಥಾನದ ಹತ್ತಿರ, ಉರ್ವಸ್ಟೋರ್ ಮಂಗಳೂರು ಇಲ್ಲಿ ಜರುಗಲಿದೆ. ಶಿಬಿರದಲ್ಲಿ ಯೋಗಾಭ್ಯಾಸ, ಯೋಗಾಸನಗಳು, ಪ್ರಾಣಾಯಾಮ, ಧ್ಯಾನ ಹಾಗೂ ಮೆಡಿಟೇಷನ್ ಜ್ಞಾನ ಕುರಿತು ಅನುಭವಿ ತರಬೇತುದಾರರಿಂದ ಪ್ರಾಯೋಗಿಕ ತರಬೇತಿ ನೀಡಲಾಗುವುದು. ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗವು ಅತ್ಯುತ್ತಮ ಸಾಧನವಾಗಿದ್ದು, ಈ ಶಿಬಿರವು ಸಾರ್ವಜನಿಕರಿಗೆ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಲಿದೆ. ಶಿಬಿರದಲ್ಲಿ ಭಾಗವಹಿಸುವವರಿಗೆ ಮನಸ್ಸಿನ ಏಕಾಗ್ರತೆ ಮತ್ತು ನೆನಪಿನ ಶಕ್ತಿ ವೃದ್ಧಿಯಾಗುವುದು, ದೇಹದ ತೂಕ ನಿಯಂತ್ರಣ, ಬೆನ್ನು ಹಾಗೂ ಕುತ್ತಿಗೆ ನೋವಿನ ನಿವಾರಣೆ, ಹೈಬಿಪಿ, ಮಧುಮೇಹ, ಅಸ್ತಮಾ ಮೊದಲಾದ ಜೀವನಶೈಲಿ ಸಂಬಂಧಿತ ಸಮಸ್ಯೆಗಳನ್ನು ನಿಯಂತ್ರಿಸಲು ಸಹಾಯಕವಾಗುವ ಯೋಗಾಭ್ಯಾಸಗಳನ್ನು ಕಲಿಸಲಾಗುವುದು. ಅಲ್ಲದೆ, ಜೀರ್ಣಕ್ರಿಯೆ ಸುಧಾರಣೆ, ರೋಗನಿರೋಧಕ ಶಕ್ತಿ ಹೆಚ್ಚಳ, ಒತ್ತಡ ನಿವಾರಣೆ ಹಾಗೂ ಆಂತರಿಕ ಶಾಂತಿ ಮತ್ತು ಸಂತೋಷವನ್ನು ಅನುಭವಿಸಲು ಸಹಕಾರಿ ಧ್ಯಾನಾಭ್ಯಾಸವನ್ನೂ ನಡೆಸಲಾಗುವುದು. ಆಸಕ್ತ ಸಾರ್ವಜನಿಕರು ಈ ಉಚಿತ ಶಿಬಿರದಲ್ಲಿ ಭಾಗವಹಿಸಿ ಆರೋಗ್ಯಕರ, ಸಂತೋಷಕರ ಹಾಗೂ ಸಮತೋಲನಯುತ ಜೀವನದತ್ತ ಹೆಜ್ಜೆ ಇಡಬೇಕೆಂದು ಬ್ರಹ್ಮಕುಮಾರಿ ವಿಶ್ವೇಶ್ವರಿ ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9886247272 ಸಂಪರ್ಕಿಸಬಹುದು.

ಮಡಿಕೇರಿ ಜೈಲಿನಲ್ಲಿ ವಿಚಾರಣಾಧೀನ ಕೈದಿ ಸಾವು

ಮಡಿಕೇರಿ: ನಗರದ ಹೊರವಲಯದ ಕರ್ಣಂಗೇರಿಯಲ್ಲಿರುವ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯೊಬ್ಬರು ಸಾವನ್ನಪ್ಪಿರುವ ಘಟನೆ ನಡೆದಿದೆ. ಮಡಿಕೇರಿ ತಾಲೂಕಿನ ಎಂ.ಬಾಡಗದ ನಿವಾಸಿ ಹರೀಶ್ (47) ಎಂಬವರೇ ಜೈಲಿನಲ್ಲಿ ಸಾವಿಗೀಡಾದವರು. ಏಪ್ರಿಲ್ 3ರಂದು ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹರೀಶ್ ನ್ಯಾಯಾಂಗ ಬಂಧನದಲ್ಲಿದ್ದರು. ಬುಧವಾರ ರಾತ್ರಿ ಊಟ ಮುಗಿಸಿ ಬ್ಯಾರಕ್‌ನಲ್ಲಿ ಮಲಗಿದ್ದ ಹರೀಶ್, ಗುರುವಾರ ಬೆಳಗ್ಗೆ ಎದ್ದಿರಲಿಲ್ಲ. ಸಹ ಕೈದಿಗಳು ಎಬ್ಬಿಸಲು ಪ್ರಯತ್ನಿಸಿದರೂ ಪ್ರತಿಕ್ರಿಯಿಸದ ಹಿನ್ನೆಲೆಯಲ್ಲಿ ಜೈಲು ಸಿಬ್ಬಂದಿಗೆ ಮಾಹಿತಿ ನೀಡಿದರು. ಪರಿಶೀಲಿಸಿದಾಗ ಹರೀಶ್ ಮೃತಪಟ್ಟಿರುವುದು ಕಂಡುಬಂದಿದೆ. ವಿಚಾರಣಾಧೀನ ಕೈದಿ ನ್ಯಾಯಾಂಗ ಬಂಧನದಲ್ಲಿಯೇ ಮೃತಪಟ್ಟ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಚಂದ್ರಶೇಖರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಮಹಜರು ನಡೆಸಿದ್ದಾರೆ. ನ್ಯಾಯಾಧೀಶರ ಆದೇಶದನ್ವಯ ಮೃತದೇಹವನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಮರಣೋತ್ತರ ಪರೀಕ್ಷಾ ವರದಿಯ ಬಳಿಕ ಸಾವಿಗೆ ನಿಖರ ಕಾರಣ ತಿಳಿಯಲಿದೆ.

ಕಾರು ಡಿಕ್ಕಿ: ಸ್ಕೂಟರ್ ಸವಾರ ಸಾವು

ಬಂಟ್ವಾಳ : ಕಾರು ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಸವಾರ ಯುವಕನೋರ್ವ ಮೃತಪಟ್ಟ ಘಟನೆ ಸಜಿಪಮೂಡ ಗ್ರಾಮದ ಕೊಳಕೆ ಎಂಬಲ್ಲಿ ಗುರುವಾರ ಸಂಜೆ ವೇಳೆ ಸಂಭವಿಸಿದೆ. ಮೃತ ಸ್ಕೂಟರ್ ಸವಾರನನ್ನು ಸಜಿಪನಡು ಗ್ರಾಮದ ಮಡಿವಾಳಪ್ಟಿಲ್-ಮುಹಿಯುದ್ದೀನ್ ನಗರ ನಿವಾಸಿ ಅಬ್ದುಲ್ ರಹಿಮಾನ್ ಎಂಬವರ ಪುತ್ರ ಅಹ್ಮದ್ ಆಸೀರ್ (22) ಎಂದು ಗುರುತಿಸಲಾಗಿದೆ. ಸಜಿಪನಡು ಜಂಕ್ಷನ್‌ನಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ ಆಸೀರ್ ಅವರು ಸಜೀಪ ಸಮೀಪ ಕಡೆ ಆಕ್ಟಿವಾ ಸ್ಕೂಟರಿನಲ್ಲಿ ಬರುತ್ತಿದ್ದ ವೇಳೆ ಎದುರಿನಿಂದ ವಾಹನವೊಂದನ್ನು ಓವರ್ ಟೇಕ್ ಮಾಡುವ ಭರದಲ್ಲಿ ಕಾರು ಸ್ಕೂಟರಿಗೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ. ಅಪಘಾತದ ಪರಿಣಾಮ ರಸ್ತೆಗೆಸೆಯಲ್ಪಟ್ಟು ತಲೆಗೆ ಗಂಭೀರ ಗಾಯಗೊಂಡ ಆಸೀರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಮೃತ ಆಸೀರ್ ಅವರು ಎಸ್ಕೆಎಸ್ಸೆಸ್ಸೆಫ್ ಸಂಘಟನೆಯ ಸಮಾಜಮುಖಿ ವಿಖಾಯ ಸಂಘಟನೆಯ ಆಕ್ಟಿವ್ ವಿಂಗ್ ಸದಸ್ಯರಾಗಿದ್ದಾರೆ.ಬಂಟ್ವಾಳ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಐಕ್ಯರಂಗ ಸರಕಾರದ ಚೊಚ್ಚಲ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ವಿ.ಡಿ.ಸತೀಶನ್

ಕಾಸರಗೋಡಿನ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್

ಕಾಸರಗೋಡು: ಹತ್ತು ವರ್ಷಗಳ ನಂತರ ಪ್ರಚಂಡ ಬಹುಮತದೊಂದಿಗೆ ಕೇರಳದಲ್ಲಿ ಮತ್ತೆ ಅಧಿಕಾರಕ್ಕೇರಿದ ಯುಡಿಎಫ್ ಸರಕಾರದ ಚೊಚ್ಚಲ ಮುಂಗಡಪತ್ರವನ್ನು ಹಣಕಾಸು ಇಲಾಖೆಯ ಹೊಣೆಗಾರಿಕೆ ಹೊಂದಿರುವ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಶುಕ್ರವಾರ ವಿಧಾನಸಭೆಯಲ್ಲಿ ಮಂಡಿಸಿದರು.

ರಾಜ್ಯದಲ್ಲಿ ತೀವ್ರ ಹಿಂದುಳಿದಿರುವ ಕಾಸರಗೋಡು, ವಯನಾಡು ಮತ್ತು ಇಡುಕ್ಕಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್‌ಗಳನ್ನು ಜಾರಿಗೊಳಿಸಲು ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಲಾಗಿದೆ. ಕೇರಳದ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ವಿಧಾನಸಭೆಯಲ್ಲಿ ಪರಿಷ್ಕೃತ ರಾಜ್ಯ ಬಜೆಟ್ ಮಂಡಿಸಿದರು.

ಕಾಸರಗೋಡು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಉತ್ತೇಜನ ನೀಡುವುದಾಗಿ ಅವರು ಘೋಷಿಸಿದರು. ಎಂಡೋಸಲ್ಫಾನ್ ಕೀಟನಾಶಕದಿಂದ ಹಾನಿಗೊಳಗಾದ ಕುಟುಂಬಗಳನ್ನು ಸರಕಾರವು ವಹಿಸಿಕೊಳ್ಳುವುದಾಗಿ ಘೋಷಿಸಲಾಗಿದೆ. ಎಂಡೋಸಲ್ಫಾನ್‌ನಿಂದ ತೊಂದರೆಗೊಳಗಾದವರಿಗೆ ಎಲ್ಲಾ ರೀತಿಯ ಪ್ರಯೋಜನಗಳನ್ನು ಒದಗಿಸಲಾಗುವುದು.

ಪ್ರಗತಿ ಸಾಧಿಸುವ ಗುರಿ

ಜಿಲ್ಲೆಯ ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟದ ಕ್ಷೇತ್ರಗಳನ್ನು ಬಲಪಡಿಸಲು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ್ನು ವಿಸ್ತರಿಸಲಾಗುವುದು. ಕಾಸರಗೋಡು ಜಿಲ್ಲೆಯ ಹಿಂದುಳಿದಿರುವಿಕೆಯನ್ನು ಪರಿಹರಿಸಲು ಶಿಕ್ಷಣ, ಆರೋಗ್ಯ ಮತ್ತು ಜೀವನೋಪಾಯಕ್ಕೆ ಆದ್ಯತೆ ನೀಡಲಾಗುವುದು. ವಿವಿಧ ಯೋಜನೆಗಳನ್ನು ನಿರ್ದಿಷ್ಟ ಸಮಯದೊಳಗೆ ಕಾರ್ಯಗತಗೊಳಿಸುವ ಮೂಲಕ ಕಾಸರಗೋಡು ಜಿಲ್ಲೆಯ ಸಮಗ್ರ ಪ್ರಗತಿಯನ್ನು ಸಾಧಿಸುವ ಗುರಿಯನ್ನು ಸರಕಾರವು ಹೊಂದಿದೆ.

ಜಿಲ್ಲೆಯ ಆರೋಗ್ಯ ವಲಯದಲ್ಲಿ ಅತಿದೊಡ್ಡ ಅಗತ್ಯಗಳಲ್ಲಿ ಒಂದಾದ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನ ಮೂಲಭೂತ ಸೌಕರ್ಯವನ್ನು ಹೆಚ್ಚಿಸಲು ಮತ್ತು ಕಾರ್ಯಾಚರಣೆಯನ್ನು ಬಲಪಡಿಸಲು ಬಜೆಟ್‌ನಲ್ಲಿ ವಿಶೇಷ ಮೊತ್ತವನ್ನು ನಿಗದಿಪಡಿಸಲಾಗಿದೆ. ಸಿಬ್ಬಂದಿ ವೈದ್ಯಕೀಯ ಉಪಕರಣಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ.





ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ರಬ್ಬರ್‌ನ ಕನಿಷ್ಠ ಬೆಂಬಲ ಬೆಲೆಯನ್ನು 250 ರೂ.ಗೆ ಹೆಚ್ಚಿಸಿರುವುದು ಕಾಸರಗೋಡಿನ ಮಲೆನಾಡು ಪ್ರದೇಶದ ರೈತರಿಗೆ ದೊಡ್ಡ ಸಮಾಧಾನ ತರಲಿದೆ. ಐದು ವರ್ಷಗಳಲ್ಲಿ ಕೇರಳವನ್ನು ವಿಶ್ವ ಕಡಲ ಭೂಪಟದಲ್ಲಿ ಪ್ರಮುಖ ಶಕ್ತಿಯಾಗಿ ಉನ್ನತೀಕರಿಸುವ ಮಿಷನ್ ಸಮುದ್ರ ಯೋಜನೆಯನ್ನು ಜಾರಿಗೆ ತರಲಾಗುವುದು. ಈ ನಿಟ್ಟಿನಲ್ಲಿ 400 ಕೋಟಿ ರೂ.ಗಳನ್ನು ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ರಸ್ತೆ, ಸಮುದ್ರ, ರೈಲು, ಒಳನಾಡಿನ ಜಲಮಾರ್ಗಗಳು, ಉತ್ಪಾದನಾ ವಲಯಗಳು, ಹಸಿರು ಕ್ಷೇತ್ರ ನಗರಗಳು ಇತ್ಯಾದಿಗಳನ್ನು ಬಂದರು ನಗರವಾಗಿ ಕಲ್ಪಿಸಿಕೊಂಡು ಕೇರಳವನ್ನು ಕಡಲ ಆರ್ಥಿಕತೆಯಾಗಿ ಪರಿವರ್ತಿಸಲಾಗುವುದು. ರಾಜ್ಯದಲ್ಲಿ ಮಾನವ – ವನ್ಯಜೀವಿ ಸಂಘರ್ಷವನ್ನು ನಿಯಂತ್ರಿಸಲು ಆಧುನಿಕ ತಂತ್ರಜ್ಞಾನದ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುವುದು. ಇದಕ್ಕಾಗಿ 192.20 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಉದ್ಯೋಗ ಖಾತರಿ ಯೋಜನೆಗೆ 1,422 ಕೋಟಿ ರೂ., ಕ್ರೀಡೆ ಮತ್ತು ಯುವಜನ ಕಲ್ಯಾಣ ವಲಯಕ್ಕೆ 175.77 ಕೋಟಿ ರೂ., ಹೈನುಗಾರಿಕಾ ಅಭಿವೃದ್ಧಿ ಕ್ಷೇತ್ರಕ್ಕೆ 102 ಕೋಟಿ ರೂ. ಮೊತ್ತವನ್ನು ಮುಂಗಡಪತ್ರದಲ್ಲಿ ಮೀಸಲಿರಿಸಲಾಗಿದೆ. ಕೇರಳವನ್ನು ಏಷ್ಯಾದ ಪ್ರಧಾನ ಏವಿಯೇಶನ್ ಹಬ್ ಆಗಿ ಮಾರ್ಪಡಿಸಲು 200 ಕೋಟಿ ರೂ., ಬಡವರ ಅಭಿವೃದ್ಧಿಗೆ ಮತ್ತು ವಯೋಜನ ಇಲಾಖೆಗಾಗಿ ತಲಾ 10 ಕೋಟಿ ರೂ. ತೆಗೆದಿರಿಸಲಾಗಿದೆ.

ಉಮ್ಮನ್ ಚಾಂಡಿ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸುವ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕೇರಳದ ಪ್ರತೀ ಕುಟುಂಬಕ್ಕೆ ತಲಾ 25 ಲಕ್ಷ ರೂ.ಗಳ ವಿಮಾ ಸೌಕರ್ಯ ಏರ್ಪಡಿಸಲಾಗುವುದು. ಲೋಕೋಪಯೋಗಿ ಇಲಾಖೆಗೆ 5259 ಕೋಟಿ ರೂ., ಆಪರೇಶನ್ ತೂಫಾನ್ ಕಾರ್ಯಾಚರಣೆಗಾಗಿ 10 ಕೋಟಿ ರೂ., ಪ್ರಿಯದರ್ಶಿನಿ ಉಚಿತ ಬಸ್ ಪ್ರಯಾಣಕ್ಕಾಗಿ 600 ಕೋಟಿ ರೂ., ಕ್ರೀಡಾ ಯೋಜನೆಗಾಗಿ ಮಲಬಾರ್ ಪ್ರದೇಶದಲ್ಲಿ ಫುಟ್ಬಾಲ್ ಕ್ರೀಡಾಂಗಣ ನಿರ್ಮಾಣಕ್ಕಾಗಿ 50 ಕೋಟಿ ರೂ. ಮೀಸಲಿರಿಲಾಗಿದೆ.

ತೆರಿಗೆಯಲ್ಲಿ ರಿಯಾಯಿತಿ

ಖಾಸಗಿ ಬಸ್‌ಗಳ 3 ತಿಂಗಳ ತೆರಿಗೆಯಲ್ಲಿ ಶೇಕಡಾ 50ರಷ್ಟು ಹಾಗೂ ಟೂರಿಸ್ಟ್ ಬಸ್‌ಗಳ ಮೂರು ತಿಂಗಳ ತೆರಿಗೆಯಲ್ಲಿ ಶೇಕಡಾ 50ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ರಾಜ್ಯದ ಎಲ್ಲಾ 14 ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ರೂಪುರೇಷೆ ಸಿದ್ಧಪಡಿಸಲಾಗಿದ್ದು, ಅದರೊಂದಿದೆ ಯುವಜನಾಂಗಕ್ಕೆ ಉದ್ಯೋಗ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆಯಿರಿಸಲಾಗಿದೆ ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಹೇಳಿದ್ದಾರೆ.

ಕೇರಳ ಸರಕಾರದ ಬಜೆಟ್‌ನಲ್ಲಿ ಅವಗಣನೆ: ಕೇರಳ ಎನ್‌ಜಿಒ ಸಂಘದಿಂದ ಪ್ರತಿಭಟನೆ

ಕಾಸರಗೋಡು: ವಿ.ಡಿ.ಸತೀಶನ್ ನೇತೃತ್ವದ ಯುಡಿಎಫ್ ಸರಕಾರದ ಮೊದಲ ಬಜೆಟ್ ಮಂಡನೆಯಾಗಿದ್ದು, ಆದರೆ ಸರಕಾರಿ ನೌಕರರನ್ನು ಕಡೆಗಣಿಸಲಾಗಿದೆ. ಕೇರಳ ರಾಜ್ಯ ಸರಕಾರಿ ನೌಕರರು ಮುಂಗಡಪತ್ರದಲ್ಲಿ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದರು. ಆದರೆ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾದ ವಿ.ಡಿ.ಸತೀಶನ್ ಅವರ ಘೋಷಣೆಯನ್ನು ಕೇಳಿದ ನೌಕರರಿಗೆ ತುಂಬಾ ನಿರಾಶಾದಾಯಕವಾಗಿದೆ ಮತ್ತು ಆಶ್ಚರ್ಯವನ್ನುಂಟು ಮಾಡಿದೆ ಎಂದು ಕೇರಳ ಎನ್‌ಜಿಒ ರಾಜ್ಯ ಕಾರ್ಯಕಾರಿಣಿ ಸದಸ್ಯ ಪೀತಾಂಬರನ್ ಹೇಳಿದ್ದಾರೆ. ಕೇರಳ ಸರಕಾರದ ಮುಂಗಡಪತ್ರದಲ್ಲಿ ಸರಕಾರಿ ನೌಕರರನ್ನು ಅವಗಣಿಸಿರುವುದನ್ನು ಖಂಡಿಸಿ ಕಾಸರಗೋಡು ವಿದ್ಯಾನಗರ ಸಿವಿಲ್ ಸ್ಟೇಷನ್ ಪರಿಸರದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಎಡರಂಗ ಸರಕಾರವು ತಡೆಹಿಡಿದಿದ್ದ ನೌಕರರ ಸವಲತ್ತುಗಳು ಮತ್ತು ಹಕ್ಕುಗಳನ್ನು ಐಕ್ಯರಂಗ ಸರಕಾರವು ಜಾರಿಗೊಳಿಸಬಹುದೆಂದು ನೌಕರರು ಭಾವಿಸಿದ್ದರು. ಆದರೆ ಐಕ್ಯರಂಗ ಸರಕಾರವು ಹಿಂದಿನ ಸರಕಾರ ಕೈಗೊಂಡ ಅದೇ ನಿಲುವನ್ನು ಅನುಸರಿಸುತ್ತಿದೆ ಎಂಬುದು ವಿ.ಡಿ.ಸತೀಶನ್ ಅವರ ಮುಂಗಡ ಪತ್ರದಲ್ಲಿ ಸಾಬೀತಾಗಿದೆ ಎಂದರು.

ನೌಕರರು ಕುತೂಹಲದಿಂದ ಕಾಯುತ್ತಿದ್ದ ಈ ಬಜೆಟ್ ಅತ್ಯಂತ ನೀರಸವಾಗಿದೆ. ನೌಕರರಿಗೆ ಡಿಎ ಸವಲತ್ತು ನೀಡುವ ಘೋಷಣೆ, ರಜೆ ಸೌಲಭ್ಯ ಘೋಷಣೆ ಇತ್ಯಾದಿಗಳನ್ನು ಸರಕಾರವು ಅನುಷ್ಠಾನಕ್ಕೆ ತರಬಹುದೆಂದು ಎನ್‌ಜಿಒ ಸಂಘವು ಅಂದಾಜಿಸಿತ್ತು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೇರಳ ಎನ್‌ಜಿಒ ಸಂಘದ ಜಿಲ್ಲಾಧ್ಯಕ್ಷ ರಂಜಿತ್ ಕೆ. ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಸಂತೋಷನ್, ರವಿಕುಮಾರ್ ಕೊಟ್ಟೋಡಿ, ಅಭಿಜಿತ್, ಸತೀಶನ್ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಹಲವಾರು ಮಂದಿ ಸರಕಾರಿ ನೌಕರರು ಪಾಲ್ಗೊಂಡಿದ್ದರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ : ದೇವಿಪ್ರಸಾದ್ ಶೆಟ್ಟಿ


ಕಂಬಳಕ್ಕೆ ವಿಶೇಷ ಸ್ಥಾನಮಾನ; ವಾರ್ಷಿಕ 5 ಕೋಟಿ ಅನುದಾನ

ಕಾಪು : ಕಂಬಳ ಇದೀಗ ರಾಜ್ಯ ಕ್ರೀಡೆಯಾಗಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಕ್ಷಾಂತರ ಮಂದಿ ಕಂಬಳವನ್ನು ವೀಕ್ಷಿಸುತ್ತಾರೆ. ಕರಾವಳಿ ಕರ್ನಾಟಕದ ಪ್ರವಾಸೋದ್ಯಮ ಉತ್ತೇಜನಕ್ಕೆ ಕಂಬಳ ಕ್ರೀಡೆಯು ಪ್ರಾಮುಖ್ಯತೆಯನ್ನು ಹೊಂದಿದೆ. ಕಂಬಳಕ್ಕೆ ನೂರಾರು ವರ್ಷದ ಇತಿಹಾಸವಿದೆ. ರಾಜ್ಯ ಸರಕಾರ ಕಂಬಳಕ್ಕೆ ರಾಜ್ಯ ಮಾನ್ಯತೆ ನೀಡಿದ್ದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಕಂಬಳ ಆಯೋಜನೆಗೆ ಪ್ರತಿವರ್ಷ ಬಜೆಟ್‌ನಲ್ಲಿ 5 ಕೋಟಿ ಅನುದಾನ ನೀಡುವ ಭರವಸೆ ನೀಡಿದ್ದಾರೆಂದು ರಾಜ್ಯ ಕಂಬಳ ಅಸೋಸಿಯೇಶನ್ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಪ್ರಥಮ ಸಂಪುಟ ಸಭೆಯಲ್ಲಿ ಕಂಬಳಕ್ಕೆ ವಿಶೇಷ ಸಹಕಾರ ಹಾಗೂ ರಾಜ್ಯ ಕಂಬಳ ಅಸೋಸಿಯೇಶನ್ ಹೆಚ್ಚಿನ ಅಧಿಕಾರ ಮತ್ತು ಅನುದಾನ ನೀಡುವ ಭರವಸೆ ನೀಡಿದ್ದಾರೆ. ಕಂಬಳವನ್ನು ಮೈಸೂರು ದಸರಾದಲ್ಲಿ ನಡೆಸುವ ಬಗ್ಗೆ ವಿಶೇಷ ಆಸಕ್ತಿ ವಹಿಸಿದ್ದು ಕೆ.ಎಮ್.ಎಫ್ ಪ್ರಾಯೋಜಕತ್ವದಲ್ಲಿ ಕಂಬಳ ನಡೆಸಿ ರೈತರಿಗೆ ಪ್ರೋತ್ಸಾಹ ಮತ್ತು ಪ್ರಚಾರ ನೀಡುವ ಯೋಜನೆ ರೂಪಿಸಲಾಗುವುದೆಂದರು.

ಕಂಬಳಕ್ಕೆ ಕ್ರೀಡಾ ಇಲಾಖೆ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ, ಪ್ರವಾಸೋದ್ಯಮ ಇಲಾಖೆಯ ಮೂಲಕ ದೊರಕುವ ಸವಲತ್ತುಗಳನ್ನು ಸರಕಾರ ಒದಗಿಸುವಂತೆ, ಕಂಬಳ ಭವನ ನಿರ್ಮಾಣಕ್ಕೆ ಸರಕಾರಿ ಜಾಗ ಮಂಜೂರಾತಿ ಮತ್ತು ತರಬೇತು ಕೇಂದ್ರ ಸ್ಥಾಪನೆಗೆ ಕ್ರೀಡಾ ಇಲಾಖೆ ಸಹಭಾಗಿತ್ವ ಹಾಗೂ ರಾಜ್ಯ ಕಂಬಳ ಅಸೋಸಿಯೇಶನ್‌ಗೆ ವಿಶೇಷ ಸ್ಥಾನಮಾನ ಒದಗಿಸುವ ಬಗ್ಗೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕಂಬಳಾಭಿಮಾನಿಗಳ ಪರವಾಗಿ ಅಭಿನಂದನೆ ಸಲ್ಲಿಸಿದಾಗ ಕರಾವಳಿಯ ಕಂಬಳ ಕ್ರೀಡೆಗೆ ವಿಶೇಷ ಸಹಕಾರ ನೀಡುವ ಬಗ್ಗೆ ಮನವಿ ನೀಡಲಾಗಿದ್ದು, ಕಂಬಳಕ್ಕೆ ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದ್ದಾರೆಂದು ದೇವಿಪ್ರಸಾದ್ ಶೆಟ್ಟಿ ತಿಳಿಸಿದ್ದಾರೆ.





ಮೈಸೂರು ದಸರಾದಲ್ಲಿ ಕಂಬಳ ಖಚಿತ

ಮುಖ್ಯಮಂತ್ರಿಗಳ ಮಹದಾಸೆಯಂತೆ ಮೈಸೂರು ದಸರಾದಲ್ಲಿ ಕಂಬಳ ನಡೆಸುವರೇ ಜೂ.20ರಂದು ಬೆಳಗ್ಗೆ ಗಂಟೆ 11ಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಹತ್ವದ ಸಭೆಯು ನಡೆಯಲಿದೆ. ಈಗಾಗಲೇ ರಾಜ್ಯ ಕಂಬಳ ಅಸೋಸಿಯೇಶನ್‌ಗೆ ಮಾಹಿತಿ ನೀಡಿದ್ದು, ಈ ಬಗ್ಗೆ ಅಸೋಸಿಯೇಶನ್ ಪರವಾಗಿ ರಾಜ್ಯ ತೀರ್ಪುಗಾರರ ಸಂಚಾಲಕ ವಿಜಯ ಕುಮಾರ್ ಕಂಗಿನಮನೆ, ರಾಜ್ಯ ಕಂಬಳ ಅಸೋಸಿಯೇಷನ್ ಕೋಶಾಧಿಕಾರಿ ಲೋಕೇಶ್ ಶೆಟ್ಟಿ ವಿಶೇಷ ನಿಯೋಗ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಸಿಎ ಅಂತಿಮ ಪರೀಕ್ಷೆ 2026: ಆಳ್ವಾಸ್‌ನ 8 ಜನ ಉತ್ತೀರ್ಣ

ಆಳ್ವಾಸ್‌ನ ದೀಪಕ್‌ಗೆ ಅ.ಭಾ. ಮಟ್ಟದಲ್ಲಿ 28ನೇ ರ್‍ಯಾಂಕ್

ಮೂಡುಬಿದಿರೆ: ಮೇ 2026ರಲ್ಲಿ ನಡೆದ ಸಿಎ ಅಂತಿಮ ಪರೀಕ್ಷೆಯಲ್ಲಿ ಆಳ್ವಾಸ್ ಪದವಿ ಕಾಲೇಜಿನ ದೀಪಕ್ ಹೆಗ್ಡೆ ಅಖಿಲ ಭಾರತ ಮಟ್ಟದಲ್ಲಿ 28ನೇ ರ್‍ಯಾಂಕ್‌ಗಳಿಸುವ ರಾಷ್ಟ್ರಮಟ್ಟದಲ್ಲಿ ಗಮನಸೆಳೆದಿದ್ದಾರೆ. ಇವರ ಜೊತೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಒಟ್ಟು 8 ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಅಮೋಘ ಸಾಧನೆ ಮೆರೆದಿದ್ದಾರೆ.

ಸಿಎ ಅಂತಿಮ ಪರೀಕ್ಷೆಯಲ್ಲಿ ದೀಪಕ್ ಹೆಗ್ಡೆ, ನಿತೇಶ್ ಕಾಮತ್, ವೀಕ್ಷಾ ಶೆಟ್ಟಿ, ನಾಗರಾಜ ಮಂಜಿತ್ತಾಯ, ಪ್ರಣವ್ ಎಸ್ ಭಟ್, ವೈಷ್ಣವಿ ಜವಾರ್, ಅಕ್ಷಯ ಬಿಎಸ್, ಸುದೀಪ್ ಉತ್ತೀರ್ಣರಾಗಿ ಸಾಧನೆ ಮೆರೆದಿದ್ದಾರೆ.

ದೀಪಕ್ ಹೆಗ್ಡೆ ಆಳ್ವಾಸ್‌ನ ಶೈಕ್ಷಣಿಕ ದತ್ತು ಸ್ವೀಕಾರ ಯೋಜನೆಯಡಿ ಉಚಿತ ಶಿಕ್ಷಣದ ಸೌಲಭ್ಯ ಪಡೆದು ಪ್ರೌಢಶಿಕ್ಷಣ, ಪದವಿಪೂರ್ವ ಹಾಗೂ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದ್ದಾರೆ. ಪದವಿ ವ್ಯಾಸಂಗದ ಅವಧಿಯಲ್ಲೇ ಸಿಎ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 10ನೇ ರ್‍ಯಾಂಕ್ ಗಳಿಸಿ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದ ಇವರು, ಇದೀಗ ಸಿಎ ಅಂತಿಮ ಪರೀಕ್ಷೆಯ ಎರಡೂ ಗ್ರೂಪ್‌ಗಳನ್ನು ಮೊದಲ ಪ್ರಯತ್ನದಲ್ಲೇ ಪಾಸಾಗಿ ಅಖಿಲ ಭಾರತ ಮಟ್ಟದಲ್ಲಿ 28ನೇ ರ್‍ಯಾಂಕ್ ಗಳಿಸುವ ಮೂಲಕ ಮತ್ತೊಂದು ಗಮನಾರ್ಹ ಸಾಧನೆ ನಿರ್ಮಿಸಿದ್ದಾರೆ.



> ಸಿಎ ಅಂತಿಮ ಪರೀಕ್ಷೆಯಲ್ಲಿ ಆಳ್ವಾಸ್ ವಿದ್ಯಾರ್ಥಿಗಳು ವರ್ಷದಿಂದ ವರ್ಷಕ್ಕೆ ಅಖಿಲ ಭಾರತ ಮಟ್ಟದಲ್ಲಿ ಶ್ರೇಷ್ಠ ರ್‍ಯಾಂಕ್ ಗಳಿಸುತ್ತಿರುವುದು ಗುಣಮಟ್ಟದ ಶಿಕ್ಷಣ ಹಾಗೂ ಫಲಿತಾಂಶ ಕೇಂದ್ರಿತ ತರಬೇತಿಯ ಪ್ರತೀಕ. ಅಖಿಲ ಭಾರತ ಮಟ್ಟದಲ್ಲಿ 6, 10, 23, 28, 33ನೇ ರ್‍ಯಾಂಕ್‌ಗಳ ಜೊತೆಗೆ ನೂರಾರು ವಿದ್ಯಾರ್ಥಿಗಳು ಸಿಎ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿರುವುದು ವಿದ್ಯಾರ್ಥಿಗಳ ಪರಿಶ್ರಮ, ಅಧ್ಯಾಪಕರ ಸಮರ್ಪಿತ ಮಾರ್ಗದರ್ಶನ ಮತ್ತು ಸಂಸ್ಥೆಯ ಶೈಕ್ಷಣಿಕ ಬದ್ಧತೆಗೆ ದೊರೆತ ಗೌರವವಾಗಿದೆ
>
> ■ ಡಾ. ಎಂ. ಮೋಹನ್ ಆಳ್ವ.

ವಿದ್ಯಾರ್ಥಿಗಳ ಸಾಧನೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ ಎಂ ಮೋಹನ್ ಆಳ್ವ, ಟ್ರಸ್ಟಿ ವಿವೇಕ್ ಆಳ್ವ, ಪ್ರಾಚಾರ್ಯ ಡಾ ಕುರಿಯನ್, ವಾಣಿಜ್ಯ ವಿಭಾಗದ ಡೀನ್ ಪ್ರಶಾಂತ ಎಂಡಿ, ಸಿಎ ಸಂಯೋಜಕಿ ಅಪರ್ಣಾ ಅಭಿನಂದಿಸಿದ್ದಾರೆ.

ಇನ್ಸ್‌ಪೆಕ್ಟರ್ ಗಮನಕ್ಕೆ ತಾರದೆ ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡಿದ ಪೊಲೀಸರ ಅಮಾನತು

ಮಂಗಳೂರು: ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ಪಡೆಯಲು ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್‌ಗಾಗಿ ಸಲ್ಲಿಸಿದ್ದ ಅರ್ಜಿ ಇನ್ಸ್‌ಪೆಕ್ಟರ್ ಗಮನಕ್ಕೆ ತಾರದೆ, ಇನ್ಸ್‌ಪೆಕ್ಟರ್ ಕೆಜಿಐಡಿ ಮತ್ತು ಪಾಸ್‌ವರ್ಡ್ ಬಳಸಿ ವಿಲೇವಾರಿ ಮಾಡಿದ ಬಜಪೆ ಠಾಣೆಯ ಇಬ್ಬರು ಕಾನ್‌ಸ್ಟೇಬಲ್‌ಗಳನ್ನು ಅಮಾನತು ಮಾಡಲಾಗಿದೆ.

ಮಂಜುನಾಥ್, ಆಶಾ ಅಮಾನತುಗೊಂಡ ಕಾನ್‌ಸ್ಟೇಬಲ್‌ಗಳು. ಇವರು ಕಳೆದೊಂದು ವರ್ಷದಲ್ಲಿ 31 ಮಂದಿಗೆ ಪಿಸಿಸಿ (ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್) ನೀಡಿದ್ದಾರೆಂಬ ಆರೋಪ ಕೇಳಿಬಂದಿದೆ. ಉನ್ನತ ಮಟ್ಟದ ತನಿಖಾ ಏಜೆನ್ಸಿಯಿಂದ ಈ ರೀತಿಯ ದುರುಪಯೋಗ ಆಗಿರುವ ಬಗ್ಗೆ ಮಾಹಿತಿ ಪಡೆದ ಮಂಗಳೂರಿನ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಪ್ರಾಥಮಿಕ ತನಿಖೆ ನಡೆಸಿ ಇಬ್ಬರು ಸಿಬ್ಬಂದಿಯನ್ನು ಅಮಾನತು ಮಾಡಿದ್ದಾರೆ.

ಕ್ರಿಮಿನಲ್ ಹಿನ್ನೆಲೆ, ದೇಶ ವಿರೋಧಿ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಅಸ್ಸಾಂ ಮೂಲದ ಕೆಲವು ಕಾರ್ಮಿಕ ಯುವಕರಿಗೆ ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡಿದ್ದಾರೆಂಬ ಸಂಶಯವಿದ್ದು, ಇಲಾಖೆಯ ಘೋರ ವೈಫಲ್ಯದ ಬಗ್ಗೆ ಚರ್ಚೆ ನಡೆದಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಕಮಿಷನರ್ ಈ ಬಗ್ಗೆ ತನಿಖೆಯ ಹೊಣೆಯನ್ನು ಮಂಗಳೂರು ಉತ್ತರ ಎಸಿಪಿ ಶ್ರೀಕಾಂತ್ ಅವರಿಗೆ ವಹಿಸಿದ್ದಾರೆ. ತನಿಖೆಯ ಬಳಿಕ ಖಚಿತ ಮಾಹಿತಿಯನ್ನು ನೀಡುವುದಾಗಿ ಕಮಿಷನರ್ ತಿಳಿಸಿದ್ದಾರೆ.

ಎಂಆರ್‌ಪಿಎಲ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿ ಬಂದು ತಾತ್ಕಾಲಿಕ ವಿಳಾಸ ಹೊಂದಿದ್ದವರು, ಪಾಸ್‌ಪೋರ್ಟ್ ಮಾಡಿಸುವ ಉದ್ದೇಶದಿಂದ ಮಧ್ಯವರ್ತಿಗಳನ್ನು ಬಳಸಿಕೊಂಡು ಬಜಪೆ ಠಾಣೆಯಿಂದ ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಪಡೆದಿದ್ದರು ಎನ್ನಲಾಗಿದೆ. ಆದರೆ ಈ ರೀತಿ ಸರ್ಟಿಫಿಕೇಟ್ ಪಡೆದಿರುವ 31 ಮಂದಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದವರಿದ್ದಾರೆಂಬ ಮಾಹಿತಿಗಳಿದ್ದು, ಕೇಂದ್ರ ತನಿಖಾ ಏಜನ್ಸಿಯೊಂದು ಇಲಾಖೆಯ ಲೋಪದ ಬಗ್ಗೆ ಮಂಗಳೂರು ಪೊಲೀಸರನ್ನು ಪ್ರಶ್ನೆ ಮಾಡಿತ್ತು.

ಇಲಾಖಾ ತನಿಖೆ ಸಂದರ್ಭದಲ್ಲಿ ಬಜ್ಪೆ ಠಾಣಾಧಿಕಾರಿಗೆ ತಿಳಿಸದೆ, ಅವರ ಪಾಸ್‌ವರ್ಡ್ ದುರುಪಯೋಗ ಪಡಿಸಿ ಸಿಬ್ಬಂದಿಗಳೇ ಕ್ಲಿಯರೆನ್ಸ್ ನೀಡಿದ್ದಾರೆ. ಇದಕ್ಕಾಗಿ ಇಬ್ಬರು ಪೊಲೀಸರು ಮಧ್ಯವರ್ತಿ ಭರತ್ ಎಕ್ಕಾರ್ ಹಾಗೂ ಮಮತಾ ಎಂಬವರಿಂದ ಹಣ ಪಡೆದಿದ್ದಾರೆ ಎನ್ನಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಭರತ್ ಹಾಗೂ ಮಮತಾ ಅವರನ್ನು ಬಜ್ಪೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನೆ ಬಗ್ಗೆ ಬಿಎನ್‌ಎಸ್ ಕಲಂ 336(2),(3), 340(2), 316(5),318(4) ಅಡಿ ಪ್ರಕರಣ ದಾಖಲಾಗಿದೆ.

ಬಪ್ಪನಾಡು ಬಳಿ ಭೀಕರ ಅಪಘಾತ ಹೆದ್ದಾರಿ ಅವ್ಯವಸ್ಥೆ ವಿರುದ್ಧ ಆಕ್ರೋಶ

ಲಾರಿ ಡಿಕ್ಕಿ; ಬೈಕ್ ಸವಾರ ಸಾವು

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ, 66ರ ಮುಲ್ಕಿ ಸಮೀಪದ ಬಪ್ಪನಾಡು ಬಳಿ ಬಂಕರ್ ಲಾರಿಯ ಚಕ್ರ ಹರಿದು ಬೈಕ್ ಸವಾರ ದಾರುಣವಾಗಿ ಸಾವನ್ನಪ್ಪಿದ್ದಾನೆ. ಮೃತ ಸವಾರನನ್ನು ದಾವಣಗೆರೆ ಅಸಗೋಡು ಬಳಿಯ ನಿವಾಸಿ ಪ್ರಭು ಲಿಂಗ ಜಿ. (32) ಎಂದು ಗುರುತಿಸಲಾಗಿದೆ.

ಮೃತ ಬೈಕ್ ಸವಾರ ಇಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದು ಮಂಗಳೂರಿನಿಂದ ಉಡುಪಿ ಕಡೆಗೆ ಕೆಲಸದ ನಿಮಿತ್ತ ಹೋಗುತ್ತಿರುವಾಗ ರಾಷ್ಟ್ರೀಯ ಹೆದ್ದಾರಿ ಬಪ್ಪನಾಡು ಜಂಕ್ಷನ್ ಬಳಿ ಅಪಘಾತ ತಡೆಗೆ ಇರಿಸಿದ್ದ ಬ್ಯಾರಿಕೇಡ್ ಒಳಭಾಗದಲ್ಲಿ ಬೈಕ್ ನುಗ್ಗಿಸಿದಾಗ ಸವಾರನ ನಿಯಂತ್ರಣ ತಪ್ಪಿ ಹೆದ್ದಾರಿ ಡಿವೈಡರ್‌ಗೆ ಬೈಕ್ ಡಿಕ್ಕಿ ಹೊಡೆದು ಬೈಕಂಪಾಡಿಯಿಂದ ಪಡುಬಿದ್ರಿ ಕಡೆಗೆ ಹೋಗುತ್ತಿದ್ದ ಬಂಕರ್ ಲಾರಿಯ ಹಿಂದಿನ ಭಾಗದ ಚಕ್ರದ ಅಡಿಗೆ ಬಿದ್ದು ಸಾವನ್ನಪ್ಪಿದ್ದಾನೆ.



ಅಪಘಾತದ ತೀವ್ರತೆಗೆ ಸವಾರನ ತಲೆ ಹೆಲ್ಮೆಟ್ ಸಮೇತ ಬಂಕರ್ ಲಾರಿಯ ಹಿಂದುಗಡೆ ಟಯರ್‌ನ ಅಡಿಗೆ ಬಿದ್ದು ಚಿಪ್ಪರ್ ಚೂರಾಗಿದ್ದು ಅಪಘಾತದ ಭೀಕರ ದೃಶ್ಯ ಕರುಳು ಹಿಂಡುವಂತಿತ್ತು

ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಗಿದ್ದು ಸ್ಥಳಕ್ಕೆ ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಸ್ಥಳದಿಂದ ಅಪಘಾತಕ್ಕೀಡಾದ ಯುವಕನ ಶವ ಹಾಗೂ ವಾಹನಗಳನ್ನು ತೆರವುಗೊಳಿಸಿದ್ದು ಬಂಕರ್ ಲಾರಿ ಚಾಲಕ ಬಾದಾಮಿ ನಿವಾಸಿ ಭೀಮಣ್ಣ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಚತುಷ್ಪಥಗೊಂಡ ಬಳಿಕ ಅವೈಜ್ಞಾನಿಕ ಹೆದ್ದಾರಿ ಕಾಮಗಾರಿಯಿಂದ ಮುಲ್ಕಿ ರಾಷ್ಟ್ರೀಯ ಹೆದ್ದಾರಿ ಬಪ್ಪನಾಡು ಜಂಕ್ಷನ್, ಮುಲ್ಕಿ ಬಸ್ ನಿಲ್ದಾಣ, ವಿಜಯ ಸನ್ನಿಧಿ ರಾಶಿ ಹೆದ್ದಾರಿ ಬಳಿ ಅನೇಕ ಅಪಘಾತಗಳು ಸಂಭವಿಸಿದ್ದು ಅನೇಕರು ಪ್ರಾಣ ಕಳೆದುಕೊಂಡಿದ್ದಾರೆ. ಈ ಭಾಗದಲ್ಲಿ ಸರ್ವಿಸ್ ರಸ್ತೆ ಕಾಮಗಾರಿ ಕೂಡ ಅರ್ಧದಲ್ಲಿ ನಿಂತು ಹೋಗಿದ್ದು ಪ್ರಯಾಣಿಕರು ಹಾಗೂ ಸಣ್ಣಪುಟ್ಟ ವಾಹನ ಸವಾರರು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುವ ಪರಿಸ್ಥಿತಿ ಉಂಟಾಗಿದೆ ಎಂದು ಸ್ಥಳೀಯ ಆಟೋ ಚಾಲಕ ಮೋಹನ್ ಕುಬೆವೂರು ಹೆದ್ದಾರಿ ಇಲಾಖೆ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಜೂ.25 ಗ್ಲೋಬಲ್ ಫುಡ್ ಫ್ಲೋ-2027ರ ಕಾರ್ಯಕ್ರಮ

• **ಬೆಂಗಳೂರು:** ಲಘು ಉದ್ಯೋಗ ಭಾರತಿ-ಕರ್ನಾಟಕ ಮತ್ತು ಐಎಂಎಸ್ ಫೌಂಡೇಶನ್ ಸಂಸ್ಥೆಗಳು, ಗ್ಲೋಬಲ್ ನೆಟ್‌ವರ್ಕ್ ಇನ್‌ಸ್ಟಿಟ್ಯೂಟ್ ಬೆಂಬಲದೊಂದಿಗೆ, ಆಹಾರ ಸಂಸ್ಕರಣೆ ಮತ್ತು ಸಂಬಂಧಿತ ಉದ್ಯಮಗಳಲ್ಲಿನ ಎಂಎಸ್‌ಎಂಇಗಳನ್ನು ಸಬಲೀಕರಿಸಲು ಮೀಸಲಾಗಿರುವ ಪ್ರಮುಖ ಅಂತಾರಾಷ್ಟ್ರೀಯ ಪ್ರದರ್ಶನವಾದ ಗ್ಲೋಬಲ್ ಫುಡ್ ಫ್ಲೋ-2027ರ ಅಧಿಕೃತ ಆರಂಭಿಕ ಕಾರ್ಯಕ್ರಮವನ್ನು ಜೂ. 25ರಂದು ಹಮ್ಮಿಕೊಂಡಿವೆ.

ಮುಂದಿನ ವರ್ಷದ ಮೇ 13 ರಿಂದ 15 ರವರೆಗೆ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಗ್ಲೋಬಲ್ ಫುಡ್ ಫ್ಲೋ 2027ಕ್ಕೆ ಬೃಹತ್ ಪ್ರದರ್ಶನ ಕಾರ್ಯಕ್ರಮವು ವೇದಿಕೆಯನ್ನು ಸಿದ್ಧಪಡಿಸಲಿದೆ ಎಂದು ಲಘು ಉದ್ಯೋಗ ಭಾರತಿ- ಕರ್ನಾಟಕ ಪ್ರಧಾನ ಕಾರ್ಯದರ್ಶಿ ಕೆ.ಎಂ.ರವಿಕುಮಾರ್ ತಿಳಿಸಿದ್ದಾರೆ. ಐಎಂಎಸ್ ಫೌಂಡೇಶನ್, ಲಘು ಉದ್ಯೋಗ ಭಾರತಿ-ಕರ್ನಾಟಕ (ಎಂಎಸ್‌ಎಂಇಗಳನ್ನು ಪ್ರತಿನಿಧಿಸುವ ಸಂಸ್ಥೆ) ಜಂಟಿಯಾಗಿ ಕರ್ಟೆಂಗ್ ದಿ ಗ್ಲೋಬಲ್ ಫುಡ್ ಇಂಡಸ್ಟ್ರಿ ಎಂಬ ವಿಷಯದಲ್ಲಿ ಭವಿಷ್ಯದ ಆಹಾರ: ಸವಾಲು, ಅವಕಾಶಗಳು, ಹೊಸ ಪ್ರವೃತ್ತಿಗಳು, ನಿರೀಕ್ಷೆಗಳು ವಿಚಾರ ಸಂಕಿರಣ ಆಯೋಜಿಸಿವೆ.

ಮಾಜಿ ಕೇಂದ್ರ ವಾಣಿಜ್ಯ ಸಚಿವ ಸುರೇಶ್ ಪ್ರಭಾಕರ ಪ್ರಭು, ಸಿಎಸ್‌ಐಆರ್-ಎನ್ಐಐಎಸ್‌ಟಿ ನಿರ್ದೇಶಕ ಡಾ. ಸಿ. ಆನಂದರಾಮಕೃಷ್ಣನ್, ಗ್ಲೋಬಲ್ ನೆಟ್‌ವರ್ಕ್ ಇನ್‌ಸ್ಟಿಟ್ಯೂಟ್ ಮುಖ್ಯ ಮಾರ್ಗದರ್ಶಕ ಡಾ. ಜಗತ್ ಶಾ, ಅರ್ಥ್‌ಆಮ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಡಾ. ಬಿಜ್ನಾ ಕೋಟಕ್ ದಾಸಾನಿ, ಸೆಕ್ಯೂರ್ಲಿ ಗ್ರೂಪ್ ಆಸ್ಟ್ರೇಲಿಯಾದ ಸಂಸ್ಥಾಪಕ ನಿರ್ದೇಶಕ ಮಿಸ್ಟರ್ ರಾಬ್ ನೀಲಿ, ತಂಜಾವೂರು ನಿಫ್ಟೆಮ್ ನಿರ್ದೇಶಕ ಡಾ. ವಿ. ಪಳನಿಮುತ್ತು, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಹಾಗೂ ಐಎಂಎಸ್ ಫೌಂಡೇಷನ್ ಮುಖ್ಯಸ್ಥ ಎಚ್.ವಿ.ಎಸ್. ಕೃಷ್ಣ ಲಘು ಉದ್ಯೋಗ ಭಾರತಿ - ಕರ್ನಾಟಕ ಅಧ್ಯಕ್ಷ ಕೆ. ನಾರಾಯಣ ಪ್ರಸನ್ನ ಅವರೊಂದಿಗೆ ವಲಯದ ಮುಖಂಡರು ಭಾಗವಹಿಸಲಿದ್ದಾರೆ.

ರಾಮ ಬಾಣ



ಉದ್ಯಮಿಗಳಿಗೆ ಬೆದರಿಸಿ 20 ಲಕ್ಷ ರೂ.ದರೋಡೆ

• **ಬೆಂಗಳೂರು:** ಸಿಐಡಿ ಇನ್ಸ್‌ಪೆಕ್ಟರ್ ನೇತೃತ್ವದಲ್ಲೇ ಐವರು ದರೋಡೆಕೋರರ ಗ್ಯಾಂಗ್, ಕೇರಳ ಮೂಲದ ಉದ್ಯಮಿಗಳಿಗೆ ಬೆದರಿಸಿ 20 ಲಕ್ಷ ರೂ.ದರೋಡೆ ಮಾಡಿರುವ ಘಟನೆ ಮಡಿವಾಳ ಖಾಸಗಿ ಹೋಟೆಲ್‌ನಲ್ಲಿ ನಡೆದಿದೆ.

ವ್ಯಾಪಾರ ಉದ್ದೇಶಗಳಿಗಾಗಿ ಹಣ ಹಿಡಿದುಕೊಂಡು ಕೇರಳದ ಉದ್ಯಮಿಗಳು ಮಡಿವಾಳದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಈ ಬಗ್ಗೆ ನಿಖರ ಮಾಹಿತಿ ಪಡೆದಿದ್ದ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ, ಹ್ಯಾರಿಸ್, ಕುಪೇಂದ್ರ, ಶಶಿ ಮತ್ತು ಶಾನಿ ಎಂಬ ನಾಲ್ವರೊಂದಿಗೆ ಸೇರಿ ದರೋಡೆಗೆ ಪ್ಲಾನ್ ಮಾಡಿದ್ದರು. ಯೋಜನೆಯಂತೆ ಹೋಟೆಲ್ ಮುಂಭಾಗ ಅಧಿಕೃತ ಸಿಐಡಿ ಪೊಲೀಸ್ ಜೀಪ್ ನಿಲ್ಲಿಸಿ ಇನ್ಸ್‌ಪೆಕ್ಟರ್ ಒಳಗೆ ಕುಳಿತಿದ್ದರು. ಆವರ ಗ್ಯಾಂಗ್‌ನ ಇಬ್ಬರು ಹೋಟೆಲ್ ಕೋಣೆಗೆ ನುಗ್ಗಿ, ತಾವು ಪೊಲೀಸರೆಂದು ಇನ್ಸ್‌ಪೆಕ್ಟರ್ ಅವರ ಅಧಿಕೃತ ಗುರುತಿನ ಚೀಟಿ ತೋರಿಸಿ, ಅಕ್ರಮವಾಗಿ ಟ್ರೇಡಿಂಗ್ ಮಾಡಲು ಹಣ ತಂದಿದ್ದೀರಿ ಎಂದು ಉದ್ಯಮಿಗಳನ್ನು ತೀವ್ರವಾಗಿ ಬೆದರಿಸಿದ್ದಾರೆ. ಬಳಿಕ ಅವರಿಂದ 20 ಲಕ್ಷ ರೂ. ನಗದನ್ನು ಕಸಿದುಕೊಂಡು, ಹೊರಗೆ ನಿಂತಿದ್ದ ಪೊಲೀಸ್ ಜೀಪ್‌ನಲ್ಲೇ ಇಡೀ ಗ್ಯಾಂಗ್ ಪರಾರಿಯಾಗಿದೆ.

ಠಾಣೆಗೆ ದೂರು ನೀಡುತ್ತಿದ್ದಂತೆ ಇನ್ಸ್‌ಪೆಕ್ಟರ್ ಪರಾರಿ: ಆರಂಭದಲ್ಲಿ ಹೆದರಿದ್ದ ಕೇರಳದ ವ್ಯಕ್ತಿಗಳ ನಂತರದ ಬೆಳವಣಿಗೆಗಳಿಂದ ದರೋಡೆಯ ಬಗ್ಗೆ ತೀವ್ರ ಅನುಮಾನ ಮೂಡಿದೆ. ತಕ್ಷಣವೇ ಅವರು ಮಡಿವಾಳ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪ್ರಕರಣದ ಗಾಂಭೀರ್ಯತೆ ಅರಿತು ತಕ್ಷಣವೇ ತನಿಖೆಗೆ ಇಳಿದ ಮಡಿವಾಳ ಪೊಲೀಸರು, ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿ ದರೋಡೆ ಗ್ಯಾಂಗ್‌ನಲ್ಲಿದ್ದ ಕುಪೇಂದ್ರ ಎಂಬಾತನನ್ನು ಹೆಡೆಮುರಿ ಕಟ್ಟಿದ್ದಾರೆ. ಆ ವೇಳೆ ಆತ ಸತ್ಯ ಬಾಯ್ಬಿಟ್ಟಿದ್ದಾನೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ.ಆದರೆ ಅವರು ವ್ಯವಹಾರದಲ್ಲಿ ತುಂಬಾ ಕಠಿಣ ವ್ಯಕ್ತಿ

– ಮೋದಿಯ ಕುರಿತು ಟ್ರಂಪ್ ಮಾತು

– ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಎಂಬಂತೆ!ಕಠೋರತೆ ಇಲ್ಲವಾದಲ್ಲಿ ಸ್ವಾರ್ಥಿಗಳು ಒಳ್ಳೆಯವರನ್ನು ಹೊಂಡಕ್ಕೆ ಇಳಿಸಿ ತಲೆಯೆತ್ತದಂತೆ ಮಾಡುತ್ತಾರೆ.

ದಿನ ಭವಿಷ್ಯ

ಮೇಷ ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಆಪ್ತರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

ವೃಷಭ ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ದುಡುಕಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

ಮಿಥುನ ಸಮಸ್ಯೆ ಪರಿಹಾರಕ್ಕೆ ಅವಸರ ಮಾಡದಿರಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಆರ್ಥಿಕ ಒತ್ತಡ ನಿವಾರಣೆ. ಬಂಧುವಿನ ಸಹಕಾರ.

ಕಟಕ ಸಕಾರಾತ್ಮಕ ಬೆಳವಣಿಗೆ ಇಂದು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

ಸಿಂಹ ನಿಮ್ಮ ಯಾವುದೋ ಕೆಲಸ ಅರ್ಧದಲ್ಲೆ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯ ಬೇಕಾಗುವುದು.

ಕನ್ಯಾ ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ.

ತುಲಾ ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

ವೃಶ್ಚಿಕ ಬಾಕಿ ಇರುವ ಕೆಲಸ ಪೂರೈಸಿ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

ಧನು ಒತ್ತಡ ಹೆಚ್ಚು. ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ಕಾರ್ಯಸಿದ್ಧಿ ವಿಳಂಬ.

ಮಕರ ಹೆಚ್ಚಿನ ಒತ್ತಡವು ಎದುರಿಸುವಿರಿ. ಕೆಲಸದ ಮೇಲೆ ಪರಿಣಾಮ. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

ಕುಂಭ ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

ಮೀನ ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ಖರೀದಿ ಉತ್ಸಾಹದಲ್ಲಿ ಜೇಬಿಗೆ ತೂತು ಬಿದ್ದೀತು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,8,3,6

ಅಡ್ಡ ಮತದಾನ ಪಕ್ಷ ಗಂಭೀರವಾಗಿ ಪರಿಗಣಿಸಿದೆ: ರಾಜ್ಯಾಧ್ಯಕ್ಷ ವಿಜಯೇಂದ್ರ

ಕ್ಷಮಿಸುವ ಪ್ರಶ್ನೆಯಿಲ್ಲ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ಮೀರ್ ಸಾಧಿಕರ ವಿರುದ್ಧ ಖಂಡಿತ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಅಡ್ಡ ಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ ಎಂದರು.

ಎಂಟತ್ತು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕುತ್ತೇವೆ. ಒಳ್ಳೆಯ ಉದ್ದೇಶ ಇಟ್ಟುಕೊಂಡು ಹೋರಾಟ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೆಣಸಾಟ ಮಾಡೋಣ ಎಂದು ತಿಳಿಸಿದ್ದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ಆದರೆ, ಗುರುವಾರ ನಡೆದ ಮತದಾನದಲ್ಲಿ ಜೆಡಿಎಸ್ ಪಕ್ಷದಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ ಎಂದು ಹೇಳಿದರು.

ಯಾರು ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕಾಗಿ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ ಎಂದು ತಿಳಿಸಿದರು.

ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲುವು ಸಾಧಿಸಿರಬಹುದು. ಆದರೆ, ಅಡ್ಡ ಮತದಾನದಿಂದ ಅಪಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ವಿವರಿಸಿದರು.

ಎಲ್ಲವನ್ನು ಅರಗಿಸಿಕೊಳ್ಳಬಲ್ಲೇ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷದ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ಹೈಕಮಾಂಡ್ ಕಾಲಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖ್ಯಮಂತ್ರಿ ಯಾರೇ ಆದರೂ ಹೆದರುವ ಪ್ರಶ್ನೆ ಇಲ್ಲ. ಸರ್ಕಾರವನ್ನು ಬಗ್ಗಿಸಲೂ ನಮಗೆ ಗೊತ್ತಿದೆ. ಇಂತಹ ಸಣ್ಣಪುಟ್ಟ ಘಟನೆಯಿಂದ ವಿಚಲಿತರಾಗಿ ಓಡಿ ಹೋಗುವುದಿಲ್ಲ. ಎಲ್ಲವನ್ನು ಅರಗಿಸಿಕೊಳ್ಳಬಲ್ಲೇ ಎಂದು ಹೇಳಿದರು.

ಕಾಂಗ್ರೆಸ್‌ನಿಂದ ಬೆಂಕಿ ಹಚ್ಚುವ ಕುತಂತ್ರ

ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಎಂದು ಕೆಲವರ ಹೆಸರುಗಳನ್ನು ತೇಲಿಬಿಡುವ ಮೂಲಕ ಬಿಜೆಪಿಯಲ್ಲಿ ಬೆಂಕಿ ಹಚ್ಚುವ ಕುತಂತ್ರವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಕುತಂತ್ರಕ್ಕೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಅಡ್ಡ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚಿಸಲಾಗಿದೆ. ಯಾರು ಅಡ್ಡ ಮತನದಾನ ಮಾಡಿದ್ದಾರೆ ಎಂಬುದು ಮೂರ್ನಾಲ್ಕು ದಿನದಲ್ಲಿ ತಿಳಿಯಲಿದೆ ವಿಜಯೇಂದ್ರ ಹೇಳಿದರು.

> ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಡುವ ಸಮಯದಲ್ಲಿ ಓಡುತ್ತದೆ, ಬೀಳುವ ಸಮಯದಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ.
>
> ■ **ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಮೇಕೆದಾಟುಗೆ ತ.ನಾಡು ಅಡ್ಡಗಾಲು

ಪುಟ ೧➡ ಇದು ಕಾವೇರಿ ಜಲ ವಿವಾದ ನ್ಯಾಯಮಂಡಳಿಯ 2007ರ ಅಂತಿಮ ತೀರ್ಪು ಹಾಗೂ ಸುಪ್ರೀಂ ಕೋರ್ಟ್‌ನ 2018ರ ತೀರ್ಪಿಗೆ ವಿರುದ್ಧವಾಗಿದೆ ಎಂದು ನಿರ್ಣಯದಲ್ಲಿ ಆರೋಪಿಸಲಾಗಿದೆ.

ಯೋಜನೆಗೆ ಸಂಬಂಧಿಸಿದಂತೆ ಕಾವೇರಿ ಕಣಿವೆಯ ಇತರ ರಾಜ್ಯಗಳ ಒಪ್ಪಿಗೆ ಪಡೆಯಲಾಗಿಲ್ಲ. ಕೇಂದ್ರ ಸರ್ಕಾರದಿಂದಲೂ ಯಾವುದೇ ಅನುಮೋದನೆ ಪಡೆದಿಲ್ಲ. ಹೀಗಾಗಿ ಮೇಕೆದಾಟು ಯೋಜನೆಗೆ ತಾಂತ್ರಿಕ, ಪರಿಸರ ಸೇರಿದಂತೆ ಯಾವುದೇ ರೀತಿಯ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ವಿಧಾನಸಭೆ ಒತ್ತಾಯಿಸಿದೆ. ಕರ್ನಾಟಕ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಬಾರದು, ಮುಂದಿನ ಪ್ರಕ್ರಿಯೆಗೆ ಒಳಪಡಿಸಬಾರದು ಹಾಗೂ ಅನುಮೋದನೆ ನೀಡಬಾರದು ಎಂದು ಕೇಂದ್ರ ಜಲ ಆಯೋಗಕ್ಕೂ ಆಗ್ರಹಿಸಲಾಗಿದೆ.

ಹೊಸ ನ್ಯಾಯಮಂಡಳಿಗೆ ಆಗ್ರಹ: ಮೇಕೆದಾಟು ವಿಚಾರವನ್ನು ಹೊಸ ಜಲ ವಿವಾದವೆಂದು ಪರಿಗಣಿಸಬೇಕು. ಅಂತಾರಾಜ್ಯ ನದಿ ನೀರು ವಿವಾದ ಕಾಯ್ದೆ-1956ರ ಅನ್ವಯ ಹೊಸ ನ್ಯಾಯಮಂಡಳಿ ರಚಿಸುವಂತೆ ಕೇಂದ್ರವನ್ನು ಒತ್ತಾಯಿಸಲು ನಿರ್ಣಯದಲ್ಲಿ ತಿದ್ದುಪಡಿ ತರಬೇಕು ಎಂದು ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಆಗ್ರಹಿಸಿದರು. ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಒಟ್ಟಾಗಿ ದಿಲ್ಲಿಗೆ ತೆರಳಿ ಕೇಂದ್ರ ಸರ್ಕಾರದ ಪ್ರಮುಖರನ್ನು ಭೇಟಿಯಾಗಬೇಕು. ಯೋಜನೆ ವಿರೋಧಿಸುವ ವಿಚಾರದಲ್ಲಿ ರಾಜ್ಯದ ಒಗ್ಗಟ್ಟನ್ನು ಪ್ರದರ್ಶಿಸಬೇಕು ಎಂದರು.

'ಮೇಕೆದಾಟುವಿನಲ್ಲಿ ಯಾವುದೇ ಅಣೆಕಟ್ಟು ನಿರ್ಮಾಣವಾಗಬಾರದು ಎಂಬುದು ಡಿಎಂಕೆಯ ದೃಢ ನಿಲುವು. ತಮಿಳುನಾಡಿನ ಹಕ್ಕುಗಳಿಗೆ ಧಕ್ಕೆಯಾಗಲು ಅವಕಾಶ ನೀಡುವುದಿಲ್ಲ. ಯೋಜನೆ ತಡೆಯಲು ಕೈಗೊಳ್ಳುವ ಎಲ್ಲ ಕಾನೂನು ಕ್ರಮಗಳನ್ನು ಬೆಂಬಲಿಸುತ್ತೇವೆ' ಎಂದು ಉದಯನಿಧಿ ಹೇಳಿದರು.

ಕುಡಿಯುವ ನೀರಿಗಾಗಿ ಯೋಜನೆ

ಮೇಕೆದಾಟು ಸಮತೋಲನ ಜಲಾಶಯ ಯೋಜನೆಯು ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವುದರ ಜತೆಗೆ ಜಲವಿದ್ಯುತ್ ಉತ್ಪಾದನೆಯ ಉದ್ದೇಶವನ್ನೂ ಹೊಂದಿದೆ. ಯೋಜನೆಯಿಂದ ತಮಿಳುನಾಡಿಗೆ ಹರಿಯಬೇಕಾದ ಕಾವೇರಿ ನೀರಿನ ಪಾಲಿಗೆ ಯಾವುದೇ ಧಕ್ಕೆಯಾಗುವುದಿಲ್ಲ ಎಂಬುದು ಕರ್ನಾಟಕದ ನಿಲುವಾಗಿದೆ. ಆದರೆ, ಯೋಜನೆಯಿಂದ ತಮ್ಮ ರಾಜ್ಯದ ರೈತರ ಹಿತಾಸಕ್ತಿಗೆ ತೊಂದರೆಯಾಗಲಿದೆ ಎಂದು ತಮಿಳುನಾಡು ನಿರಂತರವಾಗಿ ವಿರೋಧಿಸುತ್ತಿದೆ.

ಐದನೇ ನಿರ್ಣಯ

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ಐದನೇ ನಿರ್ಣಯ ಇದಾಗಿದೆ. ಈ ಹಿಂದೆ 2014ರ ಡಿಸೆಂಬರ್‌ನಲ್ಲಿ ಜಯಲಲಿತಾ ಸರ್ಕಾರ, 2015ರ ಮಾರ್ಚ್‌ನಲ್ಲಿ ಓ. ಪನ್ನೀರ್‌ಸೆಲ್ವಂ ಸರ್ಕಾರ, 2018ರ ಡಿಸೆಂಬರ್‌ನಲ್ಲಿ ಎಡಪ್ಪಾಡಿ ಪಳನಿಸ್ವಾಮಿ ಸರಕಾರ ಹಾಗೂ 2022ರ ಮಾರ್ಚ್‌ನಲ್ಲಿ ಎಂ.ಕೆ. ಸ್ಟಾಲಿನ್ ಸರ್ಕಾರ ಇದೇ ರೀತಿಯ ನಿರ್ಣಯಗಳನ್ನು ಅಂಗೀಕರಿಸಿದ್ದವು.

ಭಾರತ ತಲುಪಿದ ದಿಶಾ

ಪುಟ ೧➡ **ಸರ್ಕಾರದ ನಿಕಟ ಸಮನ್ವಯ:** ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ನಿರ್ದೇಶಕ ಓಪೇಶ್ ಕುಮಾರ್ ಶರ್ಮಾ ಗುರುವಾರ ಮಾತನಾಡಿ, ಪರ್ಷಿಯನ್ ಕೊಲ್ಲಿಯ ಪ್ರದೇಶದಲ್ಲಿರುವ ಭಾರತೀಯ ಹಡಗುಗಳು ಮತ್ತು ಇಂಧನ ಸರಕುಗಳ ಸುರಕ್ಷಿತ ವಾಪಸಾತಿಗಾಗಿ ಕೇಂದ್ರ ಸರ್ಕಾರ ವಿವಿಧ ಸಚಿವಾಲಯಗಳು ಹಾಗೂ ಸಂಬಂಧಿತ ಸಂಸ್ಥೆಗಳೊಂದಿಗೆ ನಿರಂತರ ಸಮನ್ವಯ ಸಾಧಿಸುತ್ತಿದೆ ಎಂದು ಹೇಳಿದರು. ಜೂನ್ 15ರಂದು 'ದಿಶಾ' ಹಾರ್ಮುಜ್ ಜಲಸಂಧಿ ದಾಟಿದ ಬಳಿಕ ಇನ್ನಾವುದೇ ಭಾರತೀಯ ಧ್ವಜದ ಹಡಗು ಪರ್ಷಿಯನ್ ಕೊಲ್ಲಿಯಿಂದ ಹೊರಬಂದಿಲ್ಲ ಎಂದು ಅವರು ಮಾಹಿತಿ ನೀಡಿದರು.

ಇಂಧನ ಸರಬರಾಜು, ನಾವಿಕರ ಸುರಕ್ಷತೆಗೆ ಆದ್ಯತೆ: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸೇರಿದಂತೆ ಎಲ್ಲ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ನಡೆಸಲಾಗುತ್ತಿದೆ. ಇಂಧನ ಸರಕುಗಳು ಹಾಗೂ ಭಾರತೀಯ ಧ್ವಜದ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶರ್ಮಾ ಹೇಳಿದರು.

ಸಾವಿರಾರು ನಾವಿಕರಿಗೆ ನೆರವು: ಡೈರೆಕ್ಟರೇಟ್ ಜನರಲ್ ಆಫ್ ಶಿಪ್ಪಿಂಗ್(ಡಿಜಿ ಶಿಪ್ಪಿಂಗ್) ಸ್ಥಾಪಿಸಿರುವ ನಿಯಂತ್ರಣ ಕೊಠಡಿ ಇದುವರೆಗೆ 13,187ಕ್ಕೂ ಹೆಚ್ಚು ಕರೆಗಳು, 29,376 ಇಮೇಲ್‌ಗಳನ್ನು ನಿರ್ವಹಿಸಿದೆ. ಕಳೆದ 72 ಗಂಟೆಗಳಲ್ಲಿ ಮಾತ್ರ 450 ಕರೆಗಳು ಹಾಗೂ 1,077 ಇಮೇಲ್‌ಗಳು ಸ್ವೀಕರಿಸ ಲ್ಪಟ್ಟಿವೆ. ಇದಲ್ಲದೆ, ಸಚಿವಾಲಯವು ಇದುವರೆಗೆ 3,639ಕ್ಕೂ ಹೆಚ್ಚು ಭಾರತೀಯ ನಾವಿಕರ ಸುರಕ್ಷಿತ ವಾಪಸಾತಿಗೆ ನೆರವು ನೀಡಿದ್ದು, ಕಳೆದ 72 ಗಂಟೆಗಳಲ್ಲಿ 47 ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ.

ರಾಜ್ಯದವರಿಗೇ ಗ್ಯಾರಂಟಿ

ಪುಟ ೧➡ ಅಲ್ಲದೇ, 2026-27ನೇ ಸಾಲಿಗೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಲ್ಲರನ್ನೂ ಸೇರಿಸಿ 10 ಲಕ್ಷ ಉಚಿತ ಬಸ್ ಪಾಸ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಅಂದಾಜಿಸಲಾಗಿದೆ. ಗೃಹಜ್ಯೋತಿ ಯೋಜನೆಯಲ್ಲಿ ಮೇ ಅಂತ್ಯದವರೆಗೆ 1.65 ಕೋಟಿಫಲಾನುಭವಿಗಳು ಯೋಜನೆಯ ಲಾಭ ಪಡೆದಿರುತ್ತಾರೆ. ಹೊರ ರಾಜ್ಯದಿಂದ ಇಲ್ಲಿಗೆ ಬಂದು ನೆಲೆಸಿ ಗೃಹಜ್ಯೋತಿ ಲಾಭ ಪಡೆಯುವವರ ಮಾಹಿತಿ ಸಂಗ್ರಹಿಸಲು ಸೂಚನೆ. ಮತಪಟ್ಟಿಯಲ್ಲಿ ಹೆಸರಿರುವ ಮತದಾರರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ.

ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು

ಪುಟ ೧➡ **ಏರ್‌ಟೆಲ್ ಆ್ಯಪ್ ಬ್ಯಾಂಕ್‌ನಲ್ಲಿ(ಏರ್ಟೆಲ್ ಸಿಮ್‌ದಾರರು ಬಳಸಲು ಅವಕಾಶವಿರುವ ಖಾತೆ) ಯುಪಿಐ ಖಾತೆಗಳನ್ನು ತೆಗೆದು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿವೆ ಎನ್ನುವ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಗೃಹಲಕ್ಷ್ಮಿ ಜಾರಿಯಲ್ಲಿ ಬರುತ್ತಿರುವ ಎರಡು ಪ್ರಮುಖ ತಾಂತ್ರಿಕ ಸಮಸ್ಯೆಗಳ ಬಗ್ಗೆ ಕೂಲಂಕಷ ಚರ್ಚೆ ನಡೆಸಲಾಯಿತು. ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ ಸಕಾಲದಲ್ಲಿ ದೊರೆಯದಿರುವ ಬಗ್ಗೆ ಇ-ಕೆವೈಸಿ ಹಾಗೂ ಬ್ಯಾಂಕ್ ಖಾತೆ/ ಎನ್‌ಪಿಸಿಐ ನಿಷ್ಕ್ರಿಯವಾಗಿರುವ ಫಲಾನುಭವಿಗಳ ಕುರಿತಂತೆ ಚರ್ಚೆ ನಡೆಸಲಾಯಿತು.**

ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

ಪುಟ ೧➡ ಈ ವಿಚಾರವನ್ನು ಕೇಂದ್ರದ ನಾಯಕರ ಗಮನಕ್ಕೂ ತರಲಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚೆ ಮಾಡಿದ್ದು, ಅವರಿಗೂ ಇದರಿಂದ ಬೇಸರವಾಗಿದೆ. ಇದಕ್ಕೆ ಸರಿಯಾದ ಉತ್ತರ ನೀಡುತ್ತೇವೆ. ಇದು ಬಿಜೆಪಿ, ಜೆಡಿಎಸ್‌ನಿಂದ ಆಗಿದೆ ಎಂದು ಹೇಳುವುದಿಲ್ಲ. ಮೋಸ ಮಾಡಿರುವವರು ಯಾರು ಎಂಬುದನ್ನು ಕಂಡುಹಿಡಿಯುತ್ತೇವೆ. ಅಡ್ಡ ಮತದಾನ ಮಾಡಿರುವವರು ಮತ್ತೆ ಶಾಸಕರಾಗದಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದರು.

ಮೋದಿ ವಿದೇಶ ಪ್ರವಾಸ ಅತ್ಯಂತ ಫಲಪ್ರದ: ಬಿಜೆಪಿ

ಪುಟ ೧➡ ಭಾರತ ಮತ್ತು ಫ್ರಾನ್ಸ್ ನಡುವೆ ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡೇಟಾ ಸಂರಕ್ಷಣೆ ಕುರಿತ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿರುವುದು ಈ ಪ್ರವಾಸದ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಫ್ರಾನ್ಸ್ ಭಾರತದಲ್ಲಿ ವೈಮಾನಿಕ-ಬಾಹ್ಯಾಕಾಶ ಸಂಶೋಧನಾ ಕೇಂದ್ರ ಹಾಗೂ ಉತ್ತರ ಪ್ರದೇಶದ ಕಾನ್ಪುರದಲ್ಲಿ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪಿಸಲು ನಿರ್ಧರಿಸಿದೆ. ಜತೆಗೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಸ್ಟೆಮ್) ಕ್ಷೇತ್ರಗಳಲ್ಲಿ ವರ್ಷಕ್ಕೆ 30,000 ಭಾರತೀಯ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಮುಂದಾಗಿದೆ. ಪ್ರವಾಸದ ವೇಳೆ ಪ್ರಧಾನಿ ಮೋದಿ 50ಕ್ಕೂ ಹೆಚ್ಚು ಜಾಗತಿಕ ಕಂಪನಿಗಳ ಮುಖ್ಯಸ್ಥರು, ಉದ್ಯಮಿಗಳು ಮತ್ತು ನವೋದ್ಯಮಿಗಳೊಂದಿಗೆ ಮಾತುಕತೆ ನಡೆಸಿದ್ದು, ಹಲವು ಹೂಡಿಕೆ ಮತ್ತು ತಂತ್ರಜ್ಞಾನ ಸಹಭಾಗಿತ್ವಗಳಿಗೆ ಬುನಾದಿ ಹಾಕಲಾಗಿದೆ ಎಂದು ಬಿಜೆಪಿ ತಿಳಿಸಿದೆ.

70 ಲಕ್ಷಕ್ಕೂ ಹೆಚ್ಚು ಯುವಕರಿಗೆ ನೌಕರಿ

ಪುಟ ೧➡ ಯೋಜನೆಯ ಸಾಧನೆಗಳನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಸುಮಾರು 70 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದು, ಅಷ್ಟೇ ಸಂಖ್ಯೆಯ ಮೊದಲ ಬಾರಿಗೆ ಉದ್ಯೋಗ ಪಡೆದವರು ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ಬಂದಿದ್ದಾರೆ ಎಂದು ಹೇಳಿದರು. ಸುಮಾರು 20 ಲಕ್ಷ ಯುವಕರು ತಮ್ಮ ಮೊದಲ ಉದ್ಯೋಗದಲ್ಲಿ ಆರು ತಿಂಗಳ ಸೇವೆ ಪೂರ್ಣಗೊಳಿಸಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ಈಗಾಗಲೇ ಪ್ರೋತ್ಸಾಹಧನವನ್ನು ಪಡೆದಿದ್ದಾರೆ ಎಂದರು. ಇದು ಕೇವಲ ಆರ್ಥಿಕ ನೆರವಲ್ಲ, ಯುವಕರ ಶ್ರಮಕ್ಕೆ ರಾಷ್ಟ್ರ ನೀಡುತ್ತಿರುವ ಗೌರವ ಮತ್ತು ಅವರ ಭವಿಷ್ಯದ ಮೇಲಿನ ವಿಶ್ವಾಸದ ಸಂಕೇತ ಎಂದು ಮೋದಿ ಹೇಳಿದರು.

ಉದ್ಯಮ ಮತ್ತು ಯುವಕರಿಗೆ ಸಮಾನ ಬೆಂಬಲ: ಪಿಎಂ-ವಿಬಿಆರ್‌ವೈ ಕೇವಲ ಉದ್ಯೋಗ ಯೋಜನೆಯಲ್ಲ, ಉದ್ಯಮ ಮತ್ತು ಉದ್ಯೋಗಿಗಳ ನಡುವಿನ ಬಲವಾದ ಸೇತುವೆಯಾಗಿದೆ. ಉದ್ಯೋಗ ಸೃಷ್ಟಿಸುವ ಸಂಸ್ಥೆಗಳಿಗೆ ಉತ್ತೇಜನ ನೀಡುವುದರ ಜತೆಗೆ ಉದ್ಯೋಗ ಜೀವನ ಆರಂಭಿಸುವ ಯುವಕರಿಗೂ ಸರ್ಕಾರ ಬೆಂಬಲ ನೀಡುತ್ತಿದೆ ಎಂದರು.

ಮಹಿಳಾ ಉದ್ಯೋಗಕ್ಕೆ ಹೆಚ್ಚಿನ ಒತ್ತು: ಮಹಿಳೆಯರ ಆರ್ಥಿಕ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ರಾತ್ರಿ ಪಾಳಿಯ ಉದ್ಯೋಗ, ಮನೆಯಿಂದಲೇ ಕೆಲಸ ಮಾಡುವ ಅವಕಾಶಗಳು ಹಾಗೂ ಕಾರ್ಯಸ್ಥಳದ ಸುರಕ್ಷತಾ ವ್ಯವಸ್ಥೆಗಳನ್ನು ಬಲಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮೋದಿ ಹೇಳಿದರು.

3.5 ಕೋಟಿ ಉದ್ಯೋಗಗಳ ಗುರಿ

99,446 ಕೋಟಿ ರೂ. ವೆಚ್ಚದ ಈ ಯೋಜನೆಯ ಮೂಲಕ ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಸುಮಾರು 1.92 ಕೋಟಿ ಮಂದಿ ಮೊದಲ ಬಾರಿಗೆ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವ ನಿರೀಕ್ಷೆಯಿದೆ. ಆಗಸ್ಟ್ 2025ರಿಂದ ಯೋಜನೆಯಲ್ಲಿ 70 ಲಕ್ಷಕ್ಕೂ ಹೆಚ್ಚು ಯುವಕರು ಔಪಚಾರಿಕ ಉದ್ಯೋಗ ವ್ಯವಸ್ಥೆಗೆ ಸೇರ್ಪಡೆಯಾಗಿದ್ದು, ಅವರಲ್ಲಿ ಸುಮಾರು ಶೇ.30 ಮಹಿಳೆಯರಾಗಿದ್ದಾರೆ.

ಇಸ್ಲಾಂಗೆ ಮತಾಂತರಗೊಂಡು ಕೇರಳದಲ್ಲಿ ಪತ್ತೆ: ಇಬ್ಬರ ಸೆರೆ

• **ಮಡಿಕೇರಿ:** ಕಳೆದ ಒಂದೂವರೆ ತಿಂಗಳ ಹಿಂದೆ ಕೊಡಗಿನ ಕುಶಾಲನಗರದಿಂದ ನಾಪತ್ತೆಯಾಗಿದ್ದ ಮಹಿಳೆ ಹಾಗೂ ಆಕೆಯ 9 ವರ್ಷದ ಮಗು ಕೇರಳ ರಾಜ್ಯದ ಮಲಪ್ಪುರಂ ಜಿಲ್ಲೆಯ ಮದರಸವೊಂದರಲ್ಲಿ ಪತ್ತೆಯಾಗುವ ಮೂಲಕ ಪ್ರಕರಣಕ್ಕೆ ತಿರುವು ದೊರಕಿದ್ದು, ಈ ಪ್ರಕರಣದ ಹಿಂದೆ ಮತಾಂತರ ಹಾಗೂ ಲವ್ ಜಿಹಾದ್‌ನ ದೊಡ್ಡ ಸಂಚು ಇರುವುದಾಗಿ ಕುಶಾಲನಗರದ ಹಿಂದೂಪರ ಸಂಘಟನೆಗಳು ಆರೋಪಿಸಿವೆ. ಕೇರಳದ ಮಲಪ್ಪುರಂ ಜಿಲ್ಲೆಯ ಪೊನ್ನಾಣಿ ಹಾಗೂ ಮಂಜೇರಿ ಭಾಗಗಳಲ್ಲಿ ಮತಾಂತರ ಜಾಲ ಕಾರ್ಯನಿರ್ವಹಿಸುತ್ತಿದೆ ಎಂಬ ಆರೋಪವೂ ಹಿಂದೂ ಸಂಘಟನೆಗಳಿಂದ ಕೇಳಿ ಬಂದಿದೆ.

ಕುಶಾಲನಗರದ ನಿಸರ್ಗಧಾಮದ ಎನ್‌ಟಿಸಿ ಕಾಂಪ್ಲೆಕ್ಸ್‌ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಚಿತಾ, ಅಂಗಡಿ ಮಾಲಕ ಸಲೀಂ ಎಂಬಾತನ ಸಂಪರ್ಕಕ್ಕೆ ಬಂದ ಬಳಿಕ ಗಂಡನನ್ನು ಬಿಟ್ಟು ಮಗುವಿನೊಂದಿಗೆ ತೆರಳಿದ್ದರು ಎಂದು ಆರೋಪಿಸಲಾಗಿದೆ.

ದತ್ತಿ ಪ್ರಶಸ್ತಿಗೆ ಪುಸ್ತಕಗಳ ಆಹ್ವಾನ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುಸ್ತಕಗಳಿಗೆ ನೀಡಲಾಗುವ ವಿವಿಧ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಿಗಾಗಿ ಪುಸ್ತಕಗಳ ಆಹ್ವಾನ ಮಾಡಲಾಗಿದೆ. 2025 ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು, ಪ್ರಕಾಶಕರು ಕಳಿಸಿಕೊಡಬಹುದಾಗಿದೆ. 2025ನೆ ಸಾಲಿನಲ್ಲಿ ಪ್ರಕಟಗೊಂಡಿರುವ ಒಟ್ಟು 55 ದತ್ತಿ ಪುಸ್ತಕಗಳಿಗೆ ವಿವಿಧ ದತ್ತಿ ಪುರಸ್ಕಾರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿದೆ. ದತ್ತಿ ದಾನಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ನಿಧಿ ಸ್ಥಾಪಿಸಿದ್ದು, ಇದಕ್ಕಾಗಿ 59 ವಿವಿಧ ಪ್ರಕಾರಗಳ ಪುಸ್ತಕ ಆಹ್ವಾನಿಸಲಾಗಿದೆ.

ನವಯುಗಕೇರಳಕ್ಕಾಗಿ ಇರುವ ಬಜೆಟ್: ಸಿಎಂ ಸತೀಶನ್

• **ತಿರುವನಂತಪುರಂ:** ಹಣಕಾಸು ಖಾತೆಯನ್ನೂ ಹೊಂದಿರುವ ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು 2026-27ನೇ ಸಾಲಿಗಾಗಿ ,2,39,907.13ಕೋ.ರೂ.ಗಾತ್ರದ 1,84,438ಕೋ.ರೂ.ಆದಾಯ , 34,586.66ಕೋ.ರೂ.ಗಳ ಆದಾಯ ಕೊರತೆ ಮತ್ತು 55,419.5ಕೋ.ರೂ.ಗಳ ಹಣಕಾಸು ಕೊರತೆಯ ಬಜೆಟನ್ನು ಮಂಡಿಸಿದ್ದಾರೆ. ಇದು ಅವರ ಚೊಚ್ಚಲ ಬಜೆಟ್.ರಾಜ್ಯದಲ್ಲಿ ನ್ಯಾಯಯುತ ನೆಲೆಯಲ್ಲಿ ಭೂ ಮೌಲ್ಯಮಾಪನವನ್ನು ಮಾಡುವ ನಿಟ್ಟಿನಲ್ಲಿ ಪುನರ್ ಪರಿಶೀಲನೆ ನಡೆಸಲಾಗುವುದು .ರಾಜ್ಯಾದ್ಯಂತ ನ್ಯಾಯಯುತ ಮೌಲ್ಯಗಳಲ್ಲಿ ಅಸಮಾನತೆ ಇರುವುದನ್ನು ಸರಿಪಡಿಸುವಲ್ಲಿ ತಾಂತ್ರಿಕ ಮತ್ತು ಮಾರುಕಟ್ಟೆ ಮೌಲ್ಯ ದತ್ತಾಂಶಗಳ ಮೌಲ್ಯ ಮಾಪನವನ್ನು ಕೈಗೊಳ್ಳಲಾಗುವುದು ಎಂದಿದ್ದಾರೆ. ಬೆಳವಣಿಗೆ ಮತ್ತು ಅಭಿವೃದ್ಧಿಯ ನವಯುಗಕೇರಳಕ್ಕಾಗಿ ಇರುವ ಬಜೆಟ್ ಎಂದು ಅವರು ಘೋಷಿಸಿದ್ದಾರೆ.

ಕೇರಳ ಸ್ಟ್ಯಾಂಪ್ ಕಾಯ್ದೆಯಡಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು 2026ರ ಅಕ್ಟೋಬರ್‌ಗೆ ಮುನ್ನ ಇತ್ಯರ್ಥಪಡಿಸಲಾಗುವುದು. ಇ-ಸ್ಟ್ಯಾಂಪಿಂಗ್ ಸೌಲ್ಯವನ್ನು ಖಾಸಗಿ ವಿಮಾ ಕಂಪನಿಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗೂ ವಿಸ್ತರಿಸಲಾಗುವುದು. ಆಸ್ತಿ ವಹಿವಾಟುಗಳಲ್ಲಿ ಕಡಿಮೆ ಮೌಲ್ಯಮಾಪನ ಮಾಡಲಾದ ಎಲ್ಲಾ ಬಾಕಿಗಳನ್ನು 'ಆಸ್ತಿಯ ಮೇಲಿನ ಶುಲ್ಕ' ಎಂದು ದಾಖಲಿಸಲಾಗುತ್ತದೆ. ಇದು ಭೂಮಿಗೆ ಸಂಬಂಧಿಸಿದ ಹೊಣೆಗಾರಿಕೆಗಳ ಬಗ್ಗೆ ಸಂಭಾವ್ಯ ಖರೀದಿದಾರರಲ್ಲಿ ಜಾಗೃತಿ ಮೂಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ವೈದ್ಯಕೀಯ ತಪಾಸಣೆ

40ವರ್ಷ ಮೇಲ್ಪಟ್ಟವರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆಗೆ ಹಣಕಾಸು ನೆರವು ಒದಗಿಸುವ ಯೋಜನೆಯೊಂದನ್ನು ಸತೀಶನ್ ಪ್ರಕಟಿಸಿದ್ದು, ಹರಿಪಾದ್‌ನಲ್ಲಿ ಹೊಸ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

ಮಾನವ-ಪ್ರಾಣಿ ಸಂಘರ್ಷ ತಡೆಗೆ 192ಕೋ.ರೂ.

ಕೇರಳದಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಪ್ರಯತ್ನದಲ್ಲಿ, ಮುಖ್ಯಮಂತ್ರಿ ವಿ ಡಿ ಸತೀಶನ್ 2026-27 ರ ಪರಿಷ್ಕೃತ ಬಜೆಟ್‌ನಲ್ಲಿ ಡೇಟಾ ಆಧಾರಿತ 'ಇನ್ವೆಸ್ಟ್ ಕೇರಳ ಕೋಶ' ರಚನೆಯನ್ನು ಘೋಷಿಸಿದ್ದಾರೆ.

ಅವರು 'ಕೇರಳ ಎಂಎಸ್‌ಎಂಇ ಬೆಳವಣಿಗೆಯ ಯೋಜನೆ'ಯನ್ನು ಘೋಷಿಸಿದರು, ಇದರ ಭಾಗವಾಗಿ 10,000 ಉದ್ಯಮಗಳು ತೆರಿಗೆ ಪ್ರೋತ್ಸಾಹ, ಆವರ್ತನಾ ನಿಧಿ, ಸವಾಲು ನಿಧಿ ಮುಂತಾದ ವಿವಿಧ ಸಹಾಯಗಳನ್ನು ಪಡೆಯುತ್ತವೆ. ಆದಾಯ ಕೊರತೆಯ ಅನುದಾನದಲ್ಲಿ 20,500 ಕೋ.ರೂ.ಗಳ ಕೊರತೆಯಿರುವುದರಿಂದ ಅವರು ಯೋಜನಾ ಹಂಚಿಕೆಯನ್ನು 35750 ಕೋ.ರೂ.ಗಳಿಂದ 30370 ಕೋ.ರೂ.ಗಳಿಗೆ ಪರಿಷ್ಕರಿಸಲಾಗಿದೆ.

ಮಿಷನ್ ಸಮುದ್ರ :ಕೇರಳದ ಕಡಲ ಸಾಮರ್ಥ್ಯವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಸಮಗ್ರ ಯೋಜನೆಯಾದ 'ಮಿಷನ್ ಸಮುದ್ರ'ವನ್ನು ಪ್ರಕಟಿಸಿದ ಅವರು, ಜೊತೆಯಲ್ಲೇ, ಹಿಂದಿನ ಕಮ್ಯುನಿಸ್ಟ್ ಸರಕಾರದ ತಪ್ಪು ಲೆಕ್ಕಾಚಾರಗಳಿಂದಾಗಿ ರಾಜ್ಯದ ವಿತ್ತೀಯ ಕೊರತೆ 20,500ಕೋ.ರೂ.ಗಳಿಗೆ ಏರಿದ್ದು, ಇದರಿಂದ ಆರ್ಥಿಕ ಬಿಕ್ಕಟ್ಟು ಗಂಭೀರವಾಗಿದೆ ಎಂದರು.ಆದಾಗ್ಯೂ ತನ್ನ ಸರಕಾರ ಚುನಾವಣಾ ಗ್ಯಾರಂಟಿಗಳನ್ನು ಈಡೇರಿಸಲು ಆರಂಭಿಸಿದೆ ಎಂದು ಹೇಳಿಕೊಂಡರು.ಪರಿಷ್ಕೃತ ಬಜೆಟ್ ಮೇಲಣ ಸಾಮಾನ್ಯ ಚರ್ಚೆಯನ್ನು ರಾಜ್ಯ ವಿಧಾನಸಭೆ ಜೂ.22ರಿಂದ 24ರವರೆಗೆ ಎತ್ತಿಕೊಳ್ಳಲಿದ್ದು,ಅನುದಾನಗಳಿಗಾಗಿ ಇರುವ ಬೇಡಿಕೆಗಳ ಮೇಲಣ ಚರ್ಚೆ ಮತ್ತು ಮತದಾನ ಜೂ.29ಮತ್ತು 30ರಂದು ನಡೆಯಲಿದೆ. ಜು.1ರಂದು ಧನ ವಿನಿಯೋಗ ಮಸೂದೆಯ ಪರಿಗಣನೆಗೆ ನಿಗದಿಪಡಿಸಲಾಗಿದೆ.

ಆದಾಗ್ಯೂ ಕೆಎಸ್ಸಾರ್ಟಿಸಿ , ಕೆಎಸ್‌ಇಬಿ, ಕೇರಳ ಜಲಪ್ರಾಧಿಕಾರದಂತಹ ಸರಕಾರಿ ಸ್ವಾಮ್ಯದ ವ್ಯವಸ್ಥೆಗಳ ಆರ್ಥಿಕ ಪುನಶ್ಚೇತನಕ್ಕೆ ಸಂಬಂಧಿಸಿ ಬಜೆಟಿನಲ್ಲಿ ಪ್ರಸ್ತಾವಗಳು ಕಂಡುಬಂದಿಲ್ಲ.

■ಕಡಿಮೆ ಮದ್ಯ ಉತ್ಪನ್ನಗಳಿಗೆ ಹೊಸ ತೆರಿಗೆ ಸ್ಲ್ಯಾಬ್ ■ಇವಿ ರಸ್ತೆ ತೆರಿಗೆ ಇಳಿಕೆ■ರ್‍ಯಾಗಿಂಗ್ ವಿರುದ್ಧ ಕ್ರಮ■ಬಾಲಕಿಯರ ಸ್ನೇಹಿ ಕ್ಯಾಂಪಸ್-ವೈಜ್ಞಾನಿಕ ಮನೋಭಾವದ ಸ್ಫೂರ್ತಿ ■ವಯನಾಡ್, ಕಾಸರಗೋಡು, ಇಡುಕ್ಕಿಗಾಗಿ ವಿಶೇಷ ಪ್ಯಾಕೇಜ್ ■ಮಾನವ-ಕಾಡುಪ್ರಾಣಿ ಸಂಘರ್ಷ ತಡೆಗೆ 192ಕೋ.ರೂ. ಯೋಜನೆ■ರಬ್ಬರ್ ಕನಿಷ್ಠ ಬೆಂಬಲ ಬೆಲೆಯನ್ನು 250ರೂ.ಗಳಿಗೆ ಹೆಚ್ಚಳ■ಕೃಷಿ ಕ್ಷೇತ್ರಕ್ಕೆ 1,535ಕೋ.ರೂ.■ಉಮ್ಮನ್‌ಚಾಂಡಿ ಆರೋಗ್ಯ ವಿಮಾ ಯೋಜನೆಗೆ 10ಕೋ.ರೂ.-ಎಲ್ಲ ಕುಟುಂಬಗಳಿಗೆ 25ಲ.ರೂ.ವಿಮೆ■ಮೂಲಸೌಕರ್ಯಗಳು ಮತ್ತು ಅಭಿವೃದ್ಧಿ-ರಸ್ತೆ ಪುನಶ್ಚೇತನಕ್ಕೆ 5,952ಕೋ.ರೂ.■ಸಮುದ್ರ ಮಿಷನ್‌ಗೆ 400ಕೋ.ರೂ.■ಸಾಮಾಜಿಕ ಭದ್ರತಾ ಯೋಜನೆಗಳಾದ ಹಿರಿಯ ನಾಗರಿಕರ ಪಿಂಚಣಿ, ವಿಧವಾ ಮಾಸಾಶನ, ಅಂಗವಿಕಲರಿಗೆ ನೆರವಿಗೆ 14,500ಕೋ.ರೂ.

ಹಸಿರೀಕರಣಕ್ಕಾಗಿ 15 ಲಕ್ಷ ಸಸಿ

ಪುಟ ೧➡ ಜೀವವೈವಿಧ್ಯತೆಯನ್ನು ಹೆಚ್ಚಿಸುವುದು ಹಾಗೂ ಭವಿಷ್ಯದ ಪೀಳಿಗೆಗಳಿಗಾಗಿ ದೀರ್ಘಕಾಲಿಕ ಪರಿಸರ ಆಸ್ತಿಗಳನ್ನು ನಿರ್ಮಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಈ ಅಭಿಯಾನದಲ್ಲಿ ನಗರದ 50,000ಕ್ಕೂ ಹೆಚ್ಚು ನಾಗರಿಕರು, ಸ್ವಯಂಸೇವಕರು, ವಿದ್ಯಾರ್ಥಿಗಳು, ಕಾರ್ಪೊರೇಟ್ ಸಂಸ್ಥೆಗಳು, ನಿವಾಸಿ ಸಂಘಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳು ಭಾಗವಹಿಸಲಿದ್ದು, ನಮ್ಮ ಜತೆಗೆ ಕಾರ್ಮಿಕ ಇಲಾಖೆಯೂ ಕೈಜೋಡಿಸಿದೆ ಎಂದರು.

> ಬೃಹತ್ ಪ್ರಮಾಣದ ಹಸಿರು ಪ್ರದೇಶಗಳು ಹಾಗೂ ಪರಿಸರ ಸಂರಕ್ಷಣಾ ವಲಯಗಳನ್ನು ನಿರ್ಮಿಸುವ ಮೂಲಕ ನಗರದ ದೀರ್ಘಕಾಲಿಕ ಪರಿಸರ ಸ್ಥೈರ್ಯಕ್ಕೆ ನಾವು ಹೂಡಿಕೆ ಮಾಡುತ್ತಿದ್ದೇವೆ. ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ಮುಂಚೂಣಿಯ ನಗರವಾಗಿ ಗುರುತಿಸುವ ಗುರಿ ಹೊಂದಿದ್ದೇವೆ.
>
> ■ **ಮೇಜರ್ ಪಿ. ಮಣಿವಣ್ಣನ್, ಬಿಡಿಎ ಆಯುಕ್ತ**

ಲಂಚ: ಭೂಮಾಪಕ ಬಲೆಗೆ




• **ಬಳ್ಳಾರಿ:** ಖಾಸಗಿ ಲೇಔಟ್‌ವೊಂದರ ಪ್ಲಾನ್ ಡೆವಲಪ್‌ಮೆಂಟ್ ಅನುಮೋದನೆಗಾಗಿ 3.5 ಲಕ್ಷ ರೂ.ಲಂಚದ ಬೇಡಿಕೆ ಇಟ್ಟಿದ್ದ ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದ ಭೂಮಾಪಕ ಶಾಂತಮೂರ್ತಿ ಅವರು ಶುಕ್ರವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ವೀರೇಶ್ ಎನ್ನುವವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು, ಶಾಂತ ಮೂರ್ತಿ ಪರವಾಗಿ ಮಹಮ್ಮದ್ ಸಾಜಿದ್ ಅವರು, ವೀರೇಶ್ ಮೂಲಕ ಲಂಚದ ಹಣ ಪಡೆಯು ವಾಗ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ. ಜಮೀನುಗಳ ಏಕ ಹಾಗೂ ಬಹು ನಿವೇಶನ ವಿನ್ಯಾಸದ ಕಡತಗಳಿಗೆ ಅನುಮೋದನೆ ದೊರಕಿಸಲು ಕಚೇರಿಗಳಲ್ಲಿ ಕೆಲಸ ಮಾಡಿಕೊಡಲು ವೀರೇಶ್ ಎನ್ನುವವರು ಜಿಪಿಎ ಪಡೆದಿದ್ದರು. ಈ ಕಡತಗಳಿಗೆ ಅನುಮೋದನೆ ನೀಡಲು ಬುಡಾ ಕಚೇರಿಯ ಭೂಮಾಪಕರು ಶಾಂತ ಮೂರ್ತಿ 3.50 ಲಕ್ಷ ರೂ. ಲಂಚದ ಬೇಡಿಕೆ ಇಟ್ಟಿದ್ದರು. ಈ ಕುರಿತು ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಕೋಡಿ ಕನ್ಯಾಣ ಬೀಚ್: ಯುವಕ ಸಮುದ್ರ ಪಾಲು


• **ಕೋಟ:** ಕೋಡಿ ಕನ್ಯಾಣದ ಬೀಚ್ ರೆಸಾರ್ಟ್‌ನಲ್ಲಿದ್ದ ಬೆಂಗಳೂರು ಮೂಲದ ಯುವಕನೋರ್ವ ಸಮುದ್ರದಲ್ಲಿ ಈಜಲು ಹೋಗಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವ ದಾರುಣ ಘಟನೆ ಕೋಡಿ ಕನ್ಯಾಣ ಕಡಲತೀರದಲ್ಲಿ ಜೂ. 19ರ ಮುಂಜಾನೆ ಸಂಭವಿಸಿದೆ. ಬೆಂಗಳೂರು ರಾಜಾಜಿ ನಗರದ ನಿಖಿಲ್ ಕುಮಾರ್ (32) ಮೃತಪಟ್ಟ ದುರ್ದೈವಿ ಯುವಕ ಎಂದು ಗುರುತಿಸಲಾಗಿದೆ. ರಾಜಧಾನಿ ಬೆಂಗಳೂರಿನಿಂದ ಕರಾವಳಿ ಪ್ರವಾಸ ಕೈಗೊಂಡಿದ್ದ 9 ಮಂದಿ ಯುವಕರ ತಂಡವೊಂದು ಶುಕ್ರವಾರ ಬೆಳಿಗ್ಗೆ ಕೋಡಿ ಕನ್ಯಾಣದ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿ ಸಮುದ್ರ ತೀರದಲ್ಲಿ ವೀಕ್ಷಿಸುತ್ತಿದ್ದರು. ಈ ಪೈಕಿ ನಾಲ್ವರು ಯುವಕರು ಸಮುದ್ರದಲ್ಲಿ ಸ್ನಾನ ಮಾಡಲೆಂದು ನೀರಿಗೆ ಇಳಿದಿದ್ದಾರೆ. ಈ ಸಂದರ್ಭದಲ್ಲಿ ನೀರಿನ ಭಾರಿ ಸೆಳೆತಕ್ಕೆ ಸಿಲುಕಿ ನಿಖಿಲ್ ಸಮುದ್ರದಲ್ಲಿ ಕೊಚ್ಚಿ ಹೋಗಿದ್ದಾರೆ.

ತಿಮ್ಮಪ್ಪನ ದರ್ಶನ



ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಪತ್ನಿ ಉಷಾ, ಪುತ್ರ ಆಕಾಶ್ ಅವರ ಜತೆಗೆ ತಿರುಪತಿ ತಿರುಮಲ ದೇಗುಲದಲ್ಲಿ ಶುಕ್ರವಾರ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದರು.

ಡಿಕೆಶಿ ವಿರುದ್ಧ ಪ್ರಕರಣ ಹೈ ವಜಾ



• **ಬೆಂಗಳೂರು:** ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನಗರದ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಪುರಸ್ಕರಿಸಿದೆ. ಶಿವಕುಮಾರ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಚ್.ವಿ.ಪ್ರವೀಣ್ ಗೌಡ ಅವರು ಶಿವಕುಮಾರ್ ಅವರ ಸಾಮಾಜಿಕ ಜಾಲತಾಣ ಖಾತೆ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್ಲೋಡ್ ಮಾಡಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರು.

ಪ್ರಕರಣದ ಹಿನ್ನೆಲೆ: 3 ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಹೈಕೋರ್ಟ್ ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು ನಾನು ಕರಸೇವಕ ನನ್ನನ್ನೂ ಬಂಧಿಸಿ ಎಂಬ ಒಕ್ಕಣೆ ಹೊಂದಿದ್ದ, ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು. ಇದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಫೋಟೋ ಬಳಸಿ ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40 ಸಾವಿರ ಕೋಟಿ ರೂ. ಅಕ್ರಮದಲ್ಲ ಪಾಲುದಾರ ನನ್ನನ್ನು ಬಂಧಿಸಿ, ಶಾಸಕ ವಿ.ಸುನೀಲ್ ಕುಮಾರ್ ಫೋಟೊ ಬಳಸಿ ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ. ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ ಎಂಬ ಒಕ್ಕಣೆಯ ಚಿತ್ರಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿತ್ತು.

ಕಿರುಸುದ್ದಿ

ಹುಸಿ ಬಾಂಬ್ ಬೆದರಿಕೆ: ಜಿಲ್ಲಾ ನ್ಯಾಯಾಲಯ ತಪಾಸಣೆ



• **ದಾವಣಗೆರೆ:** ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಮತ್ತೆ ಬಂದ ಹಿನ್ನೆಲೆಯಲ್ಲಿ ಶುಕ್ರವಾರ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣವನ್ನು ಪೊಲೀಸ್ ಇಲಾಖೆ ಹಾಗೂ ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿ, ಸಿಬ್ಬಂದಿ ತೀವ್ರ ತಪಾಸಣೆ ನಡೆಸಿದ್ದು, ಅಂತಿಮವಾಗಿ ಇದೊಂದು ಹುಸಿ ಬಾಂಬ್ ಕರೆ ಎಂಬುದು ಸ್ಪಷ್ಟವಾಗಿದೆ. ನಗರದ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಇಟ್ಟಿರುವುದಾಗಿ ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಬಂದಿದ್ದು, ತಕ್ಷಣವೇ ಜಿಲ್ಲಾ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದ ತಂಡಗಳು ಸ್ಥಳಕ್ಕೆ ಧಾವಿಸಿ ಇಡೀ ಜಿಲ್ಲಾ ನ್ಯಾಯಾಲಯದ ಪ್ರತಿ ಕೊಠಡಿ, ವಕೀಲರ ಭವನ, ಶೌಚಾಲಯ ಹೀಗೆ ಯಾವುದನ್ನೂ ಬಿಡದೆ, ಮೂಲೆ-ಮೂಲೆಯಲ್ಲಿ ಬಾಂಬ್‌ಗಾಗಿ ಶೋಧ ಕೈಗೊಂಡವು. ಸುಮಾರು ಗಂಟೆಗಳ ಶೋಧದ ನಂತರ ಇದೊಂದು ಹುಸಿ ಬಾಂಬ್ ಬೆದರಿಕೆ ಕರೆಯೆಂಬುದು ಸ್ಪಷ್ಟವಾದ ಹಿನ್ನೆಲೆಯಲ್ಲಿ ಎಲ್ಲರೂ ನಿಟ್ಟುಸಿರುಬಿಟ್ಟರು.

ಯುವತಿ ಹತ್ಯೆ: ಮೂವರ ಸೆರೆ

• **ಬೆಳಗಾವಿ:** ಲಿವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದ ಯುವತಿಯನ್ನು ಬೇರೆ ಮದುವೆಯಾಗಲು ಮುಂದಾಗಿದ್ದ ಪ್ರಿಯಕರನನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಯುವತಿಯನ್ನು ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಕೊಲೆ ಬಳಿಕ ಶವವನ್ನು ಮಹಾರಾಷ್ಟ್ರದ ದಟ್ಟ ಕಾಡಿನಲ್ಲಿ ಎಸೆದು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬೆಳಗಾವಿ ತಾಲೂಕಿನ ವಂಟಮೂರಿ ಗ್ರಾಮದ ಗಂಗವ್ವ ಹಂಚಿನಮನಿ (25) ಹತ್ಯೆಗೀಡಾದ ಯುವತಿ. ಹುಕ್ಕೇರಿ ತಾಲೂಕಿನ ರಾಜನಕಟ್ಟಿ ಗ್ರಾಮದ ಬಸವರಾಜ್ ಕರ್ನಾವರ್ (33) ಪ್ರಮುಖ ಆರೋಪಿ ಎಂದು ಗುರುತಿಸಲಾಗಿದೆ. ಬಸವರಾಜ್ ತನ್ನ ತಂದೆ ಯಲ್ಲಪ್ಪ ಹಾಗೂ ಮಾವ ಲಗಮಪ್ಪ ಅವರೊಂದಿಗೆ ಸೇರಿ ಕೃತ್ಯ ಎಸಗಿರುವುದಾಗಿ ತನಿಖೆಯಲ್ಲಿ ತಿಳಿದುಬಂದಿದೆ. ಆರೋಪಿಗಳು ಗಂಗವ್ವಳ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ ಬಳಿಕ, ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಚಂದಗಡ ತಾಲೂಕಿನ ತಿಲಾರಿ ಘಾಟ್ ಪ್ರದೇಶದ ದಟ್ಟ ಕಾಡಿನಲ್ಲಿ ಶವವನ್ನು ಎಸೆದು ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಧಾರವಾಡ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ

• **ಧಾರವಾಡ:** ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಕೆಲ ಹೊತ್ತು ತೀವ್ರ ಆತಂಕದ ಜತೆಗೆ ಸುಪ್ತ ಗೊಂದಲದ ವಾತಾವರಣ ಶುಕ್ರವಾರ ನಿರ್ಮಾಣವಾಗಿತ್ತು. ಕೋರ್ಟ್ ಆವರಣದಲ್ಲಿ ಬಾಂಬ್ ಇಟ್ಟಿರುವ ಬಗ್ಗೆ ಇಮೇಲ್ ವಿಳಾಸಕ್ಕೆ ಸಂದೇಶ ಬಂದಿತ್ತು. ತಕ್ಷಣ ಎಚ್ಚೆತ್ತ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಬಾಂಬ್ ಪತ್ತೆ-ನಿಷ್ಕ್ರಿಯ ಮತ್ತು ಶ್ವಾನದಳದ ಸಿಬ್ಬಂದಿ ಆವರಣ ತಪಾಸಣೆ ನಡೆಸಿದರು.

34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆಯಲ್ಲಿ ಡಾ.ಯತೀಂದ್ರ

ಪ್ರತಿ ತಿಂಗಳು ಸಭೆ ನಡೆಸಿ

• **ಬೆಂಗಳೂರು:** ನಗರಾಭಿವೃದ್ಧಿ ಪ್ರಾಧಿಕಾರಗಳು ಕಾಲ ಕಾಲಕ್ಕೆ ಪ್ರಾಧಿಕಾರದ ಸಭೆ ನಡೆಸಿರುವ ಹಿನ್ನೆಲೆಯಲ್ಲಿ ನಾಗರಿಕರಿಗೆ ಸರಿಯಾಗಿ ಸೌಲಭ್ಯ ಕೊಡಲು ಸಾಧ್ಯವಾಗುತ್ತಿಲ್ಲ. ಪ್ರತಿ ತಿಂಗಳು ಪ್ರಾಧಿಕಾರದ ಸಭೆ ನಡೆಸಬೇಕು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ 34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕೆಲವು ಪ್ರಾಧಿಕಾರಗಳು ವರ್ಷಕ್ಕೆ 2 ಅಥವಾ 3 ಸಭೆಗಳನ್ನು ಮಾತ್ರ ಮಾಡಿವೆ. ಇದರಿಂದ ಪ್ರಗತಿ ಸಾಧ್ಯವಿಲ್ಲ. ಸಭೆ ನಡೆಸದಿರುವುದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ವರ್ಷಕ್ಕೆ ಕನಿಷ್ಠ 8 ಸಭೆಗಳನ್ನಾದರೂ ಮಾಡಬೇಕು ಎಂದು ಸೂಚಿಸಿದರು.

ಜನಸಂಖ್ಯೆ ಬೆಳೆಯುತ್ತಿದೆ: ಅದಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಪ್ರಾಧಿಕಾರಗಳು ಕೊಡಬೇಕು. ಲಭ್ಯವಿರುವ ಜಾಗಗಳನ್ನು ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು. ವಸತಿ ಇಲಾಖೆಯಿಂದ ಬೇಡಿಕೆಗೆ ತಕ್ಕಷ್ಟು ಮನೆಗಳನ್ನು ನೀಡಲಾಗುತ್ತಿಲ್ಲ. ವಸತಿಗಳಿಗೆ ಬೇಡಿಕೆ ಇದೆ. ನಮ್ಮ ಪ್ರಾಧಿಕಾರಗಳಿಂದ ಖಾಸಗಿ ಅಪಾರ್ಟ್‌ಮೆಂಟ್‌ಗಳ ರೀತಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಮನೆಗಳನ್ನು ಹಂಚುವ ಬಗ್ಗೆ ಪರಿಶೀಲಿಸಲು ಸಚಿವರು ತಿಳಿಸಿದರು.

ಮಾಸ್ಟರ್ ಪ್ಲಾನ್: ಹಳೆಯ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಿ, ಎಲ್ಲಾ ಪ್ರಾಧಿಕಾರಗಳು ಜಿಐಎಸ್ ಆಧರಿಸಿ ಮಾಸ್ಟರ್ ಪ್ಲಾನ್ ತಯಾರಿಸಬೇಕು. ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಾಸ್ಟರ್‌ಪ್ಲಾನ್ ಮಾಡಲಾಗಿದೆ. 2024ರಿಂದ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಬಂದಿದೆ. ಈ ಪ್ರಾಧಿಕಾರದ ವ್ಯಾಪ್ತಿಯನ್ನು ಬಿಟ್ಟು ಮಾಸ್ಟರ್‌ಪ್ಲಾನ್ ಮಾಡಬೇಕಿದೆ ಎಂದರು.

ಬ್ಯಾಂಕ್ ಖಾತೆಗಳ ನಿರ್ವಹಣೆ: ಎಲ್ಲಾ ಪ್ರಾಧಿಕಾರಗಳು ಪಾರದರ್ಶಕವಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬೇಕು. ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಯತೀಂದ್ರ ತಿಳಿಸಿದರು.

ಕಟ್ಟಡ ಪರವಾನಿಗೆ: ಕಟ್ಟಡ ನಿರ್ಮಾಣ ಪರವಾನಿಗೆ ವಿಳಂಬವಾಗಬಾರದು. ವಿಳಂಬದಿಂದ ಜನರಿಗೆ ನಿರ್ಮಾಣ ವೆಚ್ಚ ಹೆಚ್ಚಾಗುತ್ತದೆ. ವಿನಾಕಾರಣ ವಿಳಂಬ ಮಾಡಿದರೆ ಕ್ರಮಗೊಳ್ಳಲಾಗುವುದು ಎಂದರು.



ಕೆರೆಗಳ ಅಭಿವೃದ್ಧಿ

ಪ್ರಾಧಿಕಾರಗಳು ಕೆರೆಗಳ ಬ್ಯೂಟಿಫಿಕೇಷನ್ ಬಗ್ಗೆ ಒತ್ತು ನೀಡುತ್ತಿವೆ. ನೀರು ಸಂಗ್ರಹದ ಬಗ್ಗೆ ಗಮನ ಹರಿಸುತ್ತಿಲ್ಲ. ನೀರಿಲ್ಲದಿದ್ದರೆ ಕೆರೆಗಳು ಉಪಯೋಗವಿಲ್ಲ. ಕೊಳಚೆ ನೀರು ಹರಿಯದಂತೆ ಕ್ರಮವಹಿಸಬೇಕು. ಡಿ-ಸಿಲ್ಟಿಂಗ್, ಕುಡಿಯುವ ನೀರಿಗೆ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಗಳ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಕಾಮಗಾರಿ ವಿಳಂಬವಾದರೆ ಕ್ರಮ

ನಗರ ಪ್ರದೇಶಗಳ ಕುಡಿಯುವ ನೀರಿನ ಕಾಮಗಾರಿಗಳು ನಿಗದಿತ ಸಮಯಕ್ಕೆ ಪೂರ್ಣಗೊಳಿಸದಿದ್ದರೆ ಕ್ರಮ ಕೈಗೊಳ್ಳಲಾಗುವುದು. ಬೆಳಗಾವಿ, ಕಲಬುರಗಿ ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಕೆಯುಐಡಿಎಫ್‌ಸಿ ಮೂಲಕ ವಿಶ್ವಬ್ಯಾಂಕ್ ಪ್ರಾಯೋಜಿತ ಕುಡಿಯುವ ನೀರಿನ ಬೃಹತ್ ಕಾಮಗಾರಿಗಳನ್ನು ಎಲ್ ಆ್ಯಂಡ್ ಟಿ ಅನುಷ್ಠಾನಗೊಳಿಸುತ್ತಿದ್ದು, ಕಾಮಗಾರಿಗಳು ನಿಧಾನವಾಗಿರುವ ಹಿನ್ನೆಲೆಯಲ್ಲಿ ಎಲ್ ಆ್ಯಂಡ್ ಟಿ ಅಧಿಕಾರಿಗಳಿಗೆ ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಡಾ.ಯತೀಂದ್ರ ಸಿದ್ದರಾಮಯ್ಯ ತಾಕೀತು ಮಾಡಿದರು.

ವಂಚನೆ ತಡೆಗೆ ಅತ್ಯಾಧುನಿಕ ತಂತ್ರಜ್ಞಾನ: ಸಚಿವ ಖರ್ಗೆ



• **ಬೆಂಗಳೂರು:** ದೇಶಾದ್ಯಂತ ಸೈಬರ್ ಅಪರಾಧಗಳು ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವ ಬೆನ್ನಲ್ಲೇ, ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ವಂಚಕರಿಗೆ ಬಿಸಿ ಮುಟ್ಟಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಬಿಗಿ ಕ್ರಮಗಳನ್ನು ಕೈಗೊಂಡಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಎಂ.ಜಿ.ರಸ್ತೆಯಲ್ಲಿರುವ ಪೊಲೀಸ್ ವೈರ್‌ಲೆಸ್ ಕೇಂದ್ರ ಕಚೇರಿಗೆ ಭೇಟಿ ನೀಡಿದ ಸಚಿವರು, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಬಳಿಕ ಮಾತನಾಡಿ, ವಂಚನೆಗೊಳಗಾದ ಸಾರ್ವಜನಿಕರ ಹಣವನ್ನು ಬ್ಯಾಂಕ್‌ಗಳಲ್ಲೇ ತಡೆಹಿಡಿಯುವಲ್ಲಿ ಕರ್ನಾಟಕ ಪೊಲೀಸರು ಗಮನಾರ್ಹ ಯಶಸ್ಸು ಸಾಧಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ವರದಿಯಾದ 3,203 ಕೋಟಿ ರೂ.ಗಳಲ್ಲಿ 548 ಕೋಟಿ ರೂ. (ಶೇ.17) ಹಣವನ್ನು ಬ್ಲಾಕ್ ಮಾಡಿದ್ದರೆ, ಕರ್ನಾಟಕದಲ್ಲಿ ವರದಿಯಾದ 2,640 ಕೋಟಿ ರೂ.ಗಳಲ್ಲಿ 436 ಕೋಟಿ ರೂ. (ಶೇ.17) ಹಣವನ್ನು ಯಶಸ್ವಿಯಾಗಿ ತಡೆಹಿಡಿಯುವ ಮೂಲಕ ಸಾರ್ವಜನಿಕರ ಹಣವನ್ನು ರಕ್ಷಿಸಿದೆ ಎಂದರು.

ತಂತ್ರಜ್ಞಾನ ಆಧಾರಿತ ಆಧುನಿಕ ಸುಧಾರಣೆಗಳು: ಇಲಾಖೆಯು ಇತ್ತೀಚೆಗೆ ಹಲವು ತಾಂತ್ರಿಕ ಸುಧಾರಣೆಗಳನ್ನು ತಂದಿದೆ. 2025ರಲ್ಲಿ ವೆಬ್-ಆಧಾರಿತ ಕಂಪ್ಲೇಂಟ್ ಬಾಟ್, 2026ರಲ್ಲಿ ವಾಟ್ಸ್‌ಆಪ್ ಕಂಪ್ಲೇಂಟ್ ಬಾಟ್ ಪರಿಚಯಿಸಲಾಗಿದೆ. ದೂರುಗಳ ಆದ್ಯತೆ ಮೇರೆಗೆ ಕರೆಗಳನ್ನು ವಿಂಗಡಿಸಲು, ಸ್ವಯಂಚಾಲಿತವಾಗಿ ನಿರ್ವಹಿಸಲು ಐವಿಆರ್‌ಎಸ್ ತಂತ್ರಜ್ಞಾನ ಬಳಸಲಾಗುತ್ತಿದೆ.

ಸ್ವಯಂಚಾಲಿತ ಬಾಟ್ ಲಿಂಕ್

ಸಾರ್ವಜನಿಕರು ಕರೆ ಮಾಡಿದಾಗ ಕಟ್ ಆದ ಕರೆಗಳಿಗೆ ದೂರುಗಳನ್ನು ಅಪ್ಲೋಡ್ ಮಾಡಲು ಸ್ವಯಂಚಾಲಿತ ಬಾಟ್ ಲಿಂಕ್ ಕಳುಹಿಸಲಾಗುತ್ತಿದೆ. ಐ4ಸಿ ಪ್ಲಾಟ್‌ಫಾರ್ಮ್‌ನಲ್ಲಿ ಬ್ಯಾಂಕ್ ವಹಿವಾಟುಗಳನ್ನು ವೇಗವಾಗಿ ನಿರ್ಬಂಧಿಸಲು 51 ಪಿಎಸ್‌ಐ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳನ್ನು ನಿಯೋಜಿಸಲಾಗಿದೆ.

55 ಕೈಗಾರಿಕಾ ಯೋಜನೆಗೆ ಅಸ್ತು



• **ಬೆಂಗಳೂರು:** ರಾಜ್ಯದಲ್ಲಿ ಒಟ್ಟು 7,506 ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 28 ಸಾವಿರಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿರುವ 55 ಕೈಗಾರಿಕಾ ಯೋಜನೆಗಳಿಗೆ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಶುಕ್ರವಾರ ನಡೆದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಮಾತನಾಡಿ, ಈ ಯೋಜನೆಗಳಲ್ಲಿ 41 ಯೋಜನೆಗಳು ಬೆಂ.ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಇತರ ಭಾಗಗಳಲ್ಲಿ ಸ್ಥಾಪನೆಯಾಗಲಿದ್ದು, ಕೈಗಾರಿಕಾ ವಿಕೇಂದ್ರೀಕರಣಕ್ಕೆ ಉತ್ತೇಜನ ನೀಡಲಿವೆ ಎಂದು ಹೇಳಿದರು.

ತೈವಾನ್, ದಕ್ಷಿಣ ಕೊರಿಯಾ, ಜರ್ಮನಿ ಹಾಗೂ ಜಪಾನ್ ಮೂಲದ ನಾಲ್ಕು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಯೋಜನೆಗಳ ಮೂಲಕ 314.46 ಕೋಟಿ ರೂ. ಹೂಡಿಕೆ ಆಗಲಿದ್ದು, 503 ಮಂದಿಗೆ ಉದ್ಯೋಗ ದೊರೆಯಲಿದೆ. ಟಿಮೋಸ್ ಆಟೋಮೋಟಿವ್, ವೈ.ಜೆ. ಲಿಂಕ್, ರೇವೂ ಮತ್ತು ಶಿಂಕೋ ಕಂಪನಿಗಳು ಈ ಹೂಡಿಕೆಗಳನ್ನು ಮಾಡಲಿವೆ ಎಂದು ತಿಳಿಸಿದರು.

ಒಟ್ಟು 35 ಯೋಜನೆಗಳು 50 ಕೋಟಿ ರೂ.ಗಿಂತ ಅಧಿಕ ಬಂಡವಾಳ ಹೂಡಿಕೆ ಮಾಡಲಿದ್ದು, 5 ಕಂಪನಿಗಳು ಹೆಚ್ಚುವರಿ 223.61 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿವೆ. ಏರೋಸ್ಪೇಸ್, ಇಎಸ್‌ಡಿಎಂ, ಜನರಲ್ ಇಂಜಿನಿಯರಿಂಗ್ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳೇ ಹೆಚ್ಚಾಗಿವೆ ಎಂದರು. ಬೆಂ.ನಗರದಲ್ಲಿ ಕೇನ್ಸ್ ಎಲೆಕ್ಟ್ರಾನಿಕ್ಸ್ 495 ಕೋಟಿ ರೂ., ದೊಡ್ಡಬಳ್ಳಾಪುರದಲ್ಲಿ ಎಸ್‌ಎಫ್‌ಒ ಟೆಕ್ನಾಲಜೀಸ್ 490 ಕೋಟಿ ರೂ., ಕೋಲಾರದಲ್ಲಿ ಆರ್‌ಬಿಟ್ ಇಂಡಸ್ಟ್ರಿಯಲ್ ಪಾರ್ಕ್ 454 ಕೋಟಿ ರೂ, ವಿಜಯಪುರದಲ್ಲಿ ಟೆರ್ರಾ ಸರ್ಕ್ಯೂಟ್ಸ್ 441 ಕೋಟಿ ರೂ ಹಾಗೂ ಬೆಂ.ಗ್ರಾಮಾಂತರ ಜಿಲ್ಲೆಯಲ್ಲಿ ಬೆಲಾಟ್ರಿಕ್ಸ್ ಏರೋಸ್ಪೇಸ್ 404 ಕೋಟಿ ರೂ. ಹೂಡಿಕೆ ಮಾಡಲಿವೆ ಎಂದು ಸಚಿವರು ತಿಳಿಸಿದರು.

1.53 ಲಕ್ಷ ಪಿಂಚಣಿ ಸ್ಥಗಿತ: ಜಿಲ್ಲಾಧಿಕಾರಿ

• **ಬೆಳಗಾವಿ:** ರಾಜ್ಯ ಸರ್ಕಾರದ ವಿವಿಧ ಪಿಂಚಣಿ ಯೋಜನೆಗಳನ್ನು ಅನರ್ಹರು ದುರುಪಯೋಗಪಡಿಸಿಕೊಳ್ಳುತ್ತಿದ್ದ ದೊಡ್ಡ ಜಾಲವೊಂದು ಬೆಳಕಿಗೆ ಬಂದಿದ್ದು, ರಾಜ್ಯದಲ್ಲಿಯೇ ಅತಿ ಹೆಚ್ಚು ಅನರ್ಹ ಪಿಂಚಣಿದಾರರು ಬೆಳಗಾವಿ ಜಿಲ್ಲೆಯಲ್ಲಿ ಪತ್ತೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಬರೋಬ್ಬರಿ 1.53 ಲಕ್ಷ ಪಿಂಚಣಿಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಿದೆ ಎಂದು ಡಿಸಿ ಮಹಮ್ಮದ್ ರೋಷನ್ ಹೇಳಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಜಿಲ್ಲ್ಯಾದ್ಯಂತ ಜಂಟಿ ಸರ್ವೆ ನಡೆಸಲಾಗಿದ್ದು, ಒಟ್ಟು 1.82 ಲಕ್ಷ ಅನರ್ಹ ಪಿಂಚಣಿದಾರರ ಮಾಹಿತಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಪರಿಶೀಲನೆ ವೇಳೆ 65 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೂ ವೃದ್ಧಾಪ್ಯ ಪಿಂಚಣಿ ಪಡೆಯುತ್ತಿದ್ದವರು, ವಾರ್ಷಿಕ 35 ಸಾವಿರ ರೂಪಾಯಿಗಳಿಂತ ಹೆಚ್ಚು ಆದಾಯ ಹೊಂದಿದ್ದವರು ಹಾಗೂ ಬೆಳಗಾವಿ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದರೂ ಪಿಂಚಣಿ ಪಡೆಯುತ್ತಿದ್ದವರನ್ನು ಗುರುತಿಸಲಾಗಿದೆ. ಈ ಪೈಕಿ ನಿಯಮ ಉಲ್ಲಂಘಿಸಿ ಸೌಲಭ್ಯ ಪಡೆಯುತ್ತಿದ್ದ 1.53 ಲಕ್ಷ ಜನರ ಪಿಂಚಣಿಯನ್ನು ಅಧಿಕೃತವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದರು.

ಮುಂಬೈನಲ್ಲಿ ಇಂದು ಸಿಎಂ ಶಿವಕುಮಾರ ಸಭೆ



• **ಬೆಳಗಾವಿ:** ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡುವ ಕುರಿತು ಜೂ.20ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗೆ ಮುಂಬೈನಲ್ಲಿ ಮಹತ್ವದ ಸಭೆ ನಡೆಸಲಿದ್ದು, ಈ ಬಾರಿ ನೀರು ಬಿಡುಗಡೆ ಆಗುವ ವಿಶ್ವಾಸವಿದೆ ಎಂದು ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಬೇಸಿಗೆ ಅವಧಿಯಲ್ಲಿ ಮಹಾರಾಷ್ಟ್ರದಿಂದ ನಿಯಮಿತವಾಗಿ 2 ಟಿಎಂಸಿ ನೀರು ಬಿಡುಗಡೆ ಮಾಡಲಾಗುತ್ತಿತ್ತು. ಆದರೆ, ಕಳೆದ ಐದಾರು ವರ್ಷಗಳಿಂದ ನೀರು ಹರಿಸಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನಂತೆ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರ ಮನವಿ ಸಲ್ಲಿಸಲಿದ್ದು, ಮುಂದಿನ ಹತ್ತು ದಿನಗಳಲ್ಲಿ ನೀರು ದೊರೆಯುವ ನಿರೀಕ್ಷೆಯಿದೆ ಎಂದರು.

ಹಿಪ್ಪರಗಿ ಬ್ಯಾರೇಜ್‌ನ ಗೇಟ್ ಮುರಿದ ಪರಿಣಾಮ ಸುಮಾರು ಒಂದೂವರೆ ಟಿಎಂಸಿ ನೀರು ನಷ್ಟವಾಗಿದೆ. ಪ್ರಸ್ತುತ ಅಲ್ಲಿ ಕೇವಲ 0.08 ಟಿಎಂಸಿ ನೀರು ಮಾತ್ರ ಸಂಗ್ರಹವಿದೆ. ಈ ಕುರಿತು ಸಿಎಂ ಗಮನಕ್ಕೆ ತರಲಾಗಿದ್ದು, ಮಹಾರಾಷ್ಟ್ರ ಸರ್ಕಾರದೊಂದಿಗೆ ನೇರವಾಗಿ ಚರ್ಚಿಸಿ ನೀರು ಬಿಡುಗಡೆಗೆ ಮನವರಿಕೆ ಮಾಡುವ ಪ್ರಯತ್ನ ನಡೆಯಲಿದೆ ಎಂದು ತಿಳಿಸಿದರು.

ಸಚಿವ ಸಂಪುಟ ವಿಸ್ತರಣೆ ವಿಚಾರ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ

ಸಿದ್ದು ಜತೆ ವೈಮನಸ್ಸಿಲ್ಲ: ಮಹದೇವಪ್ಪ



• **ಮೈಸೂರು:** ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ಯಾವ ವೈಮನಸ್ಸು ಇಲ್ಲ. ಅವರು ಸದಾ ನನ್ನೊಂದಿಗೆ ಇರುತ್ತಾರೆ, ಮುಂದೆಯೂ ಇರುತ್ತಾರೆ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಶುಕ್ರವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ನಮ್ಮ ಪರವಾಗಿಲ್ಲ ಎಂದು ಹೇಳಬಾರದು. ನನ್ನ ಪರವಾಗಿ ಬಲವಾಗಿ ವಾದ ಮಾಡಿಲ್ಲ ಎನ್ನುವುದು ಸರಿಯಲ್ಲ, ಡಾ.ಯತೀಂದ್ರ ಕೂಡ ನಮ್ಮ ಮಗನಿದ್ದಂತೆ. ನಾನು-ಸಿದ್ದರಾಮಯ್ಯ 40 ವರ್ಷಗಳ ಕಾಲ ಜತೆಯಾಗಿದ್ದಂತೆ ಡಾ.ಯತೀಂದ್ರ, ಹಾಗೂ ಸುನೀಲ್ ಬೋಸ್ ಜತೆಯಾಗಿದ್ದಾರೆ. ನನ್ನ ಸಿದ್ಧಾಂತ, ಹೋರಾಟಗಳನ್ನು ಮುಂದು ವರಿಸಿಕೊಂಡು ಹೋಗುವ ವಿಶ್ವಾಸ ಇದೆ ಎಂದರು.

ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಮಾಡಲಿದೆ. ಸಂಪುಟಕ್ಕೆ ಸೇರುವ ಬಗ್ಗೆ ಯಾರ ಬಳಿಗೂ ಹೋಗಲ್ಲ. ಮಂತ್ರಿಗಿರಿ, ಅಧಿಕಾರಕ್ಕಾಗಿ ಎಂದಿಗೂ ಯಾರನ್ನು ಕೇಳಿಕೊಂಡಿಲ್ಲ. ಅತ್ತು-ಕರೆದು ಅಧಿಕಾರ ಪಡೆದಿಲ್ಲ.

ಸಿಎಂ ಡಿ.ಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಅವಕಾಶ ಸಿಗದಿದ್ದಕ್ಕೆ ನಿರಾಶೆಯಾಗುವ ಪ್ರಶ್ನೆಯೇ ಇಲ್ಲ. ಪೂರ್ಣ ಪ್ರಮಾಣದಲ್ಲಿ ಸಚಿವ ಸಂಪುಟ ವಿಸ್ತರಣೆ ಯಾಗುವಾಗ ಸಿಗುವ ನಿರೀಕ್ಷೆ ಇದೆ. ಸಿಗುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ: ಕೇಂದ್ರ ಸಚಿವ ಹೇಳಿಕೆ

ಅಡ್ಡ ಮತದಾನಕ್ಕೆ ನಾನು ವಿಚಲಿತನಾಗಿಲ್ಲ: ಕುಮಾರಸ್ವಾಮಿ



• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಯುತ್ತದೆ ಎಂಬುದು ನನಗೆ ಮೊದಲೇ ತಿಳಿದಿತ್ತು. ಆದರೆ, ಈ ನಾನು ವಿಚಲಿತನಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಅತಿಯಾದ ನಂಬಿಕೆ, ವಿಶ್ವಾಸವೇ ಈ ಸೋಲಿನ ಕಾರಣ. ಇಂತಹ ವಂಚನೆ, ಮೋಸಗಳು ನನಗೆ ಮತ್ತು ನಮ್ಮ ಪಕ್ಷಕ್ಕೆ ಹೊಸವಲ್ಲ. ಎಷ್ಟೋ ಸಲ ಎದುರಿಸಿ ಅದರಿಂದ ಆಚೆ ಬಂದಿದ್ದೇವೆ. ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ ನೀಡುತ್ತೇವೆ. ಹೊಸ ನಾಯಕತ್ವವನ್ನು ಬೆಳೆಸುವುದು ನಮಗೆ ಗೊತ್ತಿದೆ. ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡುವ ನಿರ್ಧಾರ ಮಾಡಿರುವುದಾಗಿ ಕುಮಾರಸ್ವಾಮಿ ತಿಳಿಸಿದರು.

ಶಾಸಕ ಜಿ.ಟಿ. ದೇವೇಗೌಡ ಅವರ ಹೆಸರು ಪ್ರಸ್ತಾಪಿಸುತ್ತಿದ್ದಂತೆಯೇ ತೀವ್ರ ಅಸಹನೆ ವ್ಯಕ್ತಪಡಿಸಿದ ಕೇಂದ್ರ ಸಚಿವರು ನನ್ನ ಮುಂದೆ ಅವರ ಹೆಸರು ಎತ್ತಬೇಡಿ ಎಂದು ನೇರವಾಗಿಯೇ ಹೇಳಿದರು. ಕಳೆದ ಒಂದೂವರೆ ವರ್ಷದಿಂದಲೂ ಅವರ ಬಗ್ಗೆ ನಾನು ಚಕಾರ ಎತ್ತಿಲ್ಲ. ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೂಡ ಅವರ ಹೆಸರನ್ನು ನಾನು ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದ ಹರಿಹಾಯ್ದರು.

ಯಾರು ಎಷ್ಟೇ ಒತ್ತಡ ಹಾಕಿದರೂ ನಾನು ನನ್ನ ನಿರ್ಧಾರವನ್ನು ಕಠಿಣವಾಗಿ ಕೈಗೊಳ್ಳುತ್ತೇನೆ. ಇಲ್ಲಿ ನನ್ನ ವೈಯಕ್ತಿಕ ವಿಚಾರ ಮುಖ್ಯವಲ್ಲ, ಪಕ್ಷವನ್ನು ಉಳಿಸಲು ಕೆಲ ಕಠಿಣ ನಿರ್ಧಾರಗಳನ್ನು ಮಾಡಲೇಬೇಕಿದೆ ಎಂದು ತಿಳಿಸಿದರು.

ಕಾರ್ಯಕರ್ತರು ಹಗಲಿರುಳು ಕಷ್ಟಪಟ್ಟು ಇವರನ್ನು ಗೆಲ್ಲಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಇವರು ನೋಡಿದರೆ ತಮ್ಮ ಸ್ವಾರ್ಥ ನೋಡಿಕೊಂಡಿದ್ದಾರೆ. ದೇವೇಗೌಡರು ಕಳೆದ ಅರವತ್ತು ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಕಷ್ಟಪಟ್ಟು ಈ ಪಕ್ಷವನ್ನು ಕಟ್ಟಿದ್ದಾರೆ. ಕೆಲವನ್ನು ಅತಿಯಾಗಿ ನಂಬಿ ಈ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಿದ್ದು ಅತ್ಯಲ್ಪ ಅವಧಿ. ಅವರ ಬಳುವಳಿ ನನಗೂ ಬಂದಿದೆ ಎಂದು ಸಚಿವ ಕುಮಾರಸ್ವಾಮಿ ಹೇಳಿದರು.

ಜಿಟಿಡಿ ಎರಡೂ ಕಾಲು ಹೊರಗಿಟ್ಟಿದ್ದಾರೆ: ಅಡ್ಡ ಮತದಾನ ಮಾಡಿರುವ ಈ ಜಿಲ್ಲೆಯ ವ್ಯಕ್ತಿಯದು ಮುಗಿದು ಹೋದ ಕಥೆ. ಅವರು ಒಂದು ಕಾಲಲ್ಲ, ಎರಡು ಕಾಲುಗಳನ್ನು ಹೊರಗಡೆ ಇಟ್ಟಿದ್ದಾರೆ. ಈ ಬಾರಿ ಅಸೆಂಬ್ಲಿ ಟಿಕೆಟ್ ಗಳನ್ನು ಅಂತಿಮ ನಿರ್ಣಯ ಮಾಡುವುದು ನಾನೇ. ಇದರ ಬಗ್ಗೆ ಯಾವ ಗೊಂದಲವೂ ಬೇಡ. ದೇವೇಗೌಡರಿಗೆ ಅವರ ಮೇಲೆ ಪ್ರೀತಿ ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನೇ ಆ ವ್ಯಕ್ತಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮುಂದೆ ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ ಎಂದರು.

ಕೇಂದ್ರದಲ್ಲಿ ಇರುವುದು ತಾತ್ಕಾಲಿಕ: ರಾಜ್ಯ ರಾಜಕಾರಣಕ್ಕೆ ಯಾವಾಗ ವಾಪಸ್ಸು ಬರುತ್ತೀರಿ ಎಂಬ ಪ್ರಶ್ನೆಗೆ ಮಾರ್ಮಿಕವಾಗಿ ಉತ್ತರಿಸಿದ ಕುಮಾರಸ್ವಾಮಿ ಅವರು; ಕೇಂದ್ರದಲ್ಲಿ ಇರುವುದು ಟೆಂಪರರಿ, ನನಗೆ ರಾಜ್ಯವೇ ಪರ್ಮನೆಂಟ್ ಎಂದರು. ರಾಜ್ಯ ರಾಜಕಾರಣಕ್ಕೆ ಹೊಸದಾಗಿ ನಾನು ಬರಬೇಕಾಗಿಲ್ಲ. ನಮ್ಮ ಪಕ್ಷಕ್ಕೆ ನಾನೇ ಅಧ್ಯಕ್ಷ ಅಲ್ಲವೇ ಎಂದು ಕುಮಾರಸ್ವಾಮಿ ಅವರು ಹೇಳಿದರು.

ನಾನು ರೆಡ್ ಜೋನ್ ತೆಗೆಯದಿದ್ದಕ್ಕೆ ಬಿಡದಿಯಲ್ಲಿ ಇನ್ನೂ ಭೂಮಿ ಉಳಿದಿದೆ: ಬಿಡದಿ ಟೌನ್ ಶಿಪ್ ಕುಮಾರಸ್ವಾಮಿ ಕೂಸು ಅಂತಾರೆ. ನೈಸ್ ರಸ್ತೆ ದೇವೇಗೌಡರ ಕೂಸು ಎನ್ನುತ್ತಿದ್ದರು. ಬಿಡದಿಯಲ್ಲಿ ನಾನು ರೆಡ್ ಜೋನ್ ತೆಗೆದು ಹಾಕಲಿಲ್ಲ ಅಂತಾರೆ. ಒಂದು ವೇಳೆ ನಾನು ರೆಡ್ ಜೋನ್ ತೆಗೆದಿದ್ದರೆ ಇವತ್ತು ಒಂದು ಚೂರು ಭೂಮಿಯು ರೈತರ ಕೈಯಲ್ಲಿ ಇರುತ್ತಿರಲಿಲ್ಲ. ನಾನೇನಾದರೂ ರಿಯಲ್ ಎಸ್ಟೇಟ್ ಮಾಫಿಯಾ ಪರ ಇದ್ದಿದ್ದರೆ ಇಷ್ಟೊತ್ತಿಗೆ ಭೂಮಿ ರೈತರಿಂದ ಹೋಗಿಬಿಡುತ್ತಿತ್ತು ಎಂದು ಸಚಿವ ಕುಮಾರಸ್ವಾಮಿ ಅವರು ಹೇಳಿದರು.

ಅಂತಿಮ ನಿರ್ಧಾರ ನನ್ನದೇ

ನಮ್ಮ ಪಕ್ಷದಲ್ಲಿ ಕೆಲವರು ಆ ವ್ಯಕ್ತಿಯನ್ನು ಸರಿಪಡಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದರು. ಅದು ಅವರ ವೈಯಕ್ತಿಕ ವಿಚಾರ. ಆದರೆ, ಪಕ್ಷಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರ ಕೈಗೊಳ್ಳುವುದು ನಾನೇ. ಈ ಬಗ್ಗೆ ನಾನೇ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ. ಈ ವ್ಯಕ್ತಿ ಏನೆಲ್ಲಾ ಮಾಡಿದ್ದಾರೆ ಎಂದು ನನಗೆ ಗೊತ್ತು. ಮೂರು ಬಾರಿ ನನಗೆ ಇವರಿಂದ ಕಹಿ ಅನುಭವ ಆಗಿದೆ.

ಅಡ್ಡ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚನೆ: ಛಲವಾದಿ



• **ಬೆಂಗಳೂರು:** ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಇಂಥವರು ಎಂದು ಮಾಧ್ಯಮಗಳಲ್ಲಿ ಕೆಲವರ ಹೆಸರು ಹರಿಬಿಡಲಾಗುತ್ತಿದೆ. ಇದನ್ನು ದಯವಿಟ್ಟು ಯಾವುದೇ ಮಾಧ್ಯಮಗಳು ಮಾಡಬಾರದು ಎಂದು ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಅಡ್ಡ ಮತದಾನ ಮಾಡಿದವರ ಪತ್ತೆಗಾಗಿ ಸಮಿತಿ ರಚಿಸಲಾಗಿದೆ. ಈ ಸಮಿತಿ ವರದಿ ನೀಡಲಿದೆ. ಆಗ ಅಡ್ಡ ಮತದಾನ ಮಾಡಿದವರು ಪತ್ತೆಯಾದ ನಂತರ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ನಮ್ಮ ಪಕ್ಷದ ವತಿಯಿಂದ ಲಿಂಗರಾಜ ಪಾಟೀಲ್ ಅವರಿಗೆ 30 ಮತಗಳು ಹಾಗೂ ರಘು ಕೌಟಿಲ್ಯ ಅವರಿಗೆ 30 ಮತಗಳನ್ನು ನೀಡಿದ್ದೆವು. ಮತ್ತೆ ಉಳಿದ ಮೂರು ಮತಗಳನ್ನು ಎನ್‌ಡಿಎ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಬಸನಗೌಡ ಪಾಟೀಲ್ ಯತ್ನಾಳ್ ಅವರು ಬಿಜೆಪಿಗೆ ಮತ ಹಾಕುವುದಾಗಿ ಹೇಳಿದರು. ನಾಲ್ವರನ್ನು ಆರ್. ಅಶೋಕ ತಮ್ಮೊಂದಿಗೆ ಕರೆದೊಯ್ದು ಮತ ಹಾಕಿಸಿದರು. ಹಂಚಿಕೆಯಾದ 30 ಮತಗಳಲ್ಲಿ ರಘು ಕೌಟಿಲ್ಯ ಅವರಿಗೆ ಬಂದ ಮತದಲ್ಲಿ ಒಂದು ಅಸಿಂಧುವಾಗಿದೆ. ಲಿಂಗರಾಜ ಪಾಟೀಲ್ ಅವರಿಗೆ ಮೂರು ಮತಗಳು ಬಂದಿಲ್ಲ ಎಂದರು. ಅಡ್ಡ ಮತದಾನ ಮಾಡಿದವರು ಎಂದು ತಮ್ಮ ಹೆಸರನ್ನು ಮಾಧ್ಯಮಗಳಲ್ಲಿ ಬಿತ್ತರಿಸಲಾಗುತ್ತಿದ್ದು, ಮುಜುಗರಕ್ಕೆ ಒಳಗಾಗಿದ್ದೇನೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದ್ದಾರೆ.

ಸಂಪಾದಕೀಯ

ಕೋವಿಡ್‌ನಲ್ಲಿ ಅಮೆರಿಕದ ಪಾತ್ರ

ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ನಿರ್ದೇಶಕಿ ತುಳಸಿ ಗಬ್ಬರ್ಡ್ ತಮ್ಮ ಹುದ್ದೆ ತ್ಯಜಿಸುವ ಮುನ್ನ ದೊಡ್ಡ ಬಾಂಬೊಂದನ್ನು ಸಿಡಿಸಿದ್ದಾರೆ. ನಿರ್ದೇಶಕ ಸ್ಥಾನವನ್ನು ತೆರವುಗೊಳಿಸುವ ಮುನ್ನ 'ಈವರೆಗೆ ಯಾರೂ ಕಂಡಿರದ' ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿರುವ ಅವರು, 2019ರಲ್ಲಿ ಇಡೀ ಜಗತ್ತನ್ನು ಕಾಡಿದ ಕೊರೋನಾವೈರಸ್ ಸಂಶೋಧನೆಯಲ್ಲಿ ಅಮೆರಿಕದ ಪಾಲೂ ಇದೆ



ಹಾಗೂ ವೈರಸ್‌ನ ಉತ್ಪತ್ತಿಯನ್ನು ಮುಚ್ಚಿ ಡುವಲ್ಲೂ ಅಮೆರಿಕದ ಗುಪ್ತಚರ ಸಂಸ್ಥೆಯೂ ಸೇರಿದಂತೆ ಹಲವರು ಕಾರ್ಯವೆಸಗಿದ್ದಾರೆ ಎಂಬಂತಹ ಸ್ಫೋಟಕ ಮಾಹಿತಿ ಬಿಚ್ಚಿಟ್ಟಿದ್ದಾರೆ. ತುಳಸಿ ಗಬ್ಬರ್ಡ್ ಈಗ ಬಹಿರಂಗಗೊಳಿಸಿರುವ ಮಾಹಿತಿಯ ಪ್ರಕಾರ ಅಮೆರಿಕದ ಅಲರ್ಜಿ ಮತ್ತು ಸೋಂಕು ರೋಗಗಳ ರಾಷ್ಟ್ರೀಯ ಸಂಸ್ಥೆಯ ಮುಖ್ಯಸ್ಥರಾಗಿರುವ ಡಾ. ಆಂಟನಿ ಫೌಸಿಯವರು ವೈರಸ್‌ಗಳ ಕುರಿತಂತೆ ಸಂಶೋಧನೆ ನಡೆಸಲು ಚೀನಾದ ವುಹಾನ್‌ನ ಪ್ರಯೋಗಾಲಯಕ್ಕೆ ದೊಡ್ಡ ಮಟ್ಟದ ಆರ್ಥಿಕ ನೆರವು ನೀಡಿದ್ದರು. ಇದೇ ಆಂಟನಿ ಫೌಸಿ ಮಾಜಿ ಅಧ್ಯಕ್ಷ ಜೋ ಬೈಡೆನ್ ಅವರ ವೈದ್ಯಕೀಯ ಸಲಹೆಗಾರರೂ ಆಗಿದ್ದರು ಎಂಬುದು ಗಮನಾರ್ಹ. ವುಹಾನ್‌ನ ಪ್ರಯೋಗಾಲಯದಿಂದಲೇ ಕೊರೋನಾ ವೈರಸ್‌ಗಳು ಸೋರಿಹೋಗಿ ಬಳಿಕ ಜಗತ್ತಿನಾದ್ಯಂತ ಹರಡುವಂತಾಗಿತ್ತು ಎಂಬ ಅನುಮಾನಗಳು ಜಗತ್ತನ್ನು ಕಾಡುತ್ತಿದ್ದು ಅದನ್ನೀಗ ಗಬ್ಬರ್ಡ್ ಬಿಡುಗಡೆ ಮಾಡಿರುವ ಮಾಹಿತಿಗಳು ದೃಢಪಡಿಸಿವೆ.

ಆದರೆ ಕೊರೋನಾ ವೈರಸ್ ಪ್ರಯೋಗಾಲಯದಿಂದ ಸೋರಿಕೆ ಆದುದಲ್ಲ, ಬದಲಾಗಿ ನೈಸರ್ಗಿಕವಾಗಿ ಉತ್ಪತ್ತಿಯಾದುದು ಎಂಬ ಸುದ್ದಿಯನ್ನು ಹರಡುವಲ್ಲೂ ಆಂಟನಿ ಫೌಸಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಈ ಕಾರ್ಯಕ್ಕೆ ಸಿಐಎ ಕೂಡಾ ಸಾಥ್ ನೀಡಿತ್ತು. ಅಮೆರಿಕದ ಗುಪ್ತಚರ ಸಂಸ್ಥೆಯಲ್ಲಿನ ಕೆಲವರಿಗೆ ಈ ಮಾಹಿತಿ ತಿಳಿದಿತ್ತಾದರೂ ಅವರು ಅದನ್ನು ಬಯಲುಗೊಳಿಸದಂತೆ ಅವರ ಮೇಲೆ ಒತ್ತಡ ಹಾಗೂ ಬೆದರಿಕೆ ಹಾಕಲಾಗಿತ್ತು ಎಂಬುದೂ ಈಗ ಬಯಲಾಗಿದೆ.

ಮಾರಣಾಂತಿಕ ವೈರಸ್‌ಗಳನ್ನು ಪ್ರಯೋಗಾಲಯದಲ್ಲಿ ಅಭಿವೃದ್ಧಿ ಪಡಿಸುವಂತಹ ಸಂಶೋಧನೆಗಳು ನಡೆಯುತ್ತಿವೆ ಎಂಬುದು ಇದೀಗ ದೃಢಪಟ್ಟಿದೆ. ಈ ಕಾರ್ಯದಲ್ಲಿ ಚೀನಾದೊಂದಿಗೆ ಅಮೆರಿಕದ ಪಾತ್ರವೂ ಇರುವುದು ಆಶ್ಚರ್ಯಾಘಾತ ಉಂಟು ಮಾಡಿದೆ. ವೈರಸ್ ಜಗತ್ತಿನಾದ್ಯಂತ ಹರಡಿ ಸಾಕಷ್ಟು ಅಧ್ವಾನಗಳನ್ನು ಸೃಷ್ಟಿಸಿದ ಬಳಿಕವೂ ಅಮೆರಿಕನ್ ಆಡಳಿತವು ಸತ್ಯಾಂಶವನ್ನು ಮುಚ್ಚಿಟ್ಟದ್ದು ಆಘಾತಕಾರಿ. ಇದೀಗ ಕೋವಿಡ್‌ನಿಂದ ಉಂಟಾದ ಪ್ರಾಣಹಾನಿ ಹಾಗೂ ಇನ್ನಿತರ ವಿನಾಶಗಳಿಗೆ ಚೀನಾದಷ್ಟೇ ಅಮೆರಿಕವೂ ಹೊಣೆಗಾರ ಎಂಬಂತಾಯಿತು. ಹಾಗಾಗಿ ಸಂಬಂಧಿತ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ.

ವಾಸಕ್ಕಿಟ್ಟುಕೊಳ್ಳಬಾರದವರು

ಅಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಾಂ ನೃಶಂಸಮ್।
ಆದೇಶಕಾಲಜ್ಞಮನಿಷ್ಟಮೇವಮ್ ಏತಾನ್ ಗೃಹೇ ನ ಪ್ರತಿವಾಸಯೇತ ॥

-ಹಿತೋಪದೇಶ

ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು – ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ-ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ



ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಶೆಗೊಳಿಸಿ ಗೊತ್ತಿಲ್ಲ. ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು. ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ.

ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೆನಿಸಿದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಕೃತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ. ಇಂಥವನಿಂದ ಕೇಡು ತಪ್ಪಿದ್ದಲ್ಲ. ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವಿರಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ. ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿಬರಬಹುದು. ಆದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ. ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ-ಕಾಲಗಳ ಅರಿವಿಲ್ಲದವನಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾಯಿತು.

ಕೊನೆಯದಾಗಿ ನಮಗೆ ಇಷ್ಟವಲ್ಲದವನಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

ಸಂಸ್ಕಾರ ಬಯಸುವ ವಿಶುದ್ಧ

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರದ ಸಮತೋಲನವು ಸಂಸ್ಕಾರವಿದ್ದರೆ ಮಾತ್ರ ಸಾಧ್ಯ. ಕಾರಣ ಮಾತೇ ಇವರ ಮುಖ್ಯ ಆಯುಧ. ಮಾತೇ ಇವರ ಬಂಡವಾಳ. ಮಾತೇ ಇವರ ಯಶಸ್ಸಿನ ಮಾರ್ಗ. ಮಾತೇ ಇವರ ಗುರಿ ತಲುಪಿಸುವ ಸ್ನೇಹಿತ. ಮಾತೇ ಇವರ ಮಾತೆ, ಪಿತಾ ಮತ್ತು ಗುರು. ಹೀಗಿರುವಾಗ ಮಾತಿನ ಮೇಲೆ ಹಿಡಿತ ಸಾಧಿಸುವುದು ಮತ್ತು ಅದನ್ನು ಸಿಹಿಯಾಗಿಸುವುದು ಸುಲಭದ ಮಾತಲ್ಲ. ಈ ಹಿಂದೆ ಹೇಳಿದ್ದೆ; ಮಾತು ಪದಗಳನ್ನು, ಅಕ್ಷರವನ್ನು, ಧ್ವನಿಯನ್ನು, ಹಾವಭಾವಗಳನ್ನು, ವರ್ತನೆಯನ್ನು, ವ್ಯಕ್ತಿತ್ವವನ್ನು ಅವಲಂಭಿಸಿದೆ. ಅಂದರೆ ಪ್ರತಿಯೊಂದಕ್ಕೂ ಅಪಾರವಾದ ಶಕ್ತಿಯಿದೆ. ಅದನ್ನು ಸರಿಯಾಗಿ ನಿರ್ವಹಿಸಲು ನಿಮಗೆ ಸಂಸ್ಕಾರ ಬೇಕು. ಸೃಜನಶೀಲತೆ ಬೇಕು. ವಿನಯ, ವಿಧೇಯತೆ ಬೇಕು. ಬುದ್ಧಿವಂತಿಕೆ, ಓದಿನ ಜ್ಞಾನ, ಅನುಭವದ ಹಿನ್ನೆಲೆ ಮತ್ತು ಸೂಕ್ತವಾದ ಸಂವಹನ ಬೇಕು. ಆಗ ನೀವು ಎಲ್ಲರನ್ನೂ ಸಂಮೋಹನ ಗೊಳಿಸಲು ಸಾಧ್ಯ.

ನಿಮ್ಮ ಈ ಎಲ್ಲಾ ಶಕ್ತಿಯನ್ನು ಬಳಸಿ ಇನ್ನೊಬ್ಬರ ನಡವಳಿಕೆ, ಆಲೋಚನೆ, ಚಿಂತನೆಗಳನ್ನು ಬದಲಾಯಿಸುವುದೇ ಸಂಮೋಹನ. ನಿಮಗೆ ಗೊತ್ತಿರುವಂತೆ ನೀವು ಉಪನ್ಯಾಸ ಕೊಡುವಾಗ ನಿಮ್ಮ ಧ್ವನಿ ಕೆಟ್ಟಿತು ಎಂದಾದರೆ; ನಿಮ್ಮ ಕತೆ ಪುಸ್...ಮುಗಿಯಿತು. ಮಾತು ತಡವರಿಸಿತು ಎಂದಾದರೆ ಅಲ್ಲಿಗೆ ನೀವು ಪೂರ್ಣ ಬಿದ್ದಿರಿ. ಧ್ವನಿಯ ಲಯ ಮತ್ತು ಸರಿಯಾದ ಅಕ್ಷರಗಳ ಜೋಡಣೆ ಇವು ಎಂತಹವರನ್ನೂ ಸಹಾ ಮಂತ್ರಮುಗ್ಧರನ್ನಾಗಿ ಮಾಡಿಸುತ್ತದೆ. ಸಂಮೋಹನಕಾರನಿಗೆ ಅವನ ಮಾತು ಮತ್ತು ಧ್ವನಿ ಇವೇ ಬಂಡವಾಳ.

ಭಾರತೀಯ ಯೋಗ ಶಾಸ್ತ್ರದ ಪ್ರಕಾರ ವಿಶುದ್ಧ ಚಕ್ರದ ಸಿದ್ಧಿಯನ್ನು ಪಡೆದರೆ ಅವರಿಗೆ ವಾಕ್‌ಸಿದ್ಧಿ ಲಭಿಸುತ್ತದೆ. ವಾಕ್ ಸಿದ್ಧಿ ಎಂದರೆ ಮಾತಿನ ಮೇಲೆ ಹಿಡಿತವನ್ನು ಸಾಧಿಸುವುದಷ್ಟೇ ಅಲ್ಲ, ಸತ್ಯ, ಪ್ರಾಮಾಣಿಕತೆ, ಆಡಿದ ಮಾತಿನಂತೆ ನಡೆದುಕೊಳ್ಳುವುದು, ಹಿತವಾದ ಮಾತುಗಳನ್ನು ಮಾತ್ರ ಮಾತನಾಡುವುದು, ಮನಃಪೂರ್ವಕವಾಗಿ ಉತ್ತರಿಸುವುದು, ಸ್ಥಿತಪ್ರಜ್ಞತೆಯಿಂದ ಮಾತುಗಳನ್ನು ಸ್ವೀಕರಿಸುವುದು ಹೀಗೆ ಏನೆಲ್ಲಾ ಸೇರಿದಾಗ ವಾಕ್‌ಸಿದ್ಧಿ ಎನ್ನುತ್ತಾರೆ. ಇದನ್ನು ನೀವು ಬಾಲ್ಯದಿಂದಲೇ ಅಭ್ಯಾಸ ಮಾಡಬೇಕಾಗುತ್ತದೆ. ಅದಕ್ಕೆ ತಕ್ಕುದಾದ ವಾತಾವರಣ, ಕಲಿಕೆ, ವಿದ್ಯಾಭ್ಯಾಸ, ಕೌಶಲ್ಯ, ಅರ್ಥನೀತಿಗಳು, ಸಮಾಜದ ರೀತಿನೀತಿಗಳು, ನಿಮ್ಮ ವ್ಯಕ್ತಿತ್ವ, ವರ್ತನೆಗಳು, ಹಾಗೂ ಧ್ವನಿಯ ಮೇಲೆ ಹಿಡಿತದಿಂದ ಬರುವ ಮಾತುಗಳನ್ನು ನೀವು ಕಲಿತಿರಬೇಕು. ಸತತ ಅಭ್ಯಾಸ ಮಾಡಿದರೆ ಸಾಲದು, ಮನನ ಮಾಡಿಕೊಳ್ಳಬೇಕು. ನೀವೀಗ ನೋಡುತ್ತಿರುವ ರವಿಶಂಕರ್ ಗುರೂಜಿ, ಸದ್ಗುರು ಜಗ್ಗಿ ವಾಸುದೇವ್ ಮುಂತಾದ ಧರ್ಮಗುರುಗಳನ್ನು ನೀವು ನೋಡಿರುತ್ತೀರಿ. ಇವರೆಲ್ಲಾ ತಮ್ಮ ವಾಕ್ ಶಕ್ತಿಯಿಂದಲೇ ಜಗತ್ ಪ್ರಸಿದ್ಧರಾದವರು.

ಸಿನಿ ತಾರೆ ಅಪರ್ಣರವರು ಇಂದು ನಮ್ಮ ನಡುವೆ ಇಲ್ಲ, ಆದರೆ ಅವರ ಸುಂದರ ಮಾತುಗಳ ಧ್ವನಿ ಮುದ್ರಿಕೆ ಆಕಾಶವಾಣಿ, ದೂರದರ್ಶನ ಮತ್ತು ಅನೇಕ ಜಾಹಿರಾತು ವಿಭಾಗಗಳಲ್ಲಿ ಇಂದಿಗೂ ಲಭ್ಯ. ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಒಂದಿಬ್ಬರು ಪ್ರಖ್ಯಾತರಾದವರು ಇದ್ದೇ ಇರುತ್ತಾರೆ. ಅವರ ನಿತ್ಯ ಅನುಷ್ಠಾನ ಹೇಗಿರಬೇಕು ಎನ್ನುವುದನ್ನು ನೀವು ನೋಡಿ ಕಲಿಯಬೇಕು. ಇವರೆಲ್ಲರ ಮಾತಿನ ಕಂಪನಗಳು, ಕೇಳುಗರ ಮಿದುಳಿನ ತರಂಗಗಳನ್ನು ಶಾಂತಗೊಳಿಸುತ್ತದೆ. ಅವರನ್ನು ನಿದ್ರೆಗೆ ತಳ್ಳುತ್ತದೆ. ಕನಸಿನಲ್ಲಿ ಮುಂದಿನ ನಡೆಗಳು ಹೀಗೇ ಇರಬೇಕು ಎನ್ನುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ವಿಶುದ್ಧ ಚಕ್ರವು ಸುಸ್ಥಿರವಾಗಿದ್ದಾಗ, ಬಲವಾಗಿದ್ದಾಗ ಅದ್ಭುತವಾದ ಆತ್ಮವಿಶ್ವಾಸ ಮೂಡುತ್ತದೆ. ಅದೇ ನೀವು ಇನ್ನೊಬ್ಬರನ್ನು ಅವಹೇಳನ ಮಾಡುತ್ತಾ, ಅನುಸರಿಸುತ್ತಾ, ನಕಾರಾತ್ಮಕವಾದ ಭಾವವನ್ನು ವ್ಯಕ್ತಪಡಿಸುತ್ತಿದ್ದರೆ ನಿಮ್ಮಲ್ಲಿನ ವಿಶುದ್ಧ ಚಕ್ರವು ನಿಧಾನವಾಗಿ ನೆಲದಾಳಕ್ಕೆ ಇಳಿಯುತ್ತಾ ಹೋಗುತ್ತದೆ.

ಸಂಮೋಹನ ಮತ್ತು ಮಾತು

ಸತ್ಯವಾದ ಮಾತುಗಳು ಮತ್ತು ಆಕರ್ಷಣೀಯವಾದ ಧ್ವನಿ ಇದ್ದರೆ, ರೂಪ ಸಹಾ ಇರಬೇಕೆಂದಿಲ್ಲ. ಕೇವಲ ಮಾತಿನಿಂದ ಅಲ್ಲಿದ್ದವರನ್ನೆಲ್ಲಾ ಒಂದೇ ಕಡೆ ಜಮಾಯಿಸಬಹುದು. ವಿಶುದ್ಧ ಚಕ್ರವು ಬಲವಾಗಿದ್ದಾಗ; ಅಂತಹಾ ವ್ಯಕ್ತಿಗಳಲ್ಲಿ ಒಂದು ವಿಶೇಷ ಆತ್ಮವಿಶ್ವಾಸ ಮೂಡುತ್ತದೆ. ಆತ್ಮವಿಶ್ವಾಸವೇ ಸಂವಹನದ ಮೊದಲ ಹೆಜ್ಜೆ. ಮಾತಿನ ಬಂಡವಾಳ.

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ. ಹಂ ಬೀಜ ಮಂತ್ರ ಪಠಣ ಮತ್ತು ಸೂರ್ಯನಿಗೆ ಅರ್ಘ್ಯ ನೀಡುವುದರ ಮೂಲಕ ಧ್ವನಿಯು ಗಂಭೀರ ಮತ್ತು ಆಕರ್ಶಕವಾಗಿ ಬದಲಾಗುತ್ತದೆ. ಸೂರ್ಯ ನಮಸ್ಕಾರವನ್ನು ಪ್ರತಿದಿನ ಬೆಳಿಗ್ಗೆ ಮಾಡಬೇಕು. ಹಾಗೂ ಹಂ ಎನ್ನುವ ಪದವನ್ನು ಜಪಿಸಿ ಸಮಸ್ತ ಲೋಕದ ದೃಷ್ಟಿಯನ್ನು ತಮ್ಮೆಡೆಗೆ ಎಳೆಯಬೇಕು. ಸಂಜೆಯ ಸಮಯದಲ್ಲಿ ಆಕಾಶದ ನೀಲಿ ಬಣ್ಣವನ್ನು ನೀವು ನೋಡುತ್ತಾ, ಅದು ನಿಮ್ಮ ಗಂಟಲಿಗೆ ಬಂದು ಇಳಿಯುತ್ತಿದೆ ಎನ್ನುವ ಕಲ್ಪನೆಯನ್ನು ಮಾಡಿಕೊಳ್ಳಿ. ಮತ್ತು ಹಂ ಎನ್ನುವ ಬೀಜ ಮಂತ್ರವನ್ನು ನೂರಾ ಎಂಟು ಬಾರಿ ಜಪಿಸಿ. ಪ್ರಾರಂಭದಲ್ಲಿ ಆಕಾಶ ನೋಡುತ್ತಾ, ನೀಲಿ ಬಣ್ಣವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಾ ಕ್ರಮೇಣ ಕಣ್ಣು ಮುಚ್ಚಿ. ಆಗಲೂ ನೀಲಿ ಬಣ್ಣವೇ ಕಣ್ಣಲ್ಲಿ ಉಳಿದರೆ ನಿಮ್ಮ ಏಕಾಗ್ರತೆ ಸಫಲವಾದಂತೆ. ಹೀಗೆ ಹಂ ಜೊತೆ ನೀಲಿಯೂ ಕಣ್ಣ ಮೂಲಕ ಗಂಟಲಿಗೆ ಇಳಿದರೆ ನಿಮ್ಮ ಪ್ರಯತ್ನ ಸಫಲವಾದಂತೆ.

ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದಾದರೆ, ತ್ರಾಟಕ ಕ್ರಿಯೆಯನ್ನು ಮಾಡಿ. ದೀಪವನ್ನು ರೆಪ್ಪೆ ಮುಚ್ಚದೇ ನೋಡುತ್ತಾ ಕುಳಿತುಕೊಳ್ಳಿ. ಅಥವಾ ಒಂದು ಬಿಳಿಯ ಕಾರ್ಡ್‌ಬೋರ್ಡ್‌ನ್ನು ಗೋಡೆಗೆ ಅಂಟಿಸಿ. ಅದರ ಮಧ್ಯದಲ್ಲಿ ಒಂದು ಕಪ್ಪು ಚುಕ್ಕೆಯನ್ನು ಇಡಿ. ಅದನ್ನೇ ರೆಪ್ಪೆ ಮುಚ್ಚದೇ ನೋಡಿ. ಹೀಗೆ ಕ್ರಮೇಣ ಏಕಾಗ್ರತೆಯನ್ನು ಸಾಧಿಸಿ.

ನೀವು ಸಂಗೀತದಲ್ಲಿ ಆಸಕ್ತಿ ಇರುವವರಾದರೆ, ಏಕಾಗ್ರತೆ ತುಂಬಾ ಸುಲಭ. ನೀವೆ ಸಂಗೀತ ಕಲಿಯಬೇಕೆಂದಿಲ್ಲ, ಒಳ್ಳೆಯ ಕೇಳುಗರಾದರೂ ಸಾಕು. ನಿಮಗೆ ಏಕಾಗ್ರತೆ ಕೈವಶವಾಗುತ್ತದೆ. ಆದರೆ ದಿನಾಲೂ ನಿಶ್ಚಿತ ಸಮಯದಲ್ಲಿ, ನಿಶ್ಚಿತ ಅವಧಿಯವರೆಗೆ ಸಂಗೀತವನ್ನು ನೀವು ಆಲಿಸಲೇ ಬೇಕು. ಹೀಗೆ ನಿಮಗೆ ರಾಗಗಳ ಪರಿಚಯವಾಗುತ್ತದೆ. ಹಾಗೆ ರಾಗಗಳನ್ನು ನೀವು ಗುರುತಿಸ ತೊಡಗಿದರೆ, ಏಕಾಗ್ರತೆ ಸಾಧನೆಯಾಗಿದೆ ಎಂದರ್ಥ.

ಕೊನೆಯ ಸಾಧ್ಯತೆ; ನೀವು ದಿನಾಲೂ ಓಂಕಾರವನ್ನು ಪಠಿಸಬೇಕು. ಮೊದಲಿಗೆ ಹದಿನಾರು ಸಾರಿ ಓಂಕಾರವನ್ನು ಪಠಿಸಿ. ಬಳಿಕ ದಿನಾಲೂ ಅದನ್ನು ನಾಲ್ಕರಂತೆ ಹೆಚ್ಚಿಸುತ್ತಾ ಹೋಗಿ. ಹೀಗೆ ನೂರಾ ಎಂಟು ಆದ ಕೂಡಲೇ ನಿಮ್ಮನ್ನೇ ನೀವು ಗಮನಿಸಿ. ಓಂಕಾರ ಉಚ್ಚರಿಸುತ್ತಾ ಇದ್ದಾಗ, ನಿಮ್ಮ ಸುತ್ತಲೂ ಏನಾದರೂ ಆಗುವ ಆಗುಹೋಗುಗಳ ಅರಿವು ನಿಮಗಾಗುತ್ತಿಲ್ಲ ಎಂದಾದರೆ, ನೀವು ಏಕಾಗ್ರತೆಯನ್ನು ಸಾಧಿಸಿದ್ದೀರಿ ಎಂದರ್ಥ.

ವಿಶುದ್ಧ ಚಕ್ರವು ನಿಮಗೆ ಸಿದ್ಧಿಯಾಗಿದ್ದು ತಕ್ಷಣದಲ್ಲಿ ಗೊತ್ತಾಗುವುದಿಲ್ಲ. ಆದರೆ ನಿಮ್ಮ ಸಂವಹನ ತುಂಬಾ ಚೆನ್ನಾಗಿ ಆಗುತ್ತಿದೆ ಎಂದಾದರೆ, ನಿಮ್ಮ ಧ್ವನಿಯಲ್ಲಿ ಆಕರ್ಷಣೆ ಉಂಟಾಗಿದೆ ಎಂದಾದರೆ, ವ್ಯಕ್ತಿತ್ವದಲ್ಲಿ ಕಾಂತಿ ಉಂಟಾಗಿದೆ ಎಂದಾದರೆ, ಕಾರಣ ವಿಶುದ್ಧ ಚಕ್ರದ ಜಾಗೃತಿ.

ನೀವೀಗ ನಾಯಕರು

ಸಂವಹನ ಕಲೆಯನ್ನು , ಸಂಮೋಹನ ಶಕ್ತಿಯನ್ನು ನೀವು ವಶ ಪಡಿಸಿಕೊಂಡರೆ ನೀವು ನಾಯಕರಾಗಲು ಯೋಗ್ಯತೆಯನ್ನು ಪಡೆದುಕೊಂಡಿರಿ. ನೀವು ಮಾಡಬೇಕಾದ್ದು ಇಷ್ಟೇ; ನಿಮ್ಮ ಆಲೋಚನೆಗಳನ್ನು ಸ್ಪಷ್ಟಗೊಳಿಸುವುದು ಮತ್ತು ಅದನ್ನು ಸೂಕ್ತವಾದ ಪದಗಳು ಹಾಗೂ ಧ್ವನಿಯನ್ನು ಬಳಸಿ ಕಾರ್ಯರೂಪಕ್ಕೆ ತರುವುದು. ಎಂತಹಾ ವ್ಯಕ್ತಿಯಾದರೂ ನಿಮ್ಮ ಧ್ವನಿಗೆ ಮತ್ತು ಆಲೋಚನೆಗಳ ರೀತಿಗೆ ತಲೆಬಾಗಲೇ ಬೇಕು. ಅಂತಹಾ ಶಕ್ತಿಯನ್ನು ನೀವು ವಿಶುದ್ಧ ಚಕ್ರದಿಂದ ಪಡೆಯುತ್ತೀರಿ. ನೀವು ಕೇವಲ ಒಬ್ಬ ಅಧಿಕಾರಿಯಲ್ಲ, ನಾಯಕ. ಒಬ್ಬ ಸಾಮಾನ್ಯ ಕೃಷಿಕನಲ್ಲ, ಪ್ರಗತಿಪರ ಕೃಷಿಕ. ಒಬ್ಬ ಉಪನ್ಯಾಸಕನಲ್ಲ, ಉತ್ತಮ ವಾಗ್ಮಿ. ಓರ್ವ ಅರ್ಥಧಾರಿಯಲ್ಲ, ಸರಸ್ವತಿಯ ಸುಪುತ್ರ. ನಾಯಕನಾದ ಮೇಲೆ ನೀವು ಸದಾ ಎಚ್ಚರಿಕೆಯಿಂದ ಇರಬೇಕಾದ್ದು ಅಗತ್ಯ. ನಿಮ್ಮ ಮಾತುಗಳಲ್ಲಿ ಸ್ಪಷ್ಟತೆ ಇರಬೇಕು. ಸರಳವಾದ ಪದಗಳನ್ನು ಬಳಸಬೇಕು. ನಿಮಗೇನು ಬೇಕು ಎನ್ನುವುದನ್ನು ನೇರವಾಗಿ ಹೇಳಬೇಕು ಮತ್ತು ಅಂತಿಮವಾಗಿ ನಿಮ್ಮ ಗುರಿ ಯಾವುದು ಎನ್ನುವುದು ಅವರಿಗೆಲ್ಲಾ ಅರ್ಥವಾಗಬೇಕು. ಸದಾ ಗಂಭೀರವಾಗಿಯೂ ಮತ್ತು ಶ್ರಮದ ಕೆಲಸ ಮಾಡುವಾಗ ಉತ್ತೇಜನಕಾರಿಯಾಗಿಯೂ, ಕಷ್ಟಗಳು, ಸಮಸ್ಯೆಗಳು ಬಂದಾಗ ಹುರಿದುಂಬಿಸುತ್ತಾ, ತಮಾಷೆ ಮಾಡುತ್ತಾ ನಿಮ್ಮ ಇರುವಿಕೆಯನ್ನು ದೃಢಗೊಳಿಸುವುದು ಮುಖ್ಯ. ನಿಮ್ಮ ಮೇಲೆ ಅವರಾಗಿಯೇ ಗೌರವ ನೀಡುವಂತೆ ವರ್ತನೆ ಇರಬೇಕು. ಸಿಟ್ಟು, ದರ್ಪ, ಅಹಂಕಾರದಿಂದ ವರ್ತಿಸಿ, ಅವರಲ್ಲಿ ಆತಂಕ, ಭಯ ಹುಟ್ಟಿಸಿ ಗೌರವ ಪಡೆಯುವಂತೆ ಆಗಬಾರದು. ಇಂತಹ ಗೌರವ ಎಂದಿಗೂ ಶಾಶ್ವತವಲ್ಲ.

ನೆನಪಿಡಿ; ವಿಶುದ್ಧ ಚಕ್ರ ಜಾಗೃತವಾದರೆ ಮಾತ್ರ ಪ್ರತಿಯೊಬ್ಬರನ್ನು ಸಹಾ ಸಂಮೋಹನಗೊಳಿಸಬಹುದು. ಹಾಗೂ ನೀವು ಮರೆಯಲಾಗದ ನಾಯಕರಾಗಿ ಉಳಿಯಬಹುದು. ನಿಮ್ಮ ನಾಯಕತ್ವದಲ್ಲಿ ಎಲ್ಲವೂ ಯಶಸ್ಸೇ ಆಗುತ್ತದೆ.

ತುರ್ತುಪರಿಸ್ಥಿತಿಗೆ 51 ವರ್ಷ: ಮರೆಯಲಾಗದ ಕರಾಳ ಅಧ್ಯಾಯ


ಒಳನೋಟ
• ಹೆ.ಬಾ. ಮಲ್ಯ



ಇದೇ ಜೂನ್ ತಿಂಗಳ 25ನೇ ತಾರೀಕಿಗೆ ತುರ್ತು ಪರಿಸ್ಥಿತಿಗೆ 51 ವರ್ಷಗಳಾಗುತ್ತವೆ. ಅಂದಿನಿಂದ ಒಂದು ಪೀಳಿಗೆಯೇ ಕಳೆದುಹೋಗಿದೆ. ಇಂದಿನ ಎಳೆ ಪೀಳಿಗೆಯವರಿಗೆ ತುರ್ತು ಪರಿಸ್ಥಿತಿಯ ಘೋರ ದೌರ್ಜನ್ಯಗಳ ಬಗ್ಗೆ ಹೇಳಿದರೆ ಒಂದಷ್ಟು ಮಟ್ಟಿಗೆ ಪರಿಣಾಮವಾದೀತೇ ಹೊರತು ಹೆಚ್ಚೇನೂ ಇಲ್ಲ. ಆದರೆ ಅಂದು ಆ ಕರಾಳ ದಿನಗಳನ್ನು ಎದುರಿಸಿ, ಪ್ರತಿಭಟಿಸಿ, ಜೈಲು ಸೇರಿ, ಅಸಾಧ್ಯ ಹಿಂಸೆಗಳನ್ನು ಅನುಭವಿಸಿದ ಹಳೆ ಪೀಳಿಗೆಯವರ ಮನಸ್ಸಿನಲ್ಲಿ ಆ ಕರಾಳ ದಿನಗಳ ನೆನಪು ಇಂದಿಗೂ ಮಾಸಿಲ್ಲ. ಅವರಲ್ಲಿ ಮಾತ್ರ ಭಾವನಾತ್ಮಕ ಪರಿಣಾಮ ಆಗುತ್ತದೆ. ಪ್ರಜೆಗಳು ನಿಷ್ಕ್ರಿಯ ಪ್ರೇಕ್ಷಕರಾದರೆ ಪ್ರಜಾಪ್ರಭುತ್ವವನ್ನು ಓರ್ವ ಸರ್ವಾಧಿಕಾರಿಣಿ ಹೇಗೆ ಸರ್ವ ನಾಶ ಮಾಡಬಹುದು ಎಂಬುದು ತುರ್ತು ಪರಿಸ್ಥಿತಿ ಕಲಿಸುವ ಪಾಠ. ಸ್ವಂತ ಸ್ವಾರ್ಥಕ್ಕಾಗಿ, ತನ್ನ ಅಧಿಕಾರ ಉಳಿಸಿಕೊಳ್ಳುವ ದುಷ್ಟ ಉದ್ದೇಶಕ್ಕಾಗಿ ಸಂವಿಧಾನವನ್ನೇ ಹೊಸಕಿ ಹಾಕಿದ ಇಂದಿರಾಗಾಂಧಿಯವರ ನೆನಪಾಗುತ್ತದೆ. ಇಂದು ಕರ್ನಾಟಕದ ಗೃಹ ಸಚಿವರು, ಆರ್.ಎಸ್.ಎಸ್. ನೋಂದಣಿ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ಇದೊಂದು ಬಾಲಿಷ ಹೇಳಿಕೆ. ಈಗಾಗಲೇ ನೆಟ್ಟಿಗರು ಈ ಬಗ್ಗೆ ಹಲವಾರು ಉತ್ತರಗಳನ್ನು ಕೊಟ್ಟಿದ್ದಾರೆ. ಗೃಹಸಚಿವರಿಗೆ ಅವರ ಕಾಂಗ್ರೆಸ್ ಅಧಿನಾಯಕಿ ಸಂವಿಧಾನ ಬುಡಮೇಲು ಮಾಡಿದ ಇತಿಹಾಸ ತಿಳಿದಿದೆಯೋ ಗೊತ್ತಿಲ್ಲ. ಹಾಗಾಗಿ ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಪತ್ರಕರ್ತರು, "ಸರಸಂಘ ಚಾಲಕರು ಈ ಬಗ್ಗೆ ಏನು ಹೇಳುತ್ತಾರೆ" ಎಂದು ಕೇಳಿದಾಗ ಅವರು ಅದಕ್ಕೆ ತಾನು ಪ್ರತಿಕ್ರಿಯಿಸುವುದಿಲ್ಲ ಎಂದು ಸರಿಯಾಗಿಯೇ ಹೇಳಿದ್ದಾರೆ. ಆದರೆ ಸಾಮಾನ್ಯ ಪ್ರಜೆಗಳಿಗೆ ಸರಿಯಾದ ತಿಳುವಳಿಕೆ ಕೊಡುವ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳಿದ್ದಾರೆ.

ಅದು ಹಾಗಿರಲಿ. ಈಗ ಇಂದಿರಾಗಾಂಧಿಯವರು 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಹಿನ್ನೆಲೆ ಬಗ್ಗೆ ಒಂದಷ್ಟು ಸ್ಮರಿಸಿಕೊಳ್ಳೋಣ. 1975 ಜೂನ್ 25ರ ಮಧ್ಯರಾತ್ರಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಯನ್ನು ಹೇರಿದರು. ಅಂದು ಭಾರತದ ಸಂವಿಧಾನದ ಕಗ್ಗೊಲೆ ನಡೆಯಿತು. ಆಕೆಯ ಮೊಮ್ಮಗ ಇಂದು ಕೆಂಪು ಹೊದಿಕೆಯ ಸಂವಿಧಾನ ಪುಸ್ತಕವೊಂದನ್ನು ಎತ್ತಿ ಹಿಡಿದು ಡ್ರಾಮಾ ಮಾಡುತ್ತಿದ್ದಾರೆ.

ಇತಿಹಾಸದಿಂದ ಪಾಠ ಕಲಿಯಬೇಕು. ಇಲ್ಲವಾದಲ್ಲಿ ಮತ್ತೆ ಅದೇ ಕರಾಳ ಕಾಲಖಂಡ ಮರುಕಳಿಸುವ ಅಪಾಯವಿದೆ. ಮಾತ್ರವಲ್ಲ ಅದನ್ನು ಆಗಾಗ ನೆನಪಿಸಿಕೊಳ್ಳಬೇಕು. Lest We forget ಎಂಬ ಮಾತೊಂದಿದೆ. ಅಂದಿನ ಕಾಂಗ್ರೆಸ್ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾ ಬಂದಿತ್ತು. ಅಧಿಕಾರ ನೆಹರೂ ವಂಶದ ಕೈ ತಪ್ಪಿ ಹೋಗುವ ಪರಿಸ್ಥಿತಿ ಏರ್ಪಟ್ಟಿತ್ತು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ನಿಗೂಢ ಸಾವಿನ ನಂತರ ಇಂದಿರಾ ಗಾಂಧಿಯವರನ್ನು ಅಂದಿನ ಕಾಂಗ್ರೆಸ್ ನೀತಿ ನಿರೂಪಕ ಮಂಡಳಿ ಪ್ರಧಾನಿ ಪಟ್ಟಕ್ಕೇರಿಸಿತ್ತು. ಈ ಮಂಡಳಿಯಲ್ಲಿ ಕಾಂಗ್ರೆಸ್ ಹಳೆ ತಲೆಮಾರಿನ ದಿಗ್ಗಜರುಗಳಾಗಿದ್ದ ಕಾಮರಾಜ್ ನಾಡಾರ್, ನಿಜಲಿಂಗಪ್ಪ, ಮೊರಾರ್ಜಿ ದೇಸಾಯಿ, ಎಸ್. ಕೆ. ಪಾಟೀಲ್ ಮುಂತಾದವರಿದ್ದರು. ಇಂದಿರಾ ಗಾಂಧಿಗೆ ಅವರ ಮೂಗು ತೂರಿಸುವಿಕೆ ಸಹನೆಯಾಗದೆ ಅವರನ್ನು ಪಕ್ಕಕ್ಕೆ ಸರಿಸಿ ಕಾಂಗೈ (Congress Indira) ಪಕ್ಷ ಸ್ಥಾಪಿಸಿದರು. ಪಕ್ಷ ಇಬ್ಭಾಗವಾಯಿತು. ಹಳೆ ಕಾಂಗ್ರೆಸ್ ಕಾಂಗೋ (Congress Organisation) ಆಯಿತು. ತನ್ನ ಜನಪ್ರಿಯತೆ ಪುನಃ ಗಳಿಸಿಕೊಳ್ಳಲು ಇಂದಿರಾಗಾಂಧಿ ಬಾಂಗ್ಲಾ ವಿಮೋಚನಾ ಯುದ್ಧ ಮಾಡಿದರು. ಇದರಿಂದ ಅಪಾರ ಜನಪ್ರಿಯತೆ ಗಳಿಸಿ 1971–72ರ ಲೋಕಸಭಾ ಚುನಾವಣೆಯಲ್ಲಿ 342 ಸ್ಥಾನ ಗಳಿಸಿ ಪ್ರಧಾನಿಯಾಗಿ ಮುಂದುವರಿದರು. ಆದರೆ ಅವರ ವಿರುದ್ಧ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷದ ನಾಯಕ ರಾಜ್‌ನಾರಾಯಣ್ ಇಂದಿರಾಗಾಂಧಿ ವಿರುದ್ಧ ಚುನಾವಣಾ ಅಕ್ರಮದ ವಿಷಯವಾಗಿ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಿದರು. 1975ರ ಜೂನ್ 12ರಂದು ಅಲಹಾಬಾದ್ (ಈಗ ಪ್ರಯಾಗರಾಜ್) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಜಗಮೋಹನ್ ಲಾಲ್ ಸಿನ್ಹಾ ಅವರು ಐತಿಹಾಸಿಕ ತೀರ್ಪು




ನೀಡಿದರು. ತಕರಾರು ಅರ್ಜಿಯನ್ನು ಪುರಸ್ಕರಿಸಿ, ಇಂದಿರಾಗಾಂಧಿ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆಂದೂ, ಸರಕಾರಿ ಯಂತ್ರದ ದುರುಪಯೋಗಪಡಿಸಿಕೊಂಡಿದ್ದಾರೆಂದೂ, ತೀರ್ಪು ನೀಡಿದರು. ಇಂದಿರಾಗಾಂಧಿಯ ಆಯ್ಕೆಯನ್ನು ರದ್ದುಪಡಿಸಿ; ಆರು ವರ್ಷಗಳ ಕಾಲ ಅವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ತೀರ್ಪು ನೀಡಿದರು. ಆಗ ಆಕೆ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಏರ್ಪಟ್ಟಿತು.

342 ಸ್ಥಾನ ಗಳಿಸಿದ್ದ ಆಕೆ ಪಕ್ಷದ ಬೇರೊಬ್ಬ ಸಮರ್ಥ ನಾಯಕನನ್ನು ಪ್ರಧಾನಿಯನ್ನಾಗಿ ಮಾಡಬಹುದಾಗಿತ್ತು. ಆದರೆ ವಂಶವಾದ ಹಾಗೂ ಸರ್ವಾಧಿಕಾರಿ ಧೋರಣೆ ಆಕೆಯಲ್ಲಿ ಮಡುಗಟ್ಟಿತ್ತು. ಒಮ್ಮೆ ಗದ್ದುಗೆ ಬಿಟ್ಟು ಕೊಟ್ಟರೆ ಮತ್ತೆ ಸಿಗುವುದು ಅನುಮಾನ, ಹೇಗಾದರೂ ಮಾಡಿ ತಾನೇ ಪ್ರಧಾನಿ ಸ್ಥಾನದಲ್ಲಿ ಮುಂದುವರಿಯಬೇಕು, ಅಧಿಕಾರ ನೆಹರು ವಂಶಸ್ಥರ ಕೈಯಲ್ಲೇ ಸದಾಕಾಲಕ್ಕೂ ಇರಬೇಕು ಎಂಬ ಸರ್ವಾಧಿಕಾರಿ ಮನೋವೃತ್ತಿ ಪ್ರದರ್ಶಿಸಿದರು. ಅದಕ್ಕೆ ಅವರು ಅನುಸರಿಸಿದ ಮಾರ್ಗ, ನ್ಯಾಯಾಲಯದ ತೀರ್ಪನ್ನೇ ಧಿಕ್ಕರಿಸುವುದು, ಸಂವಿಧಾನವನ್ನೇ ತಿರುಚುವುದು. ಸರ್ವೋಚ್ಚ ನ್ಯಾಯಾಲಯದಲ್ಲಿ ಅವರ ಪಕ್ಷದ ಪ್ರಭಾವದಿಂದ ಪದೋನ್ನತಿ ಪಡೆದ ನ್ಯಾಯಾಧೀಶರನೇಕರಿದ್ದರು. ಮೂವರು ಸೀನಿಯರ್ ಜಡ್ಜ್‌ಗಳನ್ನು ಪಕ್ಕಕ್ಕೆ ಸರಿಸಿ ತನಗೆ ಅನುಕೂಲರಾದ ನ್ಯಾಯಾಧೀಶರನ್ನೇ ಮುಖ್ಯ ನ್ಯಾಯಾಧೀಶರನ್ನಾಗಿ ಪದೋನ್ನತಿ ಮಾಡಿದರು. ಈ ಅನೈತಿಕ ನಡೆಯ ವಿರುದ್ಧ ಪ್ರತಿಭಟಿಸಿ, ಜಸ್ಟಿಸ್ ಕೆ.ಎಸ್. ಹೆಗ್ಡೆ ಆದಿಯಾಗಿ ಮೂವರು ನ್ಯಾಯಾಧೀಶರು ರಾಜೀನಾಮೆ ನೀಡಿ ಹೊರನಡೆದಿದ್ದರು. ಸಂವಿಧಾನ ತಿದ್ದುಪಡಿ ಮಾಡಿ ಮೂಲಭೂತ ಹಕ್ಕುಗಳ ಹನನ ಮಾಡಲಾಯಿತು. ತಾನೇ ಪ್ರಧಾನಿ, ತಾನು ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂದು ಘೋಷಿಸಿದರು. ಇತ್ತೀಚೆಗೆ ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಹೀನಾಯವಾಗಿ ಸೋತರೂ ತಾನು ಕುರ್ಚಿ ಬಿಟ್ಟು ಕೊಡುವುದಿಲ್ಲ ಎಂದು ಹಠ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರ್ವೋಚ್ಚ ನ್ಯಾಯಾಲಯ ಮಂಡಿಯೂರಿತು. ಇಂದಿರಾ ಪರವಾಗಿ ತೀರ್ಪು ಹೊರ ಬಂದಿತು. ಇಂದಿರಾಗಾಂಧಿ ಹಿಟ್ಲರ್‌ನಂತೆ, ಸರ್ವಾಧಿಕಾರಿಣಿಯಂತೆ, ವರ್ತಿಸಲಾರಂಭಿಸಿದರು. ಅದಕ್ಕೆ ಮೊದಲೇ ದೇಶದಲ್ಲಿ ಜೆ.ಪಿ. ನೇತೃತ್ವದಲ್ಲಿ ಲೋಕಸಂಘರ್ಷ ಸಮಿತಿ ರಚಿತವಾಗಿ ಜನಸಂಘ, ಎಡಪಕ್ಷಗಳು, ಸಮಾಜವಾದಿಗಳು, ಕಾಂಗ್ರೆಸ್ (O), ಸ್ವತಂತ್ರ ಪಾರ್ಟಿ ಸೇರಿ ಜನತಾ ಪಕ್ಷದ ಉದಯವಾಯಿತು. ಹಿಂದಿನ ಜನಸಂಘ ಜನತಾ ಪಕ್ಷದಲ್ಲಿ ವಿಲೀನಗೊಂಡಿತು. ದೇಶಾದ್ಯಂತ ಜೆ.ಪಿ.ಯವರ ಸಮಗ್ರ ಕ್ರಾಂತಿಯ ಆಂದೋಳನ ಬಿಸಿ ತಟ್ಟಲಾರಂಭಿಸಿತ್ತು. ಆಗ ನಡೆದ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತ್ತು. ಈ ಎಲ್ಲಾ ಘಟನಾವಳಿಗಳಿಂದ ಕಂಗೆಟ್ಟ ಇಂದಿರಾಗಾಂಧಿ ಜೆ.ಪಿ. ಆಂದೋಳನದ ಮೇಲೆ ನಿಷೇಧ ಹೇರಿದರು. ರಾ.ಸ್ವ.ಸಂಘದ ಮೇಲೂ ಪ್ರತಿಬಂಧ ಹೇರಿದರು. ಎಲ್ಲ ಪಕ್ಷಗಳ ನಾಯಕರನ್ನು, ಸರಸಂಘಚಾಲಕ ಬಾಳಾಸಾಹೇಬ್ ದೇವರಸ್, ಜಯಪ್ರಕಾಶ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಆಡ್ವಾಣಿ ಮುಂತಾದವರನ್ನು ಬಂಧಿಸಿ ಜೈಲಿಗಟ್ಟಲಾಯಿತು. ಪತ್ರಿಕಾ ಮಾಧ್ಯಮದ ಮೇಲೆ ನಿಯಂತ್ರಣ ಹೇರಿದರು. MISA (Maintenance of Internal Security Act) ಹೆಸರಿನಲ್ಲಿ ಅನೇಕರನ್ನು ವಿಚಾರಣೆಯಿಲ್ಲದೇ ಜೈಲಿನಲ್ಲಿರಿಸಲಾಯಿತು. ಆರ್.ಎಸ್.ಎಸ್. ಸುಮ್ಮನೆ ಕುಳಿತುಕೊಳ್ಳಲಿಲ್ಲ. ನವೆಂಬರ್ 14ರಂದು ದೇಶಾದ್ಯಂತ ಸತ್ಯಾಗ್ರಹಕ್ಕೆ ಕರೆ ನೀಡಿತು. ಬೃಹತ್ ಪ್ರತಿಭಟನೆ ನಡೆಯಿತು. ಲಕ್ಷಾಂತರ ಸಂಘ ಸ್ವಯಂಸೇವಕರು ಸತ್ಯಾಗ್ರಹ ಮಾಡಿ ಜೈಲು ಸೇರಿದರು. ಸ್ವಯಂಸೇವಕರ ಮೇಲೆ ಹಿಂಸಾತ್ಮಕ ಪೊಲೀಸ್ ದೌರ್ಜನ್ಯ ನಡೆಸಲಾಯಿತು. ಅನೇಕ ಕಾರ್ಯಕರ್ತರು ಹುತಾತ್ಮರಾದರು. ಅದೊಂದು ವ್ಯಾಪಕ ಜನಾಂದೋಳನವೇ ಆಗಿತ್ತು. ಗಾಬರಿಗೊಂಡ ಇಂದಿರಾಗಾಂಧಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಳ್ಳಬೇಕಾಯಿತು. 1977 ಮಾರ್ಚ್‌ನಲ್ಲಿ ಚುನಾವಣೆ ನಡೆದು ಇಂದಿರಾಗಾಂಧಿಯ ಕಾಂಗೈ ಪಕ್ಷ ಸೋತು ಜನತಾ ಪಕ್ಷದ ಸರಕಾರ ಅಧಿಕಾರಕ್ಕೇರಿತು. 18 ತಿಂಗಳ ಕಾರವಾಸ ಅನುಭವಿಸಿದ ಸತ್ಯಾಗ್ರಹಿಗಳ ಬಿಡುಗಡೆ ಆಯಿತು.

51 ವರ್ಷಗಳ ನಂತರವೂ ಈ ಕರಾಳ ಅಧ್ಯಾಯ , ಪ್ರಜಾಪ್ರಭುತ್ವದ ಕಗ್ಗೊಲೆ, ಸಂವಿಧಾನದ ನಾಶ, ಹಿಂಸೆ, ಜೈಲು ಎಲ್ಲ ನೆನಪುಗಳೂ ಪ್ರತಿವರ್ಷ ಜೂನ್ 25ರ ಹೊತ್ತಿಗೆ ಉಮ್ಮಳಿಸಿ ಬರುತ್ತವೆ. ಪ್ರಿಯಾಂಕ್ ಖರ್ಗೆಯಂಥ ಅಪ್ರಬುದ್ಧ ಕಾಂಗ್ರೆಸ್ ನಾಯಕರಿಗೆ ಇದರ ಅರಿವಿಲ್ಲ. ಕಳೆದ ನೂರು ವರ್ಷಗಳಲ್ಲಿ ಬ್ರಿಟಿಷರು, ನೆಹರೂ-ಇಂದಿರಾ ಕಾಂಗ್ರೆಸ್ ಯಾರೂ ಸಂಘದ ನೋಂದಣಿ ಬಗ್ಗೆ ಮಾತಾಡಿಲ್ಲ. ಸಂಘ ಒಂದು ಸಂಸ್ಥೆಯಲ್ಲ. ರಾಷ್ಟ್ರೀಯತೆಯ ಜಾಗೃತಿಯ ಆಂದೋಳನ. ಅದನ್ನು ಅರಿಯದ ಅಪ್ರಬುದ್ಧರು ಸಂಘ ನೋಂದಣಿ ಬಗ್ಗೆ ಮಾತನಾಡುತ್ತಾರೆ.

ಪ್ರಿಯಾಂಕ ಖರ್ಗೆ ಅವರಿಗೆ ಸಂವಿಧಾನದ ಒಂದು ಪಾಠ

ಡಾ. ನಿರಂಜನ ಪೂಜಾರ, ಸಹಾಯಕ ಪ್ರಾಧ್ಯಾಪಕರು,
ಕಲ್ಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯ



ರಾಷ್ಟ್ರೀಯ ಸ್ವಯಂಸೇವಕ ಸಂಘ ಎಲ್ಲಿಯೂ ನೋಂದಣಿಯಾಗಿಲ್ಲ, ಹಾಗಾಗಿ ಅದೊಂದು ನಿಗೂಢ ಸಂಸ್ಥೆ ಎಂಬ ಸಚಿವ ಪ್ರಿಯಾಂಕ ಖರ್ಗೆ ಅವರ ಇತ್ತೀಚಿನ ಹೇಳಿಕೆಯು ಮತ್ತು ಅವರ ಪತ್ರ ಕೇವಲ ಒಂದು ರಾಜಕೀಯ ಪ್ರಲಾಪವಾಗಿ ಉಳಿದಿಲ್ಲ. ಬದಲಾಗಿ ಅದು ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಮತ್ತು ಭಾರತದ ಸಾಂಸ್ಕೃತಿಕ-ಸಾಂಸ್ಥಿಕ ಪರಂಪರೆಯ ಕುರಿತಾದ ಅವರ ಬೌದ್ಧಿಕ ದಾರಿದ್ರ್ಯವನ್ನು ಬೆತ್ತಲು ಮಾಡಿದೆ. ನೂರು ವರ್ಷಗಳ ಇತಿಹಾಸವಿರುವ, ದೇಶದ ಪ್ರತಿ ಹಳ್ಳಿಯಲ್ಲೂ ಬೇರೂರಿರುವ ಒಂದು ರಾಷ್ಟ್ರೀಯ ಚಳವಳಿಯನ್ನು ಕೇವಲ 'ನೋಂದಣಿ ಪ್ರಮಾಣಪತ್ರ'ದ ಕೊರತೆಯಿಂದ ಅಳೆಯಲು ಹೊರಟಿರುವುದು, ವಸಾಹತುಶಾಹಿ ಗುಲಾಮಿ ಮನಸ್ಥಿತಿಯ ಸ್ಪಷ್ಟ ಕುರುಹಾಗಿದೆ.

ಸಾಂವಿಧಾನಿಕ ಸಿಂಧುತ್ವ

ಸಂವಿಧಾನದ ಪಾಠ ಮಾಡುವವರು ಸಂವಿಧಾನದ ವಿಧಿಗಳನ್ನು ಸರಿಯಾಗಿ ಓದಿಕೊಳ್ಳಬೇಕು. ಭಾರತೀಯ ಸಂವಿಧಾನದ ಅನುಚ್ಛೇದ 19(1)(ಸಿ) ಪ್ರತಿಯೊಬ್ಬ ನಾಗರಿಕನಿಗೂ 'ಸಂಘ-ಸಂಸ್ಥೆಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ'ವನ್ನು ಒಂದು ಪರಮೋಚ್ಚ ಮೂಲಭೂತ ಹಕ್ಕಾಗಿ ಖಾತರಿಪಡಿಸಿದೆ. ಕಾನೂನುಶಾಸ್ತ್ರದ ಪ್ರಕಾರ ಯಾವುದೇ ಒಂದು ಸಂಘಟನೆ ಅಥವಾ ಸಮೂಹ ಅಸ್ತಿತ್ವಕ್ಕೆ ಬರಲು ಸರ್ಕಾರದ ಅಧಿಕೃತ ನೋಂದಣಿ ಕಡ್ಡಾಯವಲ್ಲ. ಸೊಸೈಟೀಸ್ ಕಾಯ್ದೆ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳುವುದು ಕೇವಲ ಬ್ಯಾಂಕ್ ಖಾತೆ ತೆರೆಯಲು, ಸರ್ಕಾರದ ಅನುದಾನ ಪಡೆಯಲು, ಆಸ್ತಿ ಖರೀದಿಸಲು ಅಥವಾ ತೆರಿಗೆ ವಿನಾಯಿತಿ ಪಡೆಯಲು ರೂಪಿಸಲಾದ ಆಡಳಿತಾತ್ಮಕ ವ್ಯವಸ್ಥೆಯೇ ಹೊರತು ಸಂಘಟನೆಯ ಸಾಂವಿಧಾನಿಕ ಸಿಂಧುತ್ವವನ್ನು ನಿರ್ಧರಿಸುವ ಅಂತಿಮ ಮಾನದಂಡವಲ್ಲ. ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ತರದ ಯಾವುದೇ ಅನೋಂದಾಯಿತ ಸಮೂಹವು ಸಂಪೂರ್ಣವಾಗಿ ಸಂವಿಧಾನಬದ್ಧವಾಗಿಯೇ ಕಾರ್ಯಾಚರಿಸುತ್ತದೆ. ಈ ಕನಿಷ್ಠ ಜ್ಞಾನವಿಲ್ಲದೆ ಆರ್‌ಎಸ್‌ಎಸ್ ಅನ್ನು ನಿಗೂಢ ಸಂಘಟನೆ ಎನ್ನುವುದು ಸಂವಿಧಾನದ ಆಶಯಕ್ಕೇ ಮಾಡುವ ಘೋರ ಅಪಚಾರ.

ತುರ್ತುಪರಿಸ್ಥಿತಿ

ಇನ್ನು ಆರ್‌ಎಸ್‌ಎಸ್ ಅನ್ನು ಸಂವಿಧಾನ ವಿರೋಧಿ ಎಂದು ಬಿಂಬಿಸುವ ಮುನ್ನ ಇತಿಹಾಸದ ಪುಟಗಳನ್ನು ಒಮ್ಮೆ ತಿರುವಿಹಾಕಬೇಕು. 1975ರಲ್ಲಿ ಸಂವಿಧಾನದ ರಕ್ಷಣೆಗಾಗಿ ಬೀದಿಗಿಳಿದು ಹೋರಾಡಿದ ಅತಿದೊಡ್ಡ ಶಕ್ತಿ ಸಂಘ. ಅಂದು ಸಂವಿಧಾನದ ಕುತ್ತಿಗೆ ಹಿಸುಕಿದವರ ವಾರಸುದಾರರು ಇಂದು ಅದೇ ಸಂವಿಧಾನವನ್ನು ರಕ್ಷಿಸಲು ಪ್ರಾಣ ಪಣಕ್ಕಿಟ್ಟ ಸಂಘಟನೆಗೆ ಸಂವಿಧಾನದ ಪಾಠ ಮಾಡಲು ಹೊರಟಿರುವುದು ಶತಮಾನದ ಬಹುದೊಡ್ಡ ವ್ಯಂಗ್ಯ!

ವಸಾಹತುಶಾಹಿ ಮಾನದಂಡ

ಭಾರತೀಯ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಪ್ರತಿಯೊಂದು ಸಾಮಾಜಿಕ ಗುಂಪನ್ನೂ 'ನೋಂದಣಿ'ಯೆಂಬ ಕಟ್ಟುಪಾಡಿಗೆ ಒಳಪಡಿಸುವ ಕಲ್ಪನೆಯೇ ಬ್ರಿಟಿಷ್ ಕಣ್ಗಾವಲು ವ್ಯವಸ್ಥೆಯ ಕೊಡುಗೆ. ಆದರೆ ಭಾರತೀಯ ನಾಗರಿಕತೆ ಅನಾದಿ ಕಾಲದಿಂದಲೂ ವಿಕೇಂದ್ರೀಕೃತ ಹಾಗೂ ಅನೌಪಚಾರಿಕ ಸಂಸ್ಥೆಗಳ ಮೂಲಕವೇ ಬೆಳೆದಿದೆ.

ನಮ್ಮ ಸಾವಿರಾರು ಮಠಮಾನ್ಯಗಳು, ಪ್ರಾಚೀನ ವೇದ ಪಾಠಶಾಲೆಗಳು, ಹಳ್ಳಿಗಳ ಭಜನಾ ಮಂಡಳಿಗಳು ಅಥವಾ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಯುವ ಊರ ಜಾತ್ರಾ ಸಮಿತಿಗಳು ಯಾವುದೇ ಬ್ರಿಟಿಷ್ ಕಾಯ್ದೆಯಡಿ ಹುಟ್ಟಿಕೊಂಡಿಲ್ಲ. ಇವು ಸಮಾಜದ ವಿಶ್ವಾಸ, ಧರ್ಮ ಮತ್ತು ಸಾಮೂಹಿಕ ಸಹಕಾರದ ಆಧಾರದ ಮೇಲೆ ಸ್ವಯಂ ನಿಯಂತ್ರಿತವಾಗಿ ನಡೆಯುವ ಸಾವಯವ ವ್ಯವಸ್ಥೆಗಳು. ಆರ್‌ಎಸ್‌ಎಸ್ ಕೂಡ ಇದೇ ಮಣ್ಣಿನ ಗುಣವಿರುವ ಒಂದು ಬೃಹತ್ ಕೌಟುಂಬಿಕ ವ್ಯವಸ್ಥೆಯಾಗಿದ್ದು, ಅದನ್ನು ಕೇವಲ ಕಾಗದದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಮೂಲಕ ಅಳೆಯುವುದು ಭಾರತೀಯ ಪರಂಪರೆಗೆ ಮಾಡುವ ಅವಮಾನ.

ಪಾರದರ್ಶಕತೆ ಮತ್ತು ಆರ್ಥಿಕ ಸ್ವಾಯತ್ತತೆ

ಆರ್‌ಎಸ್‌ಎಸ್ ಕಾನೂನನ್ನು ಉಲ್ಲಂಘಿಸುತ್ತದೆ ಅಥವಾ ಗುಪ್ತವಾಗಿ ಕಾರ್ಯಾಚರಿಸುತ್ತದೆ ಎಂಬುದು ಮತ್ತೊಂದು ಬೌದ್ಧಿಕ ಸುಳ್ಳು. ಆರ್‌ಎಸ್‌ಎಸ್ ಎಂಬುದು ಒಂದು ಸೈದ್ಧಾಂತಿಕ ಪ್ರವಾಹ. ಆದರೆ ಎಲ್ಲಿ ಭೌತಿಕ ಮತ್ತು ಆರ್ಥಿಕ ವ್ಯವಹಾರಗಳ ಪ್ರಶ್ನೆ ಬರುತ್ತದೆಯೋ ಅಲ್ಲಿ ಸಂಘವು ಕಟ್ಟುನಿಟ್ಟಾಗಿ ಕಾನೂನನ್ನು ಪಾಲಿಸುತ್ತದೆ. ದೇಶಾದ್ಯಂತ ಇರುವ ಸಂಘ ಕಾರ್ಯಾಲಯಗಳು ಮತ್ತು ಜಮೀನುಗಳು ಅಧಿಕೃತವಾಗಿ ನೋಂದಾಯಿತವಾದ ಟ್ರಸ್ಟ್‌ಗಳ ಸುಪರ್ದಿಯಲ್ಲಿವೆ ಮತ್ತು ಅವು ಪ್ರತಿವರ್ಷ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತವೆ. ಅಷ್ಟೇ ಅಲ್ಲದೆ ಸಂಘದ ಪ್ರೇರಣೆಯಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವ ಅಂಗಸಂಸ್ಥೆಗಳೆಲ್ಲವೂ ಸೊಸೈಟೀಸ್ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿಯಾದ ಕಾನೂನುಬದ್ಧ ಸಂಸ್ಥೆಗಳೇ ಆಗಿವೆ. ಯಾವುದೇ ಬಾಹ್ಯ ಆರ್ಥಿಕ ಸಹಾಯವಿಲ್ಲದೆ, ಕೇವಲ ತನ್ನ ಸ್ವಯಂಸೇವಕರು ಪ್ರತಿ ವರ್ಷ ಅತ್ಯಂತ ಪಾರದರ್ಶಕವಾಗಿ ನೀಡುವ ಗುರುದಕ್ಷಿಣೆಯೆಂಬ ವ್ಯವಸ್ಥೆಯಿಂದ ನಡೆಯುವ ಸಂಘಟನೆಗೆ ಸರ್ಕಾರದ ಮಾನ್ಯತೆಗಾಗಿ ಹಂಬಲಿಸುವ ದರ್ದು ಇರುವುದಿಲ್ಲ.

ಪ್ರಬುದ್ಧ ರಾಜಕಾರಣದ ಅಗತ್ಯ

ಸಂವಿಧಾನವನ್ನು ಕೇವಲ ಓದುವುದಕ್ಕಿಂತ, ಅದರ ತಾತ್ವಿಕ ಆಶಯವನ್ನು ಗ್ರಹಿಸುವುದೇ ಪ್ರಬುದ್ಧ ರಾಜಕಾರಣದ ಲಕ್ಷಣ. ಒಂದು ಸಂಘಟನೆಯ ಶ್ರೇಷ್ಠತೆಯು ರಿಜಿಸ್ಟ್ರಾರ್ ಕಚೇರಿಯ ಕಡತದಲ್ಲಿರುವ ಪ್ರಮಾಣಪತ್ರದಿಂದ ನಿರ್ಧಾರವಾಗುವುದಿಲ್ಲ.

ಕಾಗದದಲ್ಲಿ ರಿಜಿಸ್ಟರ್ ಆಗಿ, ವಿದೇಶಿ ಫಂಡ್ ತಂದು, ದೇಶವಿಭಜಕ ಕೃತ್ಯಗಳಲ್ಲಿ ತೊಡಗುವ ಎನ್‌ಜಿಓಗಳ ಬೆನ್ನಿಗೆ ನಿಲ್ಲುವವರಿಗೆ ಆರ್‌ಎಸ್‌ಎಸ್‌ನಂತಹ ನೈಜ ಸಾಂವಿಧಾನಿಕ ಮತ್ತು ಸಾಮಾಜಿಕ ಶಕ್ತಿಯ ಮಹತ್ವ ಅರ್ಥವಾಗುವುದು ಕಷ್ಟ. ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇರಲಿ ಸಂವಿಧಾನ ಮತ್ತು ಇತಿಹಾಸದ ಕುರಿತ ಚರ್ಚೆಗಳು ಬೌದ್ಧಿಕ ಎತ್ತರದಲ್ಲಿರಬೇಕೇ ಹೊರತು ಆಧಾರರಹಿತ ಪ್ರಲಾಪಗಳಾಗಿರಬಾರದು.

ಕಿರುಸುದ್ದಿ

ವಿದ್ಯುತ್ ಅವಘಡ ತಡೆಗೆ ರಕ್ಷಣಾ ಕಾರ್ಯಾಗಾರ

ಮುಲ್ಕಿ: ಹಳೆಯಂಗಡಿ ವಿದ್ಯಾವಿನಾಯಕ ಯುವಕಮಂಡಲ,ರಜತ ಸೇವಾ ಟ್ರಸ್ಟ್ ಯುವತಿ ಮಂಡಲ, ಕಿಶೋರ –ಕಿಶೋರಿ ಸಂಘದ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮಳೆಗಾಲದ ಸಂದರ್ಭದಲ್ಲಿ ವಿದ್ಯುತ್ ಅವಘಡಕ್ಕೆ ಮುಂಜಾಗ್ರತಾ ಕ್ರಮದ ಮಾಹಿತಿ ಕಾರ್ಯಾಗಾರ ನಡೆಯಿತು. ಮಂಗಳೂರು ವಿದ್ಯುತ್ ಸರಬರಾಜು ಇಲಾಖೆಯ ಹಳೆಯಂಗಡಿ ಕಚೇರಿಯ ಸಿಬ್ಬಂದಿ ಶ್ರೀಕಾಂತ್ ಮತ್ತು ಸುರೇಶ್ ಅವರು ಮಕ್ಕಳಿಗೆ ಮಳೆಗಾಲದಲ್ಲಿ ನಡೆಯುವ ವಿದ್ಯುತ್ ಅವಘಡಕ್ಕೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಬಗ್ಗೆ ಮಾಹಿತಿ ನೀಡಿದರು. ಕಿಶೋರ ಕಿಶೋರಿ ಸಂಘದ ವಿದ್ಯಾರ್ಥಿಗಳಾದ ಲಕ್ಷ್ಯ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಯಶಿಕ ವಂದಿಸಿದರು.

ಭಂಡಾರ್ಕಾರ್ಸ್ ಪದವಿ ಕಾಲೇಜಿನ ಆಶ್ರಯದಲ್ಲಿ ಪರಿಸರ ದಿನಾಚರಣೆ

ಕುಂದಾಪುರ : ಕುಂದಾಪುರದ ಭಂಡಾರ್ಕಾರ್ಸ್ ಪದವಿ ಕಾಲೇಜಿನ ಆಶ್ರಯದಲ್ಲಿ ಪರಿಸರ ದಿನಾಚರಣೆ ಕಾರ್ಯಕ್ರಮ ಶನಿವಾರ ನಡೆಯಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸರಕಾರಿ ಪದವಿಪೂರ್ವ ಕಾಲೇಜು ಕುಂದಾಪುರದ ಉಪ ಪ್ರಾಂಶುಪಾಲ ಕಿರಣ್ ಹೆಗ್ಡೆ ಅವರು, ಪರಿಸರ ಮತ್ತು ನಮ್ಮ ಪ್ರಕೃತಿಯ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ ವಹಿಸಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ಭೌತಶಾಸ್ತ್ರ ಉಪನ್ಯಾಸಕಿ ವಿದ್ಯಾ ಪರಿಸರ ಸಂರಕ್ಷಣೆಯ ಕುರಿತಾಗಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ವಾಚಿಸಿದರು. ಕುಂದಾಪುರ ಅರಣ್ಯ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಗಿಡಗಳನ್ನು ವಿತರಿಸಲಾಯಿತು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಧರಣಿ, ಸನಾ, ನಿರೀಕ್ಷ ಪರಿಸರ ಗೀತೆಗೆ ಸ್ವರ ಸಂಯೋಜಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಡಾ.ಸರೋಜಾ ಎಂ.ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಖ್ಯಾಶಾಸ್ತ್ರ ಉಪನ್ಯಾಸಕಿ ಚೈತ್ರ ವಂದಿಸಿದರು. ವಾಣಿಜ್ಯಶಾಸ್ತ್ರ ಉಪನ್ಯಾಸಕ ವಿದ್ಯಾಧರ ಕಾರ್ಯಕ್ರಮ ನಿರೂಪಿಸಿದರು.

ಬೃಹತ್ ತ್ಯಾಜ್ಯ: ಮದುವೆ ಹಾಲ್‌ನವರಿಗೆ ಮಾಹಿತಿ

ವಿಟ್ಲ: ಘನತ್ಯಾಜ್ಯ ನಿರ್ವಹಣಾ ನಿಯಮಗಳು 2026ರ ನಿಯಮದಂತೆ ಬೃಹತ್ ತ್ಯಾಜ್ಯ ಉತ್ಪಾದಕರನ್ನು ನೋಂದಾಯಿಸುವ ಬಗ್ಗೆ ಬೃಹತ್ ತ್ಯಾಜ್ಯ ಉತ್ಪಾದಕರೆಂದು ಅಂದಾಜಿಸಲಾಗಿರುವ ಮದುವೆ ಸಮಾರಂಭ ನಡೆಸುವ ಹಾಲ್‌ನವರಿಗೆ ಮಾಹಿತಿ ಕಾರ್ಯಕ್ರಮವನ್ನು ಪಟ್ಟಣ ಪಂಚಾಯತ್‌ನ ಸಭಾಂಗಣದಲ್ಲಿ ನಡೆಸಲಾಯಿತು. ಮುಖ್ಯಾಧಿಕಾರಿ ಕರುಣಾಕರ ವಿ. ಅವರು ಘನತ್ಯಾಜ್ಯ ನಿರ್ವಹಣಾ ನಿಯಮಗಳು 2026ರ ಬಗ್ಗೆ ವಿವರವಾದ ಮಾಹಿತಿ ನೀಡಿ ದಿನಕ್ಕೆ 100 ಕೆ.ಜಿ. ಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ತ್ಯಾಜ್ಯ ಉತ್ಪಾದಕರನ್ನು ಬೃಹತ್ ತ್ಯಾಜ್ಯ ಉತ್ಪಾದಕರೆಂದು ಈ ನಿಯಮದಲ್ಲಿ ಕಡ್ಡಾಯವಾಗಿ ನೋಂದಾಯಿಸಲು ಹಾಗೂ ಈ ನಿಯಮದಲ್ಲಿ ಬೃಹತ್ ತ್ಯಾಜ್ಯ ಉತ್ಪಾದಕರ ಪಾತ್ರದ ಬಗ್ಗೆ ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ನಿಯಮ ಪಾಲಿಸಿ ಪಟ್ಟಣದ ಸ್ವಚ್ಚತೆಗೆ ಸಹಕರಿಸಲು ತಿಳಿಸಿದರು. ಸ್ಥಾಯಿ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ ಶೆಟ್ಟಿ ನಾಲ್ಕು ಬಗೆಯ ತ್ಯಾಜ್ಯ ವಿಂಗಡಣೆ ಮಾಡಿ ಪಟ್ಟಣ ಪಂಚಾಯತ್‌ಗೆ ನೀಡುವಂತೆ ತಿಳಿಸಿದರು. ಪಟ್ಟಣ ಪಂಚಾಯತ್‌ನ ಉಪಾಧ್ಯಕ್ಷರಾದ ಸಂಗೀತ ಪಾಣೆಮಜಲು ಉಪಸ್ಥಿತರಿದ್ದರು. ಆರೋಗ್ಯ ವಿಭಾಗದ ಲೋಕೇಶ್, ಲ್ಯಾನ್ಸಿ ಹಾಗೂ ಕಮ್ಯೂನಿಟಿ ಮೊಬಿಲೈಸರ್‌ಗಳು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಗುಮ್ಮಟಗದ್ದೆ ಒಕ್ಕೂಟದ ತ್ರೈಮಾಸಿಕ ಸಭೆ

ನಿಡ್ಪಳ್ಳಿ : ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಟ್ಟಂಪಾಡಿ ವಲಯದ ಗುಮ್ಮಟಗದ್ದೆ ಒಕ್ಕೂಟದ ತ್ರೈಮಾಸಿಕ ಸಭೆ ಮತ್ತು ಒಕ್ಕೂಟದ ನೂತನ ಪದಾಧಿಕಾರಿಗಳ ಸಭೆ ನಡೆಯಿತು. ಒಕ್ಕೂಟದ ಅಧ್ಯಕ್ಷರಾಗಿ ನಾರಾಯಣ ನಾಯ್ಕ ಕುದ್ಕಲ್, ಉಪಾಧ್ಯಕ್ಷರಾಗಿ ನಿತ್ಯಾನಂದ ಬೈಲಾಡಿ, ಕಾರ್ಯದರ್ಶಿಯಾಗಿ ಅಶೋಕ ಹೊಸಗದ್ದೆ ಆಯ್ಕೆಯಾದರು. ಜೊತೆ ಕಾರ್ಯದರ್ಶಿಯಾಗಿ ಹೇಮಾವತಿ



ಚೆಲ್ಯಡ್ಕ, ಕೋಶಾಧಿಕಾರಿಯಾಗಿ ಪ್ರಭಾಕರ ಆಚಾರ್ಯ ಚೆಲ್ಯಡ್ಕ ಆಯ್ಕೆಯಾದರು. ವಲಯದ ಮೇಲ್ವಿಚಾರಕ ಆದರ್ಶ್ ಉಪಸ್ಥಿತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಸೇವಾ ಪ್ರತಿನಿಧಿ ಭಾರತಿ ಉಪ್ಪಳಿಗೆ ಹಾಗೂ ಒಕ್ಕೂಟದ ಸದಸ್ಯರು ಉಪಸ್ಥಿತರಿದ್ದರು.



ಪಡುಮಲೆ ಎರುಕೊಟ್ಟದ ಕೋಟಿ-ಚೆನ್ನಯರ ಜನ್ಮಸ್ಥಾನ ಮತ್ತು ಮೂಲಸ್ಥಾನದಲ್ಲಿ ಸಂಕ್ರಮಣ ಶುಭ ದಿವಸದಂದು ಪಡುಮಲೆ ಶ್ರೀ ಕೂವೆ ಶಾಸ್ತಾರ ವಿಷ್ಣುಮೂರ್ತಿ ದೇವಸ್ಥಾನದ ಪ್ರಧಾನ ಅರ್ಚಕ ಮಹಾಲಿಂಗ ಭಟ್ ಬಿ. ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಸೂ ಫ್ರಮ್ ಸೊ ಚಲನಚಿತ್ರ ನಟ ಸನಿಲ್ ಗೌತಮ್ ಭೇಟಿ ನೀಡಿದರು. ಈ ಸಂದರ್ಭ ಸಮಿತಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ, ಕಾರ್ಯದರ್ಶಿ ಶ್ರೀಧರ್ ಪಟ್ಲ ಪುತ್ತೂರು, ಸದಸ್ಯ ಚರಣ್ ಕೆ., ಜಗನ್ನಾಥ್ ಬಂಟ್ವಾಳ, ರಾಜೇಶ್, ರವಿ ಬಂಟ್ವಾಳ, ಅಭಿಷೇಕ್ ಬಂಟ್ವಾಳ ಮೊದಲಾದವರು ಉಪಸ್ಥಿತರಿದ್ದರು.

ಜೂ. 23: 'ಡಿಎನ್ಎ ಕರಾವಳಿ ಧ್ವನಿ' ಒಂದು ದಿನದ ಜಾಗೃತಿ ಮತ್ತು ಸಂವಾದ ಕಾರ್ಯಕ್ರಮ

ಮಂಗಳೂರು: ಬೆಂಗಳೂರು ಮೂಲದ ಡಿಸೆಬಿಲಿಟಿ ಅಲಯನ್ಸ್, ಮಾಯಾ–ಪೇರೆಂಟ್ಸ್ ಫಾರ್ ಇನ್‌ಕ್ಲೂಸಿವ್ ಡೆವಲಪ್‌ಮೆಂಟ್ ಹಾಗೂ ಮಂಗಳೂರಿನ ಅರಿವು ಅರ್ಲಿ ಇಂಟರ್ವೆನ್ಷನ್ ಸೆಂಟರ್, ಲಯನ್ಸ್ ಕ್ಲಬ್ ಅಶೋಕನಗರ ಚಾರಿಟೇಬಲ್ ಟ್ರಸ್ಟ್ ಮತ್ತು ಲಯನ್ಸ್ ಕ್ಲಬ್ ಮಂಗಳೂರು ಅಶೋಕನಗರ ಸಹಯೋಗದಲ್ಲಿ ಡಿಎನ್ಎ ಕರಾವಳಿ ಧ್ವನಿ ಎಂಬ ಒಂದು ದಿನದ ಜಾಗೃತಿ ಮತ್ತು ಸಂವಾದ ಕಾರ್ಯಕ್ರಮ ಜೂ. 23ರಂದು ಬೆಳಗ್ಗೆ 8.30ರಿಂದ ಕದ್ರಿ ಸರ್ಕ್ಯೂಟ್ ಹೌಸ್ ಸಮೀಪದ ಲಯನ್ಸ್ ಅಶೋಕ ಸೇವಾ ಭವನದಲ್ಲಿ ಆಯೋಜಿಸಲಾಗಿದೆ.

ಆರೋಗ್ಯ ಸಚಿವ ಯು.ಟಿ. ಖಾದರ್ ಉದ್ಘಾಟಿಸಲಿದ್ದಾರೆ. ಶಾಸಕ ಡಿ. ವೇದವ್ಯಾಸ ಕಾಮತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಶೋಕನಗರ ಲಯನ್ಸ್ ಕ್ಲಬ್ ಚಾರಿಟೇಬಲ್ ಟ್ರಸ್ಟ್‌ನ ಲಯನ್ ಡಾ. ನವೀನ್ ಶೆಟ್ಟಿ ವಹಿಸಲಿದ್ದಾರೆ ಎಂದು ಅರಿವು ಅರ್ಲಿ ಇಂಟರ್ವೆನ್ಷನ್ ಸೆಂಟರ್ ಸ್ಥಾಪಕ ನಿರ್ದೇಶಕಿ ಪೂರ್ಣಿಮಾ ಆರ್. ಭಟ್ ಮಾತನಾಡಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗೌರವ ಅತಿಥಿ ಗಳಾಗಿ ಜಿಲ್ಲಾ ಗವರ್ನರ್ ಕುಡ್ಪಿ ಅರವಿಂದ್ ಶೆಣೈ, ಲಯನ್ಸ್ ಕ್ಲಬ್ ಮಂಗಳೂರು ಅಧ್ಯಕ್ಷ ಪ್ರಶಾಂತ್ ಬಿ. ಶೆಟ್ಟಿ, ವಿಕಲಚೇತನ ಮಾಜಿ ಆಯುಕ್ತರು ವಿ.ಎಸ್. ಬಸವರಾಜು, ಜಿ.ಪಂ. ಸಿಇಒ ವಿನಾಯಕ ನರ್ವಾಡೆ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಮನೀಶ್ ನಾಯಕ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಮ್ಮಯ್ಯ, ವೆನ್ಲಾಕ್ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಶಿವಪ್ರಕಾಶ್, ಡಿಡಿಪಿಐ ಶಶಿಧರ್ ಜಿ.ಎಸ್., ಮಂಗಳಾ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ. ಗಣಪತಿ ಭಟ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಉಸ್ಮಾನ್, ಡಾ. ಸಂತೋಷ್ ಸೋನ್ಸ್, ಡಾ. ಶ್ಯಾಮ್ ಎಸ್. ಭಟ್, ಶ್ವೇತಾ ಭಾಗವಹಿಸುವವರು ಎಂದರು.

ಅಶೋಕನಗರ ಲಯನ್ಸ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ನ ಲಯನ್ ಡಾ. ನವೀನ್ ಶೆಟ್ಟಿ, ಸಲಹಾ ಸಮಿತಿ ಸದಸ್ಯೆ ಡಾ. ಶೀತಲ್, ಲಯನ್ಸ್ ಪ್ರಾಂತೀಯ ಅಧ್ಯಕ್ಷ ಚರಣ್ ಆಳ್ವ, ಲಯನ್ಸ್ ಪ್ರಶಾಂತ್ ಬಿ. ಶೆಟ್ಟಿ, ವಸಂತ್ ಶೆಟ್ಟಿ, ನಾರಾಯಣ್ ಉಪಸ್ಥಿತರಿದ್ದರು.

ಕರಾವಳಿ ಸಂರಕ್ಷಣಾ ಯೋಜನೆಗಳ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಾ ಸಭೆ

ಕಡಲ್ಕೊರೆತ ತಡೆಗೆ ಸೂಕ್ತ ಕ್ರಮ

ಉಳ್ಳಾಲ: ದಕ್ಷಿಣ ಕನ್ನಡ ಜಿಲ್ಲೆಯ ಶೋರ್ಲೈನ್ ಮ್ಯಾನೇಜ್ಮೆಂಟ್ ಯೋಜನೆಯಡಿ ಸೋಮೇಶ್ವರ–ಉಳ್ಳಾಲ ಭಾಗದಲ್ಲಿ ಕೈಗೊಳ್ಳಲಿರುವ ಕರಾವಳಿ ಸಂರಕ್ಷಣಾ ಯೋಜನೆಗಳ ಕುರಿತು ಸಾರ್ವಜನಿಕರ ಸಲಹೆ ಹಾಗೂ ಅಭಿಪ್ರಾಯ ಸಂಗ್ರಹಾ ಸಭೆಯು ಗುರುವಾರ ಸಂಜೆ ಸೋಮೇಶ್ವರ ಪುರಸಭೆಯ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಯೋಜನೆಗಳ ಕುರಿತು ಮಾಹಿತಿ ನೀಡಿದರೆ, ಸ್ಥಳೀಯರು ತಮ್ಮ ಹಲವು ಪ್ರಶ್ನೆಗಳು ಹಾಗೂ ಅಭಿಪ್ರಾಯಗಳನ್ನು ಮಂಡಿಸಿದರು. ಸಲಹೆಗಾರ ಅಭಿಜಿತ್ ಅವರು ಉಚ್ಚಿಲ ಬಟ್ಟಪಾಡಿಯಲ್ಲಿರುವ ಆಫ್‌ಶೋರ್ ರೀಫ್ ಕುರಿತು ಮಾಹಿತಿ ನೀಡಿದರು. ಬಳಿಕ ಮಂಗಳೂರು ಬಂದರು ಮೀನುಗಾರಿಕಾ ವಿಭಾಗದ ಸಹಾಯಕ ಇಂಜಿನಿಯರ್ ಮನೋಹರ್ ಆಚಾರ್ಯ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿದರು.

ಮತ್ತೋರ್ವ ಸಲಹೆಗಾರರಾದ ಡಾ.ಪ್ರವೀಣ್ ಸುವರ್ಣ ಮಾತನಾಡಿ, ಕಡಲ್ಕೊರೆತ ತಡೆಗಟ್ಟುವ ಉದ್ದೇಶದಿಂದ



ಸಿದ್ಧಪಡಿಸಲಾಗಿರುವ ವಿವಿಧ ಯೋಜನೆಗಳ ಕುರಿತು ವಿವರಿಸಿದರು. ಕರಾವಳಿಗೆ ಅಪ್ಪಳಿಸುವ ಅಲೆಗಳ ತೀವ್ರತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಸಾರ್ವಜನಿಕರು ಯೋಜನೆಗಳ ಅನುಷ್ಠಾನ ಹಾಗೂ ಪರಿಣಾಮಕಾರಿತ್ವದ ಕುರಿತು ಹಲವು ಪ್ರಶ್ನೆಗಳನ್ನು ಮುಂದಿಟ್ಟರು. ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಸ್ಥಳೀಯರ ಅಭಿಪ್ರಾಯಗಳಿಗೆ ಸೂಕ್ತ ಮಹತ್ವ ನೀಡಲಾಗುತ್ತಿಲ್ಲ ಎಂಬ ಅಸಮಾಧಾನವನ್ನೂ ವ್ಯಕ್ತಪಡಿಸಿದರು.

ಸೋಮೇಶ್ವರ–ಉಳ್ಳಾಲ ಕರಾವಳಿ ಭಾಗದ ಸಂರಕ್ಷಣೆಗೆ ಸಂಬಂಧಿಸಿದ ಈ ಸಭೆಯಲ್ಲಿ ಸಾರ್ವಜನಿಕರ ಅಭಿಪ್ರಾಯಗಳನ್ನು ದಾಖಲಿಸಿಕೊಂಡ ಸಲಹೆಗಾರರು, ಮುಂದಿನ ಹಂತದ ಯೋಜನೆಗಳಲ್ಲಿ ಅವುಗಳನ್ನು ಪರಿಗಣಿಸುವ ಭರವಸೆ ನೀಡಿದರು.

> **ವೈಜ್ಞಾನಿಕ ರೀತಿಯಲ್ಲಿ ಯೋಜನೆ**
> **ಕಡಲ್ಕೊರೆತ ತಡೆಯಲು ಬಳಸುವ ಗ್ರೋಯ್ನ್ಸ್ ಎಲ್ಲಾ ಪ್ರದೇಶಗಳಲ್ಲೂ ಪರಿಣಾಮಕಾರಿಯಾಗುವುದಿಲ್ಲ. ಬೀಚ್‌ಗಳಿಗೆ ಟಿ-ಶೇಪ್ ವಿನ್ಯಾಸ ನೀಡುವುದರಿಂದ ಅಲೆಗಳ ಅಬ್ಬರವನ್ನು ಕಡಿಮೆ ಮಾಡಬಹುದು. ಅಲೆಗಳು ಯಾವ ದಿಕ್ಕಿನಿಂದ ಕರಾವಳಿಗೆ ಅಪ್ಪಳಿಸುತ್ತವೆ ಎಂಬುದನ್ನು ಪರಿಗಣಿಸಿ ವೈಜ್ಞಾನಿಕ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತದೆ.**
> ■ **ಮನೋಹರ್ ಆಚಾರ್ಯ, ಸಹಾಯಕ ಇಂಜಿನಿಯರ್, ಮಂಗಳೂರು ಬಂದರು ಮೀನುಗಾರಿಕಾ ವಿಭಾಗ**

ನಾಲ್ವರು ಸಹೋದರಿಯರ ರೋದನ

ಕೆರೆಗೆ ಬಿದ್ದು ದನ ಸಾವು

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಗೋಳಿತೊಟ್ಟು ಗ್ರಾಮದ ತಿರ್ಲೆ ಎಂಬಲ್ಲಿನ ನಿವಾಸಿಗರಾದ ನಾಲ್ವರು ಸಹೋದರಿಯರು ಸಾಕುತ್ತಿರುವ ಬರೋಬ್ಬರಿ ಮಲೆನಾಡಗಿಡ್ಡ ಜಾತಿಯ 63 ದನಕರುಗಳ ಪೈಕಿ ದನವೊಂದು ಪರಿಸರದ ತೋಟದಲ್ಲಿನ ಕೆರೆಗೆ ಬಿದ್ದು ಸಾವನ್ನಪ್ಪಿದ್ದು, ದನವನ್ನು ಕಳೆದುಕೊಂಡ ಸಹೋದರಿಯರ ರೋಧನ ಮುಗಿಲು ಮುಟ್ಟುವಂತಿದೆ.

ಗೋಳಿತೊಟ್ಟು ಗ್ರಾಮದ ತಿರ್ಲೆ ಮರಂದೆ ಮನೆ ನಿವಾಸಿಗರಾದ ನಾಗಮ್ಮ ಗೌಡ, ಚೆನ್ನಮ್ಮ ಗೌಡ , ರೇವತಿ ಗೌಡ , ಲಲಿತಾ ಗೌಡ ಎಂಬ ನಾಲ್ವರು ಸಹೋದರಿಯರು ಸುಮಾರು 5 ಎಕ್ರೆ ಪ್ರದೇಶದ ಕೃಷಿ ಭೂಮಿ ಮತ್ತದರಲ್ಲಿನ ಚಿಕ್ಕದಾದ ಮನೆಯಲ್ಲಿ ವಾಸ್ತವ್ಯ ಹೊಂದಿದ್ದರೂ 63 ಕ್ಕೂ ಮಿಗಿಲಾಗಿ ದನಕರುಗಳನ್ನು ಅಕ್ಕರೆಯಿಂದ ಸಾಕುತ್ತಿದ್ದಾರೆ. ಯಾವುದೇ ನಿಯಂತ್ರಣವಿಲ್ಲದೆ ಸಾಕಲ್ಪಡುವ ಈ ದನಕರುಗಳು ಪರಿಸರದಾದ್ಯಂತ ಗುಂಪು ಗುಂಪಾಗಿ ಅಲೆಯುತ್ತಿದ್ದು, ಈಗೆ ಅಲೆಯುವ ಸಮಯದಲ್ಲಿ ದನ ವೊಂದು ಪರಿಸರದ ತೋಟವೊಂದರ ಕೆರೆಗೆ ಬಿದ್ದು, ನೀರಿನಲ್ಲಿ ಮುಳುಗಿ ಸಾವನ್ನಪ್ಪಿದೆ.

ತಮ್ಮ ಪ್ರೀತಿಯ ದನದ ಶವವನ್ನು ಕೆರೆಯಲ್ಲಿ ಕಂಡು ರೋಧಿಸಿದ ಈ ಸಹೋದರಿಯರು, ನಿತ್ಯ ಪರಿಸರದಲ್ಲಿ ಅಲೆದಾಡಿ ಅನುಭವ ವಿರುವ ನಮ್ಮ ದನಕರುಗಳು ಕೆರೆಗೆ ಆಕಸ್ಮಿಕವಾಗಿ ಬೀಳುವ ಸಾಧ್ಯತೆ ಇಲ್ಲವೆಂದು ಪ್ರತಿಪಾದಿಸುತ್ತಾ, ಯಾರೋ ಉದ್ದೇಶ ಪೂರ್ವ ಕವಾಗಿಯೇ ದನವನ್ನು ಕೆರೆಗೆ ದೂಡಿ ಹಾಕಿ ಕೊಂದಿದ್ದಾರೆಂದು ಆಪಾದಿಸಿ ಶಪಿಸುತ್ತಿರುವುದು ಕಂಡು ಬಂದಿದೆ.

ನಾಲ್ವರು ಸಹೋದರಿಯರ ಅಪರಿಮಿತ ಗೋ ಪ್ರೀತಿ, ತಂಡೋಪತಂಡವಾಗಿ ಮೇಯಲು ಮುಂದಾಗುವ ಗೋ ಹಿಂಡುಗಳಿಂದ ಸಮಸ್ಯೆಗೀಡಾಗುತ್ತಿರುವ ಸ್ಥಳೀಯ ಕೃಷಿಕರು , ಗೋವುಗಳನ್ನು ನಿಯಂತ್ರಿಸಿ ಸಾಕಲಾಗದ ಅಸಹಾಯಕತೆಯ ಸಹೋದರಿಯರ ಸಮಸ್ಯೆಗಳನ್ನು ನಿವಾರಿಸಲು ಸರಕಾರಿ ವ್ಯವಸ್ಥೆ ಯಾ ಸಂಘ ಸಂಸ್ಥೆಗಳು ಮುಂದಾಗುವ ಅವಶ್ಯಕತೆ ಇಲ್ಲಿ ಹೆಚ್ಚಿದೆ.

ಸಾಹಿತ್ಯಲೋಕಕ್ಕೆ ಹೊಸ ಹೊಳಹು ನೀಡಿದವರು ಗಿರೀಶ್ ಕಾರ್ನಾಡ್



ಮಂಗಳೂರು: ಗಿರೀಶ್ ಕಾರ್ನಾಡ್ ಅವರನ್ನು ಓರ್ವ ಸಾಹಿತಿಯೆಂದೋ, ನಾಟಕಕಾರನೆಂದೋ ಪರಿಚಯಿಸುವುದು ಸಾಧ್ಯವಿಲ್ಲ. ಆತ್ಮವಿಶ್ವಾಸ ಮತ್ತು ಮಹತ್ವಾಕಾಂಕ್ಷೆಯ ಸಾಕಾರಮೂರ್ತಿ ಆಗಿದ್ದ ಗಿರೀಶ್ ಕಾರ್ನಾಡ್ ಜೀವಿತಾವಧಿಯ ಪ್ರತೀ ಕ್ಷಣವನ್ನೂ ಸಾಧನೆಯ ಹಾದಿಯಲ್ಲಿಯೇ ಕ್ರಮಿಸಿದವರು. ಇತಿಹಾಸ ಮತ್ತು ಪುರಾಣಗಳನ್ನು ಆಧರಿಸಿದ ಬರವಣಿಗೆಯನ್ನು ಸಮಕಾಲೀನತೆಯ ಸೂತ್ರದಲ್ಲಿ ಬಂಧಿಸಿ ಭಾರತೀಯ ಸಾಹಿತ್ಯಲೋಕಕ್ಕೆ ಹೊಸ ಹೊಳಹುಗಳನ್ನು ನೀಡಿದವರು. ಭಾರತೀಯ ರಂಗಭೂಮಿ ಮತ್ತು ಚಿತ್ರರಂಗಕ್ಕೆ ಹೊಸ ಆಯಾಮ ನೀಡಿದವರು ಎಂದು ಪತ್ರಕರ್ತೆ ರಾಜಲಕ್ಷ್ಮೀ ಕೋಡಿಬೆಟ್ಟು ಹೇಳಿದರು.

ನಗರದ ಸಂತ ಆಗ್ನೆಸ್ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ಹಾಗೂ ಸಂತ ಆಗ್ನೆಸ್ ಕಾಲೇಜು (ಸ್ವಾಯತ್ತ) ಮಂಗಳೂರು ಜಂಟಿ ಆಶ್ರಯದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಗಿರೀಶ್ ಕಾರ್ನಾಡ್ ಅವರ 'ಕವಿ – ಕಾವ್ಯ – ಸಾಹಿತ್ಯ – ಪರಂಪರೆ' ವಿಷಯಾಧಾರಿತ ಉಪನ್ಯಾಸ ಸರಣಿಯ 7ನೇ ಮಾಲಿಕೆ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಕಸಾಪ ದ.ಕ. ಜಿಲ್ಲಾಧ್ಯಕ್ಷ ಡಾ.ಎಂ. ಪಿ. ಶ್ರೀನಾಥ ಮಾತನಾಡಿ, ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಪರಂಪರೆಗೆ ತಮ್ಮ ಕೊಡುಗೆಗಳನ್ನು ಕೊಡುವ ಮೂಲಕ ಸಾಹಿತ್ಯದ ವಿಸ್ತಾರತೆಗೆ ಕೈಜೋಡಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲೆ ಡಾ. ಎಂ ವೆನಿಸ್ಸಾ ಎ.ಸಿ. ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಸ್ತಿಯಂ ಪಾಯ್ಸ್ ಸ್ವಾಗತಿಸಿದರು. ಕನ್ನಡ ಸಹಾಯಕ ಪ್ರಾಧ್ಯಾಪಕಿ ನಿಶ್ಮಿತಾ ಕೆ. ವಂದಿಸಿದರು. ದ್ವಿತೀಯ ಬಿ.ಸಿ.ಎ ವಿದ್ಯಾರ್ಥಿನಿ ಸುಶ್ಮಿತಾ ಕಾರ್ಯಕ್ರಮ ನಿರೂಪಿಸಿದರು.

ಕೆಪಿಸಿಸಿ ನೂತನ ಅಧ್ಯಕ್ಷರ ಪದಗ್ರಹಣಕ್ಕೆ ಸುಳ್ಯದಿಂದ 200 ಮಂದಿ ಭಾಗಿ



ಸುಳ್ಯ: ವಿಧಾನ ಪರಿಷತ್ ಸದಸ್ಯ, ನಿಯೋಜಿತ ಕೆಪಿಸಿಸಿ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಪದಗ್ರಹಣ ಸಮಾರಂಭವು ಜೂ. 21ರಂದು ಬೆಂಗಳೂರಿನಲ್ಲಿ ನಡೆಯಲಿದ್ದು ಈ ಕಾರ್ಯಕ್ರಮದಲ್ಲಿ ಸುಳ್ಯ ತಾಲೂಕಿನ 200 ಮುಂಚೂಣಿ ಘಟಕಗಳ ಮುಖಂಡರು ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್ ಮಾತನಾಡಿ, ರಾಜ್ಯದಲ್ಲಿ ಅಭಿವೃದ್ಧಿ ಜೊತೆಗೆ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಕರಾವಳಿಯ ನಾಯಕ ಅಧ್ಯಕ್ಷರಾಗಿದ್ದು, ವಿಶೇಷವಾಗಿ ಹೈಕಮಾಂಡ್ ನಾಯಕರ ಉಪಸ್ಥಿತಿಯಲ್ಲಿ ಪದಗ್ರಹಣ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಫಿ ಕುತ್ತಮೊಟ್ಟೆ, ರಕ್ಷಿತ್ ಗೂನಡ್ಕ, ಶರೀಫ್ ಕಂಠಿ, ಸಿದ್ದೀಕ್ ಕೊಕ್ಕೊ, ರಕ್ಷಿತ್ ಉಪಸ್ಥಿತರಿದ್ದರು.

ಕೆಪಿಸಿಸಿ ಪದಾಧಿಕಾರಿಗಳ ವರ್ತನೆ ಬಗ್ಗೆ ದೂರು

ಸಂಪಾಜೆ ಗ್ರಾಮದಲ್ಲಿ ಪಕ್ಷದ ಒಳಗಿನ ಗುದ್ದಾಟಗಳ ಬಗ್ಗೆ ಪ್ರಶ್ನೆಗೆ ಉತ್ತರಿಸಿ ಕಾಂಗ್ರೆಸ್ ಪಕ್ಷದಲ್ಲಿ ವಲಯ ಸಮಿತಿ ಎಂಬುವುದು ಇಲ್ಲ. ಕೇವಲ ಗ್ರಾಮ ಸಮಿತಿಗಳು ಇದ್ದು, ಅಲ್ಲಿನ ಸಮಸ್ಯೆಗಳನ್ನು ಆಲಿಸಲಾಗಿದೆ. ಇತ್ತೀಚೆಗೆ ನಡೆದ ಸಭೆಯಲ್ಲಿ ಕೆಪಿಸಿಸಿ ಪದಾಧಿಕಾರಿ ಭಾಗವಹಿಸಿದ್ದು, ಈ ಬಗ್ಗೆ ರಾಜ್ಯ ಹಾಗೂ ಜಿಲ್ಲಾ ಘಟಕಕ್ಕೆ ಪತ್ರ ಬರೆಯುವುದಾಗಿ ತಿಳಿಸಿದರು. ದಕ್ಷಿಣ ಕಾಶಿ ಕೊಟ್ಟಿಯೂರಿನಲ್ಲಿ ಬಾವಲಿಕಟ್ಟು ನಡೆಸಿದ ಕುರಿತ ಪ್ರಶ್ನೆಗೆ ಟಿ.ಎಂ. ಶಹೀದ್ ಸಿಡಿಮಿಡಿಗೊಂಡು ಉತ್ತರಿಸದೇ ಹೊರನಡೆದರು.

ಸಾಲಿಗ್ರಾಮ ದೇವಸ್ಥಾನದಲ್ಲಿ ಸೀಯಾಳ ಅಭಿಷೇಕ



ಕೋಟ: ಸಕಾಲಿಕ ಮಳೆ ಮತ್ತು ಸಮೃದ್ಧ ಬೆಳೆಗಾಗಿ ಜಗದೊಡೆಯ ಶ್ರೀ ಮದ್ಯೋಗಾನಂದ ಗುರು ನರಸಿಂಹ ಮತ್ತು ಪರಿವಾರ ದೇವತೆಗಳಿಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸೀಯಾಳ ಅಭಿಷೇಕ ಸೋಮವಾರ ನಡೆಯಿತು.

ಕಾರ್ಯಕ್ರಮದಲ್ಲಿ ಭಕ್ತಾದಿಗಳು ಭಾಗವಹಿಸಿ ಶ್ರೀ ದೇವರಿಗೆ ಪ್ರಾರ್ಥನೆ ಸಲ್ಲಿಸಿದರು. ಆಡಳಿತ ಮಂಡಳಿ ಅಧ್ಯಕ್ಷ ಪ್ರಕಾಶ ಕಾರಂತರು, ಉಪಾಧ್ಯಕ್ಷ ಸಿ. ಚಂದ್ರಶೇಖರ ಉಪಾಧ್ಯ, ಕಾರ್ಯದರ್ಶಿ ಪರಶುರಾಮ ಭಟ್ಟರು, ಹಾಗೂ ಆಡಳಿತ ಮಂಡಳಿಯ ಸದಸ್ಯರಾದ ಕೆ. ತಾರಾನಾಥ ಹೊಳ್ಳ, ಪ್ರಸನ್ನ ತುಂಗ. ಮತ್ತು ಕೃಷ್ಣಮೂರ್ತಿ ಉಪಸ್ಥಿತರಿದ್ದರು.

> **ಸಾಲಿಗ್ರಾಮ ದೇವಸ್ಥಾನಕ್ಕೆ ಡಿಸಿ ಭೇಟಿ**
> ಸಾಲಿಗ್ರಾಮ ಶ್ರೀ ಗುರುನರಸಿಂಹ ದೇಗುಲಕ್ಕೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೇಗುಲದ ವತಿಯಿಂದ ಜಿಲ್ಲಾಧಿಕಾರಿಯವರಿಗೆ ಪ್ರಸಾದ ವಿತರಿಸಿ ಗೌರವಿಸಲಾಯಿತು

ಆರೋಗ್ಯಕರ ದೈನಂದಿನ ಜೀವನದಲ್ಲಿ ಯೋಗದ ಮಹತ್ವ ...

ಭಾರತೀಯ ಪರಂಪರೆಯಲ್ಲಿ ಯೋಗವು ದೈವಿಕ ಸ್ಥಾನವನ್ನು ಪಡೆದಿದೆ. ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಯೋಗ ಅತ್ಯವಶ್ಯಕ. ಆರೋಗ್ಯಕರ ಮನಸ್ಸು ಮತ್ತು ದೇಹ ಇವೆರಡನ್ನು ಯೋಗದಿಂದ ರೂಪಿಸಿಕೊಳ್ಳಲು ಸಾಧ್ಯ. ಪ್ರತಿದಿನ ಬೆಳಿಗ್ಗೆ ಯೋಗ ಮಾಡಿದರೆ ದಿನವಿಡೀ ಚುರುಕು ಮತ್ತು ಶಕ್ತಿಯುತರಾಗಿರಬಹುದು. ಇದು ಆರೋಗ್ಯಕ್ಕೆ ಸಾಧನವಾಗಿರುವುದು ಅಲ್ಲದೆ ಮಾನಸಿಕ ಸ್ವಾಸ್ಥ್ಯ, ಬುದ್ಧಿಯ ಪ್ರಖರತೆ, ಏಕಾಗ್ರತೆ, ಮನಶ್ಯಾಂತಿಯನ್ನು ಹೆಚ್ಚಿಸುತ್ತದೆ ಅಲ್ಲದೆ ಆಧ್ಯಾತ್ಮಿಕ ಪ್ರಗತಿಗಳಿಗೂ ದಾರಿ ಮಾಡುತ್ತದೆ. ವಿದ್ಯಾರ್ಥಿಗಳಿಗೆ ಯೋಗವು ಅಧ್ಯಯನದಲ್ಲಿ ಗಮನ ಕೇಂದ್ರಿಕರಿಸಲು ಸಹಾಯ ಮಾಡುತ್ತದೆ. ಒತ್ತಡ ಆತಂಕವನ್ನು ಕಡಿಮೆ ಮಾಡಿ, ಆತ್ಮಸಾಕ್ಷಾತ್ಕಾರ ಮತ್ತು ಒಳಗಿನ ಶಾಂತಿಯನ್ನು ಉತ್ತೇಜಿಸುತ್ತದೆ.

ಪತಂಜಲಿ ಮುನಿಗಳು ಯೋಗ ಎಂದರೆ ಯೋಗಶ್ಚಿತ್ತ ವೃತ್ತಿ ನಿರೋಗ ಎನ್ನುತ್ತಾರೆ. ಚಿತ್ತವೃತ್ತಿಯನ್ನು ವಿರೋಧಿಸುವುದು ಯೋಗದ ಉದ್ದೇಶ. ಈ ಹಿಂದೆ ಭಾರತದಲ್ಲಿ ಪ್ರಚಲಿತವಾದ ಯೋಗವು ಇಂದು ಜಗತ್ತಿನ ವಿವಿಧ ದೇಶಗಳಲ್ಲಿ ಹರಡಿ ಮಾನ್ಯತೆ ಪಡೆದಿದೆ. ಸಮತ್ವಂ ಯೋಗ ಉಚ್ಚಯತೇ ಅಂದರೆ ಸಮಭಾವವೇ ಯೋಗ ಎಂದು ಗೀತೆಯಲ್ಲಿ ತಿಳಿಸಿದೆ.

ದೇಹ, ಮನಸ್ಸು ಮತ್ತು ಉಸಿರಾಟವನ್ನು ಜೋಡಿಸಿಕೊಂಡು ಲವಲವಿಕೆಯಿಂದ ಹಾಗೂ ಆರೋಗ್ಯದಿಂದ ಇರಲು ಸಹಾಯ ಮಾಡುವುದೇ ಯೋಗದ ಏಕೈಕ ಉದ್ದೇಶ. ಜೀವನ ಪದ್ಧತಿಯನ್ನು ಜನರಿಗೆ ಮನವರಿಕೆ ಮಾಡುವುದು ಯೋಗದ ಗುರಿಯಾಗಿರುವುದು ಯೋಗವು ಅಂತರಂಗದ ಕನ್ನಡಿ ಬಹಿರಂಗದ ಶಿಕ್ಷಕ. ಅಂತರಂಗವನ್ನು ಹಸನುಗೊಳಿಸಿ ಬಹಿರಂಗವನ್ನು ಸೊಗಸುಗೊಳಿಸುವ ಮಾಧ್ಯಮ.

ಭಾರತದ ಪ್ರಧಾನಿ ನರೇಂದ್ರ ಮೋದಿಯವರು 2014ರ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಯೋಗದಿನದ ಆಚರಣೆಯ ಕುರಿತು ಪ್ರಸ್ತಾವಿಸಿದರು ಮತ್ತು 177 ರಾಷ್ಟ್ರಗಳಿಂದ ಆ ಪ್ರಸ್ತಾವನೆಗೆ ಬೆಂಬಲ ಸಿಕ್ಕಿ ವಿಶ್ವ ಸಂಸ್ಥೆಯು ಡಿಸೆಂಬರ್ 14, 2014ರಂದು ಪ್ರತಿವರ್ಷ ಜೂನ್ 21ನೇ ತಾರೀಕನ್ನು ಅಂತಾರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿತು. ಅಂತೆಯೇ 2015ರ ಜೂನ್ 21ರಂದು ಪ್ರಪಂಚದಾದ್ಯಂತ ಮೊದಲ ಬಾರಿಗೆ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಉತ್ತರ ಗೋಳಾರ್ಧದಲ್ಲಿ ಜೂನ್ 21 ವರ್ಷದ ಅತ್ಯಂತ ದೀರ್ಘ ಹಗಲಿನ ದಿನವಾಗಿದೆ. ಈ ದಿನವು ಸೂರ್ಯನ ವಿಶೇಷ ಸ್ಥಾನವನ್ನು ಸೂಚಿಸುತ್ತದೆ. ಮತ್ತು ಇದು ಆಧ್ಯಾತ್ಮಿಕ ಹಾಗೂ ನೈಸರ್ಗಿಕ ದೃಷ್ಟಿಯಿಂದ ಕೂಡಾ ಪ್ರಾಮುಖ್ಯತೆ ಹೊಂದಿದೆ. ಶಿವ ಮೊದಲ ಯೋಗಿ (ಆದಿ ಯೋಗಿ) ಈ ದಿನದಂದು ಯೋಗದ ಜ್ಞಾನವನ್ನು ಉಳಿದ ಮಾನವ ಕುಲಕ್ಕೆ ನೀಡಲು ಪ್ರಾರಂಭಿಸಿದರು.



ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು ಹೊಸದಿಲ್ಲಿಯ ರಾಜಪಥ್‌ನಲ್ಲಿ ನಡೆಸಲು ಭಾರತ ಸರಕಾರ ಆಯುಷ್ ಇಲಾಖೆಯ ಮೂಲಕ ಕಾರ್ಯಕ್ರಮ ರೂಪಿಸಿತ್ತು. 2015ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅಂತಾರಾಷ್ಟ್ರೀಯ ಯೋಗ ದಿನವನ್ನು ಗುರುತಿಸಲು 10 ರೂಪಾಯಿಯ ಸ್ಮರಣಾರ್ಥ ನಾಣ್ಯವನ್ನು ಬಿಡುಗಡೆ ಮಾಡಿತು.

ಮೋದಿ ಮತ್ತು ಗಣ್ಯರು ಸೇರಿ ರಾಜಪಥ್‌ನಲ್ಲಿ 35 ನಿಮಿಷಗಳ ಕಾಲ 21 ಆಸನಗಳನ್ನು ಪ್ರದರ್ಶಿಸಿದರು. ಏಪ್ರಿಲ್ 2017ರಂದು ಯು.ಎಸ್. ಪೋಸ್ಟಲ್ ಎಡ್ಮಿನಿಸ್ಟ್ರೇಷನ್ ಅಂತಾರಾಷ್ಟ್ರೀಯ ಯೋಗದಿನವನ್ನು ಗುರುತಿಸಲು ಒಂದೇ ಹಾಳೆಯ ಮೇಲೆ 10 ಆಸನಗಳ ಅಂಚೆಚೀಟಿಯನ್ನು ಬಿಡುಗಡೆ ಮಾಡಿತು.

ಅಂತೆಯೇ ಭಾರತದಲ್ಲಿ ಆಧ್ಯಾತ್ಮಿಕ ಚಳುವಳಿಯ ಹಲವಾರು ನಾಯಕರು ಈ ಉಪಕ್ರಮಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಇಶಾ ಫೌಂಡೇಶನ್‌ನ ಸಂಸ್ಥಾಪಕ ಸದ್ಗುರು ಅವರು ಇದು ಮಾನವನ ಆಂತರಿಕ ಯೋಗ ಕ್ಷೇಮಕ್ಕೆ ವೈಜ್ಞಾನಿಕ ವಿಧಾನವನ್ನು ವಿಶ್ವಾವ್ಯಾಪ್ತಿಯಾಗಿ ಮಾಡಲು ಒಂದು ರೀತಿಯ ಅಡಿಪಾಯವಾಗಿದೆ ಎಂದರು.

> **ಪ್ರತಿ ವರ್ಷವೂ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನವೆಂದು ವಿಶ್ವದಾದ್ಯಂತ ಆರೋಗ್ಯಕ್ಕಾಗಿ ಯೋಗದ ಮಹತ್ವವನ್ನು ಸಾರಲು ಮತ್ತು ಅದನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸುವ ಈ ದಿನವನ್ನು ಅಂತಾರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸಲಾಗುತ್ತದೆ. ಪ್ರತಿಯೊಬ್ಬರೂ ಯೋಗವನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡು ಆರೋಗ್ಯವಂತರಾಗಿರಬಹುದು.**

ಮೂಲತ ಮನುಷ್ಯನಲ್ಲಿ ದೈವತ್ವ ಅಡಗಿದೆ. ಈ ದೈವತ್ವವನ್ನು ಪ್ರಕಟಮಾಡುವುದೇ ಜೀವನದಲ್ಲಿ ಪರಮ ಉದ್ದೇಶ ತನ್ನ ಅಂತರ್ಬಾಹ್ಯ ಪ್ರವೃತ್ತಿಯನ್ನು ಸಂಸ್ಕಾರಗೊಳಿಸಿದ ನಂತರವೇ ಈ ದೈವತ್ವ ಪ್ರಕಟವಾಗುವುದು. ಈ ಸಂಸ್ಕಾರವನ್ನು ಕರ್ಮ ಜ್ಞಾನ ಭಕ್ತಿ ಮತ್ತು ಸಂಯಮದಿಂದ ಮಾಡಬಹುದು. ಇದನ್ನೇ ಕರ್ಮ ಯೋಗ ಜ್ಞಾನ ಯೋಗ, ಭಕ್ತಿಯೋಗ, ಅಷ್ಟಾಂಗ ಯೋಗ (ರಾಜ ಯೋಗ) ಎಂದು ಕರೆಯಲಾಗಿದೆ. ಇವುಗಳಲ್ಲಿ ಒಂದನ್ನು ಅಥವಾ ಎಲ್ಲವನ್ನು ಸೇರಿಸಿ ಕೂಡಾ ಮಾಡುವುದರಿಂದ ತನ್ನ ಗುರಿಯನ್ನು ಮುಟ್ಟಬಹುದೆಂದು ಸ್ವಾಮಿ ವಿವೇಕಾನಂದರು ತಿಳಿಸಿದ್ದಾರೆ. ಈ ಗುರಿ ಮುಟ್ಟಲು ನಾಲ್ಕು ಸಾಧನಗಳುಂಟು. ಶರೀರ, ಮನಸ್ಸು, ಬುದ್ಧಿ, ಸಂಯಮದಿಂದ ಗುರಿಯ ಸಾಧನೆ ಸಾಧ್ಯ.

ಈ ವರ್ಷ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು 'ಆರೋಗ್ಯಕರ ವಯಸ್ಸಿಗೆ ಯೋಗ' ಎಂಬ ವಿಷಯದೊಂದಿಗೆ ಆಚರಿಸಲಾಗುತ್ತದೆ. ಇದು ಎಲ್ಲ ವಯಸ್ಸಿನವರಿಗೂ ಯೋಗದ ಮಹತ್ವವನ್ನು ಒತ್ತಿ ಹೇಳುತ್ತದೆ. ಯೋಗವು ಆರೋಗ್ಯಕರ ವೃದ್ಧಾಪ್ಯಕ್ಕೆ ಒಂದು ಅಮೂಲ್ಯವಾದ ಅಭ್ಯಾಸವಾಗಬಹುದು. ಯೋಗಭ್ಯಾಸದಿಂದ ಹಲವು ಪ್ರಯೋಜನಗಳ ಬಗ್ಗೆ ವಿಶ್ವಾದಾದ್ಯಂತ ಜಾಗೃತಿ ಮೂಡಿಸುವುದು ಅಂತಾರಾಷ್ಟ್ರೀಯ ಯೋಗ ದಿನದ ಉದ್ದೇಶವಾಗಿದೆ.

ಯೋಗವು ಕೇವಲ ದೈಹಿಕ ಚಟುವಟಿಕೆಯಲ್ಲದೆ ಮಾನಸಿಕ ಒತ್ತಡ, ಆತಂಕ ಹಾಗೂ ಖಿನ್ನತೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಮನಸ್ಸು ಮತ್ತು ದೇಹದ ನಡುವೆ ಸಮತೋಲನವನ್ನು ತರುತ್ತದೆ. ಹಾಗಾಗಿ ಸ್ವಾಸ್ಥರಕ್ಷಣೆ, ಆರೋಗ್ಯವರ್ಧನೆ ರೋಗ ನಿವಾರಣೆ, ಮಾನಸಿಕ ಶಾಂತತೆ, ಬೌದ್ಧಿಕ, ದೈವಿಕ ಆಧ್ಯಾತ್ಮಿಕ ಪ್ರಸಿತಿ ಇವೆಲ್ಲಕ್ಕೂ ಮೂಲಸಾಧನೆ ಯೋಗಭ್ಯಾಸವಾಗಿದೆ.

ಈ ಸಲದ 12ನೇ ಅಂತಾರಾಷ್ಟ್ರೀಯ ಯೋಗ ದಿನದಂದು ನಾವೆಲ್ಲರೂ ಶಿಸ್ತಿನಿಂದ ಯೋಗವನ್ನು ಅಳವಡಿಸಿಕೊಂಡು 'ಆರೋಗ್ಯಕರ ವಯಸ್ಸಿಗೆ ಯೋಗ' ಎಂಬ ಅಭ್ಯಾಸದೊಂದಿಗೆ ಈ ದಿನವನ್ನು ಯಶಸ್ವಿಯಾಗಿ ಮಾಡೋಣ, ನಮ್ಮಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ಮಾಡೋಣ. ವಿಜ್ಞಾನದಿಂದ ಬಹಿರಂಗ ಸಂಪನ್ಮೂಲವನ್ನು ಯೋಗದಿಂದ ಅಂತರಂಗದ ಸಂಪನ್ಮೂಲವನ್ನು ಅಭಿವ್ಯಕ್ತವಾಗುವಂತೆ ಮಾಡಿ ಬೆಳೆಸಿದರೆ ಹೊಸ ಜೀವನದ ನವ ಆಯಾಮ ನಿರ್ಮಾಣ ಆಗುವುದರಲ್ಲಿ ಸಂಶಯವಿಲ್ಲ. ಅಂತರಂಗ ದೋಷಗಳನ್ನು ಯೋಗದರ್ಶನದ ಮೂಲಕವೂ ಶಬ್ದ ಪ್ರಯೋಗ ದೋಷಗಳನ್ನು ವ್ಯಾಕರಣ ಮಹಾಭಾಷ್ಯದ ಮೂಲಕವೂ, ಶರೀರದ ದೋಷಗಳನ್ನು ವೈದ್ಯ ಶಾಸ್ತ್ರದ ಮೂಲಕವೂ ದೂರಗೊಳಿಸಿದ ಪತಂಜಲಿ ಮುನಿ ಶ್ರೇಷ್ಠರಿಗೆ ನಮನಗಳು.

ಉಷಾ ಶೇಖರ್ ಕಿನ್ನಿಗೋಳಿ, ಎಸ್‌ಪಿವೈಎಸ್‌ಎಸ್ ಹಿರಿಯರ ಯೋಗ ನಿರತರ ಗಣ, ಮಂಗಳೂರು

ಜನರಿಗೆ ಉಪದ್ರವ : ನಾಯಿಗಳ ಮಾಲೀಕರ ವಿರುದ್ಧ ಮೊಕದ್ದಮೆ

ಉಡುಪಿ: ಸಾರ್ವಜನಿಕರಿಗೆ ಕಚ್ಚಲು ಓಡುತ್ತಿದ್ದ ತಮ್ಮ ಸಾಕು ನಾಯಿಗಳನ್ನು ಬೇರೆಡೆಗೆ ಸ್ಥಳಾಂತರಿಸದೆ ನಿರ್ಲಕ್ಷ್ಯ ವಹಿಸಿದ ಮಾಲೀಕರ ವಿರುದ್ಧ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರಸಭೆಯ ಆರೋಗ್ಯ ನಿರೀಕ್ಷಕ ಸತೀಶ್ (35) ನೀಡಿದ ದೂರಿನಂತೆ ಈ ಕ್ರಮ ಕೈಗೊಳ್ಳಲಾಗಿದೆ. ಶಿವಳ್ಳಿ ಗ್ರಾಮದ ಕೊಳದಪೇಟೆ ರಸ್ತೆಯ ಗುರುನಾಯಕ್ ಎಂಬವರ ಮನೆಯ ಸಾಕು ನಾಯಿಗಳು ರಸ್ತೆಯಲ್ಲಿ ಹೋಗುವ ಶಾಲಾ ಮಕ್ಕಳು, ವಾಕಿಂಗ್ ಮಾಡುವ ವೃದ್ಧರು ಹಾಗೂ ಬೈಕ್ ಸವಾರರನ್ನು ಬೆನ್ನಟ್ಟಿ ಕಚ್ಚಲು ಹೋಗುತ್ತಿವೆ ಎಂದು ಸಾರ್ವಜನಿಕರು ನಗರಸಭೆಗೆ ದೂರು ನೀಡಿದ್ದರು. ಪೌರಾಯುಕ್ತರ ಆದೇಶದಂತೆ ಆರೋಗ್ಯ ನಿರೀಕ್ಷಕರು ಸ್ಥಳ ಪರಿಶೀಲನೆಗೆ ಹೋದಾಗ ಮನೆಯಲ್ಲಿದ್ದ ವರುಣ್ ಖಿಮಾನಿ ಮತ್ತು ಇನ್ನೊಬ್ಬ ವ್ಯಕ್ತಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಾಯಿಗಳನ್ನು ಕಟ್ಟಿಹಾಕದೆ ಸಾರ್ವಜನಿಕರ ಜೀವಕ್ಕೆ ಅಪಾಯ ತಂದೊಡ್ಡುತ್ತಿರುವ ಹಿನ್ನೆಲೆಯಲ್ಲಿ ಬಿಎನ್‌ಎಸ್ ಕಾಯ್ದೆಯಡಿ ನಿರ್ಲಕ್ಷ್ಯದ ಮೊಕದ್ದಮೆ ದಾಖಲಿಸಲಾಗಿದೆ.

ಕೆರೆಗೆ ಕಾಲು ಜಾರಿ ಬಿದ್ದು ಬೆಂಗಳೂರು ನಿವಾಸಿ ಸಾವು

ಉಡುಪಿ: ತೋಟದ ಕಾಲು ದಾರಿಯಲ್ಲಿ ಹೋಗುತ್ತಿದ್ದಾಗ ಆವರಣ ಗೋಡೆಯಿಲ್ಲದ ಕೆರೆಗೆ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ನೀರಿನಲ್ಲಿ ಮುಳುಗಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ನಂಚಾರು ಗ್ರಾಮದಲ್ಲಿ ನಡೆದಿದೆ. ಬೆಂಗಳೂರಿನಲ್ಲಿ ನೆಲೆಸಿದ್ದ ನಂಚಾರು ತಾರೇಕಟ್ಟೆಯ ನಿವಾಸಿ ಮಹೇಶ್ ನಾಯರಿ (53) ಮೃತಪಟ್ಟ ದುರ್ದೈವಿ. ಜೂನ್ 18ರಂದು ಊರಿಗೆ ಬಂದಿದ್ದ ಮಹೇಶ್, ಸಂಜೆ 6.30ಕ್ಕೆ ತೋಟಕ್ಕೆ ಹೋದವರು ರಾತ್ರಿ ಒಂಬತ್ತಾದರೂ ವಾಪಸ್ ಬಂದಿರಲಿಲ್ಲ. ಕುಟುಂಬಸ್ಥರು ಹುಡುಕಾಡಿದಾಗ ತೋಟದ ಕೆರೆಯ ಬಳಿ ಚಪ್ಪಲಿ ಪತ್ತೆಯಾಗಿದ್ದು, ಕೆರೆಯಲ್ಲಿ ಮಹೇಶ್ ಅವರ ಮೃತದೇಹ ಸಿಕ್ಕಿದೆ. ಕಾಲುದಾರಿಯಲ್ಲಿ ನಡೆಯುವಾಗ ಕೆರೆಗೆ ಬಿದ್ದಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಮೃತರ ತಮ್ಮ ಮುಕೇಶ್ ನಾಯರಿ ನೀಡಿದ ದೂರಿನಂತೆ ಕೋಟ ಪೊಲೀಸ್ ಠಾಣೆಯಲ್ಲಿ ಯುಡಿ ಆರ್ ಪ್ರಕರಣ ದಾಖಲಾಗಿದೆ.

ಜೂ. 22ರಂದು ರಸ್ತೆ ತಡೆ

ವಿಟ್ಲ: ಕೇರಳ ಕರ್ನಾಟಕ ಸಂಪರ್ಕ ರಸ್ತೆಯ ನೂತನ ಸೇತುವೆ ನಿರ್ಮಾಣ, ರಸ್ತೆ ಅಗಲೀಕರಣ, ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ವರ್ಗಾವಣೆ ಹಾಗೂ ಅಪಾಯಕಾರಿಯಾದ ಹಳೆಯ ಸೇತುವೆಗಳಲ್ಲಿ ತಕ್ಷಣವೇ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಆಗ್ರಹಿಸಿ ಜೂ.22ರಂದು ಬೆಳಗ್ಗೆ 9.30ರಿಂದ ಪೇರಡ್ಕ ಸೇತುವೆ ಬಳಿ ರಸ್ತೆ ತಡೆ ಹಾಗೂ ಪ್ರತಿಭಟನೆ ನಡೆಯಲಿದೆ.

ಯುವಕ ಆತ್ಮಹತ್ಯೆ

ಪುತ್ತೂರು: ಚಿಕ್ಕಮುಡ್ನೂರು ಗ್ರಾಮದ ಕೆರೆಮೂಲೆಯಲ್ಲಿ ಯುವಕನೋರ್ವ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶುಕ್ರವಾರ ಬೆಳಗ್ಗೆ ಬೆಳಕಿಗೆ ಬಂದಿದೆ. ಕೆರೆಮೂಲೆ ನಿವಾಸಿ ಶೇಖರ್ ಎಂಬವರ ಪುತ್ರ ಜಗದೀಶ್ (22) ಆತ್ಮಹತ್ಯೆ ಮಾಡಿಕೊಂಡವರು. ಪೈಂಟಿಂಗ್ ಕೆಲಸ ಮಾಡುತ್ತಿದ್ದ ಅವರು ಮನೆಯಂಗಳದ ಮರದ ಕೊಂಬೆಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರು ತಂದೆ, ತಾಯಿ, ಇಬ್ಬರು ಸಹೋದರರನ್ನು ಅಗಲಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

19-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470	ಹಳೆ ಕರಿಗೋಟು	245 - 275
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 100
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 320
ಹೊಸ ಪಠೋರ	335 - 385		
ಹಳೆ ಪಠೋರ	335 - 385		
ಹೊಸ ಉಳ್ಳಿ	140 - 285		
ಹಳೆ ಉಳ್ಳಿ	130 - 285		
ಹೊಸ ಕೋಕಾ	315 - 335		
ಹಳೆ ಕೋಕಾ	315 - 335		
ಹೊಸ ಕರಿಗೋಟು	245 - 275		

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 665

ರಬ್ಬರ್ ಧಾರಣೆ : ಗ್ರೇಡ್

ಆರ್ ಎಸ್ ಎಸ್ 1	269.00
ಆರ್ ಎಸ್ ಎಸ್ 2	224.00
ಸ್ಕ್ರಾಪ್ 1	155.00
ಸ್ಕ್ರಾಪ್ 2	145.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-57) ಡ್ರಾ ಜೂನ್ 19ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RD 366411 (THRISSUR)

Consolation Prize Rs.5,000/-
RA 366411 RB 366411 RC 366411 RE 366411
RF 366411 RG 366411 RH 366411 RJ 366411
RK 366411 RL 366411 RM 366411

2nd Prize Rs.30,00,000/- [30 Lakhs]
RG 719984 (PATTAMBI)

3rd Prize Rs.5,00,000/- [5 Lakhs]
RH 538467 (THRISSUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0249 0378 1286 2365 3890 4310 4437 4749 4864 5390 6454 6595 6640 6728 7120 8035 8604 9230 9888

5th Prize Rs.2,000/-
5061 5107 5250 5265 7988 9625

6th Prize Rs.1,000/-
0015 0820 1064 1593 2041 2402 2711 3043 3487 3564 4032 4802 5736 5824 5966 6242 6697 7051 7564 8033 8319 8398 8658 9290 9502

7th Prize Rs.500/-
0017 0073 0223 0336 0500 1095 1229 1377 1592 1710 1823 1857 1859 2401 2478 2570 2803 2937 3295 3303 3410 3448 4260 4290 4362 4497 4792 5070 5170 5266 5309 5315 5344 5395 5537 5660 5729 6002 6233 6238 6261 6311 6421 6515 6661 6922 6972 7090 7194 7256 7397 7455 7594 7639 7887 7912 8167 8351 8554 8583 8985 8991 9001 9006 9035 9047 9440 9456 9464 9539 9590 9606 9689 9713 9824 9953

8th Prize Rs.200/-
0152 0167 0464 0470 0507 0675 0730 0740 0954 1017 1047 1076 1128 1188 1196 1379 1406 1461 1585 1629 1649 1680 2078 2329 2366 2425 2494 2585 2902 3200 3225 3555 3705 3893 3964 4059 4529 4539 4647 4772 4868 5078 5159 5210 5249 5254 5330 5481 5748 5819 5847 5984 6143 6235 6293 6414 6503 6650 6789 6821 7029 7290 7335 7382 7475 7589 7760 7952 8186 8236 8301 8352 8404 8686 8804 8841 8919 8931 8965 9040 9115 9161 9283 9467 9507 9528 9544 9603 9681 9797 9889 9952

9th Prize Rs.100/-
0161 0246 0280 0310 0330 0339 0387 0471 0513 0590 0696 0744 0786 0814 0851 0874 0905 0967 1021 1028 1071 1120 1231 1232 1279 1282 1348 1361 1371 1683 1764 1985 2034 2105 2151 2159 2418 2426 2535 2642 2694 2721 2845 2881 3112 3182 3185 3271 3306 3352 3436 3453 3605 3632 3696 3756 3889 3914 4001 4047 4087 4136 4235 4268 4413 4442 4492 4608 4610 4706 4744 4791 4930 5012 5093 5263 5316 5384 5432 5451 5501 5508 5559 5670 5696 5813 5909 5914 5957 5983 6156 6193 6196 6243 6310 6324 6347 6464 6493 6608 6677 6786 6947 7057 7084 7114 7140 7207 7427 7562 7613 7695 7778 7809 7870 7914 7920 7950 7967 8076 8095 8143 8145 8238 8396 8496 8603 8684 8765 8839 8861 8863 8893 8935 8976 9090 9181 9273 9366 9661 9748 9760 9830 9914

ಲಲಿತಾ ಸಹಸ್ರನಾಮ...



ರಕ್ಷಾ ಫೌಂಡೇಷನ್ ವತಿಯಿಂದ ಶುಕ್ರವಾರ ಜಯನಗರ 5ನೇ ಬ್ಲಾಕ್‌ನಲ್ಲಿರುವ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮ ನಡೆಯಿತು.

ಪಿಎಂ- ವಿಬಿಆರ್‌ವೈ : ದ.ಕ.ದಲ್ಲಿ ಉತ್ತಮ ಸಾಧನೆ

ಮಂಗಳೂರು: ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯಲ್ಲಿ (ಪಿಎಂ- ವಿಬಿಆರ್‌ವೈ) ದ.ಕ.ಜಿಲ್ಲೆಯಲ್ಲಿ 1,255 ಉದ್ಯೋಗಿ ಫಲಾನುಭವಿಗಳು, 3,053 ಸಂಸ್ಥೆಗಳು ನೊಂದಣಿ ಮಾಡಿಕೊಂಡಿವೆ. ಒಟ್ಟು 5.5 ಕೋಟಿ ರೂ.ಗೂ ಹೆಚ್ಚು ಹಣ ದಕ್ಷಿಣ ಕನ್ನಡಕ್ಕೆ ಸಿಗುತ್ತಿರುವುದು ಅತ್ಯಂತದ ಸಂತಸದ ವಿಚಾರ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದರು.

ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಕಚೇರಿ ಸಹಯೋಗದಲ್ಲಿ ಶುಕ್ರವಾರ ಮಂಗಳೂರಿನ ಬಂದರು ಕೆಸಿಸಿಐ ಸಭಾಂಗಣದಲ್ಲಿ 'ಪಿಎಂ-ವಿಬಿಆರ್‌ವೈ ಯೋಜನೆ'ಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉದ್ಯೋಗ ಸೃಷ್ಟಿಸುವ ಮಹತ್ವಾಕಾಂಕ್ಷೆ ಇರಿಸಿ 2025ರಲ್ಲಿ ಆರಂಭಗೊಂಡಿರುವ ಪಿಎಂ-ವಿಬಿಆರ್‌ವೈ ಯೋಜನೆ ಮೂಲಕ ಉದ್ಯೋಗದಾತರು, ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ, ಆರ್ಥಿಕ ಪ್ರಗತಿ ಮೂಲಕ ಒಟ್ಟು 3.5 ಕೋಟಿ ಉದ್ಯೋಗ ಸೃಷ್ಟಿಯ ಗುರಿಯನ್ನು ಯೋಜನೆ ಹೊಂದಿದೆ. ಜಿಲ್ಲೆಯಲ್ಲಿ ಇಪಿಎಫ್‌ಒ ಸಂಸ್ಥೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಕಳೆದ 12 ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಜನಪರ ಆಡಳಿತ ನೀಡುತ್ತಿದ್ದು, 2047ರ ವಿಕಸಿತ ಭಾರತ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದ್ದಾರೆ. ಕಟ್ಟ ಕಡೆಯ ವ್ಯಕ್ತಿಯೂ ಸದೃಢಗೊಳಿಸುವ ಮೂಲಕ ಆ ವ್ಯಕ್ತಿ ದೇಶ ಕಟ್ಟುವ ಕೆಲಸದಲ್ಲಿ ತೊಡಗಬೇಕು ಎಂಬುದು ಸರ್ಕಾರದ ಗುರಿ ಎಂದರು.



ಶಾಸಕ ಡಿ.ವೇದವ್ಯಾಸ ಕಾಮತ್ ಮಾತನಾಡಿ, ಭಾರತದ ಶಕ್ತಿ ಯುವಜನತೆ. ಯುವಜನತೆಗೆ ಪ್ರೋತ್ಸಾಹಿಸುವ, ಅವರ ಮೂಲಕ ದೇಶದ ಪ್ರಗತಿಗಾಗಿ ಕೇಂದ್ರ ಸರ್ಕಾರ ಯೋಜನೆ ಜಾರಿ ಮಾಡಿದೆ. ಸರ್ಕಾರದ ಯೋಜನೆ ಅರ್ಹರಿಗೆ ಸಿಗುವಲ್ಲಿ ಇಪಿಎಫ್‌ಒ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇನ್ನಷ್ಟು ಜನರಿಗೆ ಇದರ ಪ್ರಯೋಜನ ಸಿಗಲಿ ಎಂದರು.

ಇಪಿಎಫ್‌ಒ ಪ್ರಾದೇಶಿಕ ಕಮಿಟಿ ಸದಸ್ಯ ವಿಶ್ವನಾಥ ಶೆಟ್ಟಿ, ಕೆಸಿಸಿಐ ಅಧ್ಯಕ್ಷ ಪಿ.ಬಿ.ಅಹ್ಮದ್ ಮುದಸರ್, ಇಪಿಎಫ್‌ಒ ಮಂಗಳೂರು ಪ್ರಾದೇಶಿಕ ಕಚೇರಿ ಆಯುಕ್ತ ಸಂದೀಪ್ ಬಿಸ್ವಾಸ್ ಮತ್ತಿತರರು ಇದ್ದರು.

ಕಿರುಸುದ್ದಿ

ಸಚಿವ ಸಂಪುಟ ಸಭೆ: ಡಿಕೆಶಿ ಘೋಷಣೆ

ಪುಟ ೧➡(ಸಿಂಗಲ್ ವಿಂಡೋ) ವ್ಯವಸ್ಥೆ ಜಾರಿಗೆ ತರಲು ಸರ್ಕಾರ ಒಲವು ಹೊಂದಿದೆ ಎಂದು ಹೇಳಿದರು. ಕರಾವಳಿ ಸಂಸ್ಕೃತಿ, ಆಚರಣೆ ಹಾಗೂ ಜನಪದ ಪರಂಪರೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡುವ ಜತೆಗೆ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆಗೆ ಆದ್ಯತೆ ನೀಡಬೇಕು ಎಂದು ಸಿಎಂ ತಿಳಿಸಿದರು. ಈಗಾಗಲೇ ಅನುಮೋದನೆ ಪಡೆದಿರುವ 45 ಯೋಜನೆಗಳಿಂದ ಸುಮಾರು 4,500 ಉದ್ಯೋಗಗಳು ಸೃಷ್ಟಿಯಾಗಲಿದ್ದು, ಈ ಪ್ರಮಾಣ ಇನ್ನಷ್ಟು ಹೆಚ್ಚಾಗಬೇಕೆಂದು ಆಶಯ ವ್ಯಕ್ತಪಡಿಸಿದರು. ರಾಜ್ಯದ ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ಉದ್ದವಾದ ಸಮುದ್ರ ತೀರಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ಸರ್ಕಾರದ ಯೋಜನೆಗಳಿಗೆ ಬಂಡವಾಳ ಆಕರ್ಷಿಸಲು ಸಹಾಯಧನ, ಬಡ್ಡಿ ಸಹಾಯಧನ ಹಾಗೂ ವಿವಿಧ ರಿಯಾಯಿತಿಗಳ ಮೂಲಕ ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದರು. ಹೆಲಿ ಟೂರಿಸಂ ಅಭಿವೃದ್ಧಿಗೆ ಒತ್ತು ನೀಡುವಂತೆ ಉದ್ಯಮಿಗಳು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಗೀತಾ ಮಂದಿರದಲ್ಲಿ ನಾಳೆ ಚಯರ್ ಯೋಗ

ಉಡುಪಿ: ಶ್ರೀಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಅವರ ಶಿಷ್ಯ ಶ್ರೀ ಸುಶೀಂದ್ರ ತೀರ್ಥ ಶ್ರೀಪಾದರ ಸಂಕಲ್ಪ ಮತ್ತು ಮಾರ್ಗದರ್ಶನದಂತೆ ವಿಶ್ವಯೋಗ ದಿನದ ಪ್ರಯುಕ್ತ ಗೀತಾಮಂದಿರದಲ್ಲಿ ಚಯರ್ ಯೋಗ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜೂನ್ 21 ರ ಅಪರಾಹ್ನ 4 ಗಂಟೆಗೆ ಸರಿಯಾಗಿ ಕಾರ್ಯಕ್ರಮ ಆರಂಭಗೊಳ್ಳಲಿದೆ. ಉಡುಪಿಯ ಎಸ್‌ಡಿಎಂ ಆಯುರ್ವೇದ ಕಾಲೇಜಿನ ಪ್ರಾಚಾರ್ಯೆ ಡಾ. ಮಮತಾ ಕೆ.ವಿ. ಸಂಪನ್ಮೂಲ ವ್ಯಕ್ತಿ ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ರಾಘವೇಂದ್ರ ಭಟ್, ನವದೆಹಲಿಯ ಸಿಸಿಆರ್‌ಎಯಸ್ ತಜ್ಞ ದಿಲೀಪ್ ಕುಮಾರ್ಕರ್ ಉಪಸ್ಥಿತಿಯಲ್ಲಿ ದಿವಾನ ನಾಗರಾಜ ಆಚಾರ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶೇಷವಾಗಿ ಭಿನ್ನ ಸಾಮರ್ಥ್ಯದವರಿಗೂ ಪ್ರಯೋಜನವಾಗುವಂತೆ ಕುರ್ಚಿಯಲ್ಲಿ ಕುಳಿತುಕೊಂಡೇ ಮಾಡುವ ಯೋಗ – ಆಸನ – ಪ್ರಾಣಾಯಾಮಗಳ ತರಬೇತಿ ನೀಡಲಾಗುತ್ತಿದ್ದು ಆನ್‌ಲೈನ್‌ಲ್ಲಿಯೂ ಪಾಲ್ಗೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಧನ್ವಂತರಿ ಪೂಜೆ ಸಹಿತ ಯೋಗ ನೃತ್ಯ, ದಶಾವತಾರ ಆಸನ ಪ್ರದರ್ಶನಗಳನ್ನೂ ಅಳವಡಿಸಿಕೊಳ್ಳಲಾಗಿದ್ದು ಹೆಚ್ಚಿನ ಮಾಹಿತಿ ಮತ್ತು ಉಚಿತ ನೋಂದಣಿಗಾಗಿ ವಿದ್ವಾನ್ ಕೆ.ವಿ. ರಮಣಾಚಾರ್ಯರನ್ನು –8792158946 – ಸಂಪರ್ಕಿಸಬಹುದು ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಕೃಷಿ ಭೂಮಿಗೆ ನೀಡುವ ಪರಿಹಾರ ವೈಜ್ಞಾನಿಕ

ಬೆಂಗಳೂರು: ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವ ಕೃಷಿ ಭೂಮಿಗೆ ನೀಡುವ ಪರಿಹಾರ ಮೊತ್ತವು ವೈಜ್ಞಾನಿಕ ಹಾಗೂ ನ್ಯಾಯಸಮ್ಮತವಾಗಿರಬೇಕು ಎಂದು ವಕೀಲ ವಿಷ್ಣು ಹೆಗಡೆ ಅಭಿಪ್ರಾಯಪಟ್ಟರು. ನಗರದ ಗಾಂಧಿ ಭಾವನದಲ್ಲಿ ಭಾರತೀಯ ಕಿಸಾನ್ ಸಂಘ–ಕರ್ನಾಟಕ ಪ್ರದೇಶ, ಕರ್ನಾಟಕ ದಕ್ಷಿಣ ಪ್ರಾಂತ ವತಿಯಿಂದ ಆಯೋಜಿಸಲಾಗಿದ್ದ ಕೃಷಿ ಭೂಮಿಯ ಸ್ವಾಧೀನ – ರೈತರ ಅಸ್ತಿತ್ವಕ್ಕೆ ಪೂರಕವೇ, ಮಾರಕವೇ? ಎಂಬ ವಿಷಯದ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಭೂಮಿಯ ನೈಜ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಪರಿಹಾರ ನಿಗದಿಯಾಗಬೇಕು. ಆದರೆ ಪ್ರಸ್ತುತ ಉಪನೋಂದಣಾಧಿಕಾರಿ ಕಚೇರಿಯ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡಲಾಗುತ್ತಿದ್ದು, ಇದರಿಂದ ರೈತರಿಗೆ ಸಮರ್ಪಕ ನ್ಯಾಯ ದೊರೆಯುತ್ತಿಲ್ಲ ಎಂದು ಹೇಳಿದರು. ರಸ್ತೆ, ರೈಲು, ಕೈಗಾರಿಕಾ ಕಾರಿಡಾರ್ ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳಿಗಾಗಿ ಸರ್ಕಾರ ಭೂಸ್ವಾಧೀನ ಮಾಡುತ್ತಿರುವುದು ಅಭಿವೃದ್ಧಿಯ ಭಾಗವಾಗಿದ್ದರೂ, ರೈತರ ಜೀವನೋಪಾಯ ಮತ್ತು ಭವಿಷ್ಯದ ಭದ್ರತೆಗೂ ಸಮಾನ ಆದ್ಯತೆ ನೀಡಬೇಕಿದೆ. 2013ರ ಭೂಸ್ವಾಧೀನ, ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಹಾಗೂ ಪುನರ್ವಸತಿ ಕಾಯ್ದೆ ಪ್ರಕಾರ ಭೂಮಿ ಕಳೆದುಕೊಳ್ಳುವವರಿಗೆ ಸಮರ್ಪಕ ಪರಿಹಾರದ ಜತೆಗೆ ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಆದರೆ ಹಲವು ಸಂದರ್ಭಗಳಲ್ಲಿ ಈ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂದು ವಿಷ್ಣು ಹೆಗಡೆ ಅಸಮಾಧಾನ ವ್ಯಕ್ತಪಡಿಸಿದರು. ಒಂದು ಅಥವಾ ಎರಡು ಎಕರೆ ಭೂಮಿಯೇ ಜೀವನಾಧಾರವಾಗಿರುವ ರೈತನು ಅದನ್ನು ಕಳೆದುಕೊಂಡ ನಂತರ ಎಲ್ಲಿಗೆ ಹೋಗಬೇಕು? ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟರು.

ವೈದ್ಯರ ನೇಮಕಾತಿ

ಕಾಸರಗೋಡು: ತೃಕ್ಕರೀಪುರ ತಾಲೂಕು ಆಸ್ಪತ್ರೆಯಲ್ಲಿ ಮೂರನೇ ಪಾಳಿ ಡಯಾಲಿಸಿಸ್‌ನ ಭಾಗವಾಗಿ ಸಂಜೆ 6 ರಿಂದ ರಾತ್ರಿ 11ರ ವರೆಗೆ ವೈದ್ಯರನ್ನು ನೇಮಿಸುವ ಸಲುವಾಗಿ ಸಂದರ್ಶನವು ಜೂ.24ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಎಂಬಿಬಿಎಸ್, ಟಿಸಿಎಂಸಿ ನೋಂದಣಿ ಅರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 0467 2215522 ಕರೆ ಮಾಡಬಹುದು.

ನೌಕರರ ಭವಿಷ್ಯ ನಿಧಿ ಕಲ್ಯಾಣ ಆಯುಕ್ತ ಸೆಬಾಸ್ಟಿಯನ್ ಇಂಗಿತ

ಯುವಶಕ್ತಿಯಿಂದ ಅಭಿವೃದ್ಧಿ

ಬೆಂಗಳೂರು: ದೇಶದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಯುವಶಕ್ತಿ ಮತ್ತು ಸರ್ಕಾರದ ಪೂರಕ ಚಿಂತನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ನೌಕರರ ಭವಿಷ್ಯ ನಿಧಿ ಕಲ್ಯಾಣ ಆಯುಕ್ತ ಸೆಬಾಸ್ಟಿಯನ್ ಹೇಳಿದರು.

ಇಪಿಎಫ್‌ಓನ ಇಂದಿರಾನಗರ ಪ್ರಾದೇಶಿಕ ಕಚೇರಿ ವತಿಯಿಂದ ಎಚ್‌ಎಎಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಗಮನಾರ್ಹ ಎತ್ತರಕ್ಕೆ ಬೆಳೆದಿದೆ.ಒಂದು ಕಾಲದಲ್ಲಿ ಜಗತ್ತಿನ ದುರ್ಬಲ ಐದು ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತ, ಇಂದು ಅತ್ಯಂತ ವೇಗವಾಗಿ ಮುನ್ನಡೆಯುತ್ತಿರುವುದು ಶ್ಲಾಘನೀಯ. ಈ ಅಭಿವೃದ್ಧಿಗೆ ದೇಶದ ಯುವಶಕ್ತಿ ಮತ್ತು ಕೇಂದ್ರ ಸರ್ಕಾರದ ದೂರದೃಷ್ಟಿಯ ಚಿಂತನೆಗಳೇ ಕಾರಣ ಎಂದು ಹೇಳಿದರು.

ಸುಲಭ ವಾಣಿಜ್ಯ, ನಿರ್ವಹಣೆಗೆ ಶ್ರಮ: ಹಿಂದೆ ಕಾರ್ಮಿಕ ವಲಯದಲ್ಲಿ ಹಲವಾರು ಪರವಾನಗಿಗಳು ಮತ್ತು ನೊಂದಣಿ ಪ್ರಕ್ರಿಯೆಗಳ ಅಗತ್ಯವಿತ್ತು. ಆದರೆ ಪ್ರಸ್ತುತ ಸುಲಭ ವಾಣಿಜ್ಯ ನಿರ್ವಹಣೆಯನ್ನು ಉತ್ತೇಜಿಸಲು ಹಳೆಯ 29 ಕಾರ್ಮಿಕ ಕಾಯ್ದೆಗಳನ್ನು ಒಟ್ಟುಗೂಡಿಸಿ 4 ಪ್ರಮುಖ ಕಾರ್ಮಿಕ ಸಂಹಿತೆಗಳನ್ನಾಗಿ ರೂಪಿಸಲಾಗಿದೆ. ಇದು ಉದ್ಯಮ ರಂಗಕ್ಕೆ ಹೆಚ್ಚಿನ ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೃಹತ್ ಉದ್ಯೋಗ ಯೋಜನೆಗೆ ಚಾಲನೆ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ ಸುಮಾರು 1 ಲಕ್ಷ ಕೋಟಿ ರೂ.ಗಳ ಬಜೆಟ್ ಹೊಂದಿದ್ದು, ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದೆ ಎಂದು ಮಾಹಿತಿ ನೀಡಿದರು. ಸಾಂಕೇತಿಕವಾಗಿ ಹೊಸ ಉದ್ಯೋಗಿಗಳಿಗೆ ಉದ್ಯೋಗದಾತರು ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಇಂದಿರಾನಗರ ಇಪಿಎಫ್‌ಒ ಕಚೇರಿಯ ಪ್ರಾದೇಶಿಕ ಆಯುಕ್ತ ಎಂ. ವಿಘ್ನೇಶ್ವರನ್ ಹಾಗೂ ಸಹಾಯಕ ಪ್ರಾದೇಶಿಕ ಆಯುಕ್ತ ರಮೀಜ್ ಮೆಹರ್ ಹಾಗೂ ರಾಮಸುಬ್ಬಯ್ಯ, ವೆಲ್ಫೇರ್ ಕಮಿಷನರ್ ಸೆಬಾಸ್ಟಿಯನ್, ಇಎಸ್‌ಐಸಿಯ ಉಪನಿರ್ದೇಶಕ ರವಿಕೃಷ್ಣ ಉಪಸ್ಥಿತರಿದ್ದರು.



ಬೆಂಗಳೂರಿಗೆ ಸಿಂಹಪಾಲು

ದೇಶದ ಒಟ್ಟು ಮೊತ್ತದಲ್ಲಿ ಬೆಂಗಳೂರಿಗೆ ಸಿಂಹಪಾಲು ಲಭಿಸಿದೆ. ಇದರಲ್ಲಿ ಬೆಂಗಳೂರಿನ 84,000 ಉದ್ಯೋಗಿಗಳಿಗೆ, 6,000 ಮಾಲೀಕರಿಗೆ ಅನುಕೂಲವಾಗಿದೆ. ಮುಂದಿನ 2 ವರ್ಷಗಳಲ್ಲಿ ದೇಶದಲ್ಲಿ 3.5 ಕೋಟಿ ಹೊಸ ಉದ್ಯೋಗ ಸೃಷ್ಟಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಇಂದಿರಾನಗರ ಇಪಿಎಫ್‌ಓ ಕಚೇರಿಯ ಪ್ರಾದೇಶಿಕ ಆಯುಕ್ತ ಎಂ. ವಿಘ್ನೇಶ್ವರನ್ ತಿಳಿಸಿದರು.

> ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆಯ ಫಲಾನುಭವಿಯಾಗಿದ್ದಕ್ಕೆ ಹೆಮ್ಮೆ ಮತ್ತು ಕೃತಜ್ಞತಾ ಭಾವ ಮೂಡುತ್ತಿದೆ. ಮೊದಲ ಕಂತಿನ ಪ್ರೋತ್ಸಾಹಧನ ಸ್ವೀಕರಿಸಿದ್ದೇನೆ. ಇದು ನನಗೆ ಆರ್ಥಿಕ ಭದ್ರತೆ, ಆತ್ಮವಿಶ್ವಾಸ ಹಾಗೂ ನನ್ನ ಭವಿಷ್ಯವನ್ನು ಉತ್ತಮವಾಗಿ ಯೋಜಿಸಲು ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದೆ.
> ■ **ತ್ರಿಷಾ,** ಪಿಎಂ–ವಿಬಿಆರ್‌ವೈ ಯೋಜನೆ ಫಲಾನುಭವಿ

ಇಂದು ಕೈಗಾರಿಕೆ–ಕೃಷಿ ದೇಶದ ಬೆನ್ನೆಲುಬು

ಬೆಂಗಳೂರು: ಕೈಗಾರಿಕೆ ಮತ್ತು ಕೃಷಿ ಎರಡೂ ಈ ದೇಶದ ಬೆನ್ನೆಲುಬಾಗಿದೆ. ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ ಹೇಳಿದರು.

ಕೋರಮಂಗಲದ ಸೈಂಟ್ ಫ್ರಾನ್ಸಿಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಭವಿಷ್ಯನಿಧಿ ಪ್ರಾದೇಶಿಕ ಆಯುಕ್ತಾಲಯವು ಶುಕ್ರವಾರ ಆಯೋಜಿಸಿದ ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹಿಂದೆ ಭವಿಷ್ಯನಿಧಿ ಎಂದರೆ ದೊಡ್ಡ ತಲೆನೋವಿನ ಸಂಗತಿಯಾಗಿತ್ತು. 2024–25ರಲ್ಲಿ ಭವಿಷ್ಯನಿಧಿಯಲ್ಲಿ ದೊಡ್ಡ ಸಮಸ್ಯೆ ಎದುರಾಗಿತ್ತು. ಆಗಿನ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಈಗ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೊಸ ಉದ್ಯೋಗಿಗೆ ಪ್ರೋತ್ಸಾಹಧನವಾಗಿ 15,000 ರೂ.ಗಳನ್ನು ಅವರ ಖಾತೆಗೆ ನೇರವಾಗಿ ಜಮೆ ಮಾಡುತ್ತಿದ್ದಾರೆ ಎಂದರು.

ಉದ್ಯೋಗಿ ಮತ್ತು ಉದ್ಯೋಗದಾತರು ಇಬ್ಬರೂ ಈ ದೇಶಕ್ಕೆ ಎರಡು ಕಣ್ಣುಗಳಿದ್ದಂತೆ. ಉದ್ಯೋಗದಾತರಿಲ್ಲದೇ ಉದ್ಯೋಗ ಲಭಿಸುವುದಿಲ್ಲ. ಉದ್ಯೋಗಿಗಳಿಲ್ಲದೇ ಸಂಸ್ಥೆಯೊಂದು ನಡೆಯಲು ಸಾಧ್ಯವಿಲ್ಲ. ದೇಶದಲ್ಲಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಬಂದ ಬಳಿಕ ಉದ್ಯೋಗಗಳನ್ನು ಸೃಷ್ಟಿ ಮಾಡುವ ಕಾರ್ಖಾನೆಗಳು ದೇಶ ಮತ್ತು ರಾಜ್ಯಕ್ಕೆ ತರಲಾಗಿದೆ. ಯುವ ಉದ್ಯೋಗಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ. ಇದಕ್ಕಾಗಿ ಸಾವಿರಾರು ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ. ಇದರಿಂದ ಜೆನ್ ಜಿಗಳಿಗೆ ದೊಡ್ಡ ಅವಕಾಶವಾಗುತ್ತದೆ ಎಂದು ತಿಳಿಸಿದರು.

ಸೈಂಟ್ ಫ್ರಾನ್ಸಿಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಟೈಟನ್ ಆ್ಯಂಟೋ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಮಗ್ರ ತನಿಖೆಗೆ ತಂಡ ರಚನೆ

ಬೆಂಗಳೂರು: ವರ್ತೂರಿನ ಬೆಳಗೆರೆಯಲ್ಲಿರುವ ಜಲಮಂಡಳಿಯ 40 ಅಡಿ ಆಳದ ತ್ಯಾಜ್ಯ ನೀರು ಸಂಸ್ಕರಣಾ(ಎಸ್‌ಟಿಪಿ) ಟ್ಯಾಂಕ್ ಮೂವರು ಕಾರ್ಮಿಕರು ಆಯತಪ್ಪಿ ಬಿದ್ದು, ಅದರಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳ ತಂಡ ರಚಿಸಿ ಸಮಗ್ರ ತನಿಖೆಗೆ ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಆದೇಶಿಸಿದ್ದಾರೆ.

ಈ ವಿಷಯವಾಗಿ ಮಾಧ್ಯಮ ಪ್ರಕಟಣೆ ನೀಡಿರುವ ಜಲಮಂಡಳಿ, ಗುರುವಾರ ಸಂಜೆ ಸುಮಾರು 6 ಗಂಟೆಗೆ ವರ್ತೂರಿನ ಬೆಳಗೆರೆ ಯಲ್ಲಿರುವ ಜಲಮಂಡಳಿಯ 40 ಅಡಿ ಆಳದ ಎಸ್‌ಟಿಪಿ) ಟ್ಯಾಂಕ್‌ಗೆ ಮೂವರು ಕಾರ್ಮಿಕರು ಆಯತಪ್ಪಿ ಬಿದ್ದಿದ್ದರು. ಅದರಲ್ಲಿ ಓರ್ವ ಕಾರ್ಮಿಕನನ್ನು ತಕ್ಷಣವೇ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರು ಮೃತಪಟ್ಟಿದ್ದಾರೆ. ಮೃತ ಕಾರ್ಮಿಕರಾದ ಬ್ರಿಜೇಶ್ ಮತ್ತು ಅಖಿಲೇಶ್ ದೇಹಗಳ ಪತ್ತೆಗಾಗಿ ತೀವ್ರ ಶೋಧ ಕಾರ್ಯ ಮುಂದುವರಿದಿದೆ. ಮೃತದೇಹಗಳನ್ನು ತ್ವರಿತವಾಗಿ ಹೊರತೆಗೆಯಲು ಮತ್ತು ಪರಿಸ್ಥಿತಿಯನ್ನು ಸುಧಾರಿಸಲು ಎಲ್ಲಾ ರೀತಿಯ ಪ್ರಯತ್ನಗಳು ಹಾಗೂ ಸಕಲ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗಿದೆ. ಕಾರ್ಮಿಕರ ದೇಹ ಪತ್ತೆಗಾಗಿ ಎನ್‌ಡಿಆರ್‌ಎಫ್ ನಿಯೋಜನೆ ಮಾಡಲಾಗಿದೆ. ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಸ್ಥಳದಲ್ಲೇ ಇದ್ದು ರಕ್ಷಣಾ ಕಾರ್ಯಾಚರಣೆಯನ್ನು ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದೆ.

ಡ್ರೈನೇಜ್ ಟ್ಯಾಂಕ್‌ನೊಳಗೆ ವಿಷಾನಿಲ ತುಂಬಿರುವುದರಿಂದ ಮತ್ತು ನೀರಿನ ರಭಸ ಹೆಚ್ಚಾಗಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ತೀವ್ರ ಅಡ್ಡಿಯುಂಟಾಗಿದೆ. ಟ್ಯಾಂಕ್‌ನೊಳಗಿನ ವಿಷಾನಿಲದ ಅಪಾಯವನ್ನು ಎದುರಿಸಲು ಅಗ್ನಿಶಾಮಕ ದಳದ ಜೊತೆಗೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ.

ರಕ್ಷಣಾ ಸಿಬ್ಬಂದಿ ಟ್ಯಾಂಕ್‌ನೊಳಗೆ ಇಳಿಯುವ ಮುನ್ನ, ಒಳಗಿರುವ ವಿಷಾನಿಲವನ್ನು ಹೋಗಲಾಡಿಸಲು ಟ್ಯಾಂಕ್‌ಗೆ ಆಮ್ಲಜನಕವನ್ನು ತುಂಬುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಆಮ್ಲಜನಕ ತುಂಬಿದ ತಕ್ಷಣ ಶೋಧ ಕಾರ್ಯವನ್ನು ಮುಂದುವರಿಸಲಿದ್ದಾರೆ.ಜಲಮಂಡಳಿ ಹಿರಿಯ ಅಧಿಕಾರಿಗಳು ಸ್ಥಳದಲ್ಲಿಯೇ ಬಿಡು ಬಿಟ್ಟಿದ್ದು, ಜಲಮಂಡಳಿಯು ಸ್ಥಳದಲ್ಲಿ ಎಲ್ಲಾ ಅಗತ್ಯ ನೆರವು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದೆ ಎಂದು ಮಾಹಿತಿ ನೀಡಿದೆ. ಈ ದುರದೃಷ್ಟಕರ ಘಟನೆಯ ಸಮಗ್ರ ತನಿಖೆಗೆ ಆದೇಶ ನೀಡಲಾಗಿದೆ. ಜಲಮಂಡಳಿ ಮುಖ್ಯ ಅಭಿಯಂತರ ಡಾ.ಕೆ.ಎನ್.ರಾಜೀವ್, ಅಪರ ಮುಖ್ಯ ಅಭಿಯಂತರ ಡಾ.ಕೆ.ಎಸ್.ರೇಣುಕುಮಾರ್, ಉಪ ಮುಖ್ಯ ಅಭಿಯಂತರೆ ವಿನುತ ಡಿ.ಎಸ್ ಅವರ ತಂಡವನ್ನು ತನಿಖೆಗೆ ನೇಮಿಸಲಾಗಿದ್ದು, ಜೂ.20 ರಂದು ವರದಿ ನೀಡಲು ಸೂಚಿಸಲಾಗಿದೆ.ನಿರ್ಲಕ್ಷ್ಯ ತೋರಿದ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷೆ ತಿಳಿಸಿದ್ದಾರೆ.



- ವರ್ತೂರು ಎಸ್‌ಟಿಪಿ ಘಟಕದಲ್ಲಿ ಕಾರ್ಯಾಚರಣೆ ಚುರುಕು
- ಕಾರ್ಮಿಕರ ದೇಹ ಪತ್ತೆಗಾಗಿ ಎನ್‌ಡಿಆರ್‌ಎಫ್ ನಿಯೋಜನೆ
- ಸ್ಥಳದಲ್ಲಿ ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಉಪಸ್ಥಿತಿ
- ಘಟನೆಯ ಸಮಗ್ರ ತನಿಖೆಗೆ ಆದೇಶ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ

ಸಮರ್ಪಣಾ ಭಾವನೆ ಬೆಳೆಸಿಕೊಳ್ಳಿ

ಬೆಂಗಳೂರು: ಸಮರ್ಪಣಾ ಭಾವ ಹೊಂದಿದ ವ್ಯಕ್ತಿಗಳು ಸಮಾಜಕ್ಕೆ ಅವಶ್ಯವಾಗಿದ್ದಾರೆ. ವಿಶ್ವವಿದ್ಯಾಲಯದ ಮೂಲಕ ಸಾಂಸ್ಕೃತಿಕ ಪರಂಪರೆ ಪಸರಿಸಿದ ಕೀರ್ತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಅವರಿಗೆ ಸಲ್ಲುತ್ತದೆ ಎಂದು ಸಾಹಿತಿ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಅಭಿಪ್ರಾಯಪಟ್ಟರು.

ಶುಕ್ರವಾರ ನಗರದ ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ ರಂಗಭೂಮಿ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಅವರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರೊ. ನಾಗೇಶ್ ವಿ. ಬೆಟ್ಟಕೋಟೆಯವರು ಪ್ರಾಧ್ಯಪಕರಾಗಿ, ಕುಲಪತಿಗಳಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ರಂಗಭೂಮಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿ ದ್ದಾರೆ. 60ರ ಹೊಸಿಲಿನಲ್ಲಿರುವ ಅವರ ಅನುಭವ ಸಮಾಜಕ್ಕೆ ಪೂರಕವಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಸಂಗೀತ ನಿರ್ದೇಶಕ ಡಾ.ಹಂಸಲೇಖ ಮಾತನಾಡಿ. ಪ್ರೊ. ನಾಗೇಶ್ ಅವರ ಗಟ್ಟಿ ನಿರ್ಧಾರ, ಸಾಮಾಜಿಕ ಬದಲಾವಣೆಯ ಮೂಲಕ ಧ್ವನಿ ಇಲ್ಲದವರ ಸಾಂಸ್ಕೃತಿಕ ಧ್ವನಿಯಾಗಿ ದುಡಿದಿದ್ದಾರೆ. ಸಿನಿಮಾ ಸಂಗೀತ, ಸುಗಮ ಸಂಗೀತ, ಐದನಿ ಸಂಗೀತ ಶಾಸ್ತ್ರ ಅಭಿವೃದ್ಧಿಗೆ ವಿಶ್ವವಿದ್ಯಾಲಯದ ಮಾನ್ಯತೆ ನೀಡಿ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಸಾರ್ಥಕ ಹಾದಿ,ಅರ್ಥಪೂರ್ಣ ಬದುಕನ್ನು ಕೊಂಡಾಡುವ ಕ್ಷಣವಿದು ಎಂದು ಸಂತಸ ವ್ಯಕ್ತಪಡಿಸಿದರು.



ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಡಾ.ಕೆ.ವಿ. ನಾಗರಾಜ ಮೂರ್ತಿ ಮಾತನಾಡಿ, ಪ್ರೊ. ನಾಗೇಶ್ ಅವರ ನೇತೃತ್ವದಲ್ಲಿ ಬೆಂವಿವಿ ಕಲಾ ವಿಭಾಗ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಕ್ರಿಯಾಶೀಲ,ಶಕ್ತಿ ಸಾಮರ್ಥ್ಯದಿಂದ ಮಹತ್ತರ ಕ್ರಮಗಳನ್ನು ಕೈಗೊಂಡು ಗಂಗೂಬಾಯಿ ವಿಶ್ವವಿದ್ಯಾಲಯವನ್ನು ಮನೆ–ಮನೆಗೆ ತಲುಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಪ್ರೊ. ನಾಗೇಶ್ ಬೆಟ್ಟಕೋಟೆ ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಲಾ ಯಿತು. ಕಾರ್ಯಕ್ರಮದಲ್ಲಿ ತರಳಬಾಳು ಶೀಮಠದ ಶ್ರೀ ಶಿವಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಜಯಕರ, ವಿಶ್ರಾಂತ ಕುಲಪತಿಗಳು ಡಾ.ಎಸ್ .ಸಿ.ಶರ್ಮಾ, ಮುಖ್ಯಸ್ಥರು ಡಾ.ಹಂಸಿನಿ ನಾಗೇಂದ್ರ ಇದ್ದರು.

ರಾಹುಲ್ ಗಾಂಧಿ ವಿದ್ಯಾರ್ಥಿಗಳ ಧ್ವನಿ

ಬೆಂಗಳೂರು: ರಾಹುಲ್ ಗಾಂಧಿಯವರು ದೇಶದ ಬಡವರು ಹಾಗೂ ವಿದ್ಯಾರ್ಥಿಗಳ ಧ್ವನಿಯಾಗಿದ್ದಾರೆ ಎಂದು ಕೆಪಿವೈಸಿಸಿ ಕಾನೂನು ಘಟಕದ ರಾಜ್ಯಾಧ್ಯಕ್ಷ ಶ್ರೀಧರ್ ತಿಳಿಸಿದರು.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಕೆಪಿಸಿಸಿ ಕಚೇರಿ ಆವರಣದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಪಿವೈಸಿಸಿ, ಇಂದು ರಾಹುಲ್ ಗಾಂಧಿಯವರ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿ, ಸಿಹಿ ಹಂಚುವ ಮೂಲಕಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಕೆಪಿವೈಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಾಹುಬಲಿ, ರಾಜ್ಯ ಕಾರ್ಯದರ್ಶಿ ವೃಥ್ವಿ ಮಾಶೆಟ್ಟಿ, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ರಂಜಿತ್ ಕುಮಾರ್ ಆರ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ರಾಹುಲ್ ಎನ್.ಎಸೇರಿದಂತೆ ಕಾಂಗ್ರೆಸ್‌ನ ಕಾರ್ಯಕರ್ತರು ಇತರರಿದ್ದರು.

ದೇವರ ಮುಂದೆ ಎಲ್ಲರು ಸಮಾನರು

ಬೆಂಗಳೂರು: ಜಾತಿ–ಮತ–ಧರ್ಮ ಭೇಧವಿಲ್ಲ. ದೇವರ ಮುಂದೆ ಎಲ್ಲರು ಸಮಾನರು ಎಂದು ಮಂತ್ರಾಲಯ ಮಠದ ಶ್ರೀ ಸುಬುಧೇಂದ್ರತೀರ್ಥ ಸ್ವಾಮೀಜಿ ತಿಳಿಸಿದರು.

ರಕ್ಷಾ ಫೌಂಡೇಷನ್ ವತಿಯಿಂದ ಶುಕ್ರವಾರ ಜಯನಗರ 5ನೇ ಬ್ಲಾಕ್‌ನಲ್ಲಿರುವ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಆಶೀರ್ವಚನ ನೀಡಿದರು. 14 ವರ್ಷಗಳಿಂದ ರಕ್ಷಾ ಫೌಂಡೇಷನ್ ವತಿಯಿಂದ ವಿವಿಧ ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳನ್ನು ಆಯೋಜಿಸುವ ಜತೆಯಲ್ಲಿ ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕಗಳನ್ನು ವಿತರಣೆ ಮಾಡುವ ಕಾರ್ಯಕ್ರಮಗಳನ್ನು ಆಯೋಜಿಸಿ, ಶಿಕ್ಷಣ ರಂಗದ ಸೇವೆಯನ್ನೂ ಈ ಫೌಂಡೇಷನ್ ಮಾಡುತ್ತಿರುವ ಕೆಲಸ ಶ್ಲಾಘನೀಯ ಎಂದರು.

ಲಲಿತಾ ಸಹಸ್ರನಾಮ ಪೂಜೆಗೆ ಪಾಲ್ಗೊಂಡ ಭಕ್ತರಲ್ಲಿ ಶ್ರೀಮಂತರು, ಬಡವರಿದ್ದಾರೆ. ವಿಶೇಷವಾಗಿ ಪೌರಕಾರ್ಮಿಕರು ಕೂಡ ಪಾಲ್ಗೊಂಡಿರುವುದನ್ನು ಕಂಡು ಬಹಳ ಸಂತೋಷವಾಗಿದೆ. ಇದು ನಮ್ಮ ಸನಾತನ ಹಿಂದು ಧರ್ಮದ ವೈಶಿಷ್ಟ್ಯ. ದೇವರ ಮುಂದೆ ಎಲ್ಲರೂ ಸಮಾನರು ಹಾಗೂ ಪೂಜಾಧಿಕಾರವಂತರು. ದೇವರ ಅನುಗ್ರಹ ಪಡೆಯಲು ಎಲ್ಲರಿಗೂ ಅಧಿಕಾರವಿದೆ. ಇಂತಹ ಒಂದು ವಿಶಾಲವಾದ ಸಿದ್ಧಾಂತ ನಮ್ಮ ಹಿಂದು ಧರ್ಮದಲ್ಲಿ ಮಾತ್ರ ನಾವು ಕಾಣಬಹುದಾಗಿದೆ ಎಂದು ತಿಳಿಸಿದರು. ಲೋಕಕಂಠಕರನ್ನು ನಾಶವಾಗಿ ಶಿಷ್ಟರನ್ನು ರಕ್ಷಣೆ ಮಾಡಲು ತಾಯಿ ಲಲಿತಾಂಬೆ ಅವತಾರಿಸಿದ್ದಾಳೆ. ಪ್ರತಿನಿತ್ಯ ಲಲಿತಾ ತಾಯಿಯ ಉಪಾಸನೆ, ಸ್ಮರಣೆ ಮಾಡಕೊಂಡರೆ ಕಷ್ಟಗಳು ದೂರವಾಗಲಿದೆ ಎಂದು ಹೇಳಿದರು. ಇಂದು ನಮ್ಮ ದೇಶ ಧರ್ಮದಲ್ಲಿ, ಆರ್ಥಿಕವಾಗಿ, ಸಾಮಾಜಿಕವಾಗಿ ದೇಶದ ಭದ್ರತೆಯಿಂದ ನಮ್ಮ ದೇಶ ಪ್ರಗತಿಪರದಲ್ಲಿ ಮುಂಚೂಣಿಯಲ್ಲಿದೆ ಎಂದು ಅಭಿಪ್ರಾಯಪಟ್ಟರು.



ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ನಾನು ಎಂಬುದು ಅಹಂಕಾರ, ನಾವೆಲ್ಲರು ಎಂದು ಕೂಡಿ ಬಾಳಬೇಕು. ಅದು ನಿಜವಾದ ಜೀವನದ ಅರ್ಥ. ಆದ್ದರಿಂದ ನಮ್ಮ ಜಯನಗರ ಕ್ಷೇತ್ರ ಮತ್ತು ನಾಡಿನ ಜನರ ಒಳಿತಿಗಾಗಿ ಸಾವಿರಾರು ಮಹಿಳೆಯರ ಸಮಾಗಮದಲ್ಲಿ ಶ್ರೀ ಲಲಿತಾ ಸಹಸ್ರನಾಮ ಪಠಣೆ ಮತ್ತು ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕುಟುಂಬಗಳ ಪಾತ್ರ ಮಹತ್ವದ್ದಾಗಿದೆ

ಜಗತ್ತಿನಲ್ಲಿ ಶಾಂತಿ, ಸೌಹಾರ್ದ ಮತ್ತು ನೆಮ್ಮದಿಯ ಜೀವನ ನೆಲೆಸಬೇಕಾದರೆ ಕುಟುಂಬದ ಸದಸ್ಯರು ಪ್ರತಿನಿತ್ಯವೂ ಒಗ್ಗಟ್ಟಿನಿಂದ ಬದುಕುತ್ತಾ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಸಾಮೂಹಿಕ ಆಚರಣೆಗಳು ವರ್ಷಕ್ಕೊಮ್ಮೆ ನಡೆಯುವುದಷ್ಟೇ ಸಾಕಾಗುವುದಿಲ್ಲ. ಕುಟುಂಬಗಳು ಪ್ರತಿದಿನವೂ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ನಡವಳಿಕೆ ಹಾಗೂ ವ್ಯಕ್ತಿತ್ವವನ್ನು ರೂಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜಕೇಂದ್ರಿತ ವಿಚಾರಗಳನ್ನು ಕಲಿಸುವಲ್ಲಿ ಕುಟುಂಬಗಳ ಪಾತ್ರ ಮಹತ್ವದ್ದಾಗಿದೆ. ಜತೆಗೆ ಪ್ರತಿಯೊಬ್ಬರೂ ತಮ್ಮ ಮನೆಗಳು ಸಮಾಜಕ್ಕೆ ಪೂರಕವಾಗುವ ಕಾರ್ಯಗಳಲ್ಲಿ ತೊಡಗಿಕೊಂಡಿವೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ವೈಯಕ್ತಿಕ ಸ್ವಾರ್ಥವನ್ನು ಬದಿಗೊತ್ತಿ ಸಮಾಜದ ಒಳಿತಿಗಾಗಿ ತಾನು ಏನು ಮಾಡಬಹುದು ಎಂಬ ಮನೋಭಾವವನ್ನು ಬೆಳೆಸಿಕೊಂಡಾಗ ದೇಶವು ಜಗತ್ತಿನಲ್ಲೇ ಶ್ರೇಷ್ಠ ಸ್ಥಾನವನ್ನು ಅಲಂಕರಿಸಲಿದೆ ಎಂದು ಆರ್‌ಎಸ್‌ಎಸ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಅಭಿಪ್ರಾಯಪಟ್ಟರು.

> ಲಲಿತಾಂಬೆಯ ಆರಾಧನೆಯಿಂದ ಮತ್ತು ಸುಬುಧೇಂದ್ರತೀರ್ಥ ಸ್ವಾಮೀಜಿ ಅವರ ಆಶೀರ್ವಾದ ಮಾರ್ಗದರ್ಶನ ಎಲ್ಲರಿಗೂ ಲಭಿಸಬೇಕು. ದೇಶ ಮತ್ತು ಸಂಸ್ಕೃತಿ ಸಂಪ್ರದಾಯ ಉಳಿಸುವಲ್ಲಿ ಮಹಿಳೆಯರ ಪಾತ್ರ ಪ್ರಮುಖ.
> ■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಕೋಳಿ ಅಂಕ : ಮೂವರ ಸೆರೆ

ಕುಂದಾಪುರ : ಅಂಪಾರು ಗ್ರಾಮದ ಗುಡಿಬೆಟ್ಟು ಎಂಬಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಕೋಳಿ ಅಂಕ ಜುಗಾರಿ ಆಟ ಆಡುತ್ತಿದ್ದ ಮೂವರನ್ನು ಕುಂದಾಪುರ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ. ಮೊವಾಡಿ ಗ್ರಾಮದ ನಾರಾಯಣ (48), ಉಡುಪಿ ನಿಟ್ಟೂರು ಅರ್ಕದಕಟ್ಟೆ ನಿವಾಸಿ ಪ್ರಶಾಂತ್ (43), ಉಡುಪಿ ನಿಟ್ಟೂರು ವಿಷ್ಣುಮೂರ್ತಿ ನಗರ ನಿವಾಸಿ ನವರಾಜ್ (51) ಬಂಧಿತರು. ಬಂಧಿತರಿಂದ 1600 ರೂ. ನಗದು ವಶಪಡಿಸಿಕೊಂಡಿದ್ದಾರೆ. ಉಳಿದವರು ಹಾಡಿಯಲ್ಲಿ ಓಡಿ ತಪ್ಪಿಸಿಕೊಂಡಿದ್ದಾರೆ. ಆರೋಪಿತರುಗಳು ತಮ್ಮ ಸ್ವಂತ ಲಾಭಕ್ಕೋಸ್ಕರ ಕೋಳಿಗಳಿಗೆ ಆಹಾರ ಕೊಡದೆ ಕಾಲಿಗೆ ಕತ್ತಿಕಟ್ಟಿ ಕೋಳಿಗಳ ಮೇಲೆ ಹಣವನ್ನು ಪಣವಾಗಿ ಕಟ್ಟಿ ಜುಗಾರಿ ಆಟ ನಡೆಸಿರುವುದಾಗಿ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರು ಸುದ್ದಿ

ಪಾದಚಾರಿಗೆ ಬೈಕ್ ಡಿಕ್ಕಿ: ಸವಾರ ಮೃತ್ಯು

ಕುಂದಾಪುರ: ಕುಂದಾಪುರ ತಾಲೂಕಿನ ಹಂಗಳೂರು ಗ್ರಾಮದ ಬಾರ್ ಎದುರುಗಡೆ ರಾ.ಹೆ 66 ರಸ್ತೆಯಲ್ಲಿ ಕೊಟೇಶ್ವರ ಕಡೆಯಿಂದ ಕುಂದಾಪುರ ಕಡೆಗೆ ಹೋಗುತ್ತಿದ್ದ ಬೈಕ್ ರಾ.ಹೆ. 66 ರಸ್ತೆಯ ಕಡೆಗೆ ಹೋಗಲು ರಸ್ತೆ ದಾಟುತ್ತಿದ್ದ ಯಲ್ಲಪ್ಪ ಎಂಬವರಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಅವದೇಶ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಕೂಡಲೇ ಅವರನ್ನು ಕುಂದಾಪುರ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದಲ್ಲಿ ವೈದ್ಯರು ಅವರನ್ನು ಪರೀಕ್ಷಿಸಿ ಮೃತಪಟ್ಟಿದ್ದಾಗಿ ಖಚಿತಪಡಿಸಿದ್ದಾರೆ. ಸಣ್ಣಮಟ್ಟ ಗಾಯಗೊಂಡ ಯಲ್ಲಪ್ಪ ಅವರಿಗೆ ಚಿಕಿತ್ಸೆ ನೀಡಲಾಗಿದೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಸಹ ಸವಾರನಿಗೆ ಗಂಭೀರ ಗಾಯ

ಕೈಕಂಬ: ದ್ವಿಚಕ್ರ ವಾಹನಕ್ಕೆ ಕಾರೊಂದು ಹಿಂಬದಿಯಿಂದ ಗುದ್ದಿದ ಪರಿಣಾಮ ದ್ವಿಚಕ್ರ ವಾಹನದ ಹಿಂಬದಿ ಸವಾರ ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯ ಗಂಜಿಮಠ ಸೂರಲ್ಪಾಡಿಯ ರಾಷ್ಟ್ರೀಯ ಹೆದ್ದಾರಿ 169 ರಲ್ಲಿ ಗುರುವಾರ ರಾತ್ರಿ ನಡೆದಿದೆ. ಕುಪ್ಪೆಪದವು ಕಲ್ಲಾಡಿಯ ರಾಜೇಶ್ ತನ್ನ ಸ್ನೇಹಿತ ಅಂಕಿತ್ ಎಂಬಾತನೊಂದಿಗೆ ಬೈಕ್ ನಲ್ಲಿ ಶುಕ್ರವಾರ ರಾತ್ರಿ 9.30ರ ವೇಳೆ ಗುರುಪುರ-ಕೈಕಂಬದಿಂದ ಎಡಪದವಿನತ್ತ ಬರುತ್ತಿದ್ದಾಗ ಹೆದ್ದಾರಿಯಲ್ಲಿ ನಿರ್ಮಾಣವಾಗುತ್ತಿರುವ ಟೋಲ್‌ಗೇಟ್ ಬಳಿ ಹಿಂಬದಿಯಿಂದ ವೇಗವಾಗಿ ಬಂದ ಸ್ವಿಫ್ಟ್ ಕಾರು ರಸ್ತೆ ವಿಭಾಜಕಕ್ಕೆ ಗುದ್ದಿ ಬಳಿಕ ಬೈಕ್‌ಗೆ ಗುದ್ದಿದೆ. ಈ ವೇಳೆ ರಾಜೇಶ್ ಮತ್ತು ಸಹ ಸವಾರ ಅಂಕಿತ್ ರಸ್ತೆಗೆ ಎಸೆಯಲ್ಪಟ್ಟು ಅಂಕಿತ್ ಗಂಭೀರ ಗಾಯಗೊಂಡಿದ್ದು, ರಾಜೇಶ್ ನೀಡಿದ ದೂರಿನ ಆಧಾರದಲ್ಲಿ ಬಜಪೆ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ.

ಆಶೋಕನಗರ ಶೇಡಿಗುರಿ ಪಿಂಟೋ ಲೇನ್ ನಿವಾಸಿಗಳ ಗೋಳು | ಇಲ್ಲಿ ಟ್ಯಾಂಕರ್ ನೀರೇ ಗತಿ

ಎಂಟು ತಿಂಗಳಿನಿಂದ ಕುಡಿಯುವ ನೀರಿಲ್ಲ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಭಾಗ್

▸ **ಹರೀಶ ಕುಲ್ಕುಂದ**

ಮಂಗಳೂರು: ಕಳೆದ 8 ತಿಂಗಳಿನಿಂದ ನಮ್ಮಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಪೈಪ್ ಲೈನ್ ಮೂಲಕ ನೀರು ಬರುತ್ತಿಲ್ಲ. ನೀರಿಗಾಗಿ ಪ್ರತಿದಿನ ನಾವು ಅಕ್ಷರಶಃ ಪರದಾಡುತ್ತಿದ್ದೇವೆ. ಮನಪಾ ಪೂರೈಸುವ ಟ್ಯಾಂಕರ್ ನೀರು ಸಾಕಾಗದೇ ಖಾಸಗಿ ಟ್ಯಾಂಕರ್ ನೀರನ್ನು ಅವಲಂಬಿಸಿದ್ದೇವೆ. ನೀರಿನ ಸಮಸ್ಯೆ ಬಗ್ಗೆ ಜನಪ್ರತಿನಿಧಿಗಳು, ಮನಪಾ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ...

ಇದು ಮನಪಾ ವ್ಯಾಪ್ತಿಯ ಆಶೋಕನಗರ ಶೇಡಿಗುರಿ ಪಿಂಟೋ ಲೇನ್ 1ನೇ ಎಡತಿರುವು ನಿವಾಸಿಗಳ ಗೋಳು. 2025ರ ಅಕ್ಟೋಬರ್ ಬಳಿಕ ಇಲ್ಲಿಗೆ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿಲ್ಲ. ಕೋಡಿಕಲ್ ಟ್ಯಾಂಕ್‌ನಿಂದ ಈ ಪ್ರದೇಶಕ್ಕೆ ನೀರು ಸರಬರಾಜು ಆಗುತ್ತಿದ್ದು, ಎರಡು ದಿನಕ್ಕೊಮ್ಮೆ ಬೆಳಗ್ಗೆ 8ಗಂಟೆಗೆ ನೀರು ಪೂರೈಕೆ ಆರಂಭವಾಗುತ್ತದೆ. ಆದರೆ, ಸಪೂರವಾಗಿ ಬರುವ ನೀರು 8.15ರ ವೇಳೆಗೇ ಸ್ಥಗಿತಗೊಳ್ಳುತ್ತದೆ. ಇದರಿಂದಾಗಿ ಪಿಂಟೋ ಲೇನ್ 1ನೇ ಎಡತಿರುವು ಪ್ರದೇಶದ 8 ಮನೆಗಳ ನಿವಾಸಿಗಳು ನೀರಿನ ಸಮಸ್ಯೆ ಅನುಭವಿಸುತ್ತಿದ್ದೇವೆ ಎನ್ನುತ್ತಾರೆ ಸ್ಥಳೀಯರು.

ಆಶೋಕನಗರ ಶೇಡಿಗುರಿ ಪರಿಸರದಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಅಳವಡಿಕೆ ಆದ ಬಳಿಕ ನಮ್ಮಲ್ಲಿ ನೀರು ಪೂರೈಕೆ ಸ್ಥಗಿತಗೊಂಡಿದೆ. ಈ ಬಗ್ಗೆ ಸ್ಥಳೀಯ ನಿಕಟಪೂರ್ವ ಕಾರ್ಪೋರೇಟರ್ ಅವರ ಗಮನ ವಿಷಯ ತಿಳಿಸಿದ್ದೆವು. ಮನಪಾ ಆಯುಕ್ತರು, ನೀರು ಸರಬರಾಜು ವಿಭಾಗಕ್ಕೂ ಮನವಿ ಸಲ್ಲಿಸಿದ್ದೆವು. ಆದರೆ, ಇದುವರೆಗೆ ನೀರು ಪೂರೈಕೆ ಪುನರಾರಂಭ ಆಗಿಲ್ಲ ಎಂದು ಇಲ್ಲಿನ ನಿವಾಸಿಗಳು ನೋವು ತೋಡಿಕೊಂಡಿದ್ದಾರೆ.


ಆಶೋಕನಗರ ಶೇಡಿಗುರಿ ಪಿಂಟೋ ಲೇನ್


ಆಶೋಕನಗರ ಶೇಡಿಗುರಿ ಪಿಂಟೋ ಲೇನ್ 1ನೇ ಎಡತಿರುವು ಪ್ರದೇಶದ ನೀರಿನ ಸಮಸ್ಯೆ ಗಮನಕ್ಕೆ ಬಂದಿದೆ. ಮನಪಾ ಪೈಪ್‌ಲೈನ್ ಮೂಲಕ ಬೋರ್‌ವೆಲ್ ನೀರು ಒದಗಿಸಲು ಮನಪಾ ಇಂಜಿನಿಯರ್‌ಗೆ ಸೂಚನೆ ನೀಡಲಾಗುವುದು.
■ ಡಾ. ವೈ. ಭರತ್ ಶೆಟ್ಟಿ, ಶಾಸಕರು

ಶೇಡಿಗುರಿ ಪಿಂಟೋ ಲೇನ್ ನಿವಾಸಿಗಳ ನೀರಿನ ಸಮಸ್ಯೆ ಈ ಹಿಂದೆಯೇ ಗಮನಕ್ಕೆ ಬಂದಿದ್ದು, ಮೂರು ತಿಂಗಳ ಹಿಂದೆ ಇಲ್ಲಿಗೆ ನೀರು ಪೂರೈಕೆ ಸಮರ್ಪಕಗೊಳಿಸ ಲಾಗಿತ್ತು. ಈಗ ಮತ್ತೆ ನೀರಿನ ಸಮಸ್ಯೆ ತಲೆದೋರಿದ್ದರೆ ಇಂಜಿನಿಯರ್ ಅವರನ್ನು ಸ್ಥಳಕ್ಕೆ ಕಳುಹಿಸಿ, ಸಮರ್ಪಕವಾಗಿ ನೀರು ಪೂರೈಸಲು ಕ್ರಮ ಕೈಗೊಳ್ಳಲಾಗುವುದು.
■ ನರೇಶ್ ಪಿ. ಶೆಣೈ, ಮನಪಾ ಉಪ ಆಯುಕ್ತರು

ಕಳೆದ 8 ತಿಂಗಳಿನಿಂದ ನಮ್ಮಲ್ಲಿಗೆ ನೀರು ಪೂರೈಕೆ ಆಗದಿದ್ದರೂ, ಪ್ರತಿ ಬಾರಿ ಟ್ಯಾಂಕರ್ ಮೂಲಕ ನೀರು ಒದಗಿಸುವಂತೆ ಮನಪಾ ಅಧಿಕಾರಿಗಳಿಗೆ ಕರೆ ಮಾಡಿ ತಿಳಿಸಬೇಕು. ಇಲ್ಲವಾದಲ್ಲಿ ನಮಗೆ ನೀರೇ ಇಲ್ಲ. ವಾರಕ್ಕೆ ಎರಡು ಬಾರಿ ಒಂದು ಟ್ಯಾಂಕರ್ ನೀರು ಪೂರೈಕೆ ಮಾಡುತ್ತಿದ್ದಾರೆ. ಒಂದು ಟ್ಯಾಂಕರ್ ನೀರನ್ನು 8 ಮನೆಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಮನಪಾ


ನಿತ್ಯ ಬಳಕೆಗೆ ಅಗತ್ಯ ಇರುವಷ್ಟು ನೀರು ದೊರೆಯದೇ ಭಾರಿ ತೊಂದರೆ ಅನುಭವಿಸುತ್ತಿದ್ದೇವೆ. ಮನಪಾ ವತಿಯಿಂದ ಟ್ಯಾಂಕರ್ ಮೂಲಕವೂ ಕೊಳಕು ನೀರು ನೀಡುತ್ತಿದ್ದಾರೆ. ನೀರಿನ ಸಮಸ್ಯೆ ಹಿನ್ನೆಲೆಯಲ್ಲಿ ಇತ್ತೀಚೆಗೆ ಮನೆ ಮುಂಭಾಗ 45 ಅಡಿ ಆಳದವರೆಗೆ ಬಾವಿ ತೋಡಿದ್ದು, ನೀರು ಸಿಕ್ಕಿಲ್ಲ. ನೀರಿನ ಬಿಲ್ ಪಾವತಿಸಿದರೂ ಕುಡಿಯುವ ನೀರಿನ ವ್ಯವಸ್ಥೆಯನ್ನು ನಮಗೆ ಮನಪಾ ಕಲ್ಪಿಸಿಲ್ಲ. ಇನ್ನಾದರೂ ಸಮರ್ಪಕವಾಗಿ ನೀರು ಒದಗಿಸಬೇಕು.
■ ಲವ ನಾಯ್ಕ್, ಸ್ಥಳೀಯರು




ನಮ್ಮಲ್ಲಿಗೆ ಮನಪಾ ಪೈಪ್‌ಲೈನ್ ಮೂಲಕ ನೀರು ಪೂರೈಕೆ ಸ್ಥಗಿತಗೊಂಡ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಿದರೆ, ಅವರು ವಿವಿಧ ಕಾರಣಗಳನ್ನು ಮುಂದಿಡುತ್ತಾರೆ. ಬೆಳಗ್ಗೆ 8ರಿಂದ 8.15ರವರೆಗೆ ಪೂರೈಕೆಗೊಳ್ಳುವ ನೀರು ಬಳಿಕ ಯಾಕೆ ಸ್ಥಗಿತಗೊಳ್ಳುತ್ತದೆ ಎಂಬ ಪ್ರಶ್ನೆಗೆ ಯಾರಿಂದಲೂ ಉತ್ತರವಿಲ್ಲ. ಪ್ರೆಶರ್ ಕೊರತೆಯಿಂದ ಇಲ್ಲಿಗೆ ನೀರು ಬರುತ್ತಿಲ್ಲ ಎಂದು ಹೇಳಲಾಗುತ್ತಿದೆ. ಸುತ್ತಲಿನ ಪ್ರದೇಶಕ್ಕೆ ಇರುವ ಪ್ರೆಶರ್ ನಮ್ಮಲ್ಲಿ ಯಾಕೆ ಇಲ್ಲ ಎಂಬುದು ಪ್ರಶ್ನೆಯಾಗಿದೆ. ನಮ್ಮ ಸಮಸ್ಯೆಗೆ ಜನಪ್ರತಿನಿಧಿಗಳು, ಅಧಿಕಾರಿಗಳು ತುರ್ತಾಗಿ ಸ್ಪಂದಿಸಿ ನೀರಿನ ವ್ಯವಸ್ಥೆ ಮಾಡಿಕೊಡಬೇಕು.
■ ನರೇಶ್ ಕುಡ್ವ, ಸ್ಥಳೀಯರು

ಪೂರೈಸುವ ನೀರು ಸಾಕಾಗದ ಕಾರಣ ನಾವು ಹಣ ಪಾವತಿಸಿ ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದೇವೆ. ಮನಪಾ ಪೈಪ್ ಲೈನ್‌ನಲ್ಲಿ ನೀರು ಪೂರೈಕೆ ಸ್ಥಗಿತಗೊಳ್ಳಲು ಏನು ಕಾರಣ ಎಂಬುದನ್ನು ಪತ್ತೆಹಚ್ಚಿ ಸಮರ್ಪಕವಾಗಿ ನೀರು ಸರಬರಾಜು ಮಾಡಬೇಕು. ಪೈಪ್‌ಲೈನ್ ಮೂಲಕ ನೀರು ಒದಗಿಸಲು ಸಾಧ್ಯವಾಗದಿದ್ದರೆ ಟ್ಯಾಂಕರ್ ಮೂಲಕವಾದರೂ ಅಗತ್ಯ ಇರುವಷ್ಟು ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ಈ ಬಗ್ಗೆ ಮನಪಾ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ನಿಧನ ಸುದ್ದಿ

ಶಿರೂರು ಕೊರಗಯ್ಯ ಶೆಟ್ಟಿ



ಕೋಟ: ಹೊಟೇಲ್ ಉದ್ಯಮಿ ಶಿರೂರು ಕೊರಗಯ್ಯ ಶೆಟ್ಟಿ (87) ಶುಕ್ರವಾರ ವಡ್ಡರ್ಸೆ ಕೊತ್ತಾಡಿ ಮನೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಇವರ ಪುತ್ರರಾದ ಜಿಲ್ಲೆಯ ಪ್ರಸಿದ್ಧ ನ್ಯಾಯವಾದಿ ಕೆ.ಸಿ ಶೆಟ್ಟಿ, ವಡ್ಡರ್ಸೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಕೊತ್ತಾಡಿ ಉದಯ ಕುಮಾರ್ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರ ಕೊತ್ತಾಡಿ ವಿಜಯ ಕುಮಾರ್ ಶೆಟ್ಟಿ ಸೇರಿದಂತೆ ಇರ್ವರು ಪುತ್ರಿಯನ್ನು ಅಗಲಿದ್ದಾರೆ.

ಪುಷ್ಪ



ಪುತ್ತೂರು: ಮರೀಲ್ ಪ್ರಗತಿ ಲೇಔಟ್‌ನ ದಿ.ಆನಂದ ರಾವ್ ಅವರ ಪತ್ನಿ ಪುಷ್ಪ ಅವರು ಹೃದಯಾಘಾತದಿಂದ ಜೂ.19 ರಂದು ಬೆಳಗ್ಗೆ ನಿಧನ ಹೊಂದಿದರು. ಅವರಿಗೆ 86 ವರ್ಷವಾಗಿತ್ತು. ಮೃತರು ಪುತ್ರರಾದ ರಾಮಕ್ಷತ್ರೀಯ ಸೇವಾ ಸಂಘದ ಮಾಜಿ ಅಧ್ಯಕ್ಷ ಸುರೇಶ್ ಕುಮಾರ್, ದಿನೇಶ್ ಕುಮಾರ್, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ.

ಸಂಜೀವ ಟೈಲರ್



ಬಂಟ್ವಾಳ: ಪಾಣೆಮಂಗಳೂರು ಸಮೀಪದ ಮಾಣೆಮಜಲು ದಿವಂಗತ ಸೇಸಪ್ಪ ಗಾಣಿಗರ ಪುತ್ರ ಮೆಲ್ಕಾರ್ ನಿವಾಸಿ ಸಂಜೀವ ಟೈಲರ್ (76) ಅವರು ಅಸೌಖ್ಯದಿಂದ ಮೆಲ್ಕಾರಿನ ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಪತ್ನಿಯನ್ನು ಅಗಲಿದ್ದಾರೆ. ಅವರು ಪಾಣೆಮಂಗಳೂರಿನಲ್ಲಿ 5 ದಶಕಗಳಿಗಿಂತ ಅಧಿಕ ಕಾಲ ಟೈಲರ್ ವೃತ್ತಿಯಲ್ಲಿ ನಿರತರಾಗಿದ್ದು ಪರಿಸರದಲ್ಲಿ ಚಿರಪರಿಚಿತರಾಗಿದ್ದರು.

ಗಣರಾಜ ಭಟ್

ಬದಿಯಡ್ಕ: ನೀರ್ಚಾಲು ಬೇಳ ಕುಮಾರಮಂಗಲ ಬಳಿಯ ಕೋಡುಮಾಡು ನಿವಾಸಿ ಗಣರಾಜ್ ಭಟ್ (58) ನಿಧನ ಹೊಂದಿದರು. ಅಸೌಖ್ಯ ಬಾಧಿಸಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಆದರ್ಶ ಕೃಷಿಕರಾಗಿದ್ದ ಅವರು ಕುಮಾರಮಂಗಲ ಕ್ಷೇತ್ರ, ಶ್ರೀಕಂಠಪ್ಪಾಡಿ ಕ್ಷೇತ್ರ, ಕುಂಜಾರು ಶ್ರೀ ಶಕ್ತಿಪುರ ದೇವಸ್ಥಾನ ಮುಂತಾದ ಅಭಿವೃದ್ಧಿ ಸಮಿತಿಗಳಲ್ಲಿ ಸಕ್ರಿಯರಾಗಿದ್ದರು. ಮೃತರು ಪತ್ನಿ ಸಂಧ್ಯಾ, ಮಕ್ಕಳಾದ ಪ್ರಗತಿ, ಪ್ರಕೃತಿ ಅವರನ್ನು ಅಗಲಿದ್ದಾರೆ.

ಸುಬ್ರಾಯ ಗಟ್ಟಿ

ಕಾಸರಗೋಡು: ಮೊಗ್ರಾಲ್ ಪುತ್ತೂರು ಚೌಕಿ ಕಲ್ಲಂಗೈ ಬಳಿಯ ಬಳ್ಳೂರು ನಿವಾಸಿ ಸುಬ್ರಾಯ ಗಟ್ಟಿ (82) ನಿಧನ ಹೊಂದಿದರು. ಅವರು ಕೃಷಿಕರಾಗಿದ್ದರು. ಮೃತರು ಪತ್ನಿ ಗಿರಿಜಾ, ಮಕ್ಕಳಾದ ಸುಮಲತಾ, ಸುಜಿನ್ ಅವರನ್ನು ಅಗಲಿದ್ದಾರೆ.

ಪಡುಮಲೆ ಶ್ರೀ ಪೂಮಾಣಿ ಕಿನ್ನಿಮಾಣಿ, ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನ

ನೂತನ ಕೊಡಿಮರದ ಮೆರವಣಿಗೆ



ಬಡಗನ್ನೂರು: ಪಡುಮಲೆ ಶ್ರೀ ಪೂಮಾಣಿ ಕಿನ್ನಿಮಾಣಿ, ಶ್ರೀ ವ್ಯಾಘ್ರ ಚಾಮುಂಡಿ (ರಾಜನ್ ದೈವ) ದೈವಸ್ಥಾನಕ್ಕೆ ನೂತನ ಕೊಡಿಮರಕ್ಕೆ ಮರ ಕಡಿಯುವ ಕಾರ್ಯಕ್ರಮವು ಚಂದುಕೂಡ್ಲು ಶ್ರೀನಿವಾಸ ಭಟ್ ಅವರ ಜಾಗದಲ್ಲಿ ನಡೆಯಿತು.

ಬೆಳಗ್ಗೆ ಕ್ಷೇತ್ರ ತಂತ್ರಿವರ್ಯರಾದ ಬ್ರಹ್ಮಶ್ರೀ ವೇದಮೂರ್ತಿ ಕುಂಟಾರು ವಾಸುದೇವ ತಂತ್ರಿಗಳು ಆಗಮಿಸಿ ವಿಶೇಷ ಪ್ರಾರ್ಥನೆ ನೆರವೇರಿಸಿದರು. ಬಳಿಕ ವೇದಮೂರ್ತಿ ಬನ್ನೂರು ಗಣೇಶ ಭಟ್ ಅವರ ನೇತೃತ್ವದಲ್ಲಿ ಭೂಮಿಪೂಜೆ ಮತ್ತು ವೃಕ್ಷ ಪೂಜೆ ನಡೆದು ವಿಶ್ವಕರ್ಮಿ ನಾರಾಯಣ ಆಚಾರ್ಯ ಮತ್ತು ಶಿಲ್ಪಾತಜ್ಞ ಗಂಗಾಧರ ಆಚಾರ್ಯ ನೇತೃತ್ವದಲ್ಲಿ ಮರ ಕಡಿಯುವ ಮುಹೂರ್ತ ನೆರವೇರಿತು.

ಈ ಸಂದರ್ಭದಲ್ಲಿ ಶ್ರೀ ಕೂವೆ ಶಾಸ್ತಾರ ವಿಷ್ಣು ಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶ್ರೀನಿವಾಸ್ ಭಟ್ ಚಂದುಕೂಡ್ಲು, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸತೀಶ್ ರೈ ಕಟ್ಟಾವು, ಮಾಜಿ ಅಧ್ಯಕ್ಷ ಮನೋಜ್ ರೈ ಪೇರಾಲು, ಶ್ರೀ ಪೂಮಾಣಿ ಕಿನ್ನಿಮಾಣಿ, ಶ್ರೀ ವ್ಯಾಘ್ರ ಚಾಮುಂಡಿ (ರಾಜನ್ ದೈವ) ದೈವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ರವಿರಾಜ್ ಶೆಟ್ಟಿ ಅಣಿಲೆ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಮಹಾಲಿಂಗ ಭಟ್ ಬಿ., ಜನಾರ್ದನ ಪೂಜಾರಿ ಪದಡ್ಕ, ಶ್ರೀನಿವಾಸ್ ಗೌಡ ಕನ್ನಯ, ಪುರಂದರ ರೈ ಕುದ್ಕಾಡಿ, ಉದಯ ಕುಮಾರ್ ಪಡುಮಲೆ, ಗೋಪಾಲ ನಾಯ್ಕ ದೊಡ್ಡಡ್ಕ, ಶ್ರೀ ಪೂಮಾಣಿ ಕಿನ್ನಿಮಾಣಿ, ಶ್ರೀ ವ್ಯಾಘ್ರ ಚಾಮುಂಡಿ (ರಾಜನ್ ದೈವ) ದೈವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ರವಿರಾಜ ರೈ ಸಜಂಕಾಡಿ, ಅನಿಲ್ ಕುಮಾರ್ ಕನ್ನಡ್ಕ, ಗಣೇಶ್ ಭಟ್ ಈಶಮೂಲೆ, ರೋಹಿತ್ ಮುಡಿಪಿನಡ್ಕ, ದಯಾ ವಿ. ರೈ ಬೆಳ್ಳಿಪ್ಪಾಡಿ, ಶೀಧರ ನಾಯ್ಕ ನೇರ್ಲಂಪ್ಪಾಡಿ, ಶಶಿಧರ ರೈ ಕತ್ಯಾಳ, ಪ್ರಗತಿಪರ ಕೃಷಿಕರಾದ ಜಯಂತ ರೈ ಕುದ್ಕಾಡಿ, ಕೃಷ್ಣ ರೈ ಕುದ್ಕಾಡಿ, ನಾಗರಾಜ್ ಭಟ್ ಅರ್ತಿಕೂಡ್ಲು, ಕೃಷ್ಣ ಭಟ್ ಬೀರಮೂಲೆ, ಶ್ರೀನಿವಾಸ್ ಭಟ್ ದೇವಸ್ಯ, ನಿತ್ಯಾನಂದ ಮರದಮೂಲೆ, ಗಣೇಶ್ ಭಟ್ ಪಾದಕರ್ಯ, ಶ್ರೀಪತಿ ಭಟ್ ಇಂದಾಜೆ, ಕೇಶವ ಭಟ್ ಇಂದಾಜೆ, ಉದ್ಯಮಿ ಸುಧಾಕರ ಮಂಗಳಾದೇವಿ, ಜಯರಾಮ ಗೌಡ ಕನ್ನಡ್ಕ, ಪುರುಷೋತ್ತಮ ಗೌಡ, ಲಿಂಗಪ್ಪ, ಕುಂಬ್ರ ಶ್ರೀರಾಮ ಭಜನಾ ಮಂದಿರದ ಮಾಜಿ ಅಧ್ಯಕ್ಷ ಪದ್ಮನಾಭ ರೈ ಆರೆಪ್ಪಾಡಿ, ಪಡುಮಲೆ ಶ್ರೀ ಶಾಸ್ತಾರ ಸ್ಪೋರ್ಟ್ಸ್ ಕ್ಲಬ್‌ನ ಅಧ್ಯಕ್ಷ ಗಂಗಾಧರ ರೈ ಮೇಗಿನಮನೆ, ದೈವ ನರ್ತಕ ಡಾ. ರವೀಶ್ ಪಡುಮಲೆ ಮೊದಲಾದವರು ಭಾಗವಹಿಸಿದರು.

ಮೆರವಣಿಗೆ ಚಾಲನೆ

ಕೊಡಿಮರವನ್ನು ಲಾರಿ ಮೇಲಿಟ್ಟು ಹೂವಿನ ಮಾಲೆ ಹಾಕಿ ಅಲಂಕರಿಸಿ ಚಂದುಕೂಡ್ಲು ಶ್ರೀನಿವಾಸ್ ಭಟ್ ಮನೆಯಂಗಳದಲ್ಲಿ ಶ್ರೀನಿವಾಸ್ ಭಟ್ ಮತ್ತು ವೀಣಾ ಶ್ರೀನಿವಾಸ್ ಭಟ್ ದಂಪತಿ ಅರತಿ ಬೆಳಗಿಸಿ ತೆಂಗಿನಕಾಯಿ ಒಡೆಯುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಭವ್ಯ ಮೆರವಣಿಗೆ

ಕೊಡಿಮರವನ್ನು ಲಾರಿ ಮೇಲಿಟ್ಟು ಹೂವಿನ ಮಾಲೆ ಹಾಕಿ ಅಲಂಕರಿಸಿ ಬ್ಯಾಂಡ್ ವಾದ್ಯ ಘೋಷಗಳೊಂದಿಗೆ ಮೆರವಣಿಗೆಯಲ್ಲಿ ತಲೆಂಜಿ, ಮೈಂದನಡ್ಕ ಮಾರ್ಗವಾಗಿ ಪಡುಮಲೆ ಬದಿನಾರು ಶ್ರೀ ಪೂಮಾಣಿ - ಕಿನ್ನಿಮಾಣಿ ಹಾಗೂ ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನಕ್ಕೆ ಸಾಗಿಸಲಾಯಿತು. ಕ್ಷೇತ್ರದ ಪ್ರಧಾನ ಅರ್ಚಕ ಮಹಾಲಿಂಗ ಭಟ್ ನೇತೃತ್ವದಲ್ಲಿ ಶ್ರೀ ದೈವಗಳಿಗೆ ವಿಶೇಷ ಮಂಗಳಾರತಿ ನೆರವೇರಿಸಿ, ನೂತನ ಕೊಡಿಮರಕ್ಕೆ ಅರತಿ ಬೆಳಗಿ ವಿಶೇಷ ಪ್ರಾರ್ಥನೆ ನೆರವೇರಿಸಿದರು. ಬಳಿಕ ಕೊಡಿಮರವನ್ನು ಲಾರಿಯಿಂದ ಇಳಿಸಿ ಕ್ಷೇತ್ರದಲ್ಲಿ ಇಟ್ಟು ಮುಂದಿನ ಕಾರ್ಯಗಳು ಶೀಘ್ರವಾಗಿ ನಡೆಯುವಂತೆ ಪ್ರಾರ್ಥಿಸಲಾಯಿತು.

ಕಾಸರಗೋಡು ಜಿಲ್ಲಾ ರಸ್ತೆ ಸುರಕ್ಷತಾ ಪ್ರಾಧಿಕಾರದ ಸಭೆ

ಶಾಲಾ ಮಕ್ಕಳು ಪ್ರಯಾಣಿಸುವ ಸಮಯ ಟಿಪ್ಪರ್ ಲಾರಿ ಸಂಚಾರ ನಿಷೇಧಕ್ಕೆ ಆದೇಶ

ಕಾಸರಗೋಡು: ಶಾಲಾ ವಿದ್ಯಾರ್ಥಿಗಳು ಪ್ರಯಾಣಿಸುವ ಸಮಯವಾದ ಬೆಳಗ್ಗೆ 8 ರಿಂದ 10ರ ವರೆಗೆ ಮತ್ತು ಅಪರಾಹ್ನ 3.30ರಿಂದ ಸಂಜೆ 5ರ ತನಕ ಕಾಸರಗೋಡು ಜಿಲ್ಲೆಯ ರಸ್ತೆಗಳಲ್ಲಿ ಟಿಪ್ಪರ್ ಲಾರಿಗಳು ಸಹಿತ ಘನ ಲಾರಿಗಳ ಸಂಚಾರವನ್ನು ನಿಷೇಧಿಸಲಾಗುವುದು. ಈ ಆದೇಶವನ್ನು ಕೂಡಲೇ ಜಾರಿಗೆ ತರಬೇಕು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಶಾಲಾ ವಿದ್ಯಾರ್ಥಿಗಳು ಪ್ರಯಾಣಿಸುವ ಸಂದರ್ಭದಲ್ಲಿ ಅತಿ ವೇಗದಲ್ಲಿ ಚಲಿಸುವ ಟಿಪ್ಪರ್ ಲಾರಿಗಳಿಂದ ಸಂಭವಿಸುವ ಅಪಘಾತಗಳನ್ನು ತಪ್ಪಿಸಲು ಮುನ್ನೆಚ್ಚರಿಕೆ ವಹಿಸಬೇಕು. ಮಾತ್ರವಲ್ಲದೆ ಶಾಲಾ ಮಕ್ಕಳ ಸುರಕ್ಷತೆಯ ವಿಚಾರದಲ್ಲಿ ಎಲ್ಲಾ ಇಲಾಖೆಗಳು ಅಗತ್ಯದ ಕ್ರಮಗಳನ್ನು ಅನುಸರಿಸಬೇಕು ಎಂದು ಅವರು ನಿರ್ದೇಶಿಸಿದರು.



ಕಾಸರಗೋಡು ಕಲೆಕ್ಟರೇಟ್‌ನ ಸಮ್ಮೇಳನ ಸಭಾಂಗಣದಲ್ಲಿ ನಡೆದ ಜಿಲ್ಲಾ ರಸ್ತೆ ಸುರಕ್ಷಾ ಪ್ರಾಧಿಕಾರದ ವಿಶೇಷ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಲಾರಂಭ ಸಮಯ ಮತ್ತು ಶಾಲೆ ಬಿಡುವ ಸಮಯದಲ್ಲಿ ಟಿಪ್ಪರ್ ಲಾರಿಗಳನ್ನು ನಿಯಂತ್ರಿಸುವುದು ಅತ್ಯಗತ್ಯವಾಗಿದೆ. ಶಾಲಾ ಮತ್ತು ಕಾಲೇಜು ಪ್ರದೇಶಗಳಲ್ಲಿ ರಸ್ತೆ ಸುರಕ್ಷತೆಯನ್ನು ಇನ್ನಷ್ಟು ಬಿಗುಗೊಳಿಸಬೇಕು. ಸುರಕ್ಷತಾ ಸಿಗ್ನಲ್‌ಗಳು ಮತ್ತು ಝೀಬ್ರಾ ಲೈನ್‌ಗಳನ್ನು ಖಚಿತಪಡಿಸಿಕೊಳ್ಳಬೇಕು. ಶಾಲಾ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಬೆಳಗ್ಗೆ ಮತ್ತು ಸಂಜೆ ಮಕ್ಕಳು ರಸ್ತೆ ದಾಟುವ ಸ್ಥಳಗಳಲ್ಲಿ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಆರ್‌ಟಿಒ, ಮೋಟಾರು ವಾಹನ ಇಲಾಖೆ ಅಧಿಕಾರಿಗಳು, ರಸ್ತೆ ಸುರಕ್ಷಾ ಪ್ರಾಧಿಕಾರದ ಸದಸ್ಯರು, ಪೊಲೀಸ್ ಅಧಿಕಾರಿಗಳು, ಲೋಕೋಪಯೋಗಿ ರಸ್ತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, ಕೆಎಸ್‌ಟಿಪಿ ಕಾರ್ಯನಿರ್ವಾಹಕ ಇಂಜಿನಿಯರ್, ಕೆಆರ್‌ಎಫ್‌ಬಿ ಕಾರ್ಯನಿರ್ವಾಹಕ ಇಂಜಿನಿಯರ್, ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯದರ್ಶಿಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಕುಕ್ಕೆ: ಇಂದು ಶ್ರೀ ದೇವರ ನಿತ್ಯೋತ್ಸವಕ್ಕೆ ತೆರೆ

ಸುಬ್ರಹ್ಮಣ್ಯ: ಪ್ರಸಿದ್ಧ ಪುಣ್ಯ ಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶನಿವಾರ (ಜೂ.20) ಶ್ರೀ ದೇವರ ಹೊರಾಂಗಣ ಉತ್ಸವಾದಿಗಳು ತೆರೆ ಕಾಣಲಿದೆ.ಈ ದಿನ ಮಧ್ಯಾಹ್ನ ಶ್ರೀ ದೇವರಿಗೆ ವಿಶೇಷ ಪಂಚಾಮೃತ ಮಹಾಭಿಷೇಕ ನೆರವೇರಲಿದೆ. ಶುದ್ಧ ಷಷ್ಠಿಯ ದಿನವಾದ ಶನಿವಾರ ರಾತ್ರಿ ಮಹಾಪೂಜೆಯ ಬಳಿಕ ಹೊರಾಂಗಣದಲ್ಲಿ ಪಾಲಕಿ ಮತ್ತು ಬಂಡಿ ಉತ್ಸವ ಸ್ವೀಕರಿಸಿದ ನಂತರ ಒಳಾಂಗಣ ಪ್ರವೇಶಿಸುವುದರೊಂದಿಗೆ ಕ್ಷೇತ್ರದಲ್ಲಿ ಉತ್ಸವಗಳು ಕೊನೆಯಾಗಲಿದೆ. ಎಲ್ಲಾ ಕ್ಷೇತ್ರಗಳಲ್ಲಿ ಪತ್ತನಾಜೆ ದಿನ ದೇವರ ಉತ್ಸವಗಳು ಕೊನೆಗೊಂಡರೆ ಕುಕ್ಕೆಯಲ್ಲಿ ಶುದ್ಧ ಷಷ್ಠಿಯ ದಿನ ಉತ್ಸವಾದಿಗಳು ಕೊನೆಗೊಳ್ಳುವುದು ವಿಶೇಷವಾಗಿದೆ.

ಅತ್ಯಂತ ಪವಿತ್ರ ದಿನ

ವಾರಾಂತ್ಯ ಸೇರಿದಂತೆ ಶುದ್ಧ ಷಷ್ಠಿ ಮತ್ತು ಹೊರಾಂಗಣ ಉತ್ಸವಗಳಿಗೆ ತೆರೆಯ ದಿನವು ಕ್ಷೇತ್ರದಲ್ಲಿ ಅತ್ಯಂತ ಪವಿತ್ರವಾಗಿದೆ. ಈ ಕಾರಣದಿಂದ ಕ್ಷೇತ್ರಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ದೇವರ ದರುಶನ ನೆರವೇರಿಸುವ ಸಾಧ್ಯತೆ ದಟ್ಟವಾಗಿದ್ದು ಶನಿವಾರವೂ ಅತ್ಯಧಿಕ ಸಂಖ್ಯೆಯಲ್ಲಿ ಭಕ್ತರು ಕ್ಷೇತ್ರಕ್ಕೆ ಆಗಮಿಸಿ ಶ್ರೀ ದೇವರ ದರುಶನ ಪಡೆಯುವ ಸಾಧ್ಯತೆ ದಟ್ಟವಾಗಿದೆ. ಮಳೆಯ ಪ್ರಮಾಣ ಕಡಿಮೆಯಾಗಿರುವುದು ಅತ್ಯಧಿಕ ಭಕ್ತರ ಬರೋಣಕ್ಕೆ ಸಹಕಾರಿಯಾಗಿದೆ.

2000 ಆಶ್ಲೇಷ ಬಲಿ ಸೇವೆ

ಶುಕ್ರವಾರ ಆಶ್ಲೇಷ ನಕ್ಷತ್ರದ ಪವಿತ್ರ ದಿನ 2000ಕ್ಕೂ ಅಧಿಕ ಭಕ್ತರು ಆಶ್ಲೇಷ ಬಲಿ ಸೇವೆ ನೆರವೇರಿಸಿದರು. ಬೆಳಗ್ಗೆ 6 ಗಂಟೆಯಿಂದ ಮೂರು ಪಾಳಿಯಲ್ಲಿ ನಡೆದ ಆಶ್ಲೇಷ ಬಲಿ ಸೇವೆಯಲ್ಲಿ ಅತ್ಯಧಿಕ ಭಕ್ತರು ಸೇವೆ ನೆರವೇರಿಸಿ ಪ್ರಸಾದ ಸ್ವೀಕರಿಸಿ ಶ್ರೀ ದೇವರ ದರುಶನ ಪಡೆದರು.ಬಳಿಕ ಸಂಜೆಯ ಒಂದು ಪಾಳಿಯಲ್ಲಿ ಕೂಡಾ ಅಧಿಕ ಭಕ್ತರು ಸೇವೆ ಸಮರ್ಪಿಸಿದರು.ಆಶ್ಲೇಷಬಲಿಯೊಂದಿಗೆ ನಾಗಪ್ರತಿಷ್ಠೆ, ತುಲಾಭಾರ, ಪಂಚಾಮೃತ ಮಹಾಭಿಷೇಕ, ಶೇಷಸೇವೆ, ಕಾರ್ತಿಕ ಪೂಜೆ, ಸೇರಿದಂತೆ ಪಾಲಕಿ ಮತ್ತು ಬಂಡಿ ಉತ್ಸವಗಳನ್ನು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ನೆರವೇರಿಸಿದರು. ಭಕ್ತ ದಟ್ಟಣೆ ಕಂಡು ಬಂದಿದ್ದು ಶ್ರೀ ದೇವಳದಿಂದ ವ್ಯವಸ್ಥಿತವಾಗಿ ಭೋಜನ ಪ್ರಸಾದ ಮತ್ತು ಫಲಹಾರವನ್ನು ಭಕ್ತರಿಗೆ ವಿತರಿಸಲಾಯಿತು.

ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಡಿ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮ | ಮೋದಿಯಿಂದ ಮಹತ್ತರ ಬದಲಾವಣೆ

ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಕಾರ್ಮಿಕರ ಭದ್ರತೆಗೆ ಪ್ರಥಮ ಪ್ರಾಶಸ್ತ್ಯ: ಕೋಟ

ಉಡುಪಿ: ದೇಶಾದ್ಯಂತ ಉದ್ಯೋಗ ಸೃಷ್ಟಿಗೆ ವೇಗ ನೀಡಲು, ವಿಶೇಷವಾಗಿ ಉತ್ಪಾದನಾ ಕ್ಷೇತ್ರದಲ್ಲಿ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ಮತ್ತು ವಿವಿಧ ವಲಯಗಳಲ್ಲಿ ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ವಿಸ್ತರಿಸುವ ಉದ್ದೇಶ ಹೊಂದಿರುವ ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಡಿಯಲ್ಲಿ ಈಗಾಗಲೇ ದೇಶಾದ್ಯಂತ 15 ಲಕ್ಷ ಉದ್ಯೋಗಾವಕಾಶಗಳ ಸೃಷ್ಟಿಗೆ ಬೆಂಬಲ ನೀಡಿದೆ. ತನ್ನ ಮತ್ತು ನಾಳಿನ ಸಮಾಜದ ಭವಿಷ್ಯಕ್ಕಾಗಿ ದುಡಿಯುತ್ತಿರುವ ಕಾರ್ಮಿಕರ ಭದ್ರತೆಗೆ ಪ್ರಥಮ ಪ್ರಾಶಸ್ತ್ಯ ನೀಡುವ ದೃಷ್ಟಿಯಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಒಟ್ಟು 99,446 ಕೋಟಿ ರೂ ವೆಚ್ಚದ ಈ ಯೋಜನೆಯು ಎರಡು ವರ್ಷಗಳ ಅವಧಿಯಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳ ಸೃಷ್ಟಿಗೆ ಪ್ರೋತ್ಸಾಹ ನೀಡುವ ಗುರಿಯನ್ನು ಹೊಂದಿದೆ ಎಂದು ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಹೇಳಿದರು.

ಅವರು ಮಣಿಪಾಲದ ರಜತಾದ್ರಿಯ ಅಟಲ್ ಬಿಹಾರಿ ವಾಜಪೇಯಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಡಿ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

145 ಕೋಟಿ ಜನಸಂಖ್ಯೆಯ ಭಾರತದಲ್ಲಿ ಅಂಕಿ ಅಂಶಗಳ ಪ್ರಕಾರ 42 ಕೋಟಿ ಅಸಂಘಟಿತ ಕಾರ್ಮಿಕರು ದುಡಿಯುತ್ತಿದ್ದಾರೆ. ನಾನಾ ವೃತ್ತಿಗಳಲ್ಲಿರುವ 29 ಕೋಟಿ ಕಾರ್ಮಿಕರು ಇ-ಶ್ರಮ್ ಪೋರ್ಟಲ್ ನಲ್ಲಿ ನೋಂದಾಯಿಸಲ್ಪಟ್ಟಿದ್ದಾರೆ. ಕೇಂದ್ರ ಮತ್ತು ರಾಜ್ಯದ ಕಾರ್ಮಿಕ ಇಲಾಖೆಗಳು ಸಂಘಟಿತ ಮತ್ತು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಎಲ್ಲ ಕಾರ್ಮಿಕರಿಗೆ ಭದ್ರತೆ ನೀಡಲು ಬದ್ಧವಾಗಿದೆ. ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಡಿಯಲ್ಲಿ ಕಾರ್ಮಿಕರು ಮತ್ತು ಉದ್ಯೋಗದಾತರು ಇಬ್ಬರೂ ದೇಶದ ಆರ್ಥಿಕತೆಯನ್ನು ಪ್ರೋತ್ಸಾಹಿಸಿ ವಿಕಸಿತ ಭಾರತದ ಕನಸನ್ನು ನನಸಾಗಿಸುತ್ತಿದ್ದಾರೆ ಎಂದ ಅವರು, ಜಿಲ್ಲೆಯಲ್ಲಿ ಯೋಜನೆಯ ಭಾಗ (ಎ) ನಲ್ಲಿ 774 ಉದ್ಯೋಗಿಗಳಿಗೆ 48,58,475 ರೂವರೆಗೆ ಪ್ರೋತ್ಸಾಹಧನ ಹಾಗೂ ಭಾಗ (ಬಿ) ನಲ್ಲಿ 199



ಸಂಸ್ಥೆಗಳು 3.18 ಕೋಟಿ ರೂಗಳ ಪ್ರೋತ್ಸಾಹಧನವನ್ನು ನಗದೀಕರಿಸಿಕೊಂಡಿವೆ. ಆತ್ಮನಿರ್ಭರ ಭಾರತವನ್ನು ರೂಪಿಸುತ್ತಿರುವ ದುಡಿಯುವ ಕೈಗಳಿಗೆ ಈ ಯೋಜನೆ ಶಕ್ತಿ ತುಂಬಲಿದೆ. ಆತ್ಮನಿರ್ಭರತೆಯೊಂದಿಗೆ ವಿಕಸಿತ ಭಾರತವು ಎಲ್ಲ ರಂಗಗಳಲ್ಲೂ ಪ್ರಥಮ ರಾಷ್ಟ್ರವಾಗಿ ರೂಪುಗೊಳ್ಳಬೇಕು ಎಂದರು.

1.92 ಕೋ. ರೂ. ಫಲಾನುಭವಿಗಳಿಗೆ ಲಾಭ

ಶಾಸಕ ಯಶ್‌ಪಾಲ್ ಸುವರ್ಣ ಮಾತನಾಡಿ, ನರೇಂದ್ರ ಮೋದಿಯವರು ದೇಶದ ನೇತೃತ್ವ ವಹಿಸಿದ ಬಳಿಕ ದೇಶದಲ್ಲಿ ಹಲವು ಮಹತ್ತರ ಬದಲಾವಣೆಗಳಾಗಿವೆ. ಅಂದಾಜು 1.92 ಕೋಟಿ ಫಲಾನುಭವಿಗಳು ಈ ಯೋಜನೆಯಡಿಯಲ್ಲಿ ಮೊದಲ ಬಾರಿಗೆ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುತ್ತಿದ್ದಾರೆ. ಉದ್ಯೋಗಾಕಾಂಕ್ಷಿ ಯುವಕ ಮತ್ತು ಯುವತಿಯರಿಗೆ ಇದರಿಂದ ಪ್ರಯೋಜನ ಸಿಗಲಿದೆ. ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವ ಉದ್ಯೋಗಿಗಳು ಮೊದಲನೆ ತಿಂಗಳು 15,000 ರೂವರೆಗೆ ಪ್ರೋತ್ಸಾಹಧನ ಪಡೆದರೆ, ಹೆಚ್ಚುವರಿ ಉದ್ಯೋಗವನ್ನು ಸೃಷ್ಟಿಸುವ ಉದ್ಯೋಗದಾತರು ಪ್ರತಿ ಹೆಚ್ಚುವರಿ ಉದ್ಯೋಗಿಗೆ ತಿಂಗಳಿಗೆ 3,000 ರೂ ವರೆಗೆ ಪ್ರೋತ್ಸಾಹಧನ ಪಡೆಯುತ್ತಾರೆ. ಇಂತಹ ಪ್ರಯತ್ನ ದೇಶದಲ್ಲೇ ಪ್ರಪ್ರಥಮ ಬಾರಿಗೆ ನಡೆಯುತ್ತಿದೆ. ಉದ್ಯೋಗಿಗಳು ಮತ್ತು ಉದ್ಯೋಗದಾತರು ಇಬ್ಬರನ್ನೂ ಬೆಂಬಲಿಸುವ ಮೂಲಕ ಈ ಯೋಜನೆಯು ಔಪಚಾರಿಕ ಉದ್ಯೋಗವನ್ನು ವಿಸ್ತರಿಸಿ, ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ಬಲಪಡಿಸಿ ವಿಕಸಿತ ಭಾರತಕ್ಕೆ ಸಹಕಾರಿಯಾಗಲಿದೆ ಎಂದರು.

30 ಸಾವಿರ ರೂ. ಗೆ ಏರಿಸಲು ಮನವಿ

ಪ್ರಸ್ತುತ 18 ಸಾವಿರದಿಂದ 21 ಸಾವಿರ ರೂ. ವರೆಗಿನ ವೇತನ ಹೊಂದಿದವರಿಗೆ ಮಾತ್ರ ಇ.ಎಸ್.ಐ ಸೌಲಭ್ಯ ದೊರೆಯುತ್ತಿದೆ. ಆದರೆ ಇದನ್ನು 30 ಸಾವಿರ ವೇತನ ಹೊಂದಿದ ಉದ್ಯೋಗಿಗಳಿಗೂ ವಿಸ್ತರಿಸಬೇಕು ಎಂದು ಕೇಂದ್ರದ ಕಾರ್ಮಿಕ ಇಲಾಖೆಗೆ ಮನವಿ ಮಾಡಿದ್ದೇವೆ. 19 ಕೋಟಿ ಕಾರ್ಮಿಕರು ಈ ಯೋಜನೆಯ ಸೌಲಭ್ಯ ಪಡೆಯುತ್ತಿದ್ದು ಯೋಜನೆ ವಿಸ್ತರಣೆಗೊಂಡಲ್ಲಿ ಇನ್ನೂ ಹೆಚ್ಚಿನ ಜನರಿಗೆ ಸೌಲಭ್ಯ ದೊರೆಯಲಿದೆ ಎಂದರು.

ಈ ಸಂದರ್ಭದಲ್ಲಿ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆ ಅಡಿಯಲ್ಲಿ ಸುಮಾರು 2,400 ಕೋಟಿ ರೂ ಮೌಲ್ಯದ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಧಾಕರ್ ನಾಯ್ಕ್, ಇ.ಪಿ.ಎಫ್.ಒ ಪ್ರಾದೇಶಿಕ ಆಯುಕ್ತ ಶಶಿಕಾಂತ್ ದಹಿಯಾ, ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಎಚ್.ಕೆ ಗಂಗಾಧರ್ ಮತ್ತಿತರರು ಉಪಸ್ಥಿತರಿದ್ದರು.

ನೀತಾ ಉದಯಶಂಕರ್, ಜಯಶ್ರೀ ನಿರೂಪಿಸಿ, ವನಿತಾ ನಾಯ್ಕ್ ವಂದಿಸಿದರು.

ಶನಿವಾರದ ಪಂದ್ಯಗಳು

ಬ್ರೆಜಿಲ್-ಹೈಟಿ, (ಬೆಳಗ್ಗೆ 6:00)
ಟರ್ಕಿ-ಪರಾಗ್ವೆ, (ಬೆಳಗ್ಗೆ 8:30)
ನೆದರ್ಲೆಂಡ್ಸ್-ಸ್ವೀಡನ್, (ರಾತ್ರಿ 10:30)
ಜರ್ಮನಿ-ಐವರಿ ಕೋಸ್ಟ್, (ರಾತ್ರಿ 1:30)

ಆತಿಥ್ಯ ತಂಡಕ್ಕೆ ಸತತ ಎರಡನೇ ಗೆಲುವು | 32ರ ಸುತ್ತಿಗೆ ಲಗ್ಗೆ

ನಾಕೌಟ್‌ಗೇರಿದ ಮೆಕ್ಸಿಕೊ!

ಗ್ವಾಡಲಹಾರಾ (ಮೆಕ್ಸಿಕೊ): ಆತಿಥೇಯ ಮೆಕ್ಸಿಕೊ ತಂಡ ಫಿಫಾ ವಿಶ್ವಕಪ್ 2026ರಲ್ಲಿ ತನ್ನ ಗೆಲುವಿನ ಓಟವನ್ನು ಮುಂದುವರಿಸಿದ್ದು, ದಕ್ಷಿಣ ಕೊರಿಯಾವನ್ನು 1–0 ಗೋಲುಗಳಿಂದ ಮಣಿಸಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡವಾಗಿದೆ.

ದೊಡ್ಡ ಸಂಖ್ಯೆಯ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಮೊದಲಾರ್ಧದಲ್ಲಿ ಪರಿಣಾಮಕಾರಿ ದಾಳಿ ನಡೆಸಲು ವಿಫಲವಾದವು. ಗೋಲು ಅವಕಾಶಗಳು ವಿರಳವಾಗಿದ್ದ ಕಾರಣ ಮೊದಲ 45 ನಿಮಿಷ ಗೋಲುರಹಿತವಾಗಿತ್ತು.

ಆದರೆ ದ್ವಿತೀಯಾರ್ಧ ಆರಂಭವಾದ ಐದು ನಿಮಿಷ ನಂತರ 50ನೇ ನಿಮಿಷದಲ್ಲಿ ದಕ್ಷಿಣ ಕೊರಿಯಾ ಗೋಲ್‌ಕೀಪರ್ ಕಿಮ್ ಸೆಯುಂಗ್-ಗ್ಯೂ ಹಾಗೂ ರಕ್ಷಣಾ ಆಟಗಾರ ಲೀ ಜಿ-ಹ್ಯುಕ್ ನಡುವೆ ಉಂಟಾದ ಗೊಂದಲದಿಂದ ಚೆಂಡು ಕೈತಪ್ಪಿತು. ಅದನ್ನು ಸದುಪಯೋಗಪಡಿಸಿಕೊಂಡ ಲೂಯಿಸ್ ರೋಮೊ ಖಾಲಿ ಗೋಲ್‌ಪೋಸ್ಟ್‌ಗೆ ಚೆಂಡು ತಳ್ಳಿ ಮೆಕ್ಸಿಕೊಗೆ ಮುನ್ನಡೆ ತಂದುಕೊಟ್ಟರು.

ಗೋಲು ಬಿಟ್ಟ ನಂತರ ದಕ್ಷಿಣ ಕೊರಿಯಾ ಆಕ್ರಮಣಕಾರಿ ಆಟಕ್ಕೆ ಮೊರೆ ಹೋದರೂ, ಮೆಕ್ಸಿಕೊ ಗೋಲ್‌ಕೀಪರ್ ರೌಲ್ ರಾಂಗೆಲ್ ಗೋಡೆ ರೀತಿಯಲ್ಲಿ ನಿಂತರು. 87ನೇ ನಿಮಿಷದಲ್ಲಿ ಚೋ ಗುಯೆ-ಸುಂಗ್ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದ ರಾಂಗೆಲ್, ಆದರ ತಕ್ಷಣವೇ ಯಾಂಗ್ ಹ್ಯೂನ್-ಜುನ್ ಅವರ ರೀಬೌಂಡ್ ಪ್ರಯತ್ನವನ್ನೂ ವಿಫಲಗೊಳಿಸಿ ತಂಡದ ಗೆಲುವು ಖಚಿತಪಡಿಸಿದರು.

ಅಗ್ರಸ್ಥಾನದೊಂದಿಗೆ ನಾಕೌಟ್‌ಗೆ ಲಗ್ಗೆ: ಈ ಗೆಲುವಿನೊಂದಿಗೆ ಮೆಕ್ಸಿಕೊ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಪಡೆದು ಎ ಗುಂಪಿನಲ್ಲಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿದೆ. 2022ರ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿದ್ದ ಮೆಕ್ಸಿಕೊ, ಈ ಬಾರಿ ತವರಿನ ಅಭಿಮಾನಿಗಳ ಬೆಂಬಲದೊಂದಿಗೆ ಭರ್ಜರಿ ಪುನರಾಗಮನ ಮಾಡಿದೆ. ಮೊದಲ ಪಂದ್ಯದಲ್ಲೇ ಆಫ್ರಿಕಾ ವಿರುದ್ಧ ಗೆದ್ದಿದ್ದ ಮೆಕ್ಸಿಕೊ ಈ ಗೆಲುವಿನೊಂದಿಗೆ ನಾಕೌಟ್ ಗೇರಿದೆ.

- ಲೂಯಿಸ್ ರೋಮೊ (50ನೇ ನಿ.) ಮೆಕ್ಸಿಕೊ
- ಪಂದ್ಯಶ್ರೇಷ್ಠ: ರೌಲ್ ರಾಂಗೆಲ್ (ಮೆಕ್ಸಿಕೊ)
- 87ನೇ ನಿಮಿಷದಲ್ಲಿ ಸತತ ಎರಡು ಅದ್ಭುತ ಸೇವ್‌ಗಳ ಮೂಲಕ ತಂಡದ ಗೆಲುವು ಉಳಿಸಿದರು.



ಮೆಕ್ಸಿಕೊ 1-0 ದಕ್ಷಿಣ ಕೊರಿಯಾ

ಸ್ವಿಟ್ಜರ್ಲೆಂಡ್ ಜಯಭೇರಿ

ಇಂಗಲ್‌ವುಡ್ (ಅಮೆರಿಕ): ಬದಲಿ ಆಟಗಾರ ಜೋಹಾನ್ ಮಂಜಾಂಬಿ ಅವರ ಮಿಂಚಿನ ಪ್ರದರ್ಶನದ ನೆರವಿನಿಂದ ಸ್ವಿಟ್ಜರ್ಲೆಂಡ್ ತಂಡವು ಬೋಸ್ನಿಯಾ-ಹರ್ಜೆಗೋವಿನಾವನ್ನು 4–1 ಅಂತರದಿಂದ ಮಣಿಸಿ ಬಿ ಗುಂಪಿನಲ್ಲಿ ತನ್ನ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು.ಸೋಫಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ಹೆಚ್ಚಿನ ಸಮಯ ಚೆಂಡಿನ ಮೇಲಿನ ಹಿಡಿತ ಸಾಧಿಸಿದ್ದರೂ, ಬೋಸ್ನಿಯಾದ ಹೋರಾಟದಿಂದಾಗಿ ಗೋಲುಗಳಿಗಾಗಿ 74ನೇ ನಿಮಿಷದವರೆಗೆ ಕಾಯಬೇಕಾಯಿತು.

ಸ್ವಿಟ್ಜರ್ಲೆಂಡ್ ಪ್ರಾಬಲ್ಯ: ಪಂದ್ಯದಲ್ಲಿ ಬದಲಿಯಾಗಿ ಕಣಕ್ಕಿಳಿದ ಕೇವಲ ಮೂರು ನಿಮಿಷಗಳಲ್ಲೇ ಜೋಹಾನ್ ಮಂಜಾಂಬಿ ಅದ್ಭುತ ವಾಲಿ ಮೂಲಕ ಗೋಲು ಬಾರಿಸಿ ಸ್ವಿಟ್ಜಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಈ ಗೋಲು ವಿಶ್ವಕಪ್‌ನಲ್ಲಿ ಅವರ ಮೊದಲ ಗೋಲಾಗಿತ್ತು. ಪಂದ್ಯದ ತಿರುವು 80ನೇ ನಿಮಿಷದಲ್ಲಿ ಎದುರಾಯಿತು. ಬೋಸ್ನಿಯಾದ ತಾರಿಕ್ ಮುಹರೆಮೊವಿಕ್ ಅಪಾಯಕಾರಿ ಟ್ಯಾಕಲ್‌ಗೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 10 ಆಟಗಾರರೊಂದಿಗೆ ಉಳಿಯಬೇಕಾಯಿತು.

ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಸ್ವಿಸ್ ಪಡೆ 84ನೇ ನಿಮಿಷದಲ್ಲಿ ರೂಬೆನ್ ವರ್ಗಾಸ್ ಮೂಲಕ ಎರಡನೇ ಗೋಲು ಗಳಿಸಿತು. ನಂತರ 90ನೇ ನಿಮಿಷದಲ್ಲಿ ವರ್ಗಾಸ್ ನೀಡಿದ ಪಾಸ್ ಅನ್ನು ಮತ್ತೊಮ್ಮೆ ಗೋಲಾಗಿ ಪರಿವರ್ತಿಸಿದ ಮಂಜಾಂಬಿ ತಮ್ಮ ಎರಡನೇ ಗೋಲು ದಾಖಲಿಸಿದರು.

ಹೆಚ್ಚುವರಿ ಸಮಯದಲ್ಲಿ ಬೋಸ್ನಿಯಾದ ಎರ್ಮಿನ್ ಮಾಹ್ಮಿಕ್ ಒಂದು ಗೋಲು ಬಾರಿಸಿ ಅಂತರವನ್ನು ಕಡಿಮೆ ಮಾಡಿದರೂ, ಪಂದ್ಯದ ಕೊನೆಯ ಕಿಕ್‌ನಲ್ಲಿ ನಾಯಕ ಗ್ರಾನಿಟ್ ಶಾಕಾ ಪೆನಾಲ್ಟಿ ಗೋಲಿನ ಮೂಲಕ ಸ್ವಿಟ್ಜರ್‌ಲೆಂಡ್‌ಗೆ 4–1ರ ಭರ್ಜರಿ ಜಯ ತಂದುಕೊಟ್ಟರು.

- ಸ್ವಿಟ್ಜರ್ಲೆಂಡ್ 4-1 ಬೋಸ್ನಿಯಾ-ಹರ್ಜೆಗೋವಿನಾ ಸ್ವಿಟ್ಜರ್ಲೆಂಡ್
- ಜೋಹಾನ್ ಮಂಜಾಂಬಿ (74, 90 ನೇ ನಿ.)
- ರೂಬೆನ್ ವರ್ಗಾಸ್ (84ನೇ ನಿ.)
- ಗ್ರಾನಿಟ್ ಶಾಕಾ (90ನೇ ನಿ.)
- ಬೋಸ್ನಿಯಾ-ಹರ್ಜೆಗೋವಿನಾ: ಎರ್ಮಿನ್ ಮಾಹ್ಮಿಕ್ (90ನೇ ನಿ.)

- ಪಂದ್ಯಶ್ರೇಷ್ಠ ಜೋಹಾನ್ ಮಂಜಾಂಬಿ (ಸ್ವಿಟ್ಜರ್ಲೆಂಡ್)
- ಬದಲಿಯಾಗಿ ಕಣಕ್ಕಿಳಿದು ಎರಡು ಗೋಲು ಬಾರಿಸಿ ಪಂದ್ಯದ ಹೀರೋ ಎನಿಸಿದರು.

ದಕ್ಷಿಣ ಆಫ್ರಿಕಾ-ಚೆಕ್ ರಿಪಬ್ಲಿಕ್ 1-1 ಡ್ರಾ

ಅಟ್ಲಾಂಟಾ: ಟೆಬೊಹೋ ಮೊಕೊಯೆನಾ ಅವರ ನಿರ್ಣಾಯಕ ಪೆನಾಲ್ಟಿ ಗೋಲಿನ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಫಿಫಾ ವಿಶ್ವಕಪ್ 2026ರ ಗ್ರೂಪ್ ಎ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ವಿರುದ್ಧ 1–1 ಗೋಲುಗಳ ಸಮಬಲ ಸಾಧಿಸಿತು.ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ಆರಂಭದಲ್ಲೇ ಮುನ್ನಡೆ ಸಾಧಿಸಿತು. ಕೇವಲ 6ನೇ ನಿಮಿಷದಲ್ಲಿ ಮಿಚಲ್ ಸಡಿಲೆಕ್ ಗೋಲು ಬಾರಿಸಿ ಯುರೋಪಿಯನ್ ತಂಡಕ್ಕೆ 1–0 ಮುನ್ನಡೆ ತಂದುಕೊಟ್ಟರು. ಅಲೆಕ್ಸಾಂಡರ್ ಸೊಯ್ಕಾ ನೀಡಿದ ಪಾಸ್ ಅನ್ನು ಸಡಿಲೆಕ್ ಗೋಲಾಗಿ ಪರಿವರ್ತಿಸಿದರು. 83ನೇ ನಿಮಿಷದಲ್ಲಿ ಪೆನಾಲ್ಟಿ ತೆಗೆದುಕೊಂಡ ಟೆಬೊಹೋ ಮೊಕೊಯೆನಾ ಚೆಂಡನ್ನು ಗೋಲ್‌ಕೀಪರ್ ಮಟೇಜ್ ಕೋವಾರ್ ಅವರ ಕೈಗೆಟುಕದಂತೆ ಬಲೆಗೆ ಸೇರಿಸಿ ಸಮಬಲ ಸಾಧಿಸಿದರು.

ಗೋಲುಗಳ ವಿವರ

- ಚೆಕ್ ರಿಪಬ್ಲಿಕ್: ಮಿಚಲ್ ಸಡಿಲೆಕ್ (6ನೇ ನಿ.)
- ದಕ್ಷಿಣ ಆಫ್ರಿಕಾ: ಟೆಬೊಹೋ ಮೊಕೊಯೆನಾ (83ನೇ ನಿ. ಪೆನಾಲ್ಟಿ)

- ದಕ್ಷಿಣ ಆಫ್ರಿಕಾ ವಿಶ್ವಕಪ್‌ನಲ್ಲಿ ತನ್ನ ಆಶೆಯನ್ನು ಜೀವಂತವಾಗಿರಿಸಿಕೊಂಡಿತು.
- ಚೆಕ್ ರಿಪಬ್ಲಿಕ್ ಎರಡು ಪಂದ್ಯಗಳ ಬಳಿಕವೂ ಮೊದಲ ಗೆಲುವಿಗಾಗಿ ಕಾಯುತ್ತಿದೆ.

ಪಂದ್ಯಶ್ರೇಷ್ಠ:
ಟೆಬೊಹೋ ಮೊಕೊಯೆನಾ (ದಕ್ಷಿಣ ಆಫ್ರಿಕಾ)

ಡೇವಿಡ್ ಹ್ಯಾಟ್ರಿಕ್, ಕೆನಡಾಗೆ ಐತಿಹಾಸಿಕ ಜಯ

ಕತಾರ್ ವಿರುದ್ಧ 6-0 ಗೆಲುವು

ವ್ಯಾಂಕೂವರ್: ಗ್ರೂಪ್ ಬಿ ಪಂದ್ಯದಲ್ಲಿ ಆತಿಥೇಯ ಕೆನಡಾ ತಂಡ ಕತಾರ್ ವಿರುದ್ಧ 6–0 ಗೋಲುಗಳ ಭರ್ಜರಿ ಜಯ ಸಾಧಿಸಿ ವಿಶ್ವಕಪ್ ಇತಿಹಾಸದ ಮೊದಲ ಗೆಲುವು ದಾಖಲಿಸಿತು. ಈ ಗೆಲುವಿನೊಂದಿಗೆ ಕೆನಡಾ ನಾಕೌಟ್ ಹಂತದತ್ತ ಬಹುತೇಕ ತನ್ನ ಸ್ಥಾನವನ್ನು ಖಚಿತಪಡಿಸಿ ಕೊಂಡಿದೆ.

ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಕೆನಡಾ 16ನೇ ನಿಮಿಷದಲ್ಲಿ ಕೈಲ್ ಲ್ಯಾರಿನ್ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಜೋನಾಥನ್ ಡೇವಿಡ್ ಅವರ ವಾಲಿಯನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾಡಾ ತಡೆದರೂ, ರೀಬೌಂಡ್ ಆದ ಚೆಂಡನ್ನು ಲ್ಯಾರಿನ್ ಗೋಲಾಗಿ ಪರಿವರ್ತಿಸಿದರು.

29ನೇ ನಿಮಿಷದಲ್ಲಿ ಡೇವಿಡ್ ಅದ್ಭುತ ಬಲವಾದದ ವಾಲಿ ಮೂಲಕ ಅಂತರವನ್ನು 2–0ಕ್ಕೆ ಹೆಚ್ಚಿಸಿದರು. ಕತಾರ್‌ಗೆ 33ನೇ ನಿಮಿಷದಲ್ಲಿ ದೊಡ್ಡ ಆಘಾತ ಎದುರಾಯಿತು. ತಾಜೋನ್ ಬುಕಾನನ್ ವಿರುದ್ಧ ಅಪಾಯಕಾರಿ ಟ್ಯಾಕಲ್ ಮಾಡಿದ ಹೋಮನ್ ಅಹ್ಮದ್ ಮೊದಲು ಹಳದಿ ಕಾರ್ಡ್ ಪಡೆದರೂ, VAR ಪರಿಶೀಲನೆಯ ಬಳಿಕ ಅದು ಕೆಂಪು ಕಾಡ್ರ್‌ಗೆ ಪರಿವರ್ತನೆಯಾಯಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಡೇವಿಡ್ ಮತ್ತೊಮ್ಮೆ ಗೋಲು ಬಾರಿಸಿ ಕೆನಡಾಗೆ 3–0 ಮುನ್ನಡೆ ನೀಡಿದರು. ದ್ವಿತೀಯಾರ್ಧ ಆರಂಭದಲ್ಲಿ ಕೆನಡಾದ ಇಸ್ಮಾಯೆಲ್ ಕೋನೆ ಗಂಭೀರ ಗಾಯಕ್ಕೆ ಒಳಗಾದರು. ಈ ಘಟನೆಯ ಕಾರಣವಾದ ಅಸ್ಸಿಂ ಮಡಿಬೋ ನೇರ ಕೆಂಪು ಕಾರ್ಡ್ ಪಡೆದು ಹೊರನಡೆದ ಪರಿಣಾಮ ಕತಾರ್ ಕೇವಲ 9 ಆಟಗಾರರೊಂದಿಗೆ ಮುಂದುವರಿಯಬೇಕಾಯಿತು. 64ನೇ ನಿಮಿಷದಲ್ಲಿ ಬದಲಿ ಆಟಗಾರ ನಾಥನ್ ಸಾಲಿಬಾ ಫ್ರೀ ಕಿಕ್ ಮೂಲಕ ಗೋಲು ದಾಖಲಿಸಿದರು. 75ನೇ ನಿಮಿಷದಲ್ಲಿ ಮೊಹಮ್ಮದ್ ಮನಾಯಿ ಆತ್ಮಹತ್ಯಾ ಗೋಲು ಬಾರಿಸಿದರೆ, ಹೆಚ್ಚುವರಿ ಸಮಯದಲ್ಲಿ ಜೋನಾಥನ್ ಡೇವಿಡ್ ಹ್ಯಾಟ್ರಿಕ್ ಪೂರ್ಣಗೊಳಿಸಿ ಕೆನಡಾದ ಐತಿಹಾಸಿಕ ಜಯಕ್ಕೆ ಮೆರಗು ತಂದರು.



ಗೋಲುಗಳ ವಿವರ

ಕೆನಡಾ:
- ಕೈಲ್ ಲ್ಯಾರಿನ್ (16ನೇ ನಿ.)
- ಡೇವಿಡ್ (29ನೇ, 45+1, 90+ನೇ ನಿ.)
- ನಾಥನ್ ಸಾಲಿಬಾ (64ನೇ ನಿ.)
- ಮೊಹಮ್ಮದ್ ಮನಾಯಿ (75ನೇ ನಿ.)

ಕೆಂಪು ಕಾರ್ಡ್
- ಹೋಮನ್ ಅಹ್ಮದ್ (ಕತಾರ್, 33ನೇ ನಿ.)
- ಅಸ್ಸಿಂ ಮಡಿಬೋ (ಕತಾರ್, 51ನೇ ನಿ.)

ಕಿರುಸುದ್ದಿ

ಹ್ಯಾಟ್ರಿಕ್ ಗೆಲುವು ಭಾರತದ ಗುರಿ

ಚೆನ್ನೈ: ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದಲ್ಲದೆ ಸರಣಿ ವಶಪಡಿಸಿಕೊಂಡಿರುವ ಭಾರತ ತಂಡವು ಮೂರನೇ ಹಾಗೂ ಸರಣಿಯ ಅಂತಿಮ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡವನ್ನು ಮಣಿಸಿ ವೈಟ್‌ವಾಷ್ ಸಾಧಿಸುವುದಕ್ಕೆ ಸಿದ್ಧವಾಗಿದೆ. ಶುಭಮನ್ ಗಿಲ್ ನೇತೃತ್ವದಲ್ಲಿ ಆಡುತ್ತಿರುವ ಭಾರತ ಕಳೆದ ಎರಡು ಪಂದ್ಯಗಳನ್ನು ಸರಳವಾಗಿ ಗೆಲುವು ಸಾಧಿಸಿದೆ. ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾದರೂ ಭಾರತ 25 ಓವರ್‌ಗಳ ಪಂದ್ಯದಲ್ಲಿ ಜಯಸಿತ್ತು. ಎರಡನೇ ಪಂದ್ಯ ಲಖನೌನಲ್ಲಿ ನಡೆದಾಗ 50 ಓವರ್ ಪಂದ್ಯದಲ್ಲೂ ಸರಳವಾಗಿ ಗೆಲುವು ಸಾಧಿಸಿತ್ತು. ಹ್ಯಾಟ್ರಿಕ್ ಗೆಲುವಿಗಾಗಿ ಶ್ರಮಿಸಲಿರುವ ಭಾರತ ತಂಡವು ಗೆಲುವಿನ ವಿಶ್ವಾಸದಲ್ಲಿದೆ. ರೋಹಿತ್ ಶರ್ಮ, ಗಿಲ್, ಕಿಶನ್ ಯಥಾಪ್ರಕಾರ ಉತ್ತಮ ಲಯದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ಶ್ರೇಯಸ್ ಅಯ್ಯರ್ ಮತ್ತು ರಾಹುಲ್ ಗಟ್ಟಿಗೊಳಿಸಿದ್ದಾರೆ. ಸರಣಿಯುದ್ದಕ್ಕೂ ಉತ್ತಮ ಬೌಲಿಂಗ್ ಮಾಡಿರುವ ಗುರ್ನೂರ್ ಮೇಲೆ ನಿರೀಕ್ಷೆಗಳು ಹೆಚ್ಚಿವೆ.

ರಾಣಾ ಕಂಬ್ಯಾಕ್: ಗಾಯದಿಂದಾಗಿ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಹರ್ಷಿತ್ ರಾಣಾ ಮತ್ತೆ ಕಂಬ್ಯಾಕ್ ಮಾಡುವುದಕ್ಕೆ ಸಿದ್ಧರಾಗಿದ್ದು, ಮೂರನೇ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಗಾಯದ ಕಾರಣಗಳಿಂದಾಗಿ ಸ್ಪರ್ಧಾತ್ಮ ಕ್ರಿಕೆಟ್, ಐಪಿಎಲ್‌ನಿಂದಲೂ ದೂರ ಉಳಿದಿದ್ದ ಅವರು ಕೊನೆಯ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ.

ಪಂದ್ಯದ ವಿವರ:
ಯಾವಾಗ: ಶನಿವಾರ, ಎಲ್ಲಿ: ಚೆನ್ನೈ
ಸಮಯ: ಮಧ್ಯಾಹ್ನ 1:30

ಭಾರತಕ್ಕೆ ಜರ್ಮನ್ ಶಾಕ್

ಹೊಸದಿಲ್ಲಿ: ಗುರುವಾರ ಆಂಟ್ವೆರ್ಪ್‌ನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತ ತಂಡವು ಒಂದು ಗೋಲಿನ ಮುನ್ನಡೆಯನ್ನು ಕಳೆದುಕೊಂಡು ಹಾಲಿ ವಿಶ್ವ ಚಾಂಪಿಯನ್ ಜರ್ಮನಿ ವಿರುದ್ಧ 1–2 ಅಂತರದ ಸೋಲನ್ನು ಅನುಭವಿಸಿತು.ಮೊದಲಾರ್ಧದಲ್ಲಿ ಗೋಲು ರಹಿತ ಪಂದ್ಯದ ನಂತರ, 38 ನೇ ನಿಮಿಷದಲ್ಲಿ ಜುಗ್ರಾಜ್ ಸಿಂಗ್ ಪೆನಾಲ್ಟಿ ಕಾರ್ನರ್ ಅನ್ನು ಗೋಲ್ ಆಗಿ ಪರಿವರ್ತಿಸುವ ಮೂಲಕ ಭಾರತವು ಡೆಡ್‌ಲಾಕ್ ಅನ್ನು ಮುರಿದಿತು. ಬುಧವಾರದ ಅದ್ಭುತ 3–1 ಗೆಲುವಿನ ನಂತರ ಭಾರತವು ಜರ್ಮನಿಯ ವಿರುದ್ಧ ಸತತ ಎರಡನೇ ಗೆಲುವಿನ ಹಾದಿಯಲ್ಲಿ ಸಾಗಿತು. ಆದರೆ ಜರ್ಮನ್ನರು ಕಂಬ್ಯಾಕ್ ಮಾಡಿ ಗೆಲುವು ಸಾಧಿಸಿದರು.

ಶ್ರೇಯಾಂಕಾ ಹೊರಕ್ಕೆ, ಪ್ರೇಮಾ ಬದಲಿ ಆಟಗಾರ್ತಿ

ಲೀಡ್ಸ್: ಸ್ಪಿನ್ನರ್ ಶ್ರೇಯಾಂಕಾ ಪಾಟೀಲ್ ಅವರು ಗಾಯದಿಂದಾಗಿ ಪ್ರತಿಷ್ಠಿತ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ಪ್ರೇಮಾ ರಾವತ್ ಭಾರತ ತಂಡವನ್ನು ಸೇರಿಕೊಳ್ಳಲು ಸಿದ್ಧರಾಗಿದ್ದಾರೆ. ತಮ್ಮ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಪಂದ್ಯಗಳ ಮೇಲೆ ಇಂಪ್ಯಾಕ್ಟ್ ಮಾಡುತ್ತಾ ತಂಡದ ಪ್ರಮುಖ ಆಟಗಾರ್ತಿ ಅನಿಸಿಕೊಂಡಿದ್ದ ಶ್ರೇಯಾಂಕಾ ಪಾಟೀಲ್ ನೆದರ್ಲೆಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಗಾಯಗೊಂಡರು. ಬೌಲಿಂಗ್ ಮಾಡುವ ವೇಳೆ ಗಾಯಗೊಂಡ ಅವರು ಚೇತರಿಸಿಕೊಳ್ಳಲು ಸಮಯ ತೆಗೆದುಕೊಳ್ಳಲಿದ್ದಾರೆ. ಅವರ ಬದಲಿಗೆ ಹಿಂದೆಂದೂ ಆಡದ ಪ್ರೇಮಾ ರಾವತ್ ಅವರನ್ನು ತಂಡದಲ್ಲಿ ಆಯ್ಕೆ ಮಾಡಲಾಗಿದೆ. ಬಿಸಿಸಿಐ ಮನವಿಯನ್ನು ಐಸಿಸಿ ಪುರಸ್ಕರಿಸಿದೆ. ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮತ್ತು ರೈಸಿಂಗ್ ಏಷ್ಯಾಕಪ್‌ನಲ್ಲಿ ಮಿಂಚಿರುವ ಅವರು ಮುಂದಿನ ದ.ಆಫ್ರಿಕಾ ವಿರುದ್ಧದ ಪಂದ್ಯಕ್ಕೂ ಮುನ್ನವೇ ತಂಡ ಸೇರಿಕೊಳ್ಳಲಿದ್ದಾರೆ.

ರಗ್ಬಿ: ಮುಂಬೈ, ದೆಹಲಿ ತಂಡಗಳಿಗೆ ಜಯ

ಹೈದರಾಬಾದ್: ಇಲ್ಲಿನ ಗಚಿಬೌಲ್‌ನ ಗಂತಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯಗಳಲ್ಲಿ ಮುಂಬೈ ಡ್ರೀಮರ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ಸುಲಭ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ರೋಚಕ ಗೆಲುವು ದಾಖಲಿಸಿತು. ಮುಂಬೈ ಡ್ರೀಮರ್ಸ್ 31–14ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು. ಮಹಿಳೆಯರ ವಿಭಾಗದಲ್ಲಿ ಚೆನ್ನೈ ಬುಲ್ಸ್ 31–27ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು.

ಲಖನೌಗೆ ಕುಲ್ದೀಪ್ ಸೇರುವ ಸಾಧ್ಯತೆ

ದಿಲ್ಲಿಗೆ ಪಂತ್ ವಾಪಸ್?

ಹೊಸದಿಲ್ಲಿ: ವಿಕೆಟ್-ಕೀಪರ್, ಬ್ಯಾಟರ್ ರಿಷಭ್ ಪಂತ್ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದು, ಕುಲ್ದೀಪ್ ಯಾದವ್ ಲಖನೌ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ.

ಐಪಿಎಲ್ ಮುಗಿದು ಕೇವಲ ಒಂದು ತಿಂಗಳಾಗಿದ್ದು, ಈಗಲೇ ಟ್ರೇಡ್ ಹವಾ ಶುರುವಾಗಿದೆ. ಮುಖ್ಯವಾಗಿ ಲಖನೌ ತಂಡದ ನಾಯಕತ್ವ ಬಿಟ್ಟಿರುವ ರಿಷಭ್ ಪಂತ್ ಅವರು ತಮ್ಮ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದಾರೆ. ಅವರ ಬದಲಿಗೆ ಸ್ಪಿನ್ನರ್ ಕುಲ್ದೀಪ್ ಯಾದವ್ ಲಖನೌ ಜೇಂಟ್ಸ್ ತಂಡಕ್ಕೆ ಸೇರಿಕೊಳ್ಳಲಿದ್ದಾರೆ ಎಂದು ವರದಿಯಾಗಿದೆ. 2 ಪಂದ್ಯಾವಳಿಯಲ್ಲಿ ನಿರಾಸೆ ಮೂಡಿಸಿರುವ ರಿಷಭ್ ಪಂತ್ ಐಪಿಎಲ್ ಮುಗಿದ ತಕ್ಷಣವೇ ನಾಯಕತ್ವದಿಂದ ಹೊರಬಂದಿದ್ದರು. ಆದಾಗ್ಯೂ ಬ್ಯಾಟರ್ ಆಗಿ ಮುಂದುವರೆಯಲಿದ್ದಾರಾ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ. ವರದಿಗಳ ಪ್ರಕಾರ ಪಂತ್ ದಿಲ್ಲಿ ತಂಡಕ್ಕೆ ಮರಳಲಿದ್ದಾರೆ. ಅಲ್ಲದೆ ಮಾಜಿ ಕ್ರಿಕೆಟಿಗರಾದ ಸೌರವ್ ಗಂಗೂಲಿ ಮತ್ತು ಯುವರಾಜ್ ಸಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸೇರಿಕೊಳ್ಳಲಿದ್ದಾರೆ.



ದಿಲ್ಲಿಗೆ ರಾಹುಲ್ ನಾಯಕ?

ದಿಲ್ಲಿ ತಂಡದಲ್ಲಿ ನಾಯಕತ್ವ ಬದಲಾವಣೆ ಬಗ್ಗೆಯೂ ಮಾತುಗಳು ನಡೆದಿವೆ. ಕೆ.ಎಲ್. ರಾಹುಲ್ ಮೊದಲ ಆಯ್ಕೆಯಾಗಿದ್ದು ಟ್ರೇಡ್ ನಡೆದರೆ ರಾಹುಲ್ ನಾಯಕರಾಗಲಿದ್ದಾರೆ ಎನ್ನಲಾಗಿದೆ.

ಮೊದಲ ಪಂದ್ಯದಲ್ಲಿ ಬೆಂಗಳೂರು-ಗುಲ್ಬರ್ಗಾ ಎದುರಾಳಿ

ಇಂದಿನಿಂದ ಮಹಾರಾಜ ಟ್ರೋಫಿ

ಮೈಸೂರು: ಯುವಕರಿಗೆ ವೇದಿಕೆ ಕಲ್ಪಿಸಿಕೊಡುವ, ಅಭಿಮಾನಿಗಳ ಮನರಂಜಿಸುವ ಪ್ರತಿಷ್ಠಿತ ಮಹರಾಜ ಟ್ರೋಫಿ ಪಂದ್ಯಾವಳಿಯು ಶನಿವಾರ ಶುರುವಾಗಲಿದೆ. ಮೂರು ಹಂತದಲ್ಲಿ, ಮೂರು ಪ್ರದೇಶದ ಆತಿಥ್ಯದಲ್ಲಿ ನಡೆಯಲಿರುವ ಈ ಕೂಟಕ್ಕೆ ಮೈಸೂರಿನಲ್ಲಿ ಈಗಾಗಲೇ ಔಪಚಾರಿಕ ಚಾಲನೆ ಸಿಕ್ಕಿದ್ದು, ಶನಿವಾರ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗಾ ಮ್ಯಾಸ್ಟಿಕ್ಸ್ ನಡುವೆ ಮೊದಲ ಪಂದ್ಯ ನಡೆಯಲಿದೆ.

ಆರು ಫ್ರಾಂಚೈಸಿಗಳ ನಡುವೆ ಸುಮಾರು 22 ದಿನ ಪಂದ್ಯಾವಳಿ ನಡೆಯಲಿದೆ. ಮೊದಲಿಗೆ ಮೈಸೂರಿನಲ್ಲಿ ಲೀಗ್ ಪಂದ್ಯಗಳು ನಂತರ ಹುಬ್ಬಳ್ಳಿಯಲ್ಲಿ ಮತ್ತು ಕೊನೆಯಲ್ಲಿ ನಾಕೌಟ್ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ.

ಮೊದಲ ದಿನವೇ 2 ಪಂದ್ಯ: ಟೂರ್ನಿಯ ಮೊದಲ ದಿನವೇ ಎರಡು ಪಂದ್ಯಗಳು ನಡೆಯಲಿದೆ. ಮೈಸೂರಿನ ಮಹಾರಾಜ ಕ್ರೀಡಾಂಗಣದಲ್ಲಿ ಮೊದಲ ಪಂದ್ಯ ಬೆಂಗಳೂರು ಮತ್ತು ಗುಲ್ಬರ್ಗಾ ತಂಡಗಳ ನಡುವೆ ನಡೆಯಲಿದೆ. ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ಮತ್ತು ಮೈಸೂರು ವಾರಿಯರ್ಸ್ ನಡುವೆ ನಡೆಯಲಿದೆ.



ಆರಂಭ: ಶನಿವಾರ
ಫೈನಲ್: ಜೂನ್ 12
ಟೂರ್ನಿಯ ಒಟ್ಟು ಪಂದ್ಯ: 34

ಮೊದಲ ಹಂತದ ಪಂದ್ಯಗಳಿಗೆ ಮೈಸೂರು ಆತಿಥ್ಯ

ಆರು ತಂಡಗಳು	ನಾಯಕರು
ಬೆಂಗಳೂರು ಬ್ಲಾಸ್ಟರ್ಸ್	ಶುಭಾಂಗ್ ಹೆಗ್ಡೆ
ಗುಲ್ಬರ್ಗಾ ಮ್ಯಾಸ್ಟಿಕ್ಸ್	ಮನೀಷ್ ಪಾಂಡೆ
ಹುಬ್ಬಳ್ಳಿ ಟೈಗರ್ಸ್	ಅನೀಶ್ವರ್ ಗೌತಮ್
ಕೋಸ್ಟಲ್ ಕಿಂಗ್ಸ್ ಮಂಗಳೂರು	ಕರುಣ್ ನಾಯರ್
ಶಿವಮೊಗ್ಗ ಯೋಧಾಸ್	ಸ್ಮರಣ್ ರವೀಚಂದ್ರನ್
ಮೈಸೂರು ವಾರಿಯರ್ಸ್	ವಿಜಯ್‌ಕುಮಾರ್ ವೈಶಾಖ್

ಮಕಾವು ಓಪನ್: ಅಶ್ಮಿತಾ ಸೆಮಿಗೆ

ಹೊಸದಿಲ್ಲಿ: ಕೊರಿಯಾದ ಕಿಮ್ ಮಿನ್ ಅವರನ್ನು ಸೋಲಿಸಿರುವ ಅಶ್ಮಿತಾ ಚಲಿಹಾ ಅವರು ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ಭರ್ಜರಿ ಕಂಬ್ಯಾಕ್ ಮಾಡಿದ್ದಾರೆ. ಮಕಾವು ಓಪನ್ ಪಂದ್ಯಾವಳಿಯಲ್ಲಿ ಉಳಿದ ಏಕೈಕ ಭಾರತೀಯ ಆಟಗಾತಿಯಾಗಿರುವ ಅವರು, ಸೆಮಿಫೈನಲ್‌ಗೇರಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಗಮನ ಸೆಳೆದಿದ್ದು ಒಂದು ಕಡೆಯಾದರೆ, ಪ್ರಮುಖ ಆಟಗಾರ್ತಿ ಅನ್ಮೋಲ್ ಖಾರ್ಬ್ ಸೋಲಿನೊಂದಿಗೆ ಹೊರಬಿದ್ದರು. ನೇರ ಸೆಟ್ ಗೆಲುವಿನಲ್ಲಿ ಅಶ್ಮಿತಾ ವಿಶ್ವದ ನಂಬರ್ 9ನೇ ಶ್ರೇಯಾಂಕದ ಆಟಗಾರ್ತಿ ಕಿಮ್ ಅವರನ್ನು ಹೊರಹಾಕಿದರು. ಮೊದಲನೇ ಸೆಟ್‌ನಲ್ಲಿ 21–16ರಿಂದ ಗೆದ್ದ ಅವರು, ಎರಡನೇ ಸೆಟ್‌ನಲ್ಲಿ 21–18ರಿಂದ ಗೆಲುವು ಸಾಧಿಸಿದರು. ವಿಶ್ವದ 63ನೇ ಶ್ರೇಯಾಂಕ ಹೊಂದಿರುವ ಅಶ್ಮಿತಾ ಕೊರಿಯಾ ಓಪನ್ ಪಂದ್ಯಾವಳಿಯಲ್ಲಿ ಪಾದದ ಗಾಯದಿಂದಾಗಿ ಹೊರಬಿದ್ದಿದ್ದರು.

ವಿಂಡೀಸ್‌ಗೆ 7 ರನ್‌ಗಳ ರೋಚಕ ಜಯ

ಲೀಡ್ಸ್: ಸ್ಟೇಫ್ನಿ ಟೇಯ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಮ್ಯಾಥೀವ್ಸ್, ಅಲಿಯಾ ಅವರ ಕರಾರುವಾಕ್ ಬೌಲಿಂಗ್ ದಾಳಿಯ ಬಲದಿಂದ ವೆಸ್ಟ್ ಇಂಡೀಸ್ ಮಹಿಳಾ ತಂಡವು ಸ್ಕಾಟ್ಲೆಂಡ್ ವಿರುದ್ಧ ರೋಚಕ ಗೆಲುವು ಸಾಧಿಸಿದೆ.

ಮಹಿಳೆಯರ ವಿಶ್ವಕಪ್ ಪಂದ್ಯಾವಳಿ ರೋಚಕ ಘಟ್ಟಕ್ಕೆ ತಲುಪಿದ್ದು, ಸ್ಕಾಟ್ಲೆಂಡ್ ಮತ್ತು ವಿಂಡೀಸ್ ತಂಡಗಳು ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಎದುರಾಗಿದ್ದವು. ವಿಂಡೀಸ್ ಮೊದಲು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಸ್ಟೇಫ್ನಿ 47★ ರನ್ ಗಳಿಸಿದರೆ, ಕ್ಯಾಂಪ್‌ಬೆಲ್ 36 ರನ್‌ನೊಂದಿಗೆ ತಂಡಕ್ಕೆ ಆಸರೆಯಾದರು. ಡರ್ಸೀ ಕಟ್ಟರ್ ಅವರ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್ ಗೆಲುವಿನತ್ತ ಸಾಗಿತ್ತು. ಮಧ್ಯಮ ಕ್ರಮಾಂಕದಲ್ಲಿ ಅಲಿಸಾ ಲಿಸ್ಟರ್ 37 ರನ್‌ಗಳ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್, ವಿಂಡೀಸ್ ಮೇಲೆ ಒತ್ತಡ ಹೇರಿತ್ತು. ಆದರೆ ಕೊನೆಯಲ್ಲಿ ವಿಂಡೀಸ್‌ನ ಮ್ಯಾಥೀವ್ಸ್ ಮತ್ತು ಆಲಿಯಾ ಕರಾರುವಾಕ್ ದಾಳಿ ಸಂಘಟಿಸಿ ಪಂದ್ಯ ಕಸಿದರು.



ಪವರ್‌ಪ್ಲೇನಲ್ಲಿ ವಿಂಡೀಸ್ 33 ರನ್ ಗಳಿಸಿತು. ಸ್ಕಾಟ್ಲೆಂಡ್ ಅದಕ್ಕೂ ಹೆಚ್ಚು 55 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ವಿಂಡೀಸ್ ಕ್ಯಾಂಪ್‌ಬೆಲ್ ಅವರ ಬ್ಯಾಟಿಂಗ್‌ನೊಂದಿಗೆ 69 ರನ್ ಗಳಿಸಿತು. ಅತ್ತ ಸ್ಕಾಟ್ಲೆಂಡ್ ಕೂಡ ಕಟ್ಟರ್ ಮತ್ತು ಲಿಸ್ಟರ್ ಅವರ ಆಟದೊಂದಿಗೆ 51 ರನ್ ಗಳಿಸಿತ್ತು. ಡೆತ್ ಓವರ್‌ಗಳಲ್ಲಿ ಸ್ಟೇಫ್ನಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಂಡೀಸ್ 51 ರನ್ ಬಾರಿಸಿತು. ಆದರೆ ಸ್ಕಾಟ್ಲೆಂಡ್ ಮ್ಯಾಥೀವ್ಸ್ ದಾಳಿಗೆ ತತ್ತರಿಸಿತು. 40 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡ ಸ್ಕಾಟ್ಲೆಂಡ್ 7 ರನ್‌ಗಳಿಂದ ಸೋತಿತು. ಒಟ್ಟು 146 ರನ್ ಗಳಿಸಿತು.

ಇಂದು 3 ಪಂದ್ಯ


ಶನಿವಾರದಂದು ಮತ್ತೆ ಮೂರು ಪಂದ್ಯಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಆಸ್ಟ್ರೇಲಿಯಾ ಹಾಗೂ ನೆದರ್ಲೆಂಡ್ಸ್ ತಂಡಗಳು ಮುಖಾಮುಖಿಯಾದರೆ, ಸಂಜೆ 7ಕ್ಕೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ತಂಡಗಳು ಎದುರಾಗಲಿವೆ. ತಡರಾತ್ರಿ 11ಕ್ಕೆ ನಡೆಯಲಿರುವ ಪಂದ್ಯದಲ್ಲಿ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗಲಿವೆ.

ಸಂಕ್ಷಿಪ್ತ ಸ್ಕೋರ್

ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 153/6: ಸ್ಟೇಫ್ನಿ ಟೇಯ್ಲರ್ 47★, ಕ್ಯಾಂಪ್‌ಬೆಲ್ 36; ಫ್ರೇಸರ್ 34/2
ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 146/10: ಡರ್ಸೀ 59, ಲಿಸ್ಟರ್ 33; ಆಲಿಯಾ 11/3, ಮ್ಯಾಥೀವ್ಸ್ 19/3

ಪದಬಂಧ

ರಾಜಾ ಸಂಗಮೇಶ ಹಿರೇಮಠ



6020

ಎಡದಿಂದ ಬಲಕ್ಕೆ
1.ಸಮೇತವಾಗಿ-ಹಿತದಿಂದ ಕೂಡಿದೆ (3)
5.ಈತ ದಯೆಯುಳ್ಳವನು (4)
6.ಗೋವರ್ಧನ ಬೆಟ್ಟ ಎತ್ತಿದವನು (4)
7.ಮರದ ಬಳಿ ಕಾಣಿಸಿದ ಹೆಂಡತಿ (3)
9.ಕೈ-ಕಾಲುಗಳಿಗೆ ಹಾಕುವ ಸಂಕೋಲೆ (2)
10.ಭೂಮಿ-ಅವನಿ ಇದು (2)
11.ದ್ರವರೂಪದ ಲೋಹವಿಲ್ಲಿ ತಿರುಗಿದೆ (3)
13.ಉಂಡಾಡಿ-ಅಪ್ರಯೋಜಕನೀತ (4)
14.ಪತಿಗೆ ಈ ನಡುವೆ ಸಿಕ್ಕ ನೈಪುಣ್ಯತೆ (4)
15.ಬಿಳಿಯ ಬಣ್ಣದ ಲೋಹ-ಬೆಳ್ಳಿ (3)

ಮೇಲಿನಿಂದ ಕೆಳಕ್ಕೆ
1.ಸುದ್ದಿ-ವಿಷಯ ಸರದ ನಡುವೆ ಇದೆ (4)
2.ತಣಿಯ ನಡುವೆ ನದಿ ಹರಿಯುತ್ತಿದೆ (4)
3.ಶುಭಪ್ರದನಾದವನು-ಶಿವ (3)
4.ದವಸ-ಧಾನ್ಯವನ್ನು ಹೀಗೂ ಹೇಳಬಹುದು (4)
8.ಅಮಲೇರಿಸುವಂತಹ ಪೇಯ (3)
9.ಬೇಜಾರಿನ ಕಡೆಯಲ್ಲಿ ಹಾರವಿದೆ (3)
10.ಸಂಪತ್ತಿನ ಒಡೆಯ ಈ ಕುಬೇರ (4)
11.ನೀರನ್ನು ಹೊತ್ತು ನಿಂತ ಮೋಡ (4)
12.ಪಾತದ ನಡುವೆ ವಿದ್ವಾಂಸನಿದ್ದಾನೆ (4)
13.ದನಿ ಎತ್ತಿ ಕೂಗಿದ ಹೆಣ್ಣಾನೆ (3)

6019 ಉತ್ತರ

ಎಡದಿಂದ ಬಲಕ್ಕೆ:
1.ಅನಕ್ಷರ 3.ಅಧಿಕೃತ
5.ಪರಾಮರ್ಶೆ 6.ರವಿಜ
8.ಕುಂಡ 9.ದಂತ
11.ಬಳಪ 13.ವಂಗಭಂಗ
15.ತವರಾಜ 16.ತಲೆಕಟ್ಟು

ಮೇಲಿನಿಂದ ಕೆಳಕ್ಕೆ :
1.ಅಧಿಕಾರ 2.ಪರಾಗ
3.ಅತ್ತಿಮಬ್ಬೆ 4.ತಲೆದಂಡ
7.ವಿಜೇತ 8.ಕುಂಬಳ
9.ದಂಡಾಹತ
10.ಮೃಗರಾಜ
12.ಪಟ್ಟಕಟ್ಟು 14.ಗಣಿತ

ಉಜ್ಜೀವನ ಲೋಕಾರ್ಪಣ





ದಿನಾಂಕ : 21/06/2026ನೇ ಆದಿತ್ಯವಾರ * ಸಮಯ : ಸಂಜೆ ಗಂಟೆ 03:30ರಿಂದ
ಸ್ಥಳ : ಉಜ್ಜೀವನ ಬಡಾವಣೆ, ಕೆಮ್ಮಾರ, ಉಪ್ಪಿನಂಗಡಿ

ಇಳಿಹಗಲು ಗಂಟೆ 3:30ರಿಂದ **ಸಭಾ ಕಾರ್ಯಕ್ರಮ** 'ಉಜ್ಜೀವನ' ಸಭಾಂಗಣ

ಅಧ್ಯಕ್ಷರು : **ಶ್ರೀ ಗೋಪಾಲಕೃಷ್ಣ ಭಟ್ಟ**
ವ್ಯವಸ್ಥಾಪಕ ನಿರ್ದೇಶಕರು, ದ್ವಾರಕಾ ಸಮೂಹ ಸಂಸ್ಥೆಗಳು

ಉಜ್ಜೀವನ ಬಡಾವಣೆ ಲೋಕಾರ್ಪಣೆ : **ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ**
ಸಂಸದರು, ಲೋಕಸಭಾ ಕ್ಷೇತ್ರ, ಮಂಗಳೂರು

ದ್ವಾರಕಾ ನೆಸ್ಟ್ ಲೋಕಾರ್ಪಣೆ : **ಶ್ರೀ ಅಶೋಕ್ ಕುಮಾರ್ ರೈ**
ಶಾಸಕರು, ವಿಧಾನಸಭಾ ಕ್ಷೇತ್ರ, ಪುತ್ತೂರು

ದ್ವಾರಕಾ ರಿಫ್ರೆಶ್ಮೆಂಟ್ ಲೋಕಾರ್ಪಣೆ : **ಕು. ಭಾಗೀರಥಿ ಮುರುಳ್ಯ**
ಶಾಸಕರು, ವಿಧಾನಸಭಾ ಕ್ಷೇತ್ರ, ಸುಳ್ಯ

ದ್ವಾರಕಾ ಮಾರ್ಟ್ ಲೋಕಾರ್ಪಣೆ : **ಶ್ರೀ ಕಿಶೋರ್ ಕುಮಾರ್ ಬೊಟ್ಯಾಡಿ**
ಶಾಸಕರು, ಕರ್ನಾಟಕ ವಿಧಾನ ಪರಿಷತ್

ವಿಶೇಷ ಅಹ್ವಾನಿತರು

: **ಶ್ರೀ ಸಂಜೀವ ಮಠಂದೂರು**
ಮಾಜಿ ಶಾಸಕರು, ವಿಧಾನಸಭಾ ಕ್ಷೇತ್ರ, ಪುತ್ತೂರು

: **ಶ್ರೀ ಅರುಣ್ ಕುಮಾರ್ ಪುತ್ತಿಲ**
ಹಿಂದೂ ಮುಖಂಡರು

: **ಶ್ರೀ ಎಸ್. ಕೆ. ಆನಂದ ಕುಮಾರ್**
ಮಾಸ್ಟರ್ ಪ್ಲಾನರಿ, ಪುತ್ತೂರು

: **ಶ್ರೀ ಶ್ಯಾಮ ಭಟ್**
ವ್ಯವಸ್ಥಾಪಕ ನಿರ್ದೇಶಕರು, ಭಟ್ ಬಯೋಟೆಕ್, ಬೆಂಗಳೂರು

: **ಶ್ರೀಮತಿ ಕಾಂಚನ ರೋಹಿಣಿ ಸುಬ್ಬುರತ್ನಮ್**
ಖ್ಯಾತ ಸಂಗೀತ ವಿದ್ವಾಂಸರು

: **ಡಾ. ಎಂ. ಎನ್. ಭಟ್**
ಖ್ಯಾತ ಮಕ್ಕಳ ತಜ್ಞರು, ಉಪ್ಪಿನಂಗಡಿ

: **ಶ್ರೀ ರಮೇಶ ಉಪ್ಪಂಗಳ**
ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಆಲಂಕಾರು

: **ಡಾ. ಹೇಮಂತ ರೈ ಮನವಳಿಕೆ**
ಉದ್ಯಮಿಗಳು, ಬೆಂಗಳೂರು

: **ಶ್ರೀ ರಾಧಾಕೃಷ್ಣ ಕೆ. ಎಸ್.**
ಕಾರ್ಯದರ್ಶಿಗಳು, ಶ್ರೀ ರಾಮಕುಂಜೇಶ್ವರ ವಿದ್ಯಾವರ್ಧಕ ಸಭಾ, ರಾಮಕುಂಜ

: **ಶ್ರೀ ನವೀನ ಭಂಡಾರಿ**
ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತ್, ಪುತ್ತೂರು

: **ಶ್ರೀ ಗುರುಪ್ರಸಾದ್ ಎ. ಬಿ.**
ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಪುತ್ತೂರು

: **ಶ್ರೀಮತಿ ಸ್ವಾತಿ ಎನ್. ಸ್ವಾಮಿ**
ಸಹಾಯಕ ನಿರ್ದೇಶಕರು, ಗ್ರಾಮಾಂತರ ಯೋಜನಾ ಪ್ರಾಧಿಕಾರ, ಮಂಗಳೂರು

: **ಶ್ರೀ ಸದಾನಂದ ಶೆಟ್ಟಿ**
ನಿಕಟಪೂರ್ವ ಅಧ್ಯಕ್ಷರು, ಗ್ರಾಮ ಪಂಚಾಯತ್, ಹಿರೇಬಂಡಾಡಿ

: **ಶ್ರೀ ಸತೀಶ್ ಬಂಗೇರ**
ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ್, ಹಿರೇಬಂಡಾಡಿ



ಸಾಯಂಕಾಲ ಗಂಟೆ 6.00ರಿಂದ 8.00ರವರೆಗೆ

ಭಕ್ತಿ ಸಂಗೀತ ಸುಧಾ

ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ
ಶ್ರೀ ರಾಹುಲ್ ವೆಲ್ಲಾಲ್, ಬೆಂಗಳೂರು
ಮತ್ತು ಬಳಗದವರಿಂದ

ಸರ್ವರಿಗೂ ಸಾದರ ಸ್ವಾಗತ
ವ್ಯವಸ್ಥಾಪಕ ನಿರ್ದೇಶಕರು
ದ್ವಾರಕಾ ಸಮೂಹ ಸಂಸ್ಥೆಗಳು

RERA APPROVED

CERTIFIED ISO 9001:2015 COMPANY



ಉಜ್ಜೀವನ
ಹೊಸ ಜೀವನ...

ಹಿರಿಯ ನಾಗರಿಕರ ಬಡಾವಣೆ
ಕೆಮ್ಮಾರ, ಉಪ್ಪಿನಂಗಡಿ











ಅಧ್ಯಕ್ಷರು ಮತ್ತು ಸರ್ವಸದಸ್ಯರು ಉಜ್ಜೀವನ ಹಿರಿಯ ನಾಗರಿಕರ ಬಡಾವಣೆ ಆಡಳಿತ ಸಮಿತಿ

ದ್ವಾರಕಾ ಕಾರ್ಪ್. ಪ್ರೈ. ಲಿ.

SINCE 2005 DWARAKA

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಮುದಾಯ ಭವನ, ಪುತ್ತೂರು, ದ.ಕ. - 574201

📞 7676512393
📞 8217717273

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 32° 26° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 20, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಮೈಲಾಟಿಯಲ್ಲಿ ಸಿದ್ಧಗೊಳ್ಳುತ್ತಿದೆ ಕೇರಳದ ಪ್ರಥಮ ಬಿಇಎಸ್ಎಸ್



ಪುಟ 6

ಬಾಲಕಿಯರ ವಸತಿ ನಿಲಯ ಕಟ್ಟಡ ಕಾಮಗಾರಿ ವೀಕ್ಷಿಸಿದ ಶಾಸಕ ಕೊಡ್ಗಿ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಅವ್ಯವಸ್ಥೆಯ ಆಗರವಾಗಿದೆ ಪಣಂಬೂರು ಅಂತಾರಾಷ್ಟ್ರೀಯ ಬೀಚ್ ರಸ್ತೆ!



ಮಂಗಳೂರು ತಾಲೂಕಿನ ಪಣಂಬೂರು ಅಂತಾರಾಷ್ಟ್ರೀಯ ಬೀಚ್ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲೇ ಒಳಚರಂಡಿ ದುರ್ವಾಸನೆ, ತೋಡಿನಲ್ಲಿ ಕಸದ ರಾಶಿ, ಫುಟ್‌ಪಾತ್ ಮೇಲೆ ಮೀನುಗಾರರ ಹಳೆಯ ಬುಟ್ಟಿ, ಬೇಡದ ವಸ್ತುಗಳ ರಾಶಿಗಳು ರಾಚುತ್ತಿದ್ದು ಇದರ ಮಧ್ಯೆಯೇ ಪ್ರವಾಸಿಗರು ಹೋಗಬೇಕಾದ ಪರಿಸ್ಥಿತಿ ಇದೆ. ಶೀಘ್ರ ಪ್ರವಾಸೋದ್ಯಮ ಇಲಾಖೆ ಇತ್ತ ಕಡೆ ಗಮನ ಹರಿಸಿ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕೆಂದು ಪ್ರವಾಸಿಗರು ಆಗ್ರಹಿಸಿದ್ದಾರೆ.

ಸುತ್ತ ಮುತ್ತ

ತೋಟಕ್ಕೆ ನುಗ್ಗಿದ ಕಾಡಾನೆಗಳ ಹಿಂಡು: ಅಡಿಕೆ- ಬಾಳೆ ಧ್ವಂಸ

ಮಡಿಕೇರಿ: ಗುಡ್ಡೆಹೊಸೂರು ಸಮೀಪದ ಬಸವನಹಳ್ಳಿ ಹೊಸಕಾಡು ಗ್ರಾಮದಲ್ಲಿ ಗುರುವಾರ ತಡರಾತ್ರಿ ಕಾಡಾನೆಗಳ ಹಿಂಡೊಂದು ತೋಟಕ್ಕೆ ನುಗ್ಗಿ ಇಡೀ ತೋಟವನ್ನು ಸಂಪೂರ್ಣವಾಗಿ ನಾಶಪಡಿಸಿದ ಘಟನೆ ನಡೆದಿದೆ. 4 ಆನೆಗಳಿದ್ದ ಹಿಂಡೊಂದುಗ್ರಾಮದ ನಿವಾಸಿ ಗಂಗೆ ಎಂಬವರ ಪುತ್ರ ವಸಂತ (ಅಣ್ಣಯ್ಯ) ಎಂಬವರಿಗೆ ಸೇರಿದ ತೋಟಕ್ಕೆ ಲಗ್ಗೆ ಇಟ್ಟಿದ್ದು, ಅಡಿಕೆ, ಬಾಳೆ, ತೆಂಗು, ಮರಗೆಣಸು ಸೇರಿದಂತೆ ಇನ್ನಿತರ ಫಸಲು ಬೆಳೆಗಳನ್ನು ತುಳಿದು ಧ್ವಂಸಗೊಳಿಸಿವೆ.

ಪರಿಹಾರ ಒದಗಿಸಲು ಆಗ್ರಹ

ಅರಣ್ಯ ಇಲಾಖೆಯ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತ ರೈತ ಅಣ್ಣಯ್ಯ ಅವರಿಗೆ ಹೆಚ್ಚಿನ ಪರಿಹಾರ ಒದಗಿಸಬೇಕು, ಕಾಡಾನೆಗಳ ಉಪಟಳ ತಡೆಯಲು ಸೂಕ್ತ ರೀತಿಯಲ್ಲಿ ಆನೆ ಬ್ಯಾರಿಕೇಡ್ ಅಳವಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸೋಮೇಶ್ವರ ಪುರಸಭೆ: ವಿದ್ಯುತ್ ಆಘಾತದಿಂದ ರಾಷ್ಟ್ರಪಕ್ಷಿ ನವಿಲು ಸಾವು

ಉಳ್ಳಾಲ: ವಿದ್ಯುತ್ ಆಘಾತಕ್ಕೊಳಗಾಗಿ ಹೆಣ್ಣು ನವಿಲೊಂದು ದಾರುಣವಾಗಿ ಮೃತಪಟ್ಟ ಘಟನೆ ಶುಕ್ರವಾರ ಮುಂಜಾನೆ ಸೋಮೇಶ್ವರ ಪುರಸಭೆ ವ್ಯಾಪ್ತಿಯ ಪಿಲಾರು ಮಹಾಲಕ್ಷ್ಮಿ ಮಂದಿರದ ಬಳಿ ನಡೆದಿದೆ. ಪಿಲಾರು ಮಹಾಲಕ್ಷ್ಮಿ ಮಂದಿರದ ಬಳಿಯ ವಿದ್ಯುತ್ ಕಂಬದ ತಂತಿಯಲ್ಲಿ ಕುಳಿತ ಹೆಣ್ಣು ನವಿಲಿಗೆ ವಿದ್ಯುತ್ ಪ್ರವಹಿಸಿ ಕೆಳಗೆಸೆಯಲ್ಪಟ್ಟು ಸ್ಥಳದಲ್ಲೇ ಸಾವನ್ನಪ್ಪಿದೆ. ನವಿಲು ಸಾವನ್ನಪ್ಪಿರುವುದನ್ನು ಕಂಡ ಸ್ಥಳೀಯರಾದ ಶೈಲೇಶ್ ಗಟ್ಟಿ ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಚಾರ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಕೋಟೆಕಾರು ಉಪವಲಯ ಅರಣ್ಯ ಪಾಲಕರಾದ ರೋಹಿತ್ ಕುಮಾರ್ ಅವರು ನವಿಲಿನ ಕಳೇಬರವನ್ನು ವಿಲೇವಾರಿ ಮಾಡಿದ್ದಾರೆ.

ಹಳೆಯಂಗಡಿ 10ನೇ ತೋಕೂರು ನಿವಾಸಿಗಳಿಗೆ ಪವರ್ ಕಟ್ ಸಮಸ್ಯೆ!

ಮೂಲ್ಕಿ: ಮೂಲ್ಕಿ ಮೆಸ್ಕಾಂ ವ್ಯಾಪ್ತಿಯಲ್ಲಿ ಬರುವ ಹಳೆಯಂಗಡಿ ಹತ್ತನೇ ತೋಕೂರಿನಲ್ಲಿ ಮಾತ್ರ ಪವರ್ ಸದಾಕಾಲ ಕಣ್ಣಾಮುಚ್ಚಾಲೆ ಆಡ್ತಾ ಇರುತ್ತೆ. ಮೆಸ್ಕಾಂಗೆ ಕರೆ ಮಾಡಿದ್ರೆ ಲೈನ್ ಫಾಲ್ಟ್, ಟಿಸಿ ಫೇಲ್ ಮತ್ತಿತರ ಸಾಬೂಬು ಉತ್ತರಗಳು. ತೋಕೂರಿನಲ್ಲಿ ಮಳೆ ಬಂದರೆ ರಾತ್ರಿಯಿಡೀ ಕರೆಂಟ್ ಇಲ್ಲ ಬಿಡಿ, ಇನ್ನು ಬಿಸಿಲು ಇರುವಾಗಲೂ ಕರೆಂಟ್ ಇರದಿದ್ದರೆ ಮಾಡುವುದೇನು? ಈ ಬಗ್ಗೆ ಸ್ಥಳೀಯ ಅಧಿಕಾರಿಗಳು ಗಮನ ಕೊಡದ ಕಾರಣ ಮೆಸ್ಕಾಂ ವಿಭಾಗದ ಮೇಲಧಿಕಾರಿಗಳ ಗಮನಕ್ಕೆ ತರಲು ಗ್ರಾಮಸ್ಥರು ಸಿದ್ಧರಾಗಿದ್ದಾರೆ.

ಕಾಸರಗೋಡಿನಲ್ಲಿ ಹೆಚ್ಚಿದ ಸಾಂಕ್ರಾಮಿಕ ರೋಗ

ಇರಲಿ ಎಚ್ಚರ ಎಚ್ಚರ

ಬಿಸಿಲು-ಮಳೆ ಕಣ್ಣಾಮುಚ್ಚಾಲೆಯಿಂದ ಸಮಸ್ಯೆ

ಕಾಸರಗೋಡು: ಮಳೆಗಾಲ ಆರಂಭಗೊಂಡಂತೆ ವಿವಿಧ ರೀತಿಯ ಸಾಂಕ್ರಾಮಿಕ ರೋಗಗಳೂ ಹೆಚ್ಚುತ್ತಿದೆ. ಈ ಬಾರಿ ಮಳೆ ಬಿಸಿಲಿನ ಕಣ್ಣಾಮುಚ್ಚಾಲೆಯಿಂದ ಸಾಂಕ್ರಾಮಿಕ ರೋಗ ಬಾಧಿತರ ಸಂಖ್ಯೆಯೂ ಏರಿಕೆಯಾಗಿದೆ.

ಒಂದೆಡೆ ಮಳೆಗಾಲ ಪೂರ್ವ ಶುಚೀಕರಣ ಕಾರ್ಯಕ್ರಮ ಸಮರ್ಪಕವಾಗಿ ನಡೆಯದಿರುವುದು ಇನ್ನೊಂಡೆದೆ ಬಿಸಿಲಿನ ಹವಾಮಾನ ಪೂರಕವಾಗದಿರುವುದು ಜಿಲ್ಲೆಯಲ್ಲಿ ಜ್ವರ ಸಹಿತ ಸಾಂಕ್ರಾಮಿಕ ರೋಗಗಳ ಪ್ರಮಾಣ ಹೆಚ್ಚಳಕ್ಕೆ ಕಾರಣವಾಗಿದೆ.

ಮೇ ತಿಂಗಳಲ್ಲಿ 13,476 ಮಂದಿಗೆ ಜ್ವರ ಬಾಧಿಸಿದರೆ, ಜೂನ್ 17ರ ತನಕದ ಲೆಕ್ಕಾಚಾರದಂತೆ ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗ ತಗಲಿದವರ ಸಂಖ್ಯೆ 10,934ಕ್ಕೇರಿದೆ. ಈ ವರ್ಷ ಜನವರಿಯಿಂದ ಸರಕಾರಿ ಆಸ್ಪತ್ರೆಗಳಲ್ಲಿ ವಿವಿಧ ರೋಗಗಳಿಗೆ ಚಿಕಿತ್ಸೆ ಪಡೆದ 1.60 ಲಕ್ಷ ಮಂದಿಯಲ್ಲಿ ಅರ್ಧದಷ್ಟು ಜನರು ಅಂದರೆ 83,309 ಮಂದಿ ಜ್ವರ ಬಾಧಿತರಾಗಿದ್ದಾರೆ. ಈ ಪೈಕಿ 2,158 ಮಂದಿ ರೋಗಿಗಳಿಗೆ ಒಳರೋಗಿ ಚಿಕಿತ್ಸೆಯನ್ನೂ ನೀಡಲಾಗಿದೆ.

ಮೇ ತಿಂಗಳಲ್ಲಿ ಜ್ವರ ಪೀಡಿತರ ಪೈಕಿ 12 ಮಂದಿಗೆ ಡೆಂಗ್ಯೂ ಖಚಿತಪಡಿಸಲಾಗಿತ್ತು. ಜೂನ್ 17ರ ತನಕದ ಅಂಕಿ ಅಂಶಗಳ ಪ್ರಕಾರ 12 ಮಂದಿಗೆ ಡೆಂಗ್ಯೂ ಬಾಧಿ ಸಿದೆ. ಮೇ ತಿಂಗಳಲ್ಲಿ ಒಬ್ಬರಿಗೆ ಇಲಿಜ್ವರವೂ ಬಾಧಿಸಿತ್ತು. »ಪುಟ 6



- ಜೂ.17ರ ತನಕದ ಅಂಕಿ ಅಂಶಗಳ ಪ್ರಕಾರ 12 ಮಂದಿಗೆ ಡೆಂಗ್ಯೂ ಬಾಧಿಸಿದೆ
- ಡೆಂಗ್ಯೂ ತಗುಲಿದವರ ಸಂಖ್ಯೆ ಹೆಚ್ಚಳದಿಂದ ಜಿಲ್ಲೆಯಲ್ಲಿ ಹೆಚ್ಚಿದೆ ಆತಂಕ

ಆರೋಗ್ಯ ವಿಚಾರದಲ್ಲಿ ನಿರ್ಲಕ್ಷ್ಯ ಸಲ್ಲದು

ಕಾಸರಗೋಡು ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳು ಮತ್ತು ವಿವಿಧ ಜ್ವರಗಳು ಗಣನೀಯವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಗರಿಷ್ಠ ಜಾಗರೂಕತೆ ಪಾಲಿಸಬೇಕೆಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆರೋಗ್ಯದ ವಿಚಾರದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಸಲ್ಲದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

ಜಿಲ್ಲೆಯಲ್ಲಿ ಹೆಚ್ಚಿದ ನೊಣಗಳ ಹಾವಳಿ

ಕಾಸರಗೋಡು ಜಿಲ್ಲೆಯಲ್ಲಿ ಸಾಂಕ್ರಾಮಿಕ ಜ್ವರಗಳು ವ್ಯಾಪಕಗೊಳ್ಳುತ್ತಿರುವ ಬಗ್ಗೆ ವರದಿಯಾಗುತ್ತಿರುವ ಮಧ್ಯೆಯೇ ಆಹಾರ ವಸ್ತುಗಳನ್ನು ಮಾರಾಟ ನಡೆಸುವ ಸಂಸ್ಥೆಗಳಲ್ಲಿ ನೊಣಗಳ ಹಾವಳಿ ವಿಪರೀತ ಗೊಂಡಿದೆ. ಮೀನು ಮಾರುಕಟ್ಟೆ, ಮಾಂಸದಂಗಡಿ, ಹೊಟೇಲ್, ಬೇಕರಿ, ಆಹಾರ ವಸ್ತುಗಳ ತಯಾರಿ ಕೇಂದ್ರ ಮೊದಲಾದ ಅಂಗಡಿಗಳಲ್ಲಿ ಸಾವಿರಾರು ನೊಣಗಳು ತುಂಬಿಕೊಂಡಿರುವುದು ಕಂಡುಬರುತ್ತಿವೆ. ನೊಣಗಳ ಹಾವಳಿ ತೀವ್ರವಾಗಿದ್ದರೂ ಆರೋಗ್ಯ ಇಲಾಖೆ ಮಾತ್ರ ನಿರ್ಲಕ್ಷ್ಯ ವಹಿಸುತ್ತಿರುವುದಾಗಿ ದೂರಲಾಗಿದೆ.

ಗಣನೀಯ ಕುಸಿತವಾದ ಮುಂಗಾರು

ಬತ್ತಿ ಬರಡಾಗಿದೆ ಜೀವನದಿ ಒಡಲು

ಜೀವಸೆಲೆ ಇಲ್ಲದೆ ಕಳೆಗುಂದಿದೆ ನೇತ್ರಾವತಿ

ಉಪ್ಪಿನಂಗಡಿ: ಮಳೆಗಾಲದ ಜೂನ್ ತಿಂಗಳ 19 ತಾರೀಕು ಕಳೆದರೂ ಮಳೆ ತೃಪ್ತಿದಾಯಕವಾಗಿ ಸುರಿಯದ ಕಾರಣ ಜಿಲ್ಲೆಯ ಜೀವ ನದಿಗಳು ಇನ್ನೂ ಮೈ ತುಂಬಿ ಹರಿಯದೆ ಸಣಕಲಾಗಿ ಹರಿಯುತ್ತಿದೆ.

2025 ರ ಜೂನ್ ತಿಂಗಳಲ್ಲಿ 108.80ಸೆಂಮೀಟರ್ ಮಳೆ ಸುರಿದಿದ್ದರೆ, 2026 ರ ಜೂನ್ ತಿಂಗಳ ಈವರೆಗೆ 10.94 ಸೆಂಟಿ ಮೀಟರ್ ಮಳೆ ಸುರಿದಿದೆ. ಈ ಬಾರಿ ಮುಂಗಾರು ಅಸ್ತವ್ಯಸ್ತಗೊಳ್ಳುವ ಎಚ್ಚರಿಕೆಯ ನಡುವೆಯೇ ಮುಂಗಾರು ಪ್ರಾರಂಭದ ಜೂನ್ ತಿಂಗಳಲ್ಲಿ ಮಳೆ ಗಣನೀಯ ಕುಸಿತ ಕಂಡಿರುವುದು ಕಳವಳವನ್ನು ಮೂಡಿಸಿದೆ.

ನೀರಿನ ಹರಿವು ಕ್ಷೀಣಿಸಿದೆ

ಮಳೆಯ ತೀವ್ರ ಕುಸಿತದ ಪರಿಣಾಮ ನೇತ್ರಾವತಿ ನದಿಯಲ್ಲಿ ಕಾಣಿಸುತ್ತಿದ್ದು, 2025 ರ ಜೂನ್ ತಿಂಗಳ 19 ರಂದು ನದಿಯು ಮೈತುಂಬಿ ಹರಿಯುತ್ತಿದ್ದ ದಾಖಲಾತ್ಮಕ ದೃಶ್ಯವನ್ನು 2026ರ ಜೂನ್ ತಿಂಗಳ 19 ರ ನದಿ ನೀರಿನ ಹರಿಯುವ ದೃಶ್ಯಕ್ಕೆ ತುಲನಾತ್ಮಕವಾಗಿ ಉಪ್ಪಿನಂಗಡಿ ಪ್ರವಾಹ ರಕ್ಷಣಾ ತಂಡದ ಲೀಡರ್ ದಿನೇಶ್ ಬಿ. ನೀಡಿದ್ದಾರೆ.



ಕಳವಳ ಮೂಡಿಸಿದೆ

ಮುಂಗಾರು ಪ್ರಾರಂಭದ ಜೂನ್ ತಿಂಗಳಲ್ಲಿ ಮಳೆ ಗಣನೀಯ ಕುಸಿತ ಕಂಡಿರುವುದು ಕಳವಳವನ್ನು ಮೂಡಿಸಿದೆ. ನೇತ್ರಾವತಿ ನದಿಯಲ್ಲಿ ನೀರಿನ ಹರಿವು ಕ್ಷೀಣಿಸಿದೆ. ಆದರೆ 2025ರ ಜೂನ್ 19ರಂದು ನೇತ್ರಾವತಿ ಮೈ ತುಂಬಿ ಹರಿಯುತ್ತಿತ್ತು.

ಕಿನ್ನಿಗೋಳಿಯಲ್ಲಿ ಜಾರಿಯಾಗದ ಏಕಬಳಕೆಯ ಪ್ಲಾಸ್ಟಿಕ್ ಬಳಕೆ

ಸಂತೆ ನಡೆಯುವ ಸ್ಥಳದಲ್ಲಿ ಬಿದ್ದಿದೆ ತ್ಯಾಜ್ಯ ರಾಶಿ!

ಕಿನ್ನಿಗೋಳಿ: ಇಲ್ಲಿನ ಪ.ಪಂ. ಆಡಳಿತ ಅಧಿಕಾರ ವಹಿಸಿಕೊಂಡಾಗಿನ ಮೊದಲ ಸಭೆಯಿಂದಲೇ ಏಕಬಳಕೆಯ ಪ್ಲಾಸ್ಟಿಕ್ ನಿಷೇಧದ ನಿರ್ಧಾರ ಮಾಡಿದ್ದು, ಈ ಬಗ್ಗೆ ಸಾಕಷ್ಟು ಜಾಗೃತಿ ಜಾಥಾ, ಸಭೆಗಳು, ಜನಜಾಗೃತಿ ಕಾರ್ಯಕ್ರಮಗಳು ನಡೆದರೂ ಯಾವೂದೂ ಫಲಕಾರಿಯಾದ ಹಾಗೆ ಕಾಣಿಸುತ್ತಿಲ್ಲ.


ಪ್ರತಿ ಗುರುವಾರ ನಡೆಯುತ್ತಿರುವ ಸಂತೆಯಲ್ಲಿ ಪ್ಲಾಸ್ಟಿಕ್ ಬಳಕೆ ವಿಪರೀತವಾಗಿ ಹೆಚ್ಚಿರುವುದಕ್ಕೆ ಶುಕ್ರವಾರ ಬೆಳಿಗ್ಗೆ ಸಂತೆ ನಡೆಯುವ ಸ್ಥಳದಲ್ಲಿ ಬಿದ್ದಿರುವ ಪ್ಲಾಸ್ಟಿಕ್ ರಾಶಿಯೇ ಸಾಕ್ಷಿಯಾಗಿದೆ. ಇದರ ಅರ್ಥ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಇದಕ್ಕೆ ಕಾರಣ ಎಂದಲ್ಲ, ಸಂತೆಯಲ್ಲಿ ಅಂಗಡಿ ಹಾಕುವವರು ಮುಖ್ಯವಾಗಿ ವಸ್ತುಗಳನ್ನು ಖರೀದಿಸಲು ಬರುವವರು ಈ ಬಗ್ಗೆ ಎಚ್ಚರ ವಹಿಸದಿರುವುದೇ ಕಾರಣ. ಕಿನ್ನಿಗೋಳಿ ಪ.ಪಂ.ತ್ಯಾಜ್ಯ ವಿಲೇವಾರಿ ಘಟಕವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂದು ಆಕ್ಷೇಪ ವ್ಯಕ್ತವಾಗಿದೆ. ದಿನಂಪ್ರತಿ ಸಂಗ್ರಹವಾಗುವ ಕಸದ ರಾಶಿ ಮಂಗಳೂರಿಗೆ ಕೊಂಡೊಯ್ದು ಸಾಗಹಾಕುವುದೇ ಒಂದು ದೊಡ್ಡಸಮಸ್ಯೆ. ನಿರ್ವಹಿಸಲು ಆಗದಷ್ಟು ಕಸವನ್ನು ಜನರು ಉತ್ಪಾದಿಸಿ ಈ ರೀತಿಯಲ್ಲಿ ರಾಶಿ ಹಾಕಿದರೆ ಪಟ್ಟಣ ಪಂ.ನ ಕಸ ತೆಗೆಯುವ ಸಿಬ್ಬಂದಿಗಳಾದರೂ ಏನು ಮಾಡಬೇಕು. ಅವರೂ ಮನುಷ್ಯರಲ್ಲವೇ?



ಕಟೀಲು ದೇವಳದಲ್ಲಿ ಯಶಸ್ವಿಯಾದ ನಿಷೇಧ

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಕಟೀಲು ದೇವಸ್ಥಾನ ಬರುತ್ತದೆ. ಇಲ್ಲಿ ಯಾವುದೇ ಕಾರಣಕ್ಕೂ ದೇಗುಲದ ಒಳಗೆ ಏಕ ಬಳಕೆಯ ಪ್ಲಾಸ್ಟಿಕ್ ಕೊಂಡೊಯ್ಯಲು ಅವಕಾಶ ಇಲ್ಲ. ಹೀಗೆ ಸಾವಿರಾರು ಭಕ್ತರು ಬರುವ ಕಟೀಲು ದೇಗುಲದಲ್ಲಿ ಪ್ಲಾಸ್ಟಿಕ್ ಬಳಕೆಯ ನಿಷೇಧ ಯಶಸ್ವಿಯಾಗಿದೆ. ಇದೇ ರೀತಿ ಕಿನ್ನಿಗೋಳಿ ಪೇಟೆ ಎಲ್ಲ ಅಂಗಡಿಗಳಿಗೂ ಪಂ.ನಿಂದ ವಿನಂತಿಸಲಾಗಿದ್ದರೂ ಜನಜಾಗೃತಿ ಆದಂತಿಲ್ಲ.

ಕಡಿರುದ್ಯಾವರ ಗ್ರಾಮದಲ್ಲಿ ಒಂಟಿಸಲಗ ಸಂಚಾರ



ಗುರುವಾರ ರಾತ್ರಿ ಕಡಿರುದ್ಯಾವರ ಗ್ರಾಮದ ಮಿತ್ತಕಟ್ಟಾಜೆ, ಜೋಡು ನೇರಳೆ ಪರಿಸರದಲ್ಲಿ ಒಂಟಿ ಸಲಗ ಸಂಚರಿಸಿದ್ದು, ಮಿತ್ತಕಟ್ಟಾಜೆಯ ಪ್ರವೀಣ್ ಕುಮಾರ್, ಮೋಹನ್ ನಾಯ್ಕ, ಮಹೇಶ್ ಭಟ್ ಇವರ ಕೃಷಿ ಭೂಮಿಯಲ್ಲಿ ಸಂಚಾರ ಮಾಡಿದೆ. ಜೋಡು ನೇರಳೆ ಮಚ್ಚೇಂದ್ರನಾಯಕ್ ಇವರ ತೋಟದಲ್ಲಿರುವ ಹಲಸಿನ ಹಣ್ಣು, ಇತ್ಯಾದಿ ವಸ್ತುಗಳ ತಿಂದು ಕಾಡಿನತ್ತ ಹೆಜ್ಜೆ ಹಾಕಿದೆ.

ಸ್ಟಾರ್ ನಟರು ಭೇಟಿ ನೀಡಿದ್ದ ಶ್ರೀ ಕೇಶವನಾಥೇಶ್ವರ ಗುಹಾಂತರ ದೇವಸ್ಥಾನ ಸಂಪರ್ಕ ರಸ್ತೆಯ ದುಃಸ್ಥಿತಿ

ಸಂಪೂರ್ಣ ರಾಡಿಯಾದ ಕೆಸರುಮಯ ರಸ್ತೆಯಲ್ಲಿ ಸಂಚರಿಸಲಾಗದೆ ಭಕ್ತರ ಪರದಾಟ!

ಕುಂದಾಪುರ : ಪುರಾತನ ಹಿನ್ನೆಲೆಯ, ಭಕ್ತರಿಗೆ ವಿಶಿಷ್ಟ ಅನುಭೂತಿ ನೀಡುವ ಕೆರಾಡಿ ಗ್ರಾಮದ ಮೂಡುಗಲ್ಲಿನ ಶ್ರೀ ಕೇಶವನಾಥೇಶ್ವರ ಗುಹಾಂತರ ದೇವಸ್ಥಾನವನ್ನು ಸಂಪರ್ಕಿಸುವ ಮಣ್ಣಿನ ರಸ್ತೆಯು ಆರಂಭದ ಮಳೆಗೆ ಸಂಪೂರ್ಣ ರಾಡಿಯಾಗಿದೆ. ಇದರಿಂದ ಇಲ್ಲಿಗೆ ಬರುವಂತಹ ಭಕ್ತರು ಈ ಕೆಸರುಮಯ ರಸ್ತೆಯಲ್ಲಿ ಸಿಲುಕಿ ಪರದಾಟ ನಡೆಸುವಂತಾಗಿದೆ.

ತೆಲುಗು ಸ್ಟಾರ್ ನಟರು ಭೇಟಿ ನೀಡಿದ್ದರು

ದಿನೇ ದಿನೇ ಮೂಡುಗಲ್ಲು ದೇವಸ್ಥಾನಕ್ಕೆ ಬರುವಂತಹ ಭಕ್ತರ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲೂ 2 ವರ್ಷದ ಹಿಂದೆ ತೆಲುಗು ಸ್ಟಾರ್ ನಟ ಜೂನಿಯರ್ ಎನ್‌ಟಿಆರ್, ನಿರ್ದೇಶಕ ಪ್ರಶಾಂತ್ ನೀಲ್ ಅವರು ನಟ, ನಿರ್ದೇಶಕ ರಿಷಬ್ ಶೆಟ್ಟಿ ಜತೆಗೂಡಿ ಭೇಟಿ ನೀಡಿದ್ದರು. ಆನಂತರ ರಾಣಾ ದಗ್ಗುಬಾಟಿ, ನೇಹಾ ಶೆಟ್ಟಿ ಮತ್ತಿತರರು ಭೇಟಿ ನೀಡಿದ ಬಳಿಕ ಈ ದೇಗುಲಕ್ಕೆ ಬರುವಂತಹ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಆದರೆ ಸಂಪರ್ಕ ರಸ್ತೆ ಅವ್ಯವಸ್ಥೆಯಿಂದ ಭಕ್ತರಿಗೆ ತೊಂದರೆಯಾಗುತ್ತಿದೆ.

ರಜಾ ದಿನಗಳಲ್ಲಿ ವಾಹನ ದಟ್ಟಣೆ

ಈಗ ಮಳೆಗಾಲ ಶುರುವಾದ ನಂತರವಂತೂ ಭಕ್ತಿಯ ಜತೆಗೆ ಇಲ್ಲಿನ ಸಹಜ ಸುಂದರ ಪ್ರಾಕೃತಿಕ ಸೌಂದರ್ಯ ಆಸ್ವಾದಿಸಲು, ವಾರಂತ್ಯ, ರಜಾ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಭಕ್ತರು ಆಗಮಿಸುತ್ತಿದ್ದಾರೆ. ಆದರೆ ಕೆಸರುಮಯ ರಸ್ತೆಯಿಂದಾಗಿ ವಾಹನಗಳು ಕೆಸರಲ್ಲಿ ಸಿಲುಕಿ, ಸಂಚರಿಸಲು ಸಾಧ್ಯವಾಗದೇ, ಪರದಾಟ ನಡೆಸುವಂತಹ ಪರಿಸ್ಥಿತಿಯೂ ಇದೆ.



ಸಂಗಮ ವಿಶೇಷ

ರಸ್ತೆ ದುರಸ್ತಿಗೆ ಆಗ್ರಹ

ಕೆರಾಡಿಯಿಂದ 4 ಕಿ.ಮೀ. ದೂರದಲ್ಲಿರುವ ಮೂಡುಗಲ್ಲು ಸಂಪರ್ಕಿಸುವ ಸುಮಾರು 3 ಕಿ.ಮೀ. ದೂರದವರೆಗೂ ಮಣ್ಣಿನ ರಸ್ತೆಯಾಗಿದೆ. ಅಲ್ಲಲ್ಲಿ ಕೆಸರುಮಯ ರಸ್ತೆಯಿಂದಾಗಿ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತಿದೆ. ಭಕ್ತರ ಅನುಕೂಲಕ್ಕಾಗಿ ಈ ರಸ್ತೆಯನ್ನು ದುರಸ್ತಿ ಮಾಡಬೇಕಾಗಿ ಸಾರ್ವಜನಿಕರು ಆಗ್ರಹಿಸಿದ್ದಾರೆ.

ದೇವಳಕ್ಕೆ ಬರುವವರಿಗೆ ಸಮಸ್ಯೆಯಾಗುತ್ತಿದೆ

ಈಗ ಇಲ್ಲಿಗೆ ನಮ್ಮ ಕುಂದಾಪುರ, ಕರಾವಳಿ ಭಾಗದವರು ಮಾತ್ರವಲ್ಲದೆ ಹೊರ ಜಿಲ್ಲೆ, ಆಂಧ್ರ, ತೆಲಂಗಾಣದಿಂದಲೂ ಭಕ್ತರು ಬರುತ್ತಿದ್ದಾರೆ. ಆದರೆ ರಸ್ತೆ ಸರಿಯಿಲ್ಲದೆ ಸಮಸ್ಯೆಯಾಗುತ್ತಿದೆ. ಇಲ್ಲಿನ ಪ್ರಾಕೃತಿಕ ಸೌಂದರ್ಯಕ್ಕೂ ಧಕ್ಕೆ ಆಗದಂತೆ, ದೇವಸ್ಥಾನ ಸಂಪರ್ಕಿಸುವ ರಸ್ತೆಯನ್ನು ಅಗಲೀಕರಣಗೊಳಿಸಿ, ಕನಿಷ್ಠ ಆರಂಭದ ಸ್ವಲ್ಪ ದೂರವಾದರೂ ಡಾಮರು ಮಾಡಿಕೊಟ್ಟರೆ ಸಂಚಾರಕ್ಕೆ ಅನುಕೂಲ ಆಗಲಿದೆ.

● ಅಜಿತ್ ಶೆಟ್ಟಿ ಕೆರಾಡಿ, ಶಶಿಧರ, ಮಿತ್ರವೃಂದದ ಸದಸ್ಯರು ಕೆರಾಡಿ

ಅದ್ಭುತ ತಾಣ

ಸುಮಾರು 50 ಅಡಿ ದೂರದವರೆಗೆ ಹಬ್ಬಿರುವ ವಿಶಾಲ ಗುಹೆ, ಆ ಗುಹೆಯೊಳಗೆ ಉದ್ಭವವಾಗಿರುವ ಶ್ರೀ ಕೇಶವನಾಥೇಶ್ವರ ದೇವರ ಲಿಂಗ, ಅಲ್ಲಿ ಸದಾ ಹರಿಯುವ ನೀರು,ಕೈ ಮುಗಿದು ನಿಂತ ಭಕ್ತರ ಕಾಲಿಗೆ ಕಚಗುಳಿ ಇಡುವ ಹಲವು ಬಗೆಯ ಮೀನುಗಳು, ಗುಹೆಯೊಳಗೆ ತುಂಬಿರುವ ಕತ್ತಲು, ದೇವರ ದೀಪ ವೊಂದೇ ಬೆಳಕು. ನೀರಿನಲ್ಲಿ ನಿಂತುಕೊಂಡೇದೇವರ ದರುಶನ ಪಡೆಯುವ ಅನೂಹ್ಯ ಅನುಭವ. ಇದರೊಂ ದಿಗೆ ಸುತ್ತಲಿನ ಪ್ರಕೃತಿಯ ಸೊಬಗು ಇಲ್ಲಿಗೆ ಬರುವ ಭಕ್ತರ ಮನತಣಿಸಿ, ನವಚೈತನ್ಯ ಮೂಡಿಸುವಂತಿದೆ.

ನಮ್ಮ ದಕ್ಷಿಣ ಕನ್ನಡ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!


website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಶನಿವಾರ 20, ಜೂನ್ 2026

ಸುತ್ತಮುತ್ತ

ನಳೀಲು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಷಷ್ಠಿ ಪೂಜೆ ಇಂದು

ಸವಣೂರು: ತಾಲೂಕಿನಲ್ಲಿ ಹುತ್ತಕ್ಕೆ ಪೂಜೆ ಸಲ್ಲಿಸಲ್ಪಡುವ ಏಕೈಕ ಹಾಗೂ ಕಾರಣಿಕ ಕ್ಷೇತ್ರ ಕೊಳ್ತಿಗೆ ಗ್ರಾಮದ ನಳೀಲು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಜೂ.20ರಂದು ಮಧ್ಯಾಹ್ನ ಷಷ್ಠಿ ಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ.



ಡಾ.ಶುಭ್‌ದೀಪ್ ರೈ ಕೋಲ್ಪೆ ಅವರು ಸೇವಾಕರ್ತರಾಗಿದ್ದಾರೆ. ದೇವಸ್ಥಾನದಲ್ಲಿ ಪ್ರತೀ ತಿಂಗಳ ಸಂಕಷ್ಟಿಯಂದು ಮಹಾಗಣಪತಿ ಹೋಮ ನಡೆಯಲಿದೆ. ಅಲ್ಲದೇ ಭಕ್ತಾದಿಗಳು ಇಚ್ಚಿಸಿದ ದಿನಗಳಲ್ಲಿ ಶ್ರೀ ದೇವರಿಗೆ ಕಾರ್ತಿಕ ಪೂಜೆ, ಶ್ರೀ ಸತ್ಯನಾರಾಯಣ ಪೂಜೆ,ಆಶ್ಲೇಷ ಬಲಿ, ಶ್ರೀ ಶನೈಶ್ಚರ ಪೂಜೆ ಸೇರಿದಂತೆ ವಿವಿಧ ಸೇವೆಗಳು ನಡೆಯಲಿದೆ ಎಂದು ಆಡಳಿತ ಮೊಕ್ತೇಸರ ಸಂತೋಷ್ ಕುಮಾರ್ ರೈ ನಳೀಲು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟ್ಟೆ ಪ್ರತಿಭಾ ಪ್ರೌಢಶಾಲೆಯ ಮಂತ್ರಿ ಮಂಡಲ ರಚನೆ

ಬಡಗನ್ನೂರು: ಪಟ್ಟೆ ಪತಿಭಾ ಪ್ರೌಢಶಾಲಾ 2026–27 ಶೈಕ್ಷಣಿಕ ವರ್ಷದ ಶಾಲಾ ಮಂತ್ರಿ ಮಂಡಲ ರಚಿಸಲಾಯಿತು. ಮುಖ್ಯಮಂತ್ರಿಯಾಗಿ ನಿಶಾಂತ್ (10ನೇ), ಉಪಮುಖ್ಯಮಂತ್ರಿಯಾಗಿ ಸೂರಜ್ ಪಿ.ಎಸ್. (9ನೇ) ಅವರನ್ನು ಆಯ್ಕೆಮಾಡಲಾಯಿತು. ವಿರೋಧ ಪಕ್ಷದ ನಾಯಕನಾಗಿ ವರುಣ್ ಕುಮಾರ್ (9ನೇ), ಗೃಹ ಮಂತ್ರಿಯಾಗಿ ಚರಣ್ (9ನೇ), ಸಾಂಸ್ಕೃತಿಕ





ಮಂತ್ರಿಯಾಗಿ ಭುವನ್ (8ನೇ), ಆರೋಗ್ಯಮಂತ್ರಿಯಾಗಿ ಅಹನ (9ನೇ) ಹಾಗೂ ಶ್ರೀಕಲಾ (8ನೇ), ಕ್ರೀಡಾಮಂತ್ರಿಯಾಗಿ ದೃತಿ ರೈ (9ನೇ) ಹಾಗೂ ಪ್ರತೀಕ್ (9ನೇ), ಅಕ್ಷರ ದಾಸೋಹ ಮಂತ್ರಿಯಾಗಿ ಪ್ರತೀಕ್ಷ (9ನೇ) ಮತ್ತು ಆದಿ (8ನೇ), ಕೃಷಿ ಮಂತ್ರಿಯಾಗಿ, ಲಾವಿಕ ರೈ (9ನೇ), ಪ್ರಸ್ತುತ (8ನೇ) ದೀಪಿತ್ ಎಸ್.ಪಿ. (9ನೇ) ಮತ್ತು ನಿಕ್ಷಿತ್ (9ನೇ) ಆಯ್ಕೆಯಾದರು. ಮತ ಪೆಟ್ಟಿಗೆಯ ಜೊತೆಗೆ ಆಧುನಿಕ ತಂತ್ರಜ್ಞಾನದ ಡಿಜಿಟಲ್ ಇವಿಎಂ ಬಳಸಿ ವಿದ್ಯಾರ್ಥಿಗಳು ಡಿಜಿಟಲ್ ಮತದಾನ ಮಾಡಿದ್ದು ಚುನಾವಣೆಯ ವಿಶೇಷವಾಗಿತ್ತು. ಪ್ರೌಢಶಾಲಾ ಮುಖ್ಯ ಗುರು ಸುಮನ ಅವರ ನೇತೃತ್ವದಲ್ಲಿ ಚುನಾವಣಾ ಪ್ರಕ್ರಿಯೆ ನಡೆಯಿತು. ಶಿಕ್ಷಕ ವೃಂದದವರು ಸಹಕರಿಸಿದರು.

ಅಜಲಡ್ಕ ಒಕ್ಕೂಟದ ತ್ರೈಮಾಸಿಕ ಸಭೆ: ಪದಾಧಿಕಾರಿಗಳ ಆಯ್ಕೆ

ನಿಡ್ಪಳ್ಳಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಟ್ಟಂಪಾಡಿ ವಲಯದ ಅಜಲಡ್ಕ ಒಕ್ಕೂಟದ ತ್ರೈಮಾಸಿಕ ಸಭೆ ಹಾಗೂ ಒಕ್ಕೂಟದ



ನೂತನ ಪದಾಧಿಕಾರಿಗಳ ಆಯ್ಕೆ ಜೂ.14ರಂದು ನಡೆಯಿತು. ಅಧ್ಯಕ್ಷರಾಗಿ ಸೀತಾರಾಮ ರೈ ಸೆಕ್ಕಾಜೆ, ಉಪಾಧ್ಯಕ್ಷರಾಗಿ ಅಶೋಕ ಅರಂತನಡ್ಕ ಕಾರ್ಯದರ್ಶಿಯಾಗಿ ಪ್ರಮೀಳಾ ನೀರಪಾಡಿ ಆಯ್ಕೆಯಾದರು. ಜೊತೆ ಕಾರ್ಯದರ್ಶಿಯಾಗಿ ನಾರಾಯಣ ಅಜಲಡ್ಕ ಕೋಶಾಧಿಕಾರಿಯಾಗಿ ತಿಮ್ಮಪ್ಪ ನೀರಪಾಡಿ ಅವರನ್ನು ಆರಿಸಲಾಯಿತು.

ಬೆಟ್ಟಂಪಾಡಿ ಕಾಲೇಜು ಶಿಕ್ಷಕ – ರಕ್ಷಕ ಸಂಘದ ಅಧ್ಯಕ್ಷರಾಗಿ ಆಯ್ಕೆ

ನಿಡ್ಪಳ್ಳಿ: ಬೆಟ್ಟಂಪಾಡಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಶಿಕ್ಷಕ – ರಕ್ಷಕ ಸಂಘದ ಅಧ್ಯಕ್ಷರಾಗಿ ಪತ್ರಕರ್ತ ಗಂಗಾಧರ ಸಿ.ಹೆಚ್. ಚೆಲ್ಯಡ್ಕಮೂಲೆ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಂಘದ ಕಾರ್ಯದರ್ಶಿಯಾಗಿ



ಕಾಲೇಜಿನ ಗ್ರಂಥಪಾಲಕ ರಾಮ ಕೆ. ಹಾಗೂ ಕೋಶಾಧಿಕಾರಿಯಾಗಿ ಹೇಮಾವತಿ ಅವರನ್ನು ಆಯ್ಕೆ ಮಾಡಲಾಯಿತು. ಕಾಲೇಜಿನ ಪ್ರಾಂಶುಪಾಲ ಪ್ರೊ. ದಾಮೋದರ ಕಣಜಾಲು, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಉಪನ್ಯಾಸಕ ಡಾ. ಸುಬ್ರಹ್ಮಣ್ಯ, ಐ.ಕ್ಯೂ.ಎ.ಸಿ. ಸಂಚಾಲಕ ಉಪನ್ಯಾಸಕ ಪ್ರೊ. ರಾಮಚಂದ್ರ ಡಿ., ಪೋಷಕರು ಹಾಗೂ ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಸಂಸ್ಥಾಪನಾ ದಿನಾಚರಣೆ, 'ನೇತ್ರ ಸಮೃದ್ಧಿ' ತಳಿ ಪರಿಚಯ

ರೈತರು ಕೃಷಿ ಉದ್ಯಮಿಗಳಾಗಿ ಬದಲಾಗಲಿ: ಡಾ. ಪಾಟೀಲ್

ಪುತ್ತೂರು: ಮೊಟ್ಟೆತ್ತಡ್ಕದ ಐಸಿಎಆರ್– ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ 41ನೇ ಸಂಸ್ಥಾಪನಾ ದಿನಯ ಅಂಗವಾಗಿ ಗೇರು ಬೆಳೆಯ ಅಭಿವೃದ್ಧಿಯಲ್ಲಿ ಕೈಜೋಡಿಸುತ್ತಿರುವ ರೈತರು, ಫಲಾನುಭವಿಗಳು, ಉದ್ಯಮಿಗಳೊಂದಿಗೆ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಸಂಸ್ಥೆಯ ನಿರ್ದೇಶಕ ಡಾ. ದಿನಕರ ಅಡಿಗ ಅವರು ಸಂಸ್ಥೆ ಬೆಳೆದು ಬಂದ ದಾರಿ, ನೀಡಿದ ಕೊಡುಗೆ ಮತ್ತು ಮುಂದೆ ಹೋಗಬೇಕಾದ ಮಾರ್ಗದ ಕುರಿತು ಚಿತ್ರಣ ನೀಡಿದರು. ಈ ವರ್ಷ ಬಿಡುಗಡೆಯಾದ 'ನೇತ್ರ ಸಮೃದ್ಧಿ' ಎಂಬ ಹೊಸ ತಳಿ, ಇತರ ತಂತ್ರ ತಂತ್ರಜ್ಞಾನಗಳ ವಿವರಗಳನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಕಾಸರಗೋಡು ಸಿಪಿಸಿಆರ್‌ಐ ನಿರ್ದೇಶಕ ಡಾ. ಕೆ.ಬಿ. ಹೆಬ್ಬಾರ್ ಮತ್ತು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಉಪನ್ಯಾಸ



ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಡಾ. ಎ.ಬಿ. ಪಾಟೀಲ್ ಭಾಗವಹಿಸಿ ನಿಸರ್ಗ ಸ್ನೇಹಿ ಪೋಷಕಾಂಶ ನಿರ್ವಹಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ಎಲ್ಲ ಬೆಳೆಗಳಿಗೂ ಮೂಲ ಆರೋಗ್ಯಕರ ಮಣ್ಣು. ಸಾವಯವ ಬಳಕೆಯ ಮೂಲಕ ಅದನ್ನು ಕಾಪಾಡಿಕೊಂಡು ಬರಬೇಕು ಎಂದು ಹೇಳಿದರು.

ಗೇರು ಬೆಳೆಗಾರರಿಗೆ ಇಂದು ಮೌಲ್ಯವರ್ಧಿತ ಆಹಾರೋತ್ಪನ್ನಗಳ ಉದ್ಯಮದ ಮೂಲಕ ಬೆಳೆಯಲು ಸಾಕಷ್ಟು ಅವಕಾಶವಿದೆ. ಸರ್ಕಾರದ ಸಹಾಯಧನ ಮಾರ್ಗದರ್ಶನ ಬಳಸಿಕೊಂಡು ಕೃಷಿ ಉದ್ಯಮಿಗಳಾಗಬೇಕು ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ, ಅತ್ಯುತ್ತಮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ ಪ್ರತಿಭಾನ್ವಿತ ವಿಜ್ಞಾನಿಗಳನ್ನು ಗೌರವಿಸಲಾಯಿತು. ಸಂಸ್ಥೆಯ

- ರೈತರು, ಫಲಾನುಭವಿಗಳು, ಉದ್ಯಮಿಗಳೊಂದಿಗೆ ಕಾರ್ಯಕ್ರಮ
- ನಿಸರ್ಗ ಸ್ನೇಹಿ ಪೋಷಕಾಂಶ ನಿರ್ವಹಣೆ ಕುರಿತು ಉಪನ್ಯಾಸ
- ಅತ್ಯುತ್ತಮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ ಪ್ರತಿಭಾನ್ವಿತ ವಿಜ್ಞಾನಿಗಳಿಗೆ ಗೌರವ
- ಬೆಳೆಗಾರರಿಗೆ ಮಾಹಿತಿ ನೀಡುವ ಎಐ ಆಧಾರಿತ ಚಾಟ್ ಬಾಟ್ 'ಕ್ಯಾಶ್ಯೂ ಕನೆಕ್ಟ್'ನ್ನು ಬಿಡುಗಡೆ

ಹಲವು ಪ್ರಕಟನೆಗಳು, ಚಟುವಟಿಕೆಗಳನ್ನು ಬಿಂಬಿಸುವ ವಿಡಿಯೊ, ಗೇರು ಬೆಳೆಗಾರರಿಗೆ ಮಾಹಿತಿ ನೀಡುವ ಎಐ ಆಧಾರಿತ ಚಾಟ್ ಬಾಟ್ 'ಕ್ಯಾಶ್ಯೂ ಕನೆಕ್ಟ್'ನ್ನು ಬಿಡುಗಡೆ ಮಾಡಲಾಯಿತು.

ಸಂಪನ್ಮೂಲ ವ್ಯಕ್ತಿಗಳೊಂದಿಗೆ ರೈತರು, ಉದ್ಯಮಿಗಳು ಅರ್ಥಪೂರ್ಣ ಚರ್ಚೆ ನಡೆಸಿದರು. ರೈತರಿಗೆ ಇಲಾಖೆಗಳಿಂದ ಸಿಗುವ ಸೌಲಭ್ಯ, ಸಂಪರ್ಕಿಸಬಹುದಾದ ಅಧಿಕಾರಿಗಳ ಕುರಿತು ಮಾಹಿತಿ ನೀಡಲಾಯಿತು. ನಿತ್ಯ ಆಹಾರೋದ್ಯಮ ಕಂಪನಿಯ ರಾಧಾಕೃಷ್ಣ ಅವರು ತಮಗೆ ಸರಕಾರ ಹಾಗೂ ಗೇರು ಸಂಶೋಧನಾ ಸಂಸ್ಥೆಯಿಂದ ಸಿಕ್ಕ ಸಹಕಾರ, ಮಾರ್ಗದರ್ಶನಗಳನ್ನು ಹಂಚಿಕೊಂಡರು. ಆಹಾರೋದ್ಯಮಕ್ಕೆ ಪ್ರಧಾನ ಮಂತ್ರಿಗಳ ವಿಶೇಷ ಯೋಜನೆಯಡಿ ಸಿಗುವ ಸಹಾಯಧನವನ್ನು ಯುವಕರು ಬಳಸಿಕೊಳ್ಳಲು ಒಳ್ಳೆ ಅವಕಾಶವಿದೆ ಎಂದು ಹೇಳಿದರು.

ವಿಟ್ಲದ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆಯ ಮುಖ್ಯಸ್ಥ ಪ್ರಸಾದ ಶೆಟ್ಟಿ, ಅಡಿಕೆಗೆ ಪರ್ಯಾಯವಾಗಿ ಗೇರು ಬೆಳೆಯುವುದು ಉತ್ತಮ. ಆದರೆ ಗೇರು ಬೆಳೆಯನ್ನು ಬೇರೆ ಬೆಳೆಯನ್ನೂ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಸೇರಿಸಬೇಕು ಎಂದು ವಿನಂತಿಸಿದರು.

ವಿಜ್ಞಾನಿಗಳಾದ ಡಾ. ತೊಂಡೈಮಾನ್ಸಾ ಸ್ವಾಗತಿಸಿ, ಡಾ. ಅಶ್ವಥಿ ಚಂದ್ರಕುಮಾರ್ ವಂದಿಸಿದರು.

ಒಡಿಯೂರು ಗ್ರಾಮೋತ್ಸವ ಸೇವಾ ಸಂಭ್ರಮ: ಸಮಾಲೋಚನಾ ಸಭೆ



ವಿಟ್ಲ: ಗುರು ಸೇವೆಯಲ್ಲಿ ಅಹಂಕಾರ ರಹಿತವಾದ, ಕಲ್ಮಶ ರಹಿತವಾದ ಕರ್ಮವಿರಬೇಕು. ಸತ್ಕರ್ಮದ ಆಚರಣೆಯಿಂದ ಬದುಕಿನಲ್ಲಿ ಏಳಿಗೆಯಾಗುತ್ತದೆ. ಕರ್ಮಾಚರಣೆಗಳು ಹೊರೆಯಾಗದಂತೆ ನೋಡಿಕೊಳ್ಳಬೇಕು. ಮಾನವ ಧರ್ಮ ಉದ್ದೀಪನ ಆಗಬೇಕಾಗಿದ್ದು ಈ ನಿಟ್ಟಿನಲ್ಲಿ ಕೆಲಸವಾಗಬೇಕು. ಧರ್ಮದ ಅನುಷ್ಠಾನಕ್ಕೆ ಶ್ರಮವಹಿಸಬೇಕು ಎಂದು ಶ್ರೀಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವ ಜ್ಞಾನ ಮಂದಿರದಲ್ಲಿ ಆಗಸ್ಟ್ 8ರಂದು ನಡೆಯುವ ಶ್ರೀಗಳವರ ಜನ್ಮದಿನೋತ್ಸವ ಗ್ರಾಮೋತ್ಸವ ಸೇವಾ ಸಂಭ್ರಮದ ಸಮಾಲೋಚನಾ ಸಭೆಯಲ್ಲಿ ಆಶೀರ್ವಚನ ನೀಡಿದರು.

ರಾಷ್ಟ್ರೋತ್ಥಾನಕ್ಕೆ ಗ್ರಾಮೋತ್ಸವ ನಾಂದಿಯಾಗಬೇಕು. ಗ್ರಾಮದ ಬೆಳವಣಿಗೆಯಾಗಲು ಕೃಷಿ ಸಮೃದ್ಧವಾಗಬೇಕು ಎಂದು ಹೇಳಿದರು.

ಸಭೆಯಲ್ಲಿ ಗೌರವ ಮಾರ್ಗದರ್ಶಕರಾದ ಸಾಧ್ವಿ ಮಾತಾನಂದಮಯಿ ದಿವ್ಯ ಸಾನಿಧ್ಯವನ್ನು ವಹಿಸಿದ್ದರು.

ವಿವಿಧ ಸಮಿತಿಗಳನ್ನು ರಚನೆ ಮಾಡಲಾಯಿತು. ಸಮಿತಿ ಕಾರ್ಯಾಧ್ಯಕ್ಷ ಪದ್ಮನಾಭ ಕೊಟ್ಟಾರಿ, ಕೃಷ್ಣಶೆಟ್ಟಿ ತಾರೆಮಾರ್, ಸ್ವಾಗತ ಸಮಿತಿ ಅಧ್ಯಕ್ಷ ಎ. ಸುರೇಶ್ ರೈ, ಸಂಘಟನಾ ಕಾರ್ಯದರ್ಶಿ ನವನೀತ ಶೆಟ್ಟಿ ಕದ್ರಿ, ಉಪಾಧ್ಯಕ್ಷರಾದ ವೆಂಕಟೇಶ್ ಹೊಳ್ಳ, ದೇವಿಪ್ರಸಾದ್ ಶೆಟ್ಟಿ, ವಿಶ್ವನಾಥ ಶೆಟ್ಟಿ ಸುಳ್ಯ ಉಪಸ್ಥಿತರಿದ್ದರು. ರೇಣುಕಾ ಎಸ್ ರೈ ಪ್ರಾರ್ಥಿಸಿದರು. ಮಾತೇಶ್ ಭಂಡಾರಿ ಸ್ವಾಗತಿಸಿದರು. ಸೇರಾಜೆ ಗಣಪತಿ ಭಟ್ ವಂದಿಸಿದರು. ಯಶವಂತ ವಿಟ್ಲ ಕಾರ್ಯಕ್ರಮ ನಿರೂಪಿಸಿದರು.

ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ 'ಮುಂಗಾರು ಮೇಳ' ಕೇವಲ 3 ದಿನ

ಪುತ್ತೂರು: ಪ್ರತಿಷ್ಠಿತ ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ ವತಿಯಿಂದ ಆಯೋಜಿಸಲಾದ 'ಮುಂಗಾರು ಮೇಳ'ಕ್ಕೆ ಇನ್ನೂ ಕೇವಲ ಮೂರು ದಿನಗಳು ಮಾತ್ರ ಬಾಕಿಯಿದ್ದು, ಗ್ರಾಹಕರು ಈ ವಿಶೇಷ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಸಂಸ್ಥೆಯ ಮುಖ್ಯಸ್ಥ ಬಲರಾಮ ಆಚಾರ್ಯ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಚಿನ್ನದ ದರವು ಸುಮಾರು 15,000ರಿಂದ 13,300ರ ಮಟ್ಟಕ್ಕೆ ಇಳಿಕೆಯಾಗಿರುವುದು ಆಭರಣ ಖರೀದಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದೆ. ಇದರೊಂದಿಗೆ ಮುಂಗಾರು ಮೇಳದ ವಿಶೇಷ ಕೊಡುಗೆಗಳು ಗ್ರಾಹಕರಿಗೆ ಹೆಚ್ಚಿನ ಉಳಿತಾಯದ ಅವಕಾಶವನ್ನು ಒದಗಿಸುತ್ತಿವೆ.

ಮುಂಗಾರು ಮೇಳದ ಅಂಗವಾಗಿ ಆಯ್ದ ಸರಗಳ ತಯಾರಿಕೆ ಶುಲ್ಕದಲ್ಲಿ 8%ರಿಂದ ಹಾಗೂ ಆಯ್ದ ಆಂಟಿಕ್ ಆಭರಣಗಳ ತಯಾರಿಕೆ ಶುಲ್ಕದಲ್ಲಿ 12%ರಿಂದ ಆರಂಭವಾಗುವ ವಿಶೇಷ ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಜೊತೆಗೆ ಇಎಫ್‌ವಿವಿಎಸ್ ಗುಣಮಟ್ಟದ ವಜ್ರಾಭರಣಗಳು ಅತಿ ಕಡಿಮೆ ಬೆಲೆಯಲ್ಲಿ ಲಭ್ಯವಿದ್ದು, ಹಳೆಯ ಚಿನ್ನದ ವಿನಿಮಯಕ್ಕೆ ಚಿನ್ನದ ದರದಲ್ಲಿ 0% ಕಡಿತ ಹಾಗೂ 916 ಹಾಲ್‌ಮಾರ್ಕ್ ಆಭರಣಗಳ ವಿಶಾಲ ಸಂಗ್ರಹ ಗ್ರಾಹಕರನ್ನು ಆಕರ್ಷಿಸುತ್ತಿವೆ.

ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರ ಅಭಿರುಚಿಗೆ ತಕ್ಕ ವಿಶೇಷ ಆಭರಣಗಳ ವಿಶಾಲ ಸಂಗ್ರಹ, ಇಂದಿನ ಟ್ರೆಂಡಿಂಗ್ ಡಿಸೈನ್‌ಗಳ ಅದ್ಭುತ ಕಲೆಕ್ಷನ್‌ಗಳೊಂದಿಗೆ ತಮ್ಮ ಕನಸಿನ ಆಭರಣಗಳನ್ನು ಆಯ್ಕೆಮಾಡುವ ಅವಕಾಶವನ್ನು ಈ ಮುಂಗಾರು ಮೇಳ ಒದಗಿಸುತ್ತಿದೆ.



ಗ್ರಾಹಕರಿಂದ ಉತ್ತಮ ಸ್ಪಂದನೆ

ಶುಭ ಸಮಾರಂಭಗಳಿಗಾಗಿ ಆಭರಣ ಖರೀದಿಸಲು ಯೋಜಿಸಿರುವವರಿಗೆ ಈ ಮೇಳ ಅತ್ಯುತ್ತಮ ಅವಕಾಶವಾಗಿದೆ. ಪುತ್ತೂರು, ಸುಳ್ಯ, ಹಾಸನ, ಕುಶಾಲನಗರ ಹಾಗೂ ಮುಡಬಿದಿರೆ ಶಾಖೆಗಳಲ್ಲಿ ನಡೆಯುತ್ತಿರುವ ಈ ಮೇಳಕ್ಕೆ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ.

ಯುವವಾಹಿನಿ ಮಾಣಿ ಘಟಕದ 'ಸಾಯಿ ಭಕ್ತಿ ಸುಧೆ' ನಾಮಸ್ಮರಣೆ



ಬಂಟ್ವಾಳ: ಶಂಭೂರಿನ ದಕ್ಷಿಣ ಶ್ರೀ ಶಿರ್ಡಿ ಸಾಯಿಬಾಬಾ ಮಂದಿರದಲ್ಲಿ ಯುವವಾಹಿನಿ ಮಾಣಿ ಘಟಕದ ವತಿಯಿಂದ 'ಸಾಯಿ ಭಕ್ತಿ ಸುಧೆ' ಕಾರ್ಯಕ್ರಮ ನೆರವೇರಿತು.

ಅರ್ಚಕ ಕೇಶವ ಶಾಂತಿ ಹಾಗೂ ಮಂದಿರದ ಆಡಳಿತ ಮುಖ್ಯಸ್ಥ ಸೂರಜ್ ಸಾಯಿ ಅವರ ಮಾರ್ಗದರ್ಶನದಲ್ಲಿ ಯುವವಾಹಿನಿ ಮಾಣಿ ಘಟಕದ ಪದಾಧಿಕಾರಿಗಳು, ಸದಸ್ಯರು ಹಾಗೂ ಭಜನಾ ತಂಡದ ಸದಸ್ಯರು ಮಂದಿರದ ಪರಿಸರದಲ್ಲಿ ಗಿಡಗಳನ್ನು ನೆಡುವುದರ ಮೂಲಕ 'ಯುವ ವೃಕ್ಷೋತ್ಸವ' ನ್ನು ಆಚರಿಸಿದರು.

ಬಳಿಕ 'ಸಾಯಿ ಭಕ್ತಿ ಸುಧೆ'ಗೆ ಚಾಲನೆ ನೀಡಲಾಯಿತು. ಸುಮಾರು ಮೂರು ಗಂಟೆಗಳ ಕಾಲ ನಡೆದ ಈ ಭಕ್ತಿ ಸುಧೆಯಲ್ಲಿ ಭಕ್ತರು ಸಾಯಿ ನಾಮಸ್ಮರಣೆಯಲ್ಲಿ ತಲ್ಲೀನರಾಗಿ, ಭಜನೆಗಳ ಮೂಲಕ ಸಾಯಿಬಾಬರನ್ನು ಭಕ್ತಿಪೂರ್ವಕವಾಗಿ ಸ್ಮರಿಸಿದರು.

ಮಾಣಿ ಘಟಕದ ಅಧ್ಯಕ್ಷ ಗಣೇಶ್ ಸಾಯಿ ಕೊಡಾಜೆ, ಕಾರ್ಯದರ್ಶಿ ವಿಶ್ವನಾಥ ಪೂಜಾರಿ, ಉಪಾಧ್ಯಕ್ಷರಾದ ಸತೀಶ್ ಕೊಪ್ಪರಿಗೆ, ಕೋಶಾಧಿಕಾರಿ ತ್ರಿವೇಣಿ ರಮೇಶ್, ಮಾಜಿ ಅಧ್ಯಕ್ಷರಾದ ಹರೀಶ್ ಪೂಜಾರಿ ಬಾಕಿಲ, ರಮೇಶ್ ಪೂಜಾರಿ ಮುಜಲ, ಜಯಂತ ಬರಿಮಾರು, ನಾಗೇಶ್ ಪೂಜಾರಿ ಕೊಂಕಣಕೊಡಿ ಇದ್ದರು.

ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶಿಶು ಮಂದಿರ ಶಿಕ್ಷಣ ಪೂರಕ: ಡಾ.ಭಟ್



ಉಪ್ಪಿನಂಗಡಿ: ಮಗುವಿಗೆ ನೀಡಿದ ಒಂದು ಸಂಸ್ಕಾರದ ಬಿಂದು ಮಗುವಿನ ಮನೆ ಮತ್ತು ಪರಿಸರವನ್ನೇ ಪ್ರಕಾಶಿಸಬಲ್ಲದು. ಈಗಾಗಿ ಶಿಶು ಮಂದಿರಗಳು ಸಂಸ್ಕಾರ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿನ ಶಿಕ್ಷಣ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪ್ರೇರಣಾದಾಯಿಯಾಗಿದೆ ಎಂದು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ಅವರು ಉಪ್ಪಿನಂಗಡಿಯ ವೇದಶಂಕರನಗರ ಶ್ರೀ ಮಾಧವ ಶಿಶು ಮಂದಿರದಲ್ಲಿ ನಡೆದ ಪ್ರಾರಂಭೋತ್ಸವ ಮತ್ತು ಪೋಷಕರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಮಗುವಿನಲ್ಲಿ ನೋಡಿ–ಮಾಡಿ ತಿಳಿಯುವ, ಪ್ರಶ್ನಿಸುವ ಗುಣಗಳಿದ್ದು ಅದನ್ನು ಪ್ರೋತ್ಸಾಹಿಸಿ ಅದರ ಮುಖೇನ ಜ್ಞಾನ ವೃಯಾಗುವಂತೆ ನೋಡಿಕೊಳ್ಳಬೇಕು ಎಂದರು.

ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣ ರಾವ್ ಮಂಕುಡೆ, ಶ್ರೀ ರಾಮ ಶಾಲಾ ಸಂಚಾಲಕ ಯು.ಜಿ. ರಾಧ ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಮಾಧವ ಶಿಶು ಮಂದಿರದ ಅಧ್ಯಕ್ಷ ಹರಿರಾಮಚಂದ್ರ, ಉಪಾಧ್ಯಕ್ಷ ಕಂಗ್ವೆ ವಿಶ್ವನಾಥ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಸುಜಾತಕೃಷ್ಣ ಆಚಾರ್ಯ, ಕೋಶಾಧಿಕಾರಿ ಗಾಯತ್ರಿ ವಸಂತ್, ನಿಕಟಪೂರ್ವ ಅಧ್ಯಕ್ಷ ಮನೋಜ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಶು ಮಂದಿರದ ಸ್ಥಳದಾನಿ ಗೋವಿಂದ ಭಟ್, ಆಡಳಿತ ಮಂಡಳಿ ಸದಸ್ಯರಾದ ಜಯಶ್ರೀ ಜನಾರ್ದನ್, ಎನ್. ರಾಘವೇಂದ್ರ ನಾಯಕ್, ಯು. ರಾಜೇಶ್ ಪೈ, ಪ್ರಮುಖರಾದ ಧನಂಜಯ್ ನಟ್ಟಿಬೈಲು ಮೊದಲಾದವರು ಭಾಗವಹಿಸಿದ್ದರು.

ವೇದಮೂರ್ತಿ ಶ್ರೀಕಾಂತ್ ಭಟ್ ವೈದಿಕ ವಿಧಿ ವಿಧಾನಗಳನ್ನು ನೆರವೇರಿಸಿದರು. ಮಾತಾಜಿಗಳಾದ ಚೈತ್ರಾ, ಚಂದ್ರಾವತಿ ವಿವಿಧ ಕಾರ್ಯಕ್ರಮಗಳನ್ನು ನೆರವೇರಿಸಿದರು.

ಜೂ.21ರಂದು ಶ್ರೀ ಕ್ಷೇತ್ರ ಕಾರಿಂಜದಲ್ಲಿ 'ಯೋಗ ವಿದ್ ಯೋಧ' ಕಾರ್ಯಕ್ರಮ

ಬಂಟ್ವಾಳ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಬಂಟ್ವಾಳ ತಾಲೂಕಿನ ಭೂಕೈಲಾಸವೆಂದೇ ಪ್ರಸಿದ್ಧವಾದ ಐತಿಹಾಸಿಕ ಶ್ರೀ ಕ್ಷೇತ್ರ ಕಾರಿಂಜೇಶ್ವರದಲ್ಲಿ 'ಯೋಗ ವಿದ್ ಯೋಧ' ಕಾರ್ಯಕ್ರಮವನ್ನು ಜೂ.21 ರಂದು ಅಪರಾಹ್ನ 3 ಗಂಟೆಗೆ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ನೇತೃತ್ವದಲ್ಲಿ ನಡೆಯಲಿದೆ.



ದಕ್ಷಿಣ ಕನ್ನಡದ ಪ್ರಸಿದ್ಧ ಧಾರ್ಮಿಕ ತಾಣಗಳಲ್ಲಿ ಒಂದಾದ ಹಾಗೂ ಕೊಡ್ಯಾಮಲೆ ಬೆಟ್ಟಗಳ ಶ್ರೇಣಿಯಲ್ಲಿರುವ ಪ್ರಕೃತಿ ರುದ್ರ ರಮಣೀಯ ಪ್ರದೇಶ ಮಹಾತೋಭಾರ ಶ್ರೀ ಕಾರಿಂಜೇಶ್ವರ ದೇವಸ್ಥಾನದ ಆವರಣದಲ್ಲಿ ಅಂದು ನಡೆಯಲಿರುವ 3ನೇ ಆವೃತ್ತಿಯ 'ಯೋಗ ವಿದ್ ಯೋಧ' ಎಂಬ ಧ್ಯೇಯವಾಕ್ಯದೊಂದಿಗೆ ಈ ಕಾರ್ಯಕ್ರಮ ನಡೆಯಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಆರಂಭಗೊಂಡ ಅಂತರಾಷ್ಟ್ರೀಯ ಯೋಗ ದಿನಾಚರಣೆಯು ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದ್ದು, ಈ ಬಾರಿಯು ಪ್ರಕೃತಿ ಸೌಂದರ್ಯದ ನಡುವೆ ಕಂಗೊಳಿಸುವ ಕಾರಿಂಜೇಶ್ವರ ಕ್ಷೇತ್ರದ ಬೆಟ್ಟದ ಆವರಣದಲ್ಲಿ ಯೋಗಪಟು ಗೋಪಾಲಕೃಷ್ಣ ದೇಲಂಪಾಡಿ ಮಾರ್ಗದರ್ಶನದಲ್ಲಿ ನಡೆಯಲಿರುವ ಈ ಯೋಗಾಭ್ಯಾಸದಲ್ಲಿ, ವಿದ್ಯಾರ್ಥಿಗಳು, ನಿವೃತ್ತ ಯೋಧರು, ಗಣ್ಯರು, ಯೋಗಾಸಕ್ತರು ಹಾಗೂ ಸಾರ್ವಜನಿಕರು ಒಂದೇ ವೇದಿಕೆಯಲ್ಲಿ ಭಾಗವಹಿಸಲಿದ್ದಾರೆ.

ದಕ್ಷಿಣ ಕನ್ನಡದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ 'ಯೋಗ ವಿದ್ ಯೋಧ' ಕಾರ್ಯಕ್ರಮವನ್ನು ಜಿಲ್ಲೆಯ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಲ್ಲಿ ಆಯೋಜಿಸಲಾಗುತ್ತಿದೆ. ಪ್ರಥಮ ಬಾರಿ ಸಾಹಸ ಜಲಕ್ರೀಡೆಗಳ ತಾಣವಾಗಿರುವ ಸಸಿಹಿತ್ಲುವಿನಲ್ಲಿ ಹಾಗೂ ಕಳೆದ ಬಾರಿ ಐತಿಹಾಸಿಕ ಸೋಮೇಶ್ವರ ದೇವಸ್ಥಾನದ ಕಡಲ ಕಿನಾರೆಯಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಬಾರಿ ಸಮುದ್ರ ಮಟ್ಟದಿಂದ 1500 ಅಡಿ ಎತ್ತರದಲ್ಲಿರುವ ಕಾರಿಂಜ ಬೆಟ್ಟದಲ್ಲಿ ಆಯೋಜಿಸಲಾಗಿದ್ದು ಈ ಅದ್ಭುತ ಧಾರ್ಮಿಕ ಹಾಗೂ ಪ್ರವಾಸಿ ತಾಣವು ಜಾಗತಿಕ ಭೂಪಟದಲ್ಲಿ ಗುರುತಿಸಿಕೊಳ್ಳಬೇಕೆಂಬ ನಿಟ್ಟಿನಲ್ಲಿ ಕರಾವಳಿಯ ಶ್ರೀಮಂತ ಪರಂಪರೆಯನ್ನು ವಿಶ್ವಕ್ಕೆ ಪರಿಚಯಿಸುವ ಸಣ್ಣ ಪ್ರಯತ್ನ ಇದಾಗಿದೆ ಎಂದು ಸಂಸದ ಕ್ಯಾ.ಚೌಟ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಟ್ಟಗುಡ್ಡೆ ಪ್ರದೇಶದಲ್ಲಿ ಕಲುಷಿತ ನೀರು ಪೂರೈಕೆ: ಶಾಸಕರಿಂದ ತುರ್ತುಸಭೆ



ಮಂಗಳೂರು: ನಗರದ ಕೆಲವೆಡೆ ಸಾರ್ವಜನಿಕರಿಗೆ ಕಲುಷಿತ ನೀರು ಪೂರೈಕೆಗೊಂಡು ಹಲವರು ಅಸ್ವಸ್ಥಗೊಂಡ ಹಿನ್ನಲೆಯಲ್ಲಿ ಬಿಜೈ 31ನೇ ವಾರ್ಡಿನ ಬಟ್ಟಗುಡ್ಡೆ ಪರಿಸರದ ರಾಮಕೃಷ್ಣ ಭಜನಾ ಮಂದಿರದ ಆವರಣದಲ್ಲಿ ಶಾಸಕ ವೇದವ್ಯಾಸ ಕಾಮತ್ ಅವರ ನೇತೃತ್ವದಲ್ಲಿ ಸಾರ್ವಜನಿಕರ, ಪಾಲಿಕೆಯ ಹಿರಿಯ ಅಧಿಕಾರಿಗಳ ತುರ್ತು ಸಭೆ ಶುಕ್ರವಾರ ನಡೆಯಿತು.

ಸಭೆಯಲ್ಲಿ ಮಾತನಾಡಿದ ಶಾಸಕರು, ನೋಡು ಬಟ್ಟಗುಡ್ಡೆ ಪರಿಸರದ ಕೆಳಭಾಗದಲ್ಲಿ ಕುಡಿಯುವ ನೀರಿಗೆ ಡ್ರೈನೇಜ್ ನೀರು ಸೇರಿಕೊಂಡು ಹಲವು ಮನೆಗಳಿಗೆ ಸರಬರಾಜಾಗಿದೆ ಎಂದು ದೂರು ಬಂದಿರುವ ಹಿನ್ನಲೆಯಲ್ಲಿ ಕ್ಷೇತ್ರದ ಜವಾಬ್ದಾರಿಯುತ ಶಾಸಕನಾಗಿ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಭೇಟಿ ನೀಡಿದ್ದೇನೆ. ಸದ್ಯ ಅಧಿಕಾರಿಗಳು ಗುರುವಾರದಿಂದ ಸ್ಥಳೀಯ ಮನೆಗಳ ನಳ್ಳಿಯಲ್ಲಿ ಬರುತ್ತಿರುವ ನೀರಿನ ಮಾದರಿಯನ್ನು ದಿನಕ್ಕೆ ಮೂರ್ನಾಲ್ಕು ಬಾರಿ ಪರೀಕ್ಷೆಗೆ ಒಳಪಡಿಸಿ ಎಲ್ಲಾ ರೀತಿಯ ಬಳಕೆಗೆ ಯೋಗ್ಯವಿರುವುದನ್ನು ಸಾರ್ವಜನಿಕರ ಸಮ್ಮುಖದಲ್ಲಿಯೇ ಧೃಡಪಡಿಸಿದ್ದಾರೆ. ಹಾಗಾಗಿ ಈಗಾಗಲೇ ಈ ಭಾಗದ ಮನೆಗಳ, ಅಪಾರ್ಟ್ ಮೆಂಟ್‌ಗಳ ಟಾಂಕಿಯಲ್ಲಿ ಸಂಗ್ರಹವಾಗಿರುವ ನೀರನ್ನು ಸಾರ್ವಜನಿಕರು ವಿಸರ್ಜಿಸಿ ಶುದ್ಧ ನೀರನ್ನು ಸಂಗ್ರಹ ಮಾಡಿಕೊಳ್ಳಬೇಕು. ಮುಂದಕ್ಕೆ ಯಾವುದೇ ರೀತಿಯ ಸಂದೇಹವಿದ್ದರೂ ಕೂಡಲೇ ನನ್ನ ಸಹಿತ ಪಾಲಿಕೆಯ ಅಧಿಕಾರಿಗಳ ಗಮನಕ್ಕೆ ತರುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಸ್ಥಳೀಯರಾದ ಪ್ರಶಾಂತ್ ಆಳ್ವ, ನಾರಾಯಣ್, ಸಂತೋಷ ಉಳ್ಳಾಲ್, ರಾಜೇಶ್ ಕಿಣಿ, ದೀಪಿಕಾ ಮನೋಜ್, ಸುಜಿತ್, ಅಶ್ವಿನ್, ಋತ್ವಿಕ್ ಕದ್ರಿ, ಅನಂತ್ ಮಲ್ಯ, ಅಶೋಕ್ ಬಂಗೇರ, ಎರೆಸ್ಟಿನ್, ಸೇರಿದಂತೆ ಪಾಲಿಕೆಯ ಎಇಇ ನಾಗರಾಜ್, ಎಇಇ ಶಿವಲಿಂಗಯ್ಯ, ಕೆಯುಐಡಿಎಫ್‌ಸಿ ಅಧಿಕಾರಿಗಳಾದ ಸುರೇಶ್, ಖಾದರ್, ಪುನೀತ್, ಮಿಥುನ್, ಜೆಇ ನಿತ್ಯಾನಂದ, ಕುಡ್ಸೆಂಪ್ ನ ರಿಚರ್ಡ್, ಜಯಪ್ರಕಾಶ್, ಪ್ರಶಾಂತ್ ಇದ್ದರು.

ಮುಳಿಯ 'ಸಿಲ್ವರ್ ಮ್ಯಾರಥಾನ್-2026'ಗೆ ಚಾಲನೆ, 92.5 ಶುದ್ಧತೆಯ ಆಭರಣ ಪರಿಚಯಿಸುವ ಗುರಿ

ಪುತ್ತೂರು: ಮುಳಿಯ ಗೋಲ್ಡ್ ಆಂಡ್ ಡೈಮಂಡ್ಸ್‌ನ ವಿಶೇಷ ಎಕ್ಸ್‌ಕ್ಲೂಸಿವ್ ಬೆಳ್ಳಿ ಆಭರಣಗಳ ಬ್ರ್ಯಾಂಡ್ 'ಸಿಲ್ವೆರಿಯಾ' ವತಿಯಿಂದ 'ಸಿಲ್ವರ್ ಮ್ಯಾರಥಾನ್–2026' ಯೋಜನೆಗೆ ಇಂದು ಚಾಲನೆ ನೀಡಲಾಯಿತು.

ಈ 90 ದಿನಗಳ ವಿಶೇಷ ಯೋಜನೆಯು ಸೆಪ್ಟೆಂಬರ್ 14ರವರೆಗೆ ನಡೆಯಲಿದ್ದು, ಗ್ರಾಹಕರಿಗೆ ವೈವಿಧ್ಯಮಯ 92.5 ಶುದ್ಧತೆಯ ಸ್ಟರ್ಲಿಂಗ್ ಸಿಲ್ವರ್ ಆಭರಣಗಳನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. 92.5 ಶುದ್ಧತೆಯ ಬೆಳ್ಳಿ ಸರಗಳು, ನೆಕ್ಲೇಸ್‌ಗಳು, ಕಾಲ್ಗೆಜ್ಜೆ, ಮಕ್ಕಳ ಜ್ಯುವೆಲ್ಲರಿ, ಉಂಗುರಗಳು, ಬಳೆಗಳು, ಕಿವಿಯೋಲೆಗಳು ಹಾಗೂ ವಾಚ್‌ಗಳ ವಿಶೇಷ ಸಂಗ್ರಹವನ್ನು ಈ ಅವಧಿಯಲ್ಲಿ ಗ್ರಾಹಕರು ವೀಕ್ಷಿಸಿ ಖರೀದಿಸಬಹುದಾಗಿದೆ. ಚಿನ್ನಾಭರಣಗಳಲ್ಲಿ ಲಭ್ಯವಿರುವ ಬಹುತೇಕ ಎಲ್ಲಾ ವಿನ್ಯಾಸಗಳು ಮತ್ತು ವೈವಿಧ್ಯತೆ ಈಗ ಬೆಳ್ಳಿ ಆಭರಣಗಳಲ್ಲಿಯೂ ಲಭ್ಯವಿವೆ.



ಈ 90 ದಿನಗಳ ಅವಧಿಯಲ್ಲಿ ಪ್ರತಿ ಖರೀದಿಯಲ್ಲಿ ರೂ. 5,000 ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ಸಿಲ್ವರ್ ಆಭರಣ ಖರೀದಿಸುವ ಗ್ರಾಹಕರಿಗೆ ಎಲೆಕ್ಟ್ರಿಕ್ ಸ್ಕೂಟರ್, ಫ್ರಿಜ್, ಏರ್ ಫ್ರೈಯರ್ ಸೇರಿದಂತೆ ಆಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಹಳೆಯ ಬೆಳ್ಳಿ ಆಭರಣಗಳನ್ನು ಹೊಸ ಸಿಲ್ವೆರಿಯಾ ಆಭರಣಗಳಿಗೆ ವಿನಿಮಯ ಮಾಡಿಕೊಳ್ಳುವ ವಿಶೇಷ ಸೌಲಭ್ಯವೂ ಲಭ್ಯವಿದೆ.

ವಿವಿಧ ಕಾರ್ಯಕ್ರಮ

ಈ ಉತ್ಸವದ ಅಂಗವಾಗಿ ಪ್ರತಿ ಶಾಖೆಯಲ್ಲೂ ಬೆಳ್ಳಿ ಆಭರಣ ಕುರಿತ ವಿಚಾರ ಸಂಕಿರಣ, ಫ್ಯಾಷನ್ ಶೋ, ನಿತ್ಯೋಪಯೋಗಿ ಬೆಳ್ಳಿ ಪಾತ್ರೆ ಪಗಡಿಗಳ ಪ್ರದರ್ಶನ ಮಾರಾಟ, ಸೆಲ್ಫಿ ಸ್ಪರ್ಧೆ, ಶಾಲಾ– ಕಾಲೇಜುಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಹೊಸ ಫ್ಯಾಷನ್ ಆರಂಭ ಯಾಕೆ ಮಾಡಬಾರದು?

'ಈಗ ಮದುವೆ ಇನ್ನಿತರ ಸಮಾರಂಭಗಳಲ್ಲಿ ಮ್ಯಾಚಿಂಗ್ ಜ್ಯುವೆಲ್ಲರಿಗಳ ಟ್ರೆಂಡ್ ಹೆಚ್ಚಾಗುತ್ತಿದೆ. ಮದುವೆಯ ದಿನ ವಧು ಮತ್ತು ಕುಟುಂಬದವರು ಚಿನ್ನಾಭರಣಗಳನ್ನು ಧರಿಸುತ್ತಾರೆ. ಹಾಗೆಯೇ ವಿದೇಶಿ ವಿನಿಮಯ ಉಳಿಸುವ ನಿಟ್ಟಿನಲ್ಲಿ ಮೆಹಂದಿ, ಸಂಗೀತ ಅಥವಾ ರಿಸೆಪ್ಷನ್ ಕಾರ್ಯಕ್ರಮಗಳಲ್ಲಿ ಬೆಳ್ಳಿ ಆಭರಣಗಳನ್ನು ಧರಿಸುವ ಹೊಸ ಫ್ಯಾಷನ್ ಆರಂಭ ಯಾಕೆ ಮಾಡಬಾರದು?.

● ಕೇಶವಪ್ರಸಾದ್ ಮುಳಿಯ

ಜೊತೆಗೆ ಬ್ಯೂಟಿಷಿಯನ್‌ಗಳು ಮತ್ತು ಫ್ಯಾಷನ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಶೇಷ ಕಾರ್ಯಕ್ರಮ ನಡೆಯಲಿವೆ.

ಹಳೆಯ, ಕಪ್ಪಾಗಿರುವ ಆಭರಣಗಳ ವಿನಿಮಯಕ್ಕೆ ಅವಕಾಶ

ಕಳೆದ ಒಂದು ವರ್ಷದಲ್ಲಿ ಚಿನ್ನದ ಬೆಲೆ 4 ಪಟ್ಟು ಗಣನೀಯವಾಗಿ ಏರಿಕೆಯಾಗಿದೆ. ಬೆಳ್ಳಿಯ ಬೆಲೆಯಲ್ಲಿಯೂ ಉತ್ತಮ ಬೆಳವಣಿಗೆ ಕಂಡುಬಂದಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಮನೆಯಲ್ಲಿ ಇರುವ ಬೆಳ್ಳಿ ವಸ್ತುಗಳ ಆಭರಣಗಳ ಮೌಲ್ಯಮಾಪನ ಮಾಡಿ ಹಳೆಯ ಅಥವಾ ಕಪ್ಪಾಗಿರುವ ಆಭರಣಗಳನ್ನು ವಿನಿಮಯದ ಮೂಲಕ ಹೊಸ ವಿನ್ಯಾಸದ ಆಭರಣಗಳಾಗಿ ಬದಲಿಸಿಕೊಳ್ಳಬಹುದು ಎಂದು ಕೃಷ್ಣನಾರಾಯಣ ಮುಳಿಯ ತಿಳಿಸಿದ್ದಾರೆ. ಮುಳಿಯ ಸಿಲ್ವೆರಿಯಾದಲ್ಲಿ ವಿವಿಧ ವಿನ್ಯಾಸಗಳ ನೆಕ್ಲೇಸ್‌ಗಳು, ಕಾಲ್ಗೆಜ್ಜೆಗಳು, ಉಂಗುರಗಳು ಹಾಗೂ ವೈವಿಧ್ಯಮಯ ಬೆಳ್ಳಿ ಆಭರಣಗಳ ವಿಶೇಷ ಸಂಗ್ರಹ ಲಭ್ಯವಿದೆ. ಒಮ್ಮೆ ನಮ್ಮ ಶೋರೂಮ್‌ಗೆ ಭೇಟಿ ನೀಡಿ ಸಿಲ್ವರ್ ಕೌಂಟರ್ ವೀಕ್ಷಿಸಿದರೆ ಅದರ ವೈವಿಧ್ಯತೆ ಮತ್ತು ವಿನ್ಯಾಸ ಖಂಡಿತವಾಗಿಯೂ ಆಶ್ಚರ್ಯಗೊಳಿಸುತ್ತವೆ ಎಂದು ಸಿಲ್ವೆರಿಯಾ ಬ್ರ್ಯಾಂಡ್‌ನೇತೃತ್ವ ವಹಿಸಿರುವ ಕೇಶವಪ್ರಸಾದ್ ಮುಳಿಯ ಹೇಳಿದರು. ಈ ಸಿಲ್ವರ್ ಮ್ಯಾರಥಾನ್ ಸಂಭ್ರಮಾಚರಣೆ ಪುತ್ತೂರು, ಬೆಳ್ತಂಗಡಿ, ಮಡಿಕೇರಿ, ಗೋಣಿಕೊಪ್ಪ ಮತ್ತು ಬೆಂಗಳೂರು ಸಹಿತ ಎಲ್ಲಾ ಮುಳಿಯ ಶಾಖೆಗಳಲ್ಲಿ ನಡೆಯಲಿದ್ದು, ನೆಲ್ಯಾಡಿ, ಕೊಡಗಿನ ಸೋಮವಾರಪೇಟೆಯ ವಿಶೇಷ 'ಸಿಲ್ವೆರಿಯಾ' ಶಾಖೆಗಳಲ್ಲಿಯೂ ಗ್ರಾಹಕರು ಪ್ರಯೋಜನ ಪಡೆಯಬಹುದು ಎಂದು ತಿಳಿಸಿದ್ದಾರೆ.

ಸುತ್ತಮುತ್ತ

ಸಜೀಪ ಮುನ್ನೂರು ಯುವಕ ಸಂಘ: ಪದಾಧಿಕಾರಿಗಳ ಆಯ್ಕೆ

ಬಂಟ್ವಾಳ: ಸಜೀಪ ಮುನ್ನೂರು ಯುವಕ ಸಂಘ ಕಂದೂರು ಇದರ 53ನೇ ವರ್ಷದ ಮಹಾಸಭೆಯು ಸಂಘದ ಅಧ್ಯಕ್ಷ ಜಯಾನಂದ ಬಂಗೇರ ಖಂಡಿಗ



ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ವತಿಯಿಂದ ಜರಗುವ ಸಾರ್ವಜನಿಕ ಶ್ರೀ ಗಣೇಶೋತ್ಸವವನ್ನು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ 3 ದಿನಗಳ ಕಾಲ ಅದ್ದೂರಿಯಿಂದ ನಡೆಸಲು ನಿರ್ಧರಿಸಲಾಯಿತು.

ಪದಾಧಿಕಾರಿಗಳ ಆಯ್ಕೆ:
ಇದೇ ವೇಳೆ ಸಂಘದ ನೂತನ ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರಾಗಿ ಜಯಾನಂದ ಬಂಗೇರ ಖಂಡಿಗ ಅವರು ಪುನರಾಯ್ಕೆಯಾಗಿದ್ದಾರೆ. ಉಪಾಧ್ಯಕ್ಷರುಗಳಾಗಿ ಉದಯಕುಮಾರ್ ಐತಾಳ್ ಕಂದೂರು, ಜಗದೀಶ್ ಕುಲಾಲ್ ಮಡಿವಾಳಪಡ್ಪು,ಕಾರ್ಯದರ್ಶಿಗಳಾಗಿ ಶೇಖರ ಕುಲಾಲ್ ಕಂದೂರು, ಆನಂದ ಕುಲಾಲ್ ಸುಭಾಷ್ ನಗರ,ಕೋಶಾಧಿಕಾರಿಯಾಗಿ ಮಧುಸೂದನ್ ಎನ್.ಬಿ. ಪಾದೆಮನ್,ಲೆಕ್ಕ ಪರಿಶೋಧಕರುಗಳಾಗಿ ಯೋಗಿಶ್ ಕುಲಾಲ್ ಖಂಡಿಗ, ಹೇಮಂತ್ ಕೌಳಿಗ ಅವರನ್ನು ಆರಿಸಲಾಯಿತು. ಯುವಕ ಸಂಘದ ಸ್ಥಾಪಕರಾದ ಯಂ.ವಸಂತ ಶೆಟ್ಟಿ ಕೊಯಮಜಲು,ಪ್ರಮುಖರಾದ ಜಗದೀಶ್ ಐತಾಳ್, ಸುರೇಶ್ ಶೆಟ್ಟಿ,ನವೀನ್ ಸುವರ್ಣ,ಜಯಂತ ಶೆಟ್ಟಿ,ಸತೀಶ್ ನಾಯಕ್, ಶಿವಾನಂದ ಕೌಳಿಗ,ಪ್ರಭಾಕರ ಶೆಟ್ಟಿ,ಸೋಮನಾಥ ಬಿ.ಎಂ., ಸುರೇಶ್ ಕುಲಾಲ್,ಸುರೇಶ್ ನಾಯಕ್, ಪ್ರವೀಣ್ ಕೌಳಿಗ,ಜನಾರ್ಧನ ಆಚಾರ್ಯ,ವಿಶ್ವನಾಥ ಖಂಡಿಗ,ವಿಠಲ ಕುಲಾಲ್ ಮತ್ತಿತರರು ಉಪಸ್ಥಿತರಿದ್ದರು.ಪ್ರದೀಪ್ ಶೆಟ್ಟಿ ಕಂದೂರು ಸ್ವಾಗತಿಸಿದರು. ಕೇಶವ ಮಾಸ್ತರ್ ಮಾರ್ನಬೈಲ್ ವಂದಿಸಿದರು.

ನಾಳೆ ಮೆಗಾ ಉಚಿತ ಹೃದ್ರೋಗ ನಿರ್ಣಯ ಶಿಬಿರ

ಕಾಸರಗೋಡು: ಕಾಸರಗೋಡು ಜಿಲ್ಲೆಯ ಹೃದಯ ಚಿಕಿತ್ಸಾ ವಲಯದಲ್ಲಿ ನಿರ್ಣಾಯಕ ಸಾಧನೆಗಳನ್ನು ನಿರ್ವಹಿಸುತ್ತಿರುವ ಕಾಸರಗೋಡಿನ ಯುನೈಟೆಡ್ ಹಾರ್ಟ್ ಸೆಂಟರ್‌ನ 5ನೇ ವರ್ಷಾಚರಣೆಯ ಅಂಗವಾಗಿ ಜೂ.21ರಂದು ಪ್ರಸ್ತುತ ಆಸ್ಪತ್ರೆಯಲ್ಲಿ ಮೆಗಾ ಉಚಿತ ಹೃದ್ರೋಗ ನಿರ್ಣಯ ಶಿಬಿರ ನಡೆಯಲಿದೆ. ಶಿಬಿರವನ್ನು ಬೆಳಗ್ಗೆ 9 ಗಂಟೆಗೆ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಉದ್ಘಾಟಿಸುವರು. ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿರುವರು ಎಂದು ಆಸ್ಪತ್ರೆಯ ಪದಾಧಿಕಾರಿಗಳು ಶುಕ್ರವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಪ್ರಸ್ತುತ ಆಸ್ಪತ್ರೆಯಲ್ಲಿ ಕಳೆದ ಐದು ವರ್ಷಗಳಲ್ಲಿ 5000ಕ್ಕಿಂತ ಅಧಿಕ ಹೃದಯ ಸಂಬಂಧಿತ ಚಿಕಿತ್ಸಾ ಪ್ರಕ್ರಿಯೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. 5ನೇ ವರ್ಷಾಚರಣೆಯ ಸಲುವಾಗಿ ನಡೆಸುವ ಈ ಮೆಗಾ ಉಚಿತ ಹೃದ್ರೋಗ ಚಿಕಿತ್ಸಾ ನಿರ್ಣಯ ಶಿಬಿರದಲ್ಲಿ ಉಚಿತ ನೋಂದಣಿ, ಉಚಿತ ಕಾರ್ಡಿಯೋಜಿ ಕನಸಲ್ಟೆನ್ಸಿ, ಉಚಿತ ಇಸಿಜಿ ಇತ್ಯಾದಿ ವ್ಯವಸ್ಥೆಗಳಿರುವುದು. ಮಾತ್ರವಲ್ಲದೆ ಎಕ್ಕೋ, ಟಿಎಂಟಿ ತಪಾಸಣೆಗಳಿಗೆ ಶೇಕಡಾ 50ರಷ್ಟು ರಿಯಾಯಿತಿಯಿರುವುದು. ಅಲ್ಲದೆ ಜೂ.22ರಿಂದ ಜುಲೈ 21ರ ತನಕ ಹೃದಯ ರೋಗಿಗಳಿಗೆ ಪ್ರತ್ಯೇಕ ಸೌಲಭ್ಯಗಳು ಇರುವುದು. ಈ ಅವಧಿಯಲ್ಲಿ ಕಾರ್ಡಿಯೋಜಿ ಕನ್‌ಸಲ್‌ಟೆನ್ಸಿಗೆ ಶೇಕಡಾ 25ರಷ್ಟು ರಿಯಾಯಿತಿ ಹಾಗೂ ಇಸಿಸಿ, ಎಕ್ಕೋ ಟಿಎಂಟಿ ತಪಾಸಣೆಗಳಿಗೆ ಶೇಕಡಾ 20ರಷ್ಟು ರಿಯಾಯಿತಿ ಲಭ್ಯವಿರುವುದು. ಈ ಶಿಬಿರಕ್ಕೆ ಮೈತ್ರ ಯುನೈಟೆಡ್ ಹಾರ್ಟ್ ಸೆಂಟರ್‌ನ ಕನ್‌ಸಲ್ಟೆಂಟ್ ಕಾರ್ಡಿಯೋಲಜಿಸ್ಟ್ ಡಾ.ಭರತೇಶ್, ಕಲ್ಲಿಕೋಟೆ ಮೈತ್ರ ಆಸ್ಪತ್ರೆಯ ಕನ್‌ಸಲ್ಟೆಂಟ್ ಕಾರ್ಡಿಯೋಜಿಸ್ಟ್ ಡಾ.ಮುಹಮ್ಮದ್ ರಾಫಿ ಸಿ.ಕೆ. ನೇತೃತ್ವ ನೀಡುವರು. ಡಾ.ಭರತೇಶ್, ಆಸ್ಪತ್ರೆಯ ಸಿಇಒ ಎ.ವಿ.ಕೃಷ್ಣನ್, ಮೆನೇಜರ್ ಅನಂತರಾಜ್ ಉಪಸ್ಥಿತರಿದ್ದರು.

ಕುಡಿದ ಅಮಲಿನಲ್ಲಿ ಕಪಾಟು ಮೈಮೇಲೆ ಬಿದ್ದು ವ್ಯಕ್ತಿ ದುರ್ಮರಣ

ಉಡುಪಿ: ಫ್ಲಾಟ್‌ನ ಬೆಡ್ ರೂಂನಲ್ಲಿ ಕಪಾಟು ಮೇಲೆ ಬಿದ್ದು ವ್ಯಕ್ತಿಯೊಬ್ಬರು ಮೃತಪಟ್ಟಿರುವ ವಿಚಿತ್ರ ಘಟನೆ ನಡೆದಿದೆ. ಎಲ್ಪ್ರೆಡ್ ಎ. ರೊಡ್ರಿಗಸ್ ಮೃತಪಟ್ಟ ದುರ್ದೈವಿ. ಅವರು ಫೋನ್ ಕರೆಗೆ ಉತ್ತರಿಸದಿದ್ದಾಗ ಸಂಶಯಗೊಂಡು ನೆರೆಹೊರೆಯವರ ಸಹಾಯದಿಂದ ಫ್ಲಾಟ್‌ನ ಬಾಗಿಲು ಮುರಿದು ಒಳಹೊಕ್ಕಾಗ ಈ ಘಟನೆ ಬೆಳಕಿಗೆ ಬಂದಿದೆ.ಎಲ್ಪ್ರೆಡ್ ಅವರು ಕುಡಿದ ಅಮಲಿನಲ್ಲಿ ಕಬ್ಬಿಣದ ಕಪಾಟಿನಲ್ಲಿದ್ದ ಯಾವುದೋ ವಸ್ತುವನ್ನು ತೆಗೆಯಲು ಹೋದಾಗ, ಭಾರವಾದ ಕಪಾಟು ಆಕಸ್ಮಿಕವಾಗಿ ಅವರ ಮೇಲೆಯೇ ಬಿದ್ದಿದೆ ಎನ್ನಲಾಗಿದೆ. ಪರಿಣಾಮವಾಗಿ ಅವರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಕುರಿತು ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

ವೃದ್ಧ ಆತ್ಮಹತ್ಯೆ

ಉಡುಪಿ: ವಿಪರೀತ ಮದ್ಯಪಾನದ ಚಟ ಹಾಗೂ ಅನಾರೋಗ್ಯ ಸಮಸ್ಯೆಯಿಂದ ಮನನೊಂದಿದ್ದ ವೃದ್ಧರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಬ್ರಹ್ಮಾವರ ತಾಲೂಕಿನ ಹಂದಾಡಿ ಗ್ರಾಮದಲ್ಲಿ ಸಂಭವಿಸಿದೆ. ಶಂಕರ ಪೂಜಾರಿ (72) ಆತ್ಮಹತ್ಯೆ ಮಾಡಿಕೊಂಡ ವೃದ್ಧ. ಮೃತರು ತೀವ್ರ ಮಾನಸಿಕ ಖಿನ್ನತೆಗೆ ಒಳಗಾಗಿದ್ದು, ಜೂನ್ 17ರ ಸಂಜೆಯಿಂದ ಜೂನ್ 18ರ ಸಂಜೆಯ ಮಧ್ಯದ ಅವಧಿಯಲ್ಲಿ ನೆರೆಮನೆಯಾದ ರಘುರಾಮ ಸೋಮಯಾಜಿ ಎಂಬವರ ಮನೆಯ ಮಹಡಿಯ ಮರದ ಪಕ್ಕಾಸಿಗೆ ನೈಲಾನ್ ರೋಪ್ ಕಟ್ಟಿ ಕುತ್ತಿಗೆಗೆ ಬಿಗಿದುಕೊಂಡಿದ್ದಾರೆ. ಮೃತರ ಪತ್ನಿ ವನಜ ಪೂಜಾರ್ತಿ (60) ನೀಡಿದ ದೂರಿನಂತೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

ಮೆಸ್ಕಾಂ ಖಾಸಗೀಕರಣ ವಿರುದ್ಧ ಸುರತ್ಕಲ್‌ನಲ್ಲಿ ಜಾಗೃತಿ ಸಭೆ | ಟಾಟಾ ಪವರ್ ಅರ್ಜಿಗೆ ವಿರೋಧ

ಗ್ರಾಹಕರು, ನೌಕರರಿಗೆ ಶುರುವಾಗಿದೆ ಹೊರೆ ಹೆಚ್ಚುವ ಆತಂಕ

ಸುರತ್ಕಲ್: ವಿದ್ಯುತ್ ವಲಯದ ಖಾಸಗೀಕರಣದ ಕುರಿತು ಸಾರ್ವಜನಿಕ ಜಾಗೃತಿ ಸಭೆ ಸುರತ್ಕಲ್ ಮೆಸ್ಕಾಂ ಕಚೇರಿಯಲ್ಲಿ ಬುಧವಾರ ನಡೆಯಿತು. ಪ್ರಸ್ತುತ ಮೆಸ್ಕಾಂ ಸೇವೆ ಸಲ್ಲಿಸುತ್ತಿರುವ ಪ್ರದೇಶಗಳಲ್ಲಿ ಸಮಾನಾಂತರ ವಿದ್ಯುತ್ ವಿತರಣಾ ಪರವಾನಗಿ ಕೋರಿ ಟಾಟಾ ಕಂಪನಿ ಸಲ್ಲಿಸಿರುವ ಅರ್ಜಿಗೆ ಸಭೆಯಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಯಿತು.

ಖಾಸಗಿ ಕಂಪನಿಗಳು 'ಚೆರಿ–ಪಿಕಿಂಗ್' ಮಾಡಿ ಹೆಚ್ಚಿನ ಆದಾಯದ ನಗರ ಹಾಗೂ ವಾಣಿಜ್ಯ ಗ್ರಾಹಕರನ್ನು ಮಾತ್ರ ಗುರಿಯಾಗಿಸಿಕೊಂಡು, ನಷ್ಟದ ಗ್ರಾಮೀಣ ಮತ್ತು ಕೃಷಿ ಸಂಪರ್ಕಗಳನ್ನು ಸರ್ಕಾರಿ ಸ್ವಾಮ್ಯದ ಮೆಸ್ಕಾಂಗೆ ಬಿಡುವ ಉದ್ದೇಶ ಹೊಂದಿವೆ ಎಂದು ಆರೋಪಿಸಲಾಯಿತು.

ಮೆಸ್ಕಾಂ ಕಂದಾಯಕ್ಕೆ ಹೆಚ್ಚಿನ ಕೊಡುಗೆ ನೀಡುವ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರನ್ನು ಕಳೆದುಕೊಂಡರೆ ಮೆಸ್ಕಾಂನ ಆದಾಯ ಕುಸಿಯುತ್ತದೆ. ಇದರಿಂದ ಮೂಲಸೌಕರ್ಯ ನಿರ್ವಹಣೆ, ವಿಸ್ತರಣೆ ಹಾಗೂ ಎಲ್ಲರಿಗೂ ವಿದ್ಯುತ್ ಒದಗಿಸುವ



ಜವಾಬ್ದಾರಿ ನಿರ್ವಹಿಸಲು ಹಣ ಹೊಂದಿಸುವುದು ಕಷ್ಟವಾಗುತ್ತದೆ. ಕೊನೆಗೆ ಖಾಸಗಿಯವರಿಗೆ ಬದಲಾಯಿಸಲು ಸಾಧ್ಯವಾಗದ ಲಕ್ಷಾಂತರ ಗ್ರಾಮೀಣ ಗ್ರಾಹಕರು ದುರ್ಬಲಗೊಂಡ ಮೆಸ್ಕಾಂನ ಸೇವೆಯನ್ನೇ ಅವಲಂಬಿಸಬೇಕಾಗುತ್ತದೆ. ಇದರ ಜೊತೆಗೆ ಖಾಸಗೀಕರಣದಿಂದ ವಿದ್ಯುತ್ ದರ ಏರಿಕೆ, ಮೀಟರ್ ರೀಡಿಂಗ್ ಮತ್ತು ಬಿಲ್ ವಸೂಲಿಯಲ್ಲಿ ಖಾಸಗಿ ಕಂಪನಿಗಳ ಒತ್ತಡ, ಲೋಡ್ ಶೆಡ್ಡಿಂಗ್ ಹೆಚ್ಚಳ, ಉದ್ಯೋಗಿಗಳ ಉದ್ಯೋಗ ಭದ್ರತೆಗೆ ಧಕ್ಕೆ ಗ್ರಾಮೀಣ ಭಾಗದಲ್ಲಿ ಹೊಸ ಸಂಪರ್ಕ ಹಾಗೂ ದುರಸ್ತಿ ಕಾರ್ಯಗಳಿಗೆ ನಿರ್ಲಕ್ಷ್ಯ ಉಂಟಾಗುವ ಆತಂಕವೂ ಇದೆ. ಇದರ ಜೊತೆಗೆ ಗೃಹಬಳಕೆ ಗ್ರಾಹಕರಿಗೆ ವಾಣಿಜ್ಯ ಗ್ರಾಹಕರಿಂದ ಸಿಗುತ್ತಿರುವ ಕ್ರಾಸ್ ಸಬ್ಸಿಡಿ ನಿಲ್ಲುವುದರಿಂದ ಸಾಮಾನ್ಯ ಜನರ ಬಿಲ್ ದುಪ್ಪಟ್ಟಾಗುವ ಸಾಧ್ಯತೆ ಇದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

> **ಆಯೋಗಕ್ಕೆ ಮನವಿ ಸಲ್ಲಿಕೆ**
> ಲಾಭಕೋರ ಖಾಸಗಿ ಕಂಪನಿಗಳಿಗೆ ಸಾರ್ವಜನಿಕ ಆಸ್ತಿ ಒಪ್ಪಿಸುವುದರಿಂದ ಸೇವಾ ಗುಣಮಟ್ಟ ಕುಸಿದು ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತದೆ. ಟಾಟಾ ಪವರ್ ಅರ್ಜಿಯನ್ನು ತಕ್ಷಣ ತಿರಸ್ಕರಿಸಿ ಸಾರ್ವಜನಿಕ ವಲಯದ ಮೆಸ್ಕಾಂ ಅನ್ನು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಬಲಪಡಿಸಬೇಕು ಎಂದು ಸಭೆಯಲ್ಲಿ ಒಕ್ಕೊರಲ ಆಗ್ರಹಿಸಲಾಯಿತು. ಈ ಬಗ್ಗೆ ಸರ್ಕಾರಕ್ಕೆ ಹಾಗೂ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಲು ಸಭೆ ನಿರ್ಧರಿಸಿತು.

ಖಾಸಗೀಕರಣದಿಂದ ಗ್ರಾಹಕರಿಗೆ ಮತ್ತು ನೌಕರರಿಗೆ ಹೊರೆಯಾಗಲಿದೆ ಎಂದು ಅಧಿಕಾರಿಗಳು, ಗುತ್ತಿಗೆದಾರರು ಕಳವಳ ವ್ಯಕ್ತಪಡಿಸಿದರು.

- ಖಾಸಗೀಕರಣದಿಂದ ಮೆಸ್ಕಾಂಗೆ ಆದಾಯ ಕುಸಿಯುವ ಭೀತಿ
- ಖಾಸಗೀಕರಣದಿಂದ ವಿದ್ಯುತ್ ದರ ಏರಿಕೆ, ಮೀಟರ್ ರೀಡಿಂಗ್ ಮತ್ತು ಬಿಲ್ ವಸೂಲಿ, ದುರಸ್ತಿ ಕಾರ್ಯಗಳಿಗೆ ನಿರ್ಲಕ್ಷ್ಯ, ಖಾಸಗಿ ಕಂಪನಿಗಳ ಒತ್ತಡ ಹೆಚ್ಚಾಗುವ ಆತಂಕ

ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೆಸ್ಕಾಂ ಸುರತ್ಕಲ್ ಪ್ರತಾಪ್ ಎಂ, ಸಹಾಯಕ ಇಂಜಿನಿಯರ್ ತಾಂತ್ರಿಕ ಮೆಸ್ಕಾಂ ಸುರತ್ಕಲ್ ಸುಪ್ರೀತ್ ಎಸ್ ಸಾಲ್ಯಾನ್, ಶಾಖಾಧಿಕಾರಿ ಮೆಸ್ಕಾಂ ಕಾಟಿಪಳ್ಳ ಶಾಖೆ ಸುಜೀತ್, ಶಾಖಾಧಿಕಾರಿ ಮೆಸ್ಕಾಂ ಮುಕ್ಕ ಶಾಖೆ ಯಶೋಧರ, ಹಿರಿಯ ಸಹಾಯಕರು ಮೆಸ್ಕಾಂ ಸುರತ್ಕಲ್ ಶಾಂತಕುಮಾರ್ ಹಾಗೂ ವಿದ್ಯುತ್ ಗುತ್ತಿಗೆದಾರರ ಸಂಘ ಸುರತ್ಕಲ್ ಅಧ್ಯಕ್ಷ ಕುಸುಮಾಧರ್ ಉಪಸ್ಥಿತರಿದ್ದರು.

ಅಗ್ನಿವೀರ್‌ಗೆ ಆಯ್ಕೆಯಾದ ಉಪ್ಪಿನಂಗಡಿಯ ಪ್ರದೀಪ್ ಮನೆಗೆ ಕ್ಯಾ. ಚೌಟ ಭೇಟಿ

ಯುವಕರು ಸೇನೆಗೆ ಸೇರಲು ಉತ್ಸುಕರಾಗಬೇಕು

ಉಪ್ಪಿನಂಗಡಿ: ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾದ ಮೇಲೆ ದೇಶದ ಸೇನಾ ವ್ಯವಸ್ಥೆಗೆ ಹೆಚ್ಚಿನ ಬಲ ಬಂದಿದ್ದು, 2014ರಲ್ಲಿ 2 ಲಕ್ಷ 82 ಸಾವಿರ ಕೋಟಿ ಇದ್ದ ಸೇನಾ ಬಜೆಟ್ ಮೋದಿಯವರು ಪ್ರಧಾನಿಯಾದ ಬಳಿಕ 8 ಲಕ್ಷ ಕೋಟಿಗೆ ಬಂದು ನಿಂತಿದೆ ಎಂದು ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದರು.



ಅಗ್ನಿವೀರ್‌ಗೆ ಆಯ್ಕೆಯಾದ ಉಪ್ಪಿನಂಗಡಿಯ ಕೊಪ್ಪಳದ ಪ್ರದೀಪ್ ಎ.ಕೆ. ಅವರ ಮನೆಗೆ ಭೇಟಿ ನೀಡಿ ಸನ್ಮಾನಿಸಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರು ಸೈನಿಕರು ಮತ್ತು ಸೈನಿಕ ವ್ಯವಸ್ಥೆಗೆ ಕೊಟ್ಟ ಗೌರವ ಬೇರೆ ಯಾರೂ ಕೊಟ್ಟಿಲ್ಲ. ದೇಶದ ಸೇನೆಗೆ ಸೇರಲು ಯುವಕರು ಉತ್ಸುಕರಾಗಬೇಕು. ಪ್ರತಿ ಯೋರ್ವ ಮನೆ ಮಗನೂ ಸೇನೆ ಸೇರುವ ಮೂಲಕ ದೇಶ ಸೇವೆಗೆ ಅವಕಾಶ ಕಲ್ಪಿಸಬೇಕು ಎಂದರು.

ಪ್ರಧಾನಿ ಮೋದಿಯವರು ಅಗ್ನಿವೀರ್ ಯೋಜನೆ ಜಾರಿಗೆ ತಂದಿದ್ದಾರೆ. ಸೈನಿಕರಿಗಾಗಿ ಒನ್ ರ್‍ಯಾಂಕ್ ಒನ್ ಪೆನ್‌ಶನ್ ಅನ್ನು ಪೂರ್ಣಗೊಳಿಸಿದವರು ಮೋದಿಯವರು. ಇಂದು ನಮ್ಮ ದೇಶ ಶಸ್ತ್ರಾಸ್ತ್ರಗಳನ್ನು ತಾನೇ ಉತ್ಪಾದಿಸುವಷ್ಟು ಮುಂದುವರಿದಿದೆ. ನಮ್ಮ ಸೈನದಂತೆ ದೇಶ ಮೊದಲು ಎಂಬ ಪರಿಕಲ್ಪನೆ ಬಿಜೆಪಿ ಯವರದ್ದಾಗಿದೆ. ನಾನು ಕೂಡಾ ಓರ್ವ ನಿವೃತ್ತ ಸೇನಾನಿಯಾಗಿದ್ದು, ಈಗ ನನ್ನ ಸಮವಸ್ತ್ರ ಬದಲಾಗಿದ್ದರೂ ಪರಿಕಲ್ಪನೆ ಅದೇ ಆಗಿದೆ. ದೇಶ ಮೊದಲೆಂಬ ಪರಿಕಲ್ಪನೆ ಎಲ್ಲರಲ್ಲಿ ಬರಬೇಕು. ಈ ಅಗ್ನಿವೀರನನ್ನು ಸನ್ಮಾನಿಸುವ ಮೂಲಕ ರಾಷ್ಟ್ರಕ್ಕೆ ಸಲ್ಲಿಸುವ ಗೌರವವಾಗಿದೆ ಎಂದರು.

ಇದೇ ವೇಳೆ ಸ್ಥಳದಲ್ಲಿದ್ದ ಎಂಟು ವರ್ಷಗಳಿಂದ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಸಂದೀಪ್ ಪೂಜಾರಿ ನೆಕ್ಕಿಲ್ ಅವರನ್ನು ಗೌರವಿಸಿದ ಸಂಸದರು ಉಭಯ ಕುಶಲೋಪರಿ ವಿಚಾರಿಸಿದರು.

ಮಾಜಿ ಶಾಸಕ ಸಂಜೀವ ಮಠಂದೂರು, ಬಿಜೆಪಿ ಜಿಲ್ಲಾ ಪ್ರಕೋಷ್ಠದ ಸಂಯೋಜಕ ಪ್ರಸನ್ನ ದರ್ಬೆ, ಬಿಜೆಪಿ ಗ್ರಾಮಾಂತರ ಮಂಡಲದ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು, ಪ್ರಧಾನ ಕಾರ್ಯದರ್ಶಿಗಳಾದ ಲೋಕೇಶ್ ಚಾಕೋಟೆ, ಸುನೀಲ್ ಕುಮಾರ್ ದಡ್ಡು, ಉಪಾಧ್ಯಕ್ಷರಾದ ಹರಿಪ್ರಸಾದ್ ಯಾದವ್, ನಾಗೇಶ್ ಟಿ.ಎಸ್., ವಿರೂಪಾಕ್ಷ ಭಟ್, ವಿದ್ಯಾಧರ ಜೈನ್, ಬಿಜೆಪಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್ ಅತ್ರಮಜಲು, ಬಿಜೆಪಿ ಮುಖಂಡರಾದ ರಾಮಚಂದ್ರ ಮಣಿಯಾಣಿ, ನಿತೀಶ್ ಶಾಂತಿವನ, ಪುರುಷೋತ್ತಮ ಮುಂಗ್ಲಿಮನೆ, ಚಂದ್ರಶೇಖರ ಬಪ್ಪಳಿಗೆ, ಪುನೀತ್ ಮಾಡತ್ತಾರು, ಮುಕುಂದ ಬಜತ್ತೂರು, ಉಷಾ ಚಂದ್ರ ಮುಳಿಯ, ಶಿಶಿರ್ ಪೆರೋಡಿ, ರಾಜೇಶ್ ರೈ ಪರ್ಪುಂಜ, ಮಹೇಶ್ ಕೇರಿ, ಲಕ್ಷ್ಮಣ ಗೌಡ ಬೆಳ್ಳಿಪ್ಪಾಡಿ, ಮೋಹನ್ ಪಕ್ಕಳ, ಸದಾನಂದ ಪೂಜಾರಿ, ಪ್ರದೀಪ್‌ನ ತಾಯಿ ವಿನೋದಾ, ಸಹೋದರಿಯರಾದ ಚೈತ್ರಾ, ಧನ್ಯ, ಶೋಭಾ ಕೊಪ್ಪಳ, ಪ್ರಮುಖರಾದ ಪ್ರವೀಣ್ ನೆಕ್ಕಿಲ್, ಚಂದ್ರಶೇಖರನಲಿಕೆಮಜಲು,ಆದಂಕೊಪ್ಪಳ, ಸುನೀಲ್ ಕೊಪ್ಪಳ, ವಿಜಯ, ಶ್ರೀನಿವಾಸ ಬೊಳ್ಳಾವು, ಯಜ್ಞಶ್ರೀ, ರವಿ ಕೊಪ್ಪಳ, ನಾಸೀರ್, ಮೋಕ್ಷಿತ್, ಶರತ್, ದೀಕ್ಷಿತ್, ನಾಸೀರ್ ಮಠ, ರಮೇಶ್ ನೈಕುಳಿ, ರವಿ ಮತ್ತಿತರರು ಉಪಸ್ಥಿತರಿದ್ದರು.

ಬಂಟ್ವಾಳ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆ

ಇನ್ಮುಂದೆ ಬುರ್ದುವರೆಗೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ

ಬಂಟ್ವಾಳ: ಪುತ್ತೂರಿನಿಂದ ಬರಿಮಾರು ತನಕ ಸಂಚರಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಶನಿವಾರದಿಂದ ಬುರ್ದುವರೆಗೆ ಸಂಚರಿಸಲಿದೆ ಎಂದು ಕೆಎಸ್‌ಆರ್‌ಟಿಸಿ ಬಿ.ಸಿ.ರೋಡ್ ಘಟಕದ ವ್ಯವಸ್ಥಾಪಕ ಇಸ್ಮಾಯಿಲ್ ತಿಳಿಸಿದ್ದಾರೆ.



ಶುಕ್ರವಾರದಂದು ಬಂಟ್ವಾಳ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಪುತ್ತೂರಿನಿಂದ ಬರಿಮಾರು ತನಕ ಸಂಚರಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಬುರ್ದುವರೆಗೆ ಸಂಚರಿಸಲಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಬಂಟ್ವಾಳ ತಾಲೂಕು ಮಟ್ಟದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷೆ ಜಯಂತಿ ವಿ.ಪೂಜಾರಿ ಮಾತನಾಡಿ, ಎಪ್ರಿಲ್ ತಿಂಗಳಿನಲ್ಲಿ ನಡೆದ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಬುರ್ದುವರೆಗೆ ಸಂಚರಿಸುವ ಬಗ್ಗೆ ನಿರ್ಣಯಿಸಿ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು,ಇದಕ್ಕೆ ಸ್ಪಂದಿಸಿದ ಅಧಿಕಾರಿಗಳು ಸಾರ್ವಜನಿಕರಿಗೆ ಬಸ್ ಸೌಲಭ್ಯ ಕಲ್ಪಿಸಿದ್ದು, ಈ ವಿಚಾರದಲ್ಲಿ ಸಮಿತಿಯ ಎಲ್ಲಾ ಸದಸ್ಯರ ಸಹಕಾರಕ್ಕೂ ಕೃತಜ್ಞತೆ ಸಲ್ಲಿಸಿದರು.

ಗೃಹಲಕ್ಷ್ಮೀ ಯೋಜನೆಯಿಂದ ಹೊರಗುಳಿದವರಿಗೆ ಯೋಜನೆಯ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಗ್ರಾಮ ಮಟ್ಟದಲ್ಲಿ ಅರ್ಹ ಗೃಹಲಕ್ಷ್ಮೀ ಫಲಾನುಭವಿಗಳ ಸೇರ್ಪಡೆ, ಅರ್ಜಿ ಸಲ್ಲಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಜಯಂತಿ ವಿ.ಪೂಜಾರಿ ತಿಳಿಸಿದ್ದಾರೆ.

> **ಗೃಹಲಕ್ಷ್ಮೀಗೆ ಸೇರ್ಪಡೆ**
> ಬಂಟ್ವಾಳ ತಾಲೂಕಿನಲ್ಲಿ ಗೃಹಲಕ್ಷ್ಮೀ ಯೋಜನೆಯಿಂದ ಹೊರಗುಳಿದವರಿಗೆ ಸೌಲಭ್ಯ ಸಿಗುವಲ್ಲಿ ಶೇ.100ರಷ್ಟು ಗುರಿ ಸಾಧಿಸುವ ಉದ್ದೇಶ ಹೊಂದಿದ್ದು, ಈ ನಿಟ್ಟಿನಲ್ಲಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಅರ್ಹ ಗೃಹಲಕ್ಷ್ಮೀ ಫಲಾನುಭವಿಗಳ ಸೇರ್ಪಡೆ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಪ್ರಚಾರ ಹಮ್ಮಿಕೊಳ್ಳಬೇಕು.
> ● ಜಯಂತಿ ವಿ.ಪೂಜಾರಿ

- ಪುತ್ತೂರಿನಿಂದ ಬರಿಮಾರು ತನಕ ಸಂಚರಿಸುತ್ತಿದ್ದ ಬಸ್
- ಇಂದಿನಿಂದ ಬುರ್ದುವರೆಗೆ ಕೆಎಸ್‌ಆರ್‌ಟಿಸಿ ಬಸ್ ಸಂಚಾರ
- ಗೃಹಲಕ್ಷ್ಮೀ ಫಲಾನುಭವಿಗಳ ಸೇರ್ಪಡೆಗೆ ಅರ್ಜಿ ಸಲ್ಲಿಕೆ

ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ, ಗ್ಯಾರಂಟಿ ಅನುಷ್ಠಾನ ಸಮಿತಿ ಕಾರ್ಯದರ್ಶಿ ಸಚಿನ್ ಕುಮಾರ್, ಜಿಲ್ಲಾ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ನಾರಾಯಣಾ ನಾಯ್ಕ್, ಸಮಿತಿ ಸದಸ್ಯರು ಹಾಗೂ ಪಂಚ ಗ್ಯಾರಂಟಿ ಅನುಷ್ಠಾನ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ವೀರಾಜಪೇಟೆ ಕ್ಷೇತ್ರ: ಪೊನ್ನಪ್ಪಸಂತೆ-ಬಾಳೆಲೆ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ



ಗೋಣಿಕೊಪ್ಪ: ವೀರಾಜಪೇಟೆ ವಿಧಾನ ಸಭಾ ಕ್ಷೇತ್ರದ ಪೊನ್ನಂಪೇಟೆ ತಾಲೂಕಿನ ಪೊನ್ನಪ್ಪಸಂತೆಯಿಂದ ಬಾಳೆಲೆಗೆ ಹೋಗುವ ಮಾರ್ಗದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್. ಪೊನ್ನಣ್ಣ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಶೀಘ್ರದಲ್ಲೇ ಕಾಮಗಾರಿ ಪ್ರಾರಂಭ
ಸುಮಾರು 2. 30ಕೋಟಿ ವೆಚ್ಚದಲ್ಲಿ ಈ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಸದ್ಯದಲ್ಲೇ ಈ ಕಾಮಗಾರಿ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

ಹುದಿಕೇರಿ ರಸ್ತೆಗೆ 2.80. ಕೋಟಿ
ಪೊನ್ನಂಪೇಟೆ ತಾಲೂಕಿನ ಮಾಪಿಳೆತೋಡು–ಹುದಿಕೇರಿ ನಡುವಿನ ರಸ್ತೆ ಅಭಿವೃದ್ಧಿಗೂ ಶಾಸಕ ಪೊನ್ನಣ್ಣ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು. ಈ ರಸ್ತೆ ಯನ್ನು 2.80 ಕೋಟಿ ರೂ.ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರಿರ ನವೀನ್, ತಾಲೂಕು ಪ್ರಚಾರ ಸಮಿತಿಯ ಅಧ್ಯಕ್ಷ ಟಾಟು ಮೊಣ್ಣಪ್ಪ ವಲಯ ಅಧ್ಯಕ್ಷ ಚೆಟ್ಟಿಮಾಡ ರಾಬಿನ್, ಹಿರಿಯರಾದ ಮೂಕಳೇರ ಕುಶಾಲಪ್ಪ ಜಿಮ್ಮಿ ಅಯ್ಯಣ್ಣ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಂಡ ಧ್ಯಾನ್ ದೇವಯ್ಯ, ಕೊಣಿಯಂಡ ಸೋಮಣ್ಣ ಬಾಳೆಲೆ ವಲಯ ಅಧ್ಯಕ್ಷ ಕೋದಂಡ ಸೋಮಣ್ಣ ನಲ್ಲೂರು ಬೂತ್ ಅಧ್ಯಕ್ಷ ಬೋಡಂಗಡ ಅಶೋಕ್, ಪುಳ್ಳಂಗಡ ದಿನೇಶ್, ಅರಮಾಣಮಾಡ ಕುಶ, ಪಕ್ಷದ ಮುಖಂಡರಾದ ಎನು ಉತ್ತಪ್ಪ, ಮಚ್ಚಮಾಡ ಮನು, ಅಣ್ಣಳಮಾಡ ಹರೀಶ್, ಗಿರೀಶ್, ಅಜ್ಜಿಕುಟ್ಟಿರ ಪೊನ್ನಪ್ಪ ಕೇಚಮಾಡ ಸಿದ್ದು ನಾಚಪ್ಪ, ಕುಂಡಚ್ಚಿರ ಮಂಜು ದೇವಯ್ಯ, ತಾಣಚ್ಚಿರ ನಿಖಿಲ್ ಸೋಮಣ್ಣ ರೈತ ಸಂಘದ ಪ್ರಮುಖರು ಹಾಜರಿದ್ದರು.

ಮನೆ ಚೆನ್ನಾಗಿದ್ದರೆ ನಮ್ಮ ಮನಸು ಚೆನ್ನಾಗಿರುತ್ತದೆ: ಕುಮಾರ್ ಬಿ.ಆರ್.



ಕಾವೂರು: ಮಹಿಳಾ ಗೃಹ ಕಾರ್ಮಿಕರ ಸಬಲೀಕರಣ ಯೋಜನೆ ಸೇವಕ ಮಂಗಳೂರು ಇದರ ವತಿಯಿಂದ ಅಂತಾರಾಷ್ಟ್ರೀಯ ಗೃಹ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಕಾವೂರು ಸೊಸೈಟಿ ಹಾಲ್‌ನಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಕಾರ್ಮಿಕ ಇಲಾಖೆಯ ಅಧಿಕಾರಿ ಕುಮಾರ್ ಬಿ.ಆರ್. ಅವರು, ಮನೆ ಚೆನ್ನಾಗಿದ್ದರೆ ನಮ್ಮ ಮನಸ್ಸು ಚೆನ್ನಾಗಿರುತ್ತದೆ, ಇಡೀ ಪ್ರಪಂಚ ಚೆನ್ನಾಗಿರುತ್ತದೆ. ಇದಕ್ಕೆಲ್ಲ ಕಾರಣ ಗೃಹ ಕಾರ್ಮಿಕರು ಎಂದು ಶ್ಲಾಘಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ವಕೀಲೆ ಮಾನಸ ಹೆಗಡೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಗೃಹ ಕಾರ್ಮಿಕರಿಗೆ ಕಾನೂನು ಮಾಹಿತಿ ಮತ್ತು ಅರಿವು ಮೂಡಿಸಿದರು.

ಸಮಾಜ ಸೇವಕಿ ನಂದಪಾಯಸ್, ನಂದಿನಿ ಮಹಿಳಾ ಮಂಡಲ ಅಧ್ಯಕ್ಷೆ ಗೀತಾ ಶೇಖರ್, ಸ್ತ್ರೀ ಜಾಗೃತಿ ಸಮಿತಿ ಹಾಗೂ ಸೇವಕ ಮಹಿಳಾ ಗೃಹ ಕಾರ್ಮಿಕರ ಸಬಲೀಕರಣ ಯೋಜನೆಯ ಸಂಚಾಲಕಿ ಡಾ. ಸಂಶದ್, ಸಂಘದ ಅಧ್ಯಕ್ಷೆ ಸೀತಾಮ್ಮ, ಕಾರ್ಯದರ್ಶಿ ಕವಿತಾ ಶ್ರೀರಾಮ್ ಉಪಸ್ಥಿತರಿದ್ದರು.

ಹನಿಷ ಸವಾದ್ ಕಾರ್ಯಕ್ರಮ ನಿರೂಪಿಸಿದರು. ಸದಸ್ಯೆ ಮಲಾರ್ ಸ್ವಾಗತಿಸಿದರು. ಕವಿತಾ ರಾಜೇಂದ್ರ ವಂದಿಸಿದರು.

> **ಮನವಿ ಸಲ್ಲಿಕೆ**
> ಗೃಹ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮತ್ತು ದೂರು ನಿವಾರಣ ಕೇಂದ್ರವನ್ನು ಸ್ಥಾಪಿಸುವಂತೆ ಒತ್ತಾಯಿಸಿ ಕಾರ್ಮಿಕ ಅಧಿಕಾರಿ ಕುಮಾರ್ ಬಿ.ಆರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ನಾಯರ್ ಸರ್ವಿಸ್ ಸೊಸೈಟಿ: ಮಂಗಳೂರು ಘಟಕದ ಸಭೆ



ಮಂಗಳೂರು: ಕರ್ನಾಟಕ ನಾಯರ್ ಸರ್ವಿಸ್ ಸೊಸೈಟಿ ಮಂಗಳೂರು ಘಟಕದ ಸಾಮಾನ್ಯ ಸಭೆ ಮಂಗಳೂರಿನ ಕೆ.ಪಿ.ಟಿ ಬಳಿಯಿರುವ ಎಸ್. ಕ್ಯೂಬ್ ಸೆಂಟರ್ ಸಭಾಂಗಣದಲ್ಲಿ ಜರುಗಿತು.

ಬಳಿಕ ಪದಾಧಿಕಾರಿಗಳ ಆಯ್ಕೆ ನಡೆಯಿತು. ಮುಂದಿನ 2026– 28ನೇ ಅವಧಿಗೆ ಅಧ್ಯಕ್ಷರಾಗಿ ಮುರಳಿ ಹೊಸ ಮಜಲು, ಕಾರ್ಯದರ್ಶಿಯಾಗಿ ವಿ.ಎಂ. ಸತೀಶನ್ ಪುನರಾಯ್ಕೆಗೊಂಡರು. ಖಜಾಂಚಿಯಾಗಿ ಅಜಯ ಕುಮಾರ್, ಉಪಾಧ್ಯಕ್ಷರಾಗಿ ವಾಸಂತಿ ನಾಯರ್, ಜತೆ ಕಾರ್ಯದರ್ಶಿಯಾಗಿ ಮಂಜು ಅಜಿತ್, ಜತೆ ಖಜಾಂಚಿಯಾಗಿ ರವೀಂದ್ರ ನಾಥ್, ಬೋರ್ಡ್ ಸದಸ್ಯರಾಗಿ ವಿಜಯ ಕುಮಾರ್, ಎಂ.ವಿ. ರಾಜನ್, ಎ.ಎಸ್. ಮೋಹನ್, ಸಮಿತಿಯ ಸದಸ್ಯರಾಗಿ ಜೋತಿಷ್ ಕುಮಾರ್, ಜಯಲಕ್ಷ್ಮೀ ಚಂದ್ರಮೋಹನ್, ಮಣಿಕಂಠನ್, ವಿನೋದ್ ರಾಜ್, ಹರೀಶ್ ಗೋವಿಂದ್, ದೇವರಾಜ್, ವಿನಯನ್ ನಾಯರ್ ಆಯ್ಕೆಗೊಂಡರು.

ಮಹಿಳಾ ವಿಭಾಗಕ್ಕೆ ಆಯ್ಕೆ
ಮಹಿಳಾ ವಿಭಾಗದ ಅಧ್ಯಕ್ಷರಾಗಿ ಸುಜಾತಾ ನಾಯರ್, ಕಾರ್ಯದರ್ಶಿಯಾಗಿ ಶ್ರೀಜಾ ನಂಬಿಯಾರ್ ಹಾಗೂ ಖಜಾಂಚಿಯಾಗಿ ಗೋಪಿಕಾ ರಾಣಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಪ್ರಭಾ ವಿಜಯಕುಮಾರ್, ಜತೆ ಕಾರ್ಯದರ್ಶಿಯಾಗಿ ಅನಿತಾ ಜಯ ಚಂದ್ರನ್ ಆಯ್ಕೆಯಾಗಿದ್ದಾರೆ.

ಚುನಾವಣಾ ಅಧಿಕಾರಿಯಾಗಿ ಉಡುಪಿ ಘಟಕದ ಸಜಿ ಪಿಳ್ಳೈ ಹಾಗೂ ವೀಕ್ಷಕರಾಗಿ ಮೋಹನ್ ದಾಸ್ ಉಡುಪಿ ಭಾಗವಹಿಸಿದ್ದರು.

ಪುತ್ತೂರು ತಾಲೂಕು ವ್ಯಾಪ್ತಿಯ ಮೂರು ವಸತಿ ನಿಲಯಗಳಿಗೆ ಕಾನೂನು ಸೇವಾ ಸಮಿತಿಯ ಅಧ್ಯಕ್ಷರ ಭೇಟಿ

ಹಾಸ್ಟೆಲ್‌ನ ಮೂಲಭೂತ ಸೌಕರ್ಯಗಳ ಪರಿಶೀಲನೆ, ಮಾಹಿತಿ ಸಂಗ್ರಹ

ಪುತ್ತೂರು: ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ ಹಾಗೂ ಸದಸ್ಯ ಕಾರ್ಯದರ್ಶಿ ಶ್ವೇತಾ ಜೆ. ಅವರು ಪುತ್ತೂರು ತಾಲೂಕು ವ್ಯಾಪ್ತಿಗೆ ಬರುವ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನವರ ಮೂರು ವಸತಿನಿಲಯಗಳಿಗೆ ಭೇಟಿ ನೀಡಿ, ಅಲ್ಲಿನ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು.

ಹಾರಾಡಿ ವಿದ್ಯಾರ್ಥಿ ನಿಲಯಕ್ಕೆ ಭೇಟಿ
ಹಾರಾಡಿಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಭೇಟಿನೀಡಿದ ಸಂದರ್ಭ, ವಾರ್ಡನ್ ಅನುಪಸ್ಥಿತಿ ಇದ್ದು ಸಹಾಯಕಿ ಹಾಗೂ ಅಡುಗೆಯವರು ಹಾಜರಿದ್ದರು. ಈ ವೇಳೆ ಹಾಸ್ಟೆಲಿನ ವಿವಿಧ ಕೊಠಡಿಗಳನ್ನು ಪರಿ





ಶೀಲಿಸಿದಾಗ ಸ್ವಚ್ಛತೆಯನ್ನು ಕಾಪಾಡಿಕೊಂಡು ಬಂದಿರುವುದು ಗಮನಿಸಿದರು. ದಾಸ್ತಾನು ಕೊಠಡಿಯಲ್ಲಿ ವಾರಾಂತ್ಯದ ಕಾರಣ ತರಕಾರಿಗಳ ಕೊರತೆ ಕಂಡು ಬಂತು. ವಿದ್ಯಾರ್ಥಿನಿಯರು ಹಾಸ್ಟೆಲ್ ಕುರಿತು ಒಳ್ಳೆಯ ಅಭಿಪ್ರಾಯ ನೀಡಿದರು.

ಬನ್ನೂರಿನ ವಿದ್ಯಾರ್ಥಿ ನಿಲಯಕ್ಕೆ ಭೇಟಿ
ಬಳಿಕ ಬನ್ನೂರಿನಲ್ಲಿರುವ ದೇವರಾಜು ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಮಕ್ಕಳಿಂದ ಹಾಸ್ಟೆಲ್ ವ್ಯವಸ್ಥೆಯ ಕುಂದು ಕೊರತೆಗಳ ಬಗ್ಗೆ ತಿಳಿದುಕೊಂಡ ಸಮಿತಿಯು, ವಾರ್ಡ್ ಮೇಲ್ವಿಚಾರಕರಲ್ಲಿ ಮಾತುಕತೆ ನಡೆಸಿ, ಮಕ್ಕಳ ಬಗ್ಗೆ ಮುಂಜಾಗ್ರತೆ ವಹಿಸಲು ಬೇಕಾದ ವ್ಯವಸ್ಥೆಗಳನ್ನು ಮಾಡಿಸಿಕೊಳ್ಳುವಂತೆ ತಿಳಿಸಿದರು. ಮಕ್ಕಳ ವಿದ್ಯಾಭ್ಯಾಸಕ್ಕೆ ಕುಂದು ಬಾರದಂತೆ ವಿದ್ಯುತ್ ಇಲ್ಲದಾಗ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಮೇಲ್ವಿಚಾರಕರಲ್ಲಿ ಚರ್ಚಿಸಿದರು.

ಬಳಿಕ ಸುತ್ತಮುತ್ತಲ ಪ್ರದೇಶದ ಬಗ್ಗೆ ಗಮನಿಸಿದ ನ್ಯಾಯಾಧೀಶರು, ಆದಷ್ಟು ಬೇಗನೆ ಬೇರೆ ಉತ್ತಮ ಕಟ್ಟಡಕ್ಕೆ ಸ್ಥಳಾಂತರಿಸುವ ಬಗ್ಗೆಯೂ ಮನವರಿಕೆ ಮಾಡಿದರು. ಉತ್ತಮ ಕಾರ್ಯನಿರ್ವಹಣೆಯ ಸಲುವಾಗಿ ಪ್ರಸ್ತುತ ಕಾರ್ಯನಿರ್ವಹಿಸುವ ಹಾಸ್ಟೆಲ್ ಮೇಲ್ವಿಚಾರಕರನ್ನು ನ್ಯಾಯಾಲಯದಲ್ಲಿ ಭೇಟಿಯಾಗುವಂತೆ ತಿಳಿಸಿದರು.

ಕೊಂಬೆಟ್ಟು ನಿಲಯಕ್ಕೆ ಭೇಟಿ
ಕೊಂಬೆಟ್ಟುವಿನಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ದಾಸ್ತಾನು ಕೊಠಡಿ ಪರಿಶೀಲನೆ ನಡೆಸಿದ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ, ಮಕ್ಕಳಿಂದ ಊಟೋಪಚಾರದ ಬಗ್ಗೆ ವಿಚಾರಿಸಿ ಮಕ್ಕಳ ಹಿತದೃಷ್ಟಿಯಿಂದ ಉತ್ತಮ ಕಾರ್ಯನಿರ್ವಹಣೆಯ ಸಲುವಾಗಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್ ಮೇಲ್ವಿಚಾರಕರನ್ನು ನ್ಯಾಯಾಲಯದಲ್ಲಿ ಭೇಟಿಯಾಗುವಂತೆ ತಿಳಿಸಿದರು.

ಸುತ್ತ ಮುತ್ತ

ಡೇಟಾ ಎಂಟ್ರಿ ಆಪರೇಟರ್ ನೇಮಕಾತಿ

ಕಾಸರಗೋಡು: ಪರಿಶಿಷ್ಟ ಪಂಗಡ ಅಭಿವೃದ್ಧಿ ಇಲಾಖೆಯಡಿ ಕಾಸರಗೋಡು ಪರಿಶಿಷ್ಟ ಅಭಿವೃದ್ಧಿ ಕಚೇರಿಯಡಿ ಸಹಾಯ ಕೇಂದ್ರಗಳಲ್ಲಿ ಡೇಟಾ ಎಂಟ್ರಿ ಆಪರೇಟರ್‌ಗಳ ನೇಮಕಾತಿಗಾಗಿ ಸಂದರ್ಶನವು ಜೂ.22ರಂದು ಬೆಳಿಗ್ಗೆ 10 ಗಂಟೆಗೆ ಕಾಸರಗೋಡು ಪರಿಶಿಷ್ಟ ಅಭಿವೃದ್ಧಿ ಕಚೇರಿಯಲ್ಲಿ ನಡೆಯಲಿದೆ. ಪರಪ್ಪ ಬ್ಲಾಕ್ ಪಂಚಾಯತ್ ವ್ಯಾಪ್ತಿಯಲ್ಲಿ ವಾಸಿಸುವವರನ್ನು ಹೊರತುಪಡಿಸಿ ಜಿಲ್ಲೆಯ ಪರಿಶಿಷ್ಟ ಪಂಗಡದ ಯುವಕರು ಭಾಗವಹಿಸಬಹುದು. ಕಾಸರಗೋಡು, ನೀಲೇಶ್ವರ, ಎಣ್ಮಕಜೆ ಪರಿಶಿಷ್ಟ ವಿಸ್ತರಣಾ ಕಚೇರಿಗಳು ಮತ್ತು ಕಾಸರಗೋಡು ಪರಿಶಿಷ್ಟ ಅಭಿವೃದ್ಧಿ ಕಚೇರಿಗಳಲ್ಲಿ ನೇಮಕಾತಿ ನಡೆಯಲಿದೆ. ಪದವಿ, ಕಂಪ್ಯೂಟರ್ ಜ್ಞಾನ, ಡಿಸಿಎ ಮತ್ತು ಡೇಟಾ ಎಂಟ್ರಿ ಆಪರೇಟರ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿದವರಿಗೆ ಆದ್ಯತೆ ನೀಡಲಾಗುವುದು. ವಯೋಮಿತಿ 18–35 ಆಗಿದೆ. ಹೆಚ್ಚಿನ ವಿವರಗಳಿಗೆ 04994 255466 ಕರೆ ಮಾಡಬಹುದು.

ಮಕ್ಕಳ ಉಚಿತ ಆಧಾರ್ ನೋಂದಣಿ

ಕಾಸರಗೋಡು: ಮಕ್ಕಳ ಆಧಾರ್ ನೋಂದಣಿ (5 ವರ್ಷಗಳು) ಉಚಿತವಾದ್ದು ಎಲ್ಲರಿಗೂ ಲಭ್ಯವಿದೆ. ಆಧಾರ್ ಪಡೆಯಲು ಮಗುವಿನ ಜನನ ಪ್ರಮಾಣಪತ್ರ ಮತ್ತು ಪೋಷಕರಲ್ಲಿ ಒಬ್ಬರ ಆಧಾರ್ ಸಂಖ್ಯೆ ಅಗತ್ಯವಿದೆ. ಮಗುವಿಗೆ ಐದು ವರ್ಷ ತುಂಬಿದಾಗ ಬಯೋಮೆಟ್ರಿಕ್ ನವೀಕರಣ ಕಡ್ಡಾಯವಾಗಿದೆ.

ಮಕ್ಕಳಿಗೆ ಆಧಾರ್ ನೋಂದಣಿ ಸೇವೆ ಎಲ್ಲಾ ಆಧಾರ್ ಕೇಂದ್ರಗಳಲ್ಲಿ ಲಭ್ಯವಿದೆ. 2026ರ ವರೆಗೆ ಕಡ್ಡಾಯ ಬಯೋಮೆಟ್ರಿಕ್ ನವೀಕರಣ ಉಚಿತವಾಗಿದ್ದು ಮಕ್ಕಳು ಐದು ಮತ್ತು 15 ವರ್ಷ ವಯಸ್ಸಿನಲ್ಲಿ ತಮ್ಮ ಬಯೋಮೆಟ್ರಿಕ್ ವಿವರಗಳನ್ನು ನವೀಕರಿಸಬೇಕು. ಐದು ವರ್ಷ ಪೂರ್ಣಗೊಂಡ ನಂತರ 17 ವರ್ಷದ ವರೆಗಿನ ಮಕ್ಕಳು 2026ರ ವರೆಗೆ ಈ ಕಡ್ಡಾಯ ಬಯೋಮೆಟ್ರಿಕ್ ನವೀಕರಣವನ್ನು ಉಚಿತವಾಗಿ ಮಾಡಬಹುದು. ಬಯೋಮೆಟ್ರಿಕ್ ನವೀಕರಣವನ್ನು ಮಾಡದಿದ್ದರೆ ವಿವಿಧ ಸರಕಾರಿ ಸೇವೆಗಳು, ಶಾಲಾ ಮತ್ತು ಕಾಲೇಜು ಪ್ರವೇಶಗಳು, ಡಿಜಿಲಾಕರ್, ಪಾನ್ ಕಾರ್ಡ್, ಸ್ಪರ್ಧಾತ್ಮಕ ಪರೀಕ್ಷೆಗಳು ಇತ್ಯಾದಿಗಳಿಗೆ ಆಧಾರ್ ಬಳಸುವಲ್ಲಿ ತೊಂದರೆಗಳನ್ನು ಎದುರಿಸುವ ಸಾಧ್ಯತೆಯಿದೆ.ಹೊಸ ಆಧಾರ್ ನೋಂದಣಿ, ಬಯೋಮೆಟ್ರಿಕ್ ನವೀಕರಣ, ಮೊಬೈಲ್/ಇ-ಮೇಲ್ ಬದಲಾವಣೆ ಮುಂತಾದ ಎಲ್ಲಾ ಸೇವೆಗಳು ಜಿಲ್ಲೆಯ ಎಲ್ಲಾ ಅಕ್ಷಯ ಕೇಂದ್ರಗಳು ಮತ್ತು ಇತರ ಅಧಿಕೃತ ಆಧಾರ್ ಕೇಂದ್ರಗಳಲ್ಲಿ ಲಭ್ಯವಿವೆ. ಹೆಚ್ಚಿನ ವಿವರಗಳಿಗೆ ಟೋಲ್ ಫ್ರೀ ಸಂಖ್ಯೆ 1800–4251–1800, ದೂರವಾಣಿ 0471–2335523, ಕೇರಳ ರಾಜ್ಯ ಐಟಿ ಮಿಷನ್ ಆಧಾರ್ ಸಹಾಯವಾಣಿ 0471–2525442 ಕರೆ ಮಾಡಬಹುದು.

ಕಾಸರಗೋಡು ಕೋ ಆಪರೇಟಿವ್ ಬ್ಯಾಂಕ್‌ನ ನೂತನ ಶಾಖೆ ಉದ್ಘಾಟನೆ

ಕಾಸರಗೋಡು: ಬೋವಿಕ್ಕಾನದ ಬಿ.ಕೆ. ಕಾಂಪ್ಲೆಕ್ಸ್‌ನಲ್ಲಿ ಪ್ರಾರಂಭಗೊಳ್ಳುವ ಕಾಸರಗೋಡು ಕೋ ಆಪರೇಟಿವ್ ಟೌನ್ ಬ್ಯಾಂಕ್‌ನ ನೂತನ ಶಾಖೆಯನ್ನು ಜೂ.22ರಂದು ಬೆಳಿಗ್ಗೆ 10 ಗಂಟೆಗೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ದೀಪ ಬೆಳಗಿ ಉದ್ಘಾಟಿಸುವರು. ಉದುಮ ಶಾಸಕ ಕೆ.ನೀಲಕಂಠನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಬ್ಯಾಂಕ್‌ನ ಅಧ್ಯಕ್ಷ ವಕೀಲ ಕೆ.ಕರುಣಾಕರನ್ ನಂಬ್ಯಾರ್ ಅಧ್ಯಕ್ಷತೆ ವಹಿಸುವರು. ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಬಿ.ಮುಹಮ್ಮದ್ ಕುಂಞಿ ಕೌಂಟರ್ ಉದ್ಘಾಟಿಸುವರು. ಕಾಸರಗೋಡು ಕೋ ಆಪರೇಟಿವ್ ಸೊಸೈಟೀಸ್ (ಜನರಲ್) ಅಸಿಸ್ಟೆಂಟ್ ರಿಜಿಸ್ಟ್ರಾರ್ ಸಿ.ವಿನೋದ್ ಕುಮಾರ್ ಸ್ಟ್ರಾಂಗ್ ರೂಮ್ ಉದ್ಘಾಟಿಸುವರು. ವಿವಿಧ ವಲಯಗಳ ಗಣ್ಯರು ಭಾಗವಹಿಸುವರು.

ಗರ್ಭಕಂಠ ಕ್ಯಾನ್ಸರ್ ವಿರುದ್ಧ ಎಚ್‌ಪಿವಿ ಲಸಿಕೆ ಅಭಿಯಾನ

ಕೈಕಂಬ: ಕ್ಯಾನ್ಸರ್ ಜಾಗತಿಕವಾಗಿ ಸಾರ್ವಜನಿಕ ಆರೋಗ್ಯಕ್ಕೆ ಒಂದು ಪ್ರಮುಖ ಸವಾಲಾಗಿದ್ದು ವಿವಿಧ ರೀತಿಯ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಮಹಿಳೆಯರಲ್ಲಿ ಸಾವಿಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.ಗರ್ಭಕಂಠದ ಕ್ಯಾನ್ಸರ್ ಹ್ಯೂಮನ್ ಪ್ಯಾಪಿಲೋಮ ವೈರಸ್ (HPV) ನಿಂದ ಹರಡುವ ಖಾಯಿಲೆಯಾಗಿದ್ದು ಆರಂಭಿಕ ಹಂತದಲ್ಲಿ ಇದು ಯಾವುದೇ ಗುಣ ಲಕ್ಷಣಗಳನ್ನು ತೋರಿಸುವುದಿಲ್ಲ ಹಂತ ಹಂತವಾಗಿ ನೀರಿನಂತಹ ವಾಸನೆಯುಕ್ತ ಋತುಬಂಧದ ನಂತರದ ರಕ್ತಸ್ರಾವ, ಪೆಲ್ವಿಕ್ ನೋವು ಮತ್ತು ಸ್ಪರ್ಶದ ಮೇಲೆ ರಕ್ತಸ್ರಾವ ಕಂಡು ಬರುತ್ತವೆ.

HPV ಲಸಿಕೆ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವಲ್ಲಿ ಪ್ರಮುಖ ಲಸಿಕೆ ಎಂದು ಗುರುತಿಸಲಾಗಿದ್ದು ವಿಶ್ವ ಆರೋಗ್ಯ ಸಂಸ್ಥೆ ಈ ಲಸಿಕೆಯನ್ನು ಶಿಫಾರಸ್ಸು ಮಾಡಿದೆ. ಎಲ್ಲಾ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಈ ಲಸಿಕೆ ಉಚಿತವಾಗಿ ನೀಡಲಾಗುತ್ತಿದ್ದು 14ರಿಂದ 15 ವರ್ಷ ಒಳಗಿನ ಬಾಲಕಿಯರಿಗೆ ಈ ಲಸಿಕೆಯನ್ನು ನೀಡಲಾಗುತ್ತಿದೆ. ದೇಶದಲ್ಲಿ ಗರ್ಭಕಂಠದ ಕ್ಯಾನ್ಸರ್ ಕಡಿಮೆ ಮಾಡುವ ನಿಟ್ಟಿನಲ್ಲಿ HPV ಲಸಿಕೆ ಅಭಿಯಾನದ ಅನುಷ್ಠಾನವು ಒಂದು ನಿರ್ಣಾಯಕ ಹೆಜ್ಜೆಯಾಗಲಿದೆ. ಲಸಿಕೆಯನ್ನು ವ್ಯಾಪಕವಾಗಿ ಪರೀಕ್ಷಿಸಲಾಗಿದೆ, ಸುರಕ್ಷಿತ ಪರಿಣಾಮಕಾರಿಯಾಗಿದೆ ಮತ್ತು ಫೆಬ್ರವರಿ 2026 ರ ಹೊತ್ತಿಗೆ 160 ದೇಶಗಳಲ್ಲಿ ಅವರ ರಾಷ್ಟ್ರೀಯ ರೋಗನಿರೋಧಕ ಕಾರ್ಯಕ್ರಮಗಳಲ್ಲಿ ಅಡಿಯಲ್ಲಿ ಈಗಾಗಲೇ ಲಭ್ಯವಿದೆ.ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ಸಾರ್ವಜನಿಕರು ನಿಗದಿತ ವಯಸ್ಸಿನ ಬಾಲಕಿಯರಿಗೆ HPV ಲಸಿಕೆ ಪಡೆದುಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವಂತೆ ಆರೋಗ್ಯ ಇಲಾಖೆ ಪ್ರಕಟಣೆಯಲ್ಲಿ ಕೋರಿದೆ.

ಬಜಪೆ- ಶಾಂತಿಗುಡ್ಡೆಯ 105 ಕುಟುಂಬಗಳಿಂದ ಡಿಸಿಗೆ ಮನವಿ | ಸಮಸ್ಯೆ ಪರಿಹರಿಸಲು ಆಗ್ರಹ

ಮಾಲಿನ್ಯ, ಕಲುಷಿತ ವಾತಾವರಣದಿಂದ ಸಿಗಬೇಕಿದೆ ಮುಕ್ತಿ!

ಕೈಕಂಬ: ಮಂಗಳೂರು ತಾಲೂಕು ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯ ಶಾಂತಿಗುಡ್ಡೆಯ ಕಾಲನಿಯ 105 ಕುಟುಂಬಗಳ ಪ್ರತಿನಿಧಿಗಳು ಬಜಪೆ – ಶಾಂತಿಗುಡ್ಡೆ ಪ್ರದೇಶವನ್ನು ಭೂಸ್ವಾಧೀನಗೊಳಿಸಿ ಜನತೆಯನ್ನು ಮಾಲಿನ್ಯ ಮತ್ತು ಆತಂಕ ಹಾಗೂ ಸಂಕಷ್ಟದ ಬದುಕಿನಿಂದ ಪಾರುಮಾಡುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮರುಮನವಿ ಸಲ್ಲಿಸಿದ್ದಾರೆ.

ಜನರ ಬೇಡಿಕೆ ಬಗ್ಗೆ ಪರಾಮರ್ಶೆ

ಮನವಿ ಸ್ವೀಕರಿಸಿ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ರಾಜು ಕೆ. ಅವರು, ಕೈಗಾರಿಕಾ ವಲಯದ ಆವರಣಕ್ಕೆ ತಾಗಿಯೇ ಇರುವ ಬಜಪೆಯ ಶಾಂತಿಗುಡ್ಡೆ ಪ್ರದೇಶವು ಕೈಗಾರಿಕೆಗಳ ಪ್ರಖರ ಮಾಲಿನ್ಯವನ್ನು ಹತ್ತಿರದಿಂದ ನೇರವಾಗಿ ಅನುಭವಿಸುತ್ತಿರುವುದರಿಂದ ಅತಿ ಶೀಘ್ರ ವಾಸ್ತವಾಂಶ ಅಧ್ಯಯನದ ಬಳಿಕ ಜನರ ಬೇಡಿಕೆ ಬಗ್ಗೆ ಪರಾಮರ್ಶೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ಜಿಲ್ಲಾಡಳಿತದ ತಾರತಮ್ಯ

ಭೂಸ್ವಾಧೀನ ಪ್ರಕ್ರಿಯೆಯ ನೋಟಿಸ್ 28/1, 28/2, 28/3 ಬಳಿಕ ಕಾರಣವಿಲ್ಲದೇ ಪ್ರಕ್ರಿಯೆಯನ್ನು ಮೊಟಕುಗೊಳಿಸಲಾಗಿರುವ ಬಜಪೆ, ಶಾಂತಿಗುಡ್ಡೆ ಸ.ನಂ. 138/1ರಲ್ಲಿ 105 ಮನೆಗಳಿರುವ 4 ಎಕರೆ ಭೂಪ್ರದೇಶ ಸ್ವಾಧೀನಪಡಿಸುವುದನ್ನು ಬಿಟ್ಟು 400ಕ್ಕೂ ಅಧಿಕ ಮನೆಗಳಿರುವ ಕೆಂಜಾರು – ಜೋಕಟ್ಟೆಯ 27 ಎಕರೆ ಜಾಗದಲ್ಲಿ ಹಸಿರು ವಲಯ ನಿರ್ಮಾಣಕ್ಕೆಂದು ನೇರ ಭೂಸ್ವಾಧೀನಗೊಳಿಸಿ ಪರಿಹಾರ ಪ್ಯಾಕೇಜ್ ನೀಡಲು ಜಿಲ್ಲಾಡಳಿತ ಆದೇಶ ನೀಡಿದ್ದು, ಶಾಂತಿಗುಡ್ಡೆಯ ಜನರ ಆತಂಕ ಮತ್ತು ಅಪಾಯಕಾರಿ ಜನಜೀವನದ ಬಗ್ಗೆ ಜಿಲ್ಲಾಡಳಿತದ ತಾರತಮ್ಯ ಧೋರಣೆಯ ಬಗ್ಗೆ ಶಾಂತಿಗುಡ್ಡೆಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದು, ಜೊತೆಗೆ ಕೆಂಜಾರು,ಜೋಕಟ್ಟೆಭೂಸ್ವಾಧೀನ ಪ್ರಕ್ರಿಯೆಯೊಂದಿಗೆ ಬಜಪೆ ಶಾಂತಿಗುಡ್ಡೆ 4 ಎಕರೆ ಪ್ರದೇಶವನ್ನೂ ಸೇರಿಸಿ ಮುಂದುವರಿಸುವಂತೆ ನಾಗರಿಕರು ಆಗ್ರಹಿಸಿದ್ದಾರೆ.



> **ಸಂಕಷ್ಟದಿಂದ ಪಾರು ಮಾಡಿ**
> ಪುಟ್ಟ ಮಕ್ಕಳು, ವಯೋವೃದ್ಧರು, ಆರೋಗ್ಯ ಸಮಸ್ಯೆ ಇರುವವರು ಇಲ್ಲಿನ ಮಾಲಿನ್ಯದ ವಾತಾವರಣದಲ್ಲಿ ಪಡುವ ಸಂಕಷ್ಟ ಅಸಹನೀಯವಾಗಿದೆ. ನಮ್ಮ ಬೇಡಿಕೆಯ ಸಂಪೂರ್ಣ ಸತ್ಯಶೋಧನೆ ನಡೆಸಿ ಭೂಸ್ವಾಧೀನಗೊಳಿಸಿ ಸೂಕ್ತ ಪರಿಹಾರ ನೀಡಿ ನಮ್ಮನ್ನು ಸಂಕಷ್ಟದಿಂದ ಪಾರು ಮಾಡಿ ಎಂಬುದು ನಮ್ಮ ಆಗ್ರಹ.
> ● ಶಾಂತಿಗುಡ್ಡೆ ಕಾಲನಿ ನಿವಾಸಿಗಳು

ಆರೋಗ್ಯಕ್ಕೆ ಕಂಟಕವಾಗುತ್ತಿದೆ ಮಾಲಿನ್ಯ

ಕಳೆದ 20 ವರ್ಷಗಳಿಂದ ಇಲ್ಲಿನ ಗ್ರಾಮಸ್ಥರು ವಾಯು ಮಾಲಿನ್ಯ, ಜಲಮಾಲಿನ್ಯ, ಅನಿಲ ಸೋರಿಕೆ, ಕೋಕ್, ಸಲ್ಫರ್ ಹಾರುಬೂದಿಯಂತಹ ಆರೋಗ್ಯಕ್ಕೆ ಘಾಸಿಯಾಗುವ ತೀಕ್ಷ್ಣ ಸಮಸ್ಯೆಗಳ ಜತೆಗೆ ಆಹಾರ ಸೇವನೆಗೂ ಕಷ್ಟವಾಗುವಷ್ಟು ಕೆಟ್ಟ ದುರ್ವಾಸನೆ. ಇವೆಲ್ಲವನ್ನೂ ಸಹಿಸಿಕೊಂಡು ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು ನ್ಯಾಯದ ನಿರೀಕ್ಷೆಯಲ್ಲಿ ಬದುಕುತ್ತಿದ್ದಾರೆ.

ತಕ್ಷಣ ಆದೇಶ ನೀಡಿ

ಸರಕಾರದ ಇಲಾಖೆ ಶಾಂತಿಗುಡ್ಡೆ ಪ್ರದೇಶವನ್ನು ಬಫರ್ ಝೋನ್ (ನಿಷೇಧಿತ ವಲಯ) ಎಂದು ಉಲ್ಲೇಖಿಸಿರುವುದರಿಂದ 4 ಎಕರೆ ಭೂಮಿಯನ್ನು ಸ್ವಾಧೀನಗೊಳಿಸಿ 105 ಕುಟುಂಬಗಳನ್ನು ಸಮಸ್ಯೆಗಳಿಂದ ಪಾರು ಮಾಡುವ ನಿಟ್ಟಿನಲ್ಲಿ ಸರಕಾರ, ಜಿಲ್ಲಾಡಳಿತ, ಎಂಆರ್‌ಪಿಎಲ್ ಹಾಗೂ ಎಂಎಸ್‌ಇಝೆಡ್ ತಕ್ಷಣದಿಂದ ಅನ್ವಯಿಸುವಂತೆ ಆದೇಶ ನೀಡಬೇಕು ಎಂಬುದು ಕಾಲನಿ ನಿವಾಸಿಗಳ ಒತ್ತಾಯವಾಗಿದೆ.

ಆರ್ಥಿಕ ಬೆಳವಣಿಗೆಗೆ ವಾಣಿಜ್ಯ ವಿದ್ಯಾರ್ಥಿಗಳ ಕೊಡುಗೆ ಅಪಾರ



ಪುತ್ತೂರು: ಬ್ಯಾಂಕಿಂಗ್, ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ದೇಶದ ಪ್ರಮುಖ ಹುದ್ದೆಗಳಲ್ಲಿ ಸಿ.ಎ. ಕೂಡ ಒಂದಾಗಿದೆ. ಉತ್ತಮವಾದ ವೇತನ ದೊರೆಯುವ ಹುದ್ದೆಯೂ ಹೌದು. ಯಾವುದೇ ಒಂದು ದೇಶ ಸಮೃದ್ಧವಾಗಿ ಯಾವುದೇ ಸಮಸ್ಯೆಗಳಿಲ್ಲದೆ ಮುಂದುವರಿಯಬೇಕಾದರೆ ಹಣಕಾಸು ಬಹಳ ಮುಖ್ಯ ಎಂದು ಲೆಕ್ಕಪತ್ರ ಪರಿಶೋಧಕ ಅತೀತ ಬ್ರಹ್ಮ ಹೇಳಿದರು.

ಅವರು ನಗರದ ನೆಲ್ಲಿಕಟ್ಟೆ ಅಂಬಿಕಾ ಪ.ಪೂ. ವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಆಯೋಜಿಸಲಾದ 'ಪ್ರೇರಣಾ' ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಪಿಯು ಹಂತದಲ್ಲಿ ವಿದ್ಯಾರ್ಥಿಗಳು ಓದುವ ವಿಜ್ಞಾನ, ಕಲೆ ಹಾಗೂ ವಾಣಿಜ್ಯ ವಿಭಾಗ ಎಂಬ ಮೂರು ವಿಭಾಗಗಳಲ್ಲಿ ಎಲ್ಲವೂ ಪ್ರಯೋಜನಕಾರಿಯಾದವುಗಳೇ ಆಗಿವೆ. ಅದರಲ್ಲೂ ವಿದ್ಯಾರ್ಥಿಗಳು ವಾಣಿಜ್ಯ ವಿಭಾಗವನ್ನು ಆಯ್ಕೆ ಮಾಡಿದಲ್ಲಿ ರಾಷ್ಟ್ರಮಟ್ಟದಲ್ಲೇ ಸಾಕಷ್ಟು ಅವಕಾಶಗಳಿವೆ. ಬಹಳ ವರ್ಷಗಳಿಂದಲೂ ಈ ದೇಶದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ದೇಶದ ಆರ್ಥಿಕ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಸಂಸ್ಥೆಯ ಪ್ರಾಂಶುಪಾಲ ಸತ್ಯಜಿತ್ ಉಪಾಧ್ಯಾಯ, ವಾಣಿಜ್ಯ ವಿಭಾಗ ಮುಖ್ಯಸ್ಥೆ ಅಕ್ಷತಾ ಉಪಸ್ಥಿತರಿದ್ದರು. ವಿದ್ಯಾರ್ಥಿನಿರಾದ ವಿಭಾ ಕೆ. ಎಸ್. ಬಳಗದವರು ಪ್ರಾರ್ಥಿಸಿದರು. ಮಂದಿರಾ ಕಜೆ ಸ್ವಾಗತಿಸಿ, ಸಮನ್ವಿತಾ ಕೆ.ಎ. ವಂದಿಸಿದರು. ಅನಘಾ ವಿ. ಕಾರ್ಯಕ್ರಮ ನಿರ್ವಹಿಸಿದರು.

> **ವಿಪುಲ ಅವಕಾಶ**
> ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಸರಿಯಾದ ಅಧ್ಯಯನ ನಡೆಸುವುದು ಮುಖ್ಯ. ವಾಣಿಜ್ಯ ವಿಭಾಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಸಿ.ಎ.ಯ ಹೊರತಾಗಿಯೂ ವಿಪುಲ ಅವಕಾಶಗಳಿವೆ. ಅಕೌಂಟೆಂಟ್, ಆಡಿಟರ್, ಇಂಟರ್ನಲ್ ಆಡಿಟರ್, ಫೈನಾನ್ಸ್ ರಿಪೋರ್ಟರ್, ಕನ್ಸಲ್ಟೆಂಟ್ ಇತ್ಯಾದಿ ಸಾಧ್ಯತೆಗಳಿವೆ.
> ● ಅತೀತ ಬ್ರಹ್ಮ

ಸರಸ್ವತೀ ಶಾಲೆ: ವಿದ್ಯಾರ್ಥಿಗಳಿಗೆ ಕಾನೂನು ಮಾಹಿತಿ ಕಾರ್ಯಾಗಾರ



ಕಡಬ: ಕೇವಳ ಹನುಮಾನ್ ನಗರದಲ್ಲಿರುವ ಸರಸ್ವತೀ ಆಂಗ್ಲ ಮಾಧ್ಯಮ ಶಾಲಾ ಮಂತ್ರಿಮಂಡಲದ ಪ್ರಮಾಣ ವಚನ ಸ್ವೀಕಾರ ಹಾಗೂ ಕಾನೂನು ಮಾಹಿತಿ ಕಾರ್ಯಾಗಾರವು ಸಂಸ್ಥೆಯ ಯಾದವಶ್ರೀ ಸಭಾಂಗಣದಲ್ಲಿ ಜರಗಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಡಬ ಆರಕ್ಷಕ ಠಾಣೆಯ ಸಹಾಯಕ ಆರಕ್ಷಕ ಉಪನಿರೀಕ್ಷಕ ಶಿವರಾಮ, ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬ ನಾಗರಿಕನೂ ನಮ್ಮ ಕಾನೂನಿನ ಬಗ್ಗೆ ಪ್ರಾಥಮಿಕ ಅರಿವನ್ನು ಹೊಂದಿರಬೇಕು. ವಿದ್ಯಾರ್ಥಿಗಳು ತಾವು ಪಡೆದುಕೊಂಡ ಕಾನೂನು ಮಾಹಿತಿಯನ್ನು ಇತರರಿಗೆ ಹಂಚಬೇಕು. ತನ್ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಕಾನೂನಿನ ಅರಿವು ಬಂದಾಗ ಸಮಾಜದಲ್ಲಿ ಅಪರಾಧ ಕಾರ್ಯಗಳು ಕಡಿಮೆಯಾಗಲು ಸಾಧ್ಯ ಎಂದು ಹೇಳಿದರು. ಇದೇ ವೇಳೆ ಕಾನೂನು ಬಾಹಿರ ಚಟುವಟಿಕೆಗಳು ಮತ್ತು ಅದರಿಂದಾಗುವ ಅನಾಹುತಗಳ ಬಗ್ಗೆ ಮಾಹಿತಿ ನೀಡಿದರು.

ಮುಖ್ಯ ಅತಿಥಿ ಕಡಬ ಆರಕ್ಷಕ ಠಾಣೆಯ ಹೆಡ್‌ಕಾನ್‌ಸ್ಟೇಬಲ್ ಮಹೇಶ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಮಂತ್ರಿಮಂಡಲಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ಶಿಕ್ಷಕ ಸತೀಶ್ಚಂದ್ರ ಕೆ. ಅವರು ಪ್ರಮಾಣವಚನ ಬೋಧಿಸಿದರು. ಆಡಳಿತ ಮಂಡಳಿ ಅಧ್ಯಕ್ಷ ಸದಾಶಿವ ಭಟ್, ಮುಖ್ಯಶಿಕ್ಷಕ ವಸಂತ ಕೆ. ಉಪಸ್ಥಿತರಿದ್ದರು. ಸಹಶಿಕ್ಷಕಿ ಸುಮಂಗಲ ಎ. ಸ್ವಾಗತಿಸಿ, ಜಿ. ಶಾರ್ವರಿ ಬನ್ನಿಂತ್ತಾಯ ವಂದಿಸಿದರು. ದ್ವಿಜಾ ಎಚ್. ಕಾರ್ಯಕ್ರಮ ನಿರ್ವಹಿಸಿದರು.

- ಸರಸ್ವತೀ ಶಾಲಾ ಮಂತ್ರಿಮಂಡಲದ ಪ್ರಮಾಣ ವಚನ ಸ್ವೀಕಾರ
- ನಾಗರಿಕನಿಗೆ ಕಾನೂನಿನ ಪ್ರಾಥಮಿಕ ಅರಿವು ಮುಖ್ಯ
- ಸಮಾಜದಲ್ಲಿ ಅಪರಾಧ ಕಾರ್ಯಗಳು ಕಡಿಮೆಯಾಗಲು ಕಾನೂನಿನ ಅರಿವು ಸಹಕಾರಿ
- ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ

ಕಾಸರಗೋಡಿನ ಬಿಇಎಂ ಶಾಲೆಯಲ್ಲಿ ಪರಿಸರ ದಿನಾಚರಣೆ



ಕಾಸರಗೋಡು: ಪರಿಸರ ದಿನಾಚರಣೆ ಅಂಗವಾಗಿ ಕಾಸರಗೋಡು ನಗರದ ಬಿಇಎಂ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಇಕೋ ಕ್ಲಬ್‌ನ ವತಿಯಿಂದ ಪರಿಸರ ದಿನವನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಯಿತು. ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಹರೀಶ್ ಕೆ.ಆರ್. ಅವರು ಗಿಡ ನೆಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ.ಕೆ. ಎನ್.ವೆಂಕಟ್ರಮಣ ಹೊಳ್ಳ, ಶಾಲಾ ಮುಖ್ಯೋಪಾಧ್ಯಾಯ ಗಣೇಶ್, ಹಿರಿಯ ಅಧ್ಯಾಪಕ ಬಾಲಕೃಷ್ಣ, ಇಕೋ ಕ್ಲಬ್ ಸಂಚಾಲಕ ಅಜೇಶ್, ಶಾಲಾ ಅಧ್ಯಾಪಿಕೆಯರಾದ ಸೌಮ್ಯಾ ಮಯ್ಯ, ಪ್ರಿಯಾ, ಅಶ್ವತಿ ಉಪಸ್ಥಿತರಿದ್ದರು. ಸ್ಕೌಟ್ಸ್ ಆ್ಯಂಡ್ ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಮೂಲ್ಕಿ ಶ್ರೀ ವೆಂಕಟರಮಣ ದೇವಸ್ಥಾನ ಆಡಳಿತದ ಶ್ರೀ ವ್ಯಾಸಮಹರ್ಷಿ ಸಂಸ್ಕೃತ ವೇದಪಾಠ ಶಾಲೆಯ ಅಧ್ಯಾಪಕರಾದ ಕಾಗಾಲ್ ನವೀನ್ ಜನಾರ್ದನ ಭಟ್ಟ ಅವರು ಸಂಪಾದಿಸಿದ ತಂತ್ರಸಾರೋಕ್ತ ಶ್ರೀ ವಿಷ್ಣು ಪೂಜಾ ದೀಪಿಕಾ ಎಂಬ ಗ್ರಂಥವನು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀದೇವರಿಗೆ ಸಮರ್ಪಿಸುವ ಮೂಲಕ ಲೋಕಾರ್ಪಣೆಗೊಳಿಸಲಾಯಿತು. ಈ ಸಂದರ್ಭ ಕ್ಷೇತ್ರದ ದೇವದರ್ಶನ ಪಾತ್ರಿ ಪಿ.ಸತ್ಯನಾರಾಯಣ ನಾಯಕ್, ಕ್ಷೇತ್ರದ ಪರ್ಯಾಯ ಅರ್ಚಕ ಸಂಪಿಗೆ ಮನೆ ವಿಶ್ವನಾಥ ಭಟ್, ಅರ್ಚಕರಾದ ಶ್ರೀನಿವಾಸ ಭಟ್, ಪದ್ಮನಾಭ ಭಟ್, ಕ್ಷೇತ್ರದ ಪ್ರಬಂಧಕ ನಾಗೇಶ್ ಪೈ, ಗ್ರಂಥಕರ್ತ ಕಾಗಾಲ್ ನವೀನ್ ಜನಾರ್ದನ ಭಟ್ ಉಪಸ್ಥಿತರಿದ್ದರು.



ಮಿಥುನ ಸಂಕ್ರಮಣೋತ್ಸವ ಅಂಗವಾಗಿ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ನಾಗಧ್ವಜ ಕ್ಷೇತ್ರದ ಶ್ರೀ ಶಾರಧ್ವತ ಯಜ್ಞಾಂಗಣದಲ್ಲಿ ಸಾತ್ವಿಕಂ ಗಣೇಶಪುರ ಇವರಿಂದ ಭಜನಾ ಸಂಕೀರ್ತನಾ ಸೇವೆಯು ಜರಗಿತು.



ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಮಂಗಳೂರಿನ ಮೆಸ್ಕಾಂ ಕಾರ್ಪೋರೇಟ್ ಕಚೇರಿಯಲ್ಲಿ ಶುಕ್ರವಾರ ಬದ್ಧತಾ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ನಡೆಯಿತು. ಮೆಸ್ಕಾಂ ಹಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಪಾಲ್ಗೊಂಡಿದರು. ಮೆಸ್ಕಾಂ ಸಾರ್ವಜನಿಕ ಸಂಪರ್ಕಾಧಿಕಾರಿ ವಸಂತ ಶೆಟ್ಟಿ ಪ್ರಮಾಣ ವಚನ ವಿಧಿ ನಿರ್ವಹಿಸಿದರು.

ವಿದ್ಯಾರ್ಥಿಗಳ ಬೌದ್ಧಿಕ ವಿಕಾಸಕ್ಕೆ ಪಠ್ಯೇತರ ಚಟುವಟಿಕೆಗಳು ಮುಖ್ಯ



ಕುಂದಾಪುರ: ವಿದ್ಯಾರ್ಥಿಗಳ ಬೌದ್ಧಿಕ ವಿಕಾಸಕ್ಕೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ಬಹಳ ಮುಖ್ಯವಾದದು. ಕಲಿಕಾ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಕೌಶಲ್ಯಗಳನ್ನು ರೂಢಿಸಿಕೊಂಡು ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಬಾಂಡ್ಯ ಎಜ್ಯುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಹೇಳಿದ್ದಾರೆ.

ವಕ್ವಾಡಿಯ ಬಾಂಡ್ಯ ಎಜುಕೇಶನಲ್ ಟ್ರಸ್ಟ್ ನ ಅಂಗಸಂಸ್ಥೆಯಾದ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ 2026–27 ನೇ ಸಾಲಿನ ಸಹಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. 'ಪ್ರತಿಭೆಯನ್ನು ಗುರುತಿಸಿ ಬೆಳೆಸಿ, ಸಾಧನೆಯತ್ತ ಮುನ್ನಡೆಯೋಣ' ಎಂಬ ಸಂದೇಶದೊಂದಿಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ, ಚದುರಂಗ, ಕೊಳಲು ವಾದನ, ಸ್ಕೇಟಿಂಗ್, ಏರೋಬಿಕ್ಸ್, ಭರತನಾಟ್ಯ, ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ ಮತ್ತು ಯಕ್ಷಗಾನ ತರಬೇತಿಯಂತಹ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.

ಪ್ರಾಂಶುಪಾಲೆ ಡಾ. ರೂಪಾ ಶೆಣೈ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಸುಲೋಚನಾ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಆನಂದತೀರ್ಥ ವಿದ್ಯಾಲಯ: ವಿದ್ಯಾರ್ಥಿ ಸಂಘದ ಚುನಾವಣೆ



ಶಿರ್ವ: ಪಾಜಕ ಆನಂದತೀರ್ಥ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆ ನಡೆಯಿತು. 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಉತ್ಸಾಹದಲ್ಲಿ ಮತದಾನದಲ್ಲಿ ಭಾಗವಹಿಸಿ ತಮ್ಮ ಮತ ಚಲಾಯಿಸಿದರು. ಶಿಕ್ಷಕರು ಮತದಾನ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಿಕೊಟ್ಟರು.

ಈ ಮತದಾನ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಆಯ್ಕೆಯ ಮಹತ್ವವನ್ನು ಹಾಗೂ ಜವಾಬ್ದಾರಿಯುತ ನಿರ್ಧಾರ ಕೈಗೊಳ್ಳುವ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಸಹಕಾರಿಯಾಯಿತು. ಸಮಾಜ ವಿಜ್ಞಾನ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಮಾರ್ಗದರ್ಶನದಲ್ಲಿ ಮತದಾನ ಪ್ರಕ್ರಿಯೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಕಣದಲ್ಲಿ 19 ಅಭ್ಯರ್ಥಿಗಳು

ಎರಡು ಸಾವಿರಕ್ಕೂ ಅಧಿಕ ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದರು. ಎರಡು ಸ್ಥಾನದ ಆಯ್ಕೆಗೆ 19 ಅಭ್ಯರ್ಥಿಗಳು ಕಣದಲ್ಲಿದ್ದರು. ಮತದಾನ ಮಾಡುವ ವಿಧಾನದ ಬಗ್ಗೆ ತರಗತಿವಾರು ಪ್ರಾತ್ಯಕ್ಷಿಕೆ ಮಾಹಿತಿ ನೀಡಲಾಗಿತ್ತು. ಶಾಲಾ ನೂತನ ನಾಯಕನಾಗಿ ಪೂರ್ಣಚಂದ್ರ ಪ್ರತೀಕ್ಷ್, ಶಾಲಾ ನಾಯಕಿಯಾಗಿ ವರ್ಣಿಕಾ ಶಶಿಧರ್ ಆಯ್ಕೆಯಾದರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಆಡಳಿತ ಮತ್ತು ಶೈಕ್ಷಣಿಕ ಸುಧಾರಣೆ' ಕುರಿತು ಎರಡು ದಿನಗಳ ಕಾರ್ಯಾಗಾರ

ಆಧುನಿಕತೆಯೊಂದಿಗೆ ಉನ್ನತ ಶಿಕ್ಷಣ ವ್ಯವಸ್ಥೆಗಳು ಬದಲಾಗುತ್ತಿವೆ: ಪ್ರೊ.ಚಿನ್ನಪ್ಪ ಗೌಡ

ಕೊಣಾಜೆ: ಆಧುನಿಕ ಶಿಕ್ಷಣವು ವ್ಯವಸ್ಥೆಗೂ ಮೀರಿ, ನಿಯಂತ್ರಣಕ್ಕೂ ಮೀರಿ ಬದಲಾಗುತ್ತಿವೆ. ವಿಶ್ವ ವಿದ್ಯಾನಿಲಯಗಳಲ್ಲೂ ಉನ್ನತ ಶಿಕ್ಷಣ ವ್ಯವಸ್ಥೆಗಳು ಬದಲಾವಣೆಯಾಗುತ್ತಿವೆ. ಇವುಗಳ ನಡುವೆ ಅನೇಕ ವಿಶ್ವ ವಿದ್ಯಾನಿಲಯಗಳು ಖಾಯಂ ಸಿಬ್ಬಂದಿಗಳ ಕೊರತೆ, ಆರ್ಥಿಕ ಸಂಕಷ್ಟಗಳು ಮೊದಲಾದ ಸಮಸ್ಯೆಗಳಿಂದ ಆತಂಕದ ಸನ್ನಿವೇಶವನ್ನು ಎದುರಿಸುತ್ತಿವೆ. ಇಂತಹ ಸಂದರ್ಭದಲ್ಲಿ ಉನ್ನತದ ಶಿಕ್ಷಣದ ಆಧುನಿಕ ವ್ಯವಸ್ಥೆ ಆಡಳಿತ ವ್ಯವಸ್ಥೆಗಳು ಹಾಗೂ ಆಧುನಿಕ ತಂತ್ರಜ್ಞಾನಗಳ ಪರಿಣಾಮಗಳ ಬಗೆಗೆ ಚಿಂತಿಸಬೇಕಾದ ಅಗತ್ಯತೆ ಇದೆ ಎಂದು ವಿಶ್ರಾಂತ ಕುಲಪತಿಗಳು ಹಾಗೂ ಜಾನಪದ ವಿದ್ವಾಂಸರಾದ ಪ್ರೊ.ಚಿನ್ನಪ್ಪ ಗೌಡ ಅವರು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಕೇತರ ಉದ್ಯೋಗಿಗಳ ಸಂಘದ ವತಿಯಿಂದ ವಿವಿಯ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ 'ವಿಶ್ವವಿದ್ಯಾನಿಲಯಗಳಲ್ಲಿ ಆಡಳಿತ ಮತ್ತು ಶೈಕ್ಷಣಿಕ ಸುಧಾರಣೆ' ಎಂಬ ವಿಷಯದ ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಬದಲಾಗುತ್ತಿರುವ ಕಾಲಘಟ್ಟದಲ್ಲಿ ಶಿಕ್ಷಕರು, ಸಿಬ್ಬಂದಿಗಳು ಮಾಡುವ ಹಲವಾರು ಕೆಲಸಗಳನ್ನು ಎಐ ತಂತ್ರಜ್ಞಾನದ ಮೂಲಕ ಅನುಷ್ಠಾನಗೊಳಿಸುವ ಪ್ರಕ್ರಿಯೆಗಳು ನಡೆಯುತ್ತಿರುವುದನ್ನು ಕಾಣಬಹುದು. ಈ ನಡುವೆ ಅನೇಕ ಸವಾಲುಗಳೂ ಎದುರಾಗುತ್ತಿವೆ. ಆದರೆ ಕೆಲಸ ಕಾರ್ಯಗಳಲ್ಲಿ ಮನುಷ್ಯ ಸಂಪನ್ಮೂಲದ ಅಪ್ರಸ್ತುತೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದರು.

ಮಂಗಳೂರು ವಿವಿ ಶಿಕ್ಷಕೇತರ ಉದ್ಯೋಗಿಗಳ ಸಂಘದ ಅಧ್ಯಕ್ಷ ತಜ್ ನಿಜ್ ಬಾನು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಬದಲಾವಣೆಯ ಕಾಲಘಟ್ಟದಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆರ್ಥಿಕ ಬಿಕ್ಕಟ್ಟು, ಸಿಬ್ಬಂದಿಗಳ ಕೊರತೆಯಿಂದ ವಿವಿ ಸಮಸ್ಯೆ ಎದುರಿಸುತ್ತಿದ್ದರೂ, ನೂತನ ವ್ಯವಸ್ಥೆಯೊಂದಿಗೆ ವಿದ್ಯಾರ್ಥಿಗಳನ್ನು ಸೆಳೆಯಲು ಸಾಧ್ಯವಾಗಬೇಕಿದೆ. ವಿವಿ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಬ್ದಾರಿಯಾಗಿದೆ ಎಂದರು.

ವಿವಿಯ ಶಿಕ್ಷಕೇತರ ಉದ್ಯೋಗಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಎಂಬಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪ ಕುಲಸಚಿವ ಲಲಿತಾ ವಂದಿಸಿದರು. ಪರೀಕ್ಷಾಂಗ ಅಧೀಕ್ಷ ಗಾಯತ್ರಿ ಕಾಮತ್ ಕಾರ್ಯಕ್ರಮ ನಿರೂಪಿಸಿದರು.

> **ಸಿಬ್ಬಂದಿಗಳ ಪಾತ್ರ ಮುಖ್ಯ**
> ಶಿಕ್ಷಣ ವ್ಯವಸ್ಥೆಯಲ್ಲಿ ಆಡಳಿತ ನೌಕರರ ಪಾತ್ರವೂ ಬಹಳ ಪ್ರಮುಖವಾದುದು. ವಿದ್ಯಾರ್ಥಿಯ ಬೆಳವಣಿಗೆಯಲ್ಲಿ ಶಿಕ್ಷಕರು, ಪೋಷಕರ ಜೊತೆಗೆ ಸಿಬ್ಬಂದಿಗಳ ಪಾತ್ರ ಮರೆಯಬಾರದು. ವಿವಿ ಬೆಳವಣಿಗೆಯಲ್ಲಿ ಅವರ ಪಾತ್ರವೂ ಮಹತ್ವವಾದುದು. ಕಾಲ ಬದಲಾವಣೆಯೊಂದಿಗೆ ನಾವೂ ಬದಲಾಗಬೇಕಿದೆ ಇದಕ್ಕೆ ಈ ಕಾರ್ಯಾಗಾರ ಪೂರಕವಾಗಿದೆ.
> ● ಪ್ರೊ.ಗಣೇಶ್ ಸಂಜೀವ್, ಮಂಗಳೂರು ವಿವಿ ಕುಲಸಚಿವ

ಸುತ್ತ ಮುತ್ತ

ನಾಳೆ 'ಆರ್‌ಎಸ್‌ಎಸ್ ಶತಾಬ್ದಿ' ವಿಚಾರಗೋಷ್ಠಿ ಸಂವಾದ ಕಾರ್ಯಕ್ರಮ

ಕಾಸರಗೋಡು: ರಾಷ್ಟ್ರೀಯ ಸ್ವಯಂಸೇವಕ ಸಂಘದ 100ನೇ ವರ್ಷಾಚರಣೆಯ ಅಂಗವಾಗಿ ಕಾಸರಗೋಡಿನಲ್ಲಿ ವಿಚಾರಗೋಷ್ಠಿ ಹಾಗೂ ಸಂವಾದ ಕಾರ್ಯಕ್ರಮವು ಜೂ.21ರಂದು ಅಪರಾಹ್ನ 3.30ಕ್ಕೆ ನಗರದ ಹೊಸ ಬಸ್ ನಿಲ್ದಾಣದ ಆರ್.ಕೆ.ಮಾಲ್‌ನ ಗ್ರಾಂಡೋರ್ ಆಡಿಟೋರಿಯಂನಲ್ಲಿ ನಡೆಯಲಿದೆ. ಆಹ್ವಾನಿತ ಪ್ರತಿನಿಧಿಗಳ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸಹ ಸರಕಾರ್ಯವಾಹ ಮುಕುಂದ ಭಾಗವಹಿಸುವರು. ಕಾರ್ಯಕ್ರಮಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶವಿರುವುದಾಗಿ ಸಂಘಟಕರು ತಿಳಿಸಿದ್ದಾರೆ.

ಎಡನೀರು ಶ್ರೀಗಳ ಚಾತುರ್ಮಾಸ್ಯ: ಮಹಾಸಭೆ ಜೂ.28ಕ್ಕೆ

ಕಾಸರಗೋಡು: ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರ ಷಷ್ಠ ಚಾತುರ್ಮಾಸ್ಯ ವ್ರತಾಚರಣೆಯು ಜುಲೈ 29ರಿಂದ ಸೆಪ್ಟೆಂಬರ್ 26ರ ವರೆಗೆ ವಿವಿಧ ವೈದಿಕ,



ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಲಿದೆ. ಕಾರ್ಯಕ್ರಮದ ಯಶಸ್ವಿಗಾಗಿ ಚಾತುರ್ಮಾಸ್ಯ ಸಮಿತಿ ಮಹಾಸಭೆ ಜೂ.28ರಂದು ಸಂಜೆ 5.30ಕ್ಕೆ ಎಡನೀರು ಶ್ರೀ ಮಠದಲ್ಲಿ ನಡೆಯಲಿದೆ. ಶ್ರೀ ಮಠದ ಶಿಷ್ಯ ವೃಂದದವರು ಸಹಿತ ಭಕ್ತಜನರು ಪಾಲ್ಗೊಂಡು ಸಲಹೆ ಸೂಚನೆ ನೀಡಬೇಕೆಂದು ವಿನಂತಿಸಲಾಗಿದೆ.

ನಾಳೆ ಪ್ರತಾಪನಗರ 7ನೇ ವಾರ್ಡ್ ಗ್ರಾಮಸಭೆ

ಉಪ್ಪಳ: ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ 7ನೇ ವಾರ್ಡ್ ಪ್ರತಾಪನಗರದ ಗ್ರಾಮಸಭೆಯು ಜೂ.21ರಂದು ಬೆಳಗ್ಗೆ 10 ಗಂಟೆಗೆ ಪ್ರತಾಪನಗರದಲ್ಲಿರುವ ಬಿಲ್ಲಾರ್ಡ್ಸ್ ಶಾಲೆಯಲ್ಲಿ ನಡೆಯಲಿದೆ. ಸಭೆಯಲ್ಲಿ ಗ್ರಾಮದ ಎಲ್ಲಾ ಸದಸ್ಯರು ಭಾಗವಹಿಸಬೇಕೆಂದು ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ ವಿನಂತಿಸಿದ್ದಾರೆ.

ಅಧ್ಯಾಪಕ ಹುದ್ದೆಗೆ ಸಂದರ್ಶನ

ಬದಿಯಡ್ಕ: ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಖಾಲಿಯಿರುವ ಎಚ್‌ಎಸ್‌ಎಸ್‌ಟಿ ಜೂನಿಯರ್ ಕನ್ನಡ ಅಧ್ಯಾಪಕರ ಹುದ್ದೆಯನ್ನು ದಿನವೇತನ ಆಧಾರದಲ್ಲಿ ಭರ್ತಿಗೊಳಿಸಲು ಜುಲೈ 4ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನ ನಡೆಸಲಾಗುವುದು. ಆಸಕ್ತ ಅರ್ಹ ಅಭ್ಯರ್ಥಿಗಳು ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 9074441796 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ

ಕಾಸರಗೋಡು: ವಿವಿಧ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿಭಾಗದ ವಿದ್ಯಾರ್ಥಿಗಳಿಗೆ ನಗದು ಬಹುಮಾನಗಳನ್ನು ನೀಡಲಾಗುತ್ತದೆ. ವಿದ್ಯಾರ್ಥಿ ವೇತನಕ್ಕಾಗಿ ಮೊದಲ ಹಂತದ ಅರ್ಜಿಗಳನ್ನು ಇ-ಗ್ರಾಂಟ್ಸ್ ಪೋರ್ಟಲ್ ಮೂಲಕ ಸಲ್ಲಿಸಬೇಕು. ಕೊನೆಯ ದಿನಾಂಕ ಆಗಸ್ಟ್ 15 ಆಗಿದೆ. ಸಾರ್ವಜನಿಕ ಪರೀಕ್ಷೆಗಳಲ್ಲಿ ವಿವಿಧ ವಿಷಯಗಳಲ್ಲಿ ಬಿ ಗ್ರೇಡ್‌ಗಿಂತ ಕಡಿಮೆಯಿಲ್ಲದಷ್ಟು ಅಂಕ ಪಡೆದವರು 2025–26ನೇ ಸಾಲಿಗೆ ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ವಿಎಚ್‌ಎಸ್‌ಇ, ಡಿಪ್ಲೊಮಾ, ಟಿಟಿಸಿ, ಪಾಲಿಟೆಕ್ನಿಕ್, ಪದವಿ ಮಟ್ಟದ ಕೋರ್ಸ್‌ಗಳು, ವೃತ್ತಿಪರ ಪದವಿ, ಸ್ನಾತಕೋತ್ತರ ಪದವಿ ಮತ್ತು ಅದಕ್ಕಿಂತ ಹೆಚ್ಚಿನ ಕೋರ್ಸ್‌ಗಳಾದವರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 04994 256162 ಕರೆ ಮಾಡಬಹುದು.

ಪ್ರಯೋಗಾಲಯ ತಂತ್ರಜ್ಞರ ನೇಮಕಾತಿ

ಕಾಸರಗೋಡು: ತೃಕ್ಕರೀಪುರ ತಾಲೂಕು ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನಿಶಿಯನ್ ನೇಮಕಾತಿಗಾಗಿ ಸಂದರ್ಶನವು ಜೂ.24ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ವಿದ್ಯಾರ್ಹತೆ ಪ್ಲಸ್ ಟು, ಡಿಎಂಎಲ್‌ಟಿ, ಬಿಎಸ್ಸಿ, ಎಂಎಲ್‌ಟಿ, ಕೇರಳ ಪ್ಯಾರಾಮೆಡಿಕಲ್ ಕೌನ್ಸಿಲ್ ನೋಂದಣಿ ಹೊಂದಿರಬೇಕು. ವಯಸ್ಸಿನ ಮಿತಿ 40 ವರ್ಷಕ್ಕಿಂತ ಕಡಿಮೆ. ಹೆಚ್ಚಿನ ವಿವರಗಳಿಗೆ 0467 2215522 ಸಂಪರ್ಕಿಸಬಹುದು.

ಕಾಸರಗೋಡಿನಲ್ಲಿ ಕೆಎಸ್‌ಇಬಿಯಿಂದ ಮನೆಗಳಿಗೆ ಸೌರ ವಿದ್ಯುತ್ ಪೂರೈಕೆ ಯೋಜನೆ ಅಂತಿಮ ಹಂತಕ್ಕೆ

ಮೈಲಾಟ್ಟಿಯಲ್ಲಿ ಸಿದ್ಧಗೊಳ್ಳುತ್ತಿದೆ ಕೇರಳದ ಪ್ರಥಮ ಬಿಇಎಸ್ಎಸ್

ಕಾಸರಗೋಡು: ಕೇರಳದ ಪ್ರಥಮ ಬಿಇಎಸ್‌ಎಸ್ (ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಂ) ಯೋಜನೆಗೆ ಕಾಸರಗೋಡು ಜಿಲ್ಲೆಯ ಮೈಲಾಟ್ಟಿಯಲ್ಲಿ ಸಿದ್ಧತೆ ನಡೆಸಲಾಗುತ್ತಿದ್ದು, ಡಿಸೆಂಬರ್ ತಿಂಗಳಲ್ಲಿ ಉದ್ಘಾಟನೆಗೊಳ್ಳಲಿದೆ. ಈ ಮೂಲಕ ಜಿಲ್ಲೆಯ ವಿದ್ಯುತ್ ಸಮಸ್ಯೆಗೆ ಒಂದು ಹಂತದ ವರೆಗೆ ಪರಿಹಾರ ಲಭಿಸಲಿದೆ.

ಬ್ಯಾಟರಿ ಶಕ್ತಿ ಶೇಖರಣಾ ವ್ಯವಸ್ಥೆ (ಬಿಇಎಸ್‌ಎಸ್) ಯೋಜನೆಯಡಿ ಹಗಲಿನಲ್ಲಿ ಬ್ಯಾಟರಿಗಳಲ್ಲಿ ಸೌರಶಕ್ತಿ ಸಂಗ್ರಹಿಸಿ ರಾತ್ರಿ ವೇಳೆ ಪೀಕ್ ಅವರ್‌ನಲ್ಲಿ ಪೂರೈಸುವ ಮೂರು ಯೋಜನೆಗಳನ್ನು 2027ನೇ ಮಾರ್ಚ್ ತಿಂಗಳಿಗಿಂತ ಮೊದಲು ಆರಂಭಿಸಲಾಗುವುದು. ರಾತ್ರಿ ನಾಲ್ಕು ಗಂಟೆಗಳ ಕಾಲ ವಿತರಿಸಲು ಈ ಯೋಜನೆಯಿಂದ ಕಾಸರಗೋಡು ಜಿಲ್ಲೆಗೆ ಅತೀ ಹೆಚ್ಚಿನ ಪ್ರಯೋಜನ ಲಭಿಸಲಿದೆ.

125 ಮೆಗಾವ್ಯಾಟ್ ಕಣ್ಣೂರಿನ ಶ್ರೀಕಂಠಪುರ ಯೋಜನೆಗೆ 160 ಮೆಗಾವ್ಯಾಟ್ ಸಾಮರ್ಥ್ಯ ಮತ್ತು ಕಾಸರಗೋಡಿನ ಮುಳ್ಳೇರಿಯದಲ್ಲಿ 60





ಮೆಗಾವ್ಯಾಟ್ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸಲಾಗುವುದು. ಅದೇ ರೀತಿಯಲ್ಲಿ ಜಿಲ್ಲೆಯ ವಿದ್ಯುತ್ ವ್ಯತ್ಯಯ, ವೋಲ್ಟೇಜ್ ಕೊರತೆ, ಮುಂಗಾರು ಹಂಗಾಮಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜನರ ಕುಂದುಕೊರತೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಆಯಾ ಶಾಸಕರ ನೇತೃತ್ವದ ಸಮಿತಿಗಳನ್ನು ಸಕ್ರಿಯಗೊಳಿಸಲು ತೀರ್ಮಾನಿಸಲಾಗಿದೆ.

ಗ್ರಾಹಕರು ನೀಡುವ ದೂರುಗಳನ್ನು ಪರಿಹರಿಸುವುದಕ್ಕಾಗಿ ಆಯಾ ವಿದ್ಯುತ್ ಸಬ್‌ಸ್ಟೇಶನ್‌ಗಳಲ್ಲಿ ವ್ಯವಸ್ಥೆ ಇರಲಿದೆ. ಇದಕ್ಕಾಗಿ ಕಾರ್ಯಪ್ರವೃತ್ತರಾಗಲು ಅಧಿಕಾರಿಗಳು ಸದಾ ಸಿದ್ಧರಾಗಬೇಕೆಂದು ರಾಜ್ಯ ವಿದ್ಯುತ್ ಖಾತೆ ಸಚಿವ ಸನ್ನಿ ಜೋಸೆಫ್ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿದ ಮಲಬಾರ್ ಜಿಲ್ಲೆಗಳ ಸಭೆಯಲ್ಲಿ ಸೂಚಿಸಲಾಗಿತ್ತು. ವಿದ್ಯುತ್ ವ್ಯತ್ಯಯದ ಜೊತೆಗೆ ಮಲಬಾರ್‌ನ ಕೆಲವು ಭಾಗಗಳಲ್ಲಿ ವೋಲ್ಟೇಜ್ ಸಮಸ್ಯೆಯೂ ಇದೆ. ನಿರ್ವಹಣೆ ಅಥವಾ ಹಠಾತ್ ಘಟನೆಗಳಿಂದಾಗಿ ವಿದ್ಯುತ್ ಕಡಿತಗೊಂಡರೆ ಸ್ಥಳೀಯ ಮಟ್ಟದ ವಾಟ್ಸ್‌ಆ್ಯಪ್ ಗ್ರೂಪ್‌ಗಳು, ವೆಬ್‌ಸೈಟ್ ಮತ್ತು ಮಾಧ್ಯಮಗಳ ಮೂಲಕ ಗ್ರಾಹಕರಿಗೆ ತಿಳಿಸಲು ನಿರ್ದೇಶಿಸಲಾಗಿದೆ.

ಬೋವಿಕ್ಕಾನದಲ್ಲಿ ಉಪಕೇಂದ್ರ

ಕಾಸರಗೋಡು ಜಿಲ್ಲೆಯಲ್ಲಿ ಸಬ್‌ಸ್ಟೇಶನ್‌ಗಳು ಕಡಿಮೆಯಿದ್ದು, ಈ ನಿಟ್ಟಿನಲ್ಲಿ ಉದುಮ ವಿಧಾನಸಭಾ ಕ್ಷೇತ್ರದ ಬೋವಿಕ್ಕಾನದಲ್ಲಿ ನೂತನ ಸಬ್‌ಸ್ಟೇಶನ್ ಸ್ಥಾಪಿಸಲು ಬೇಡಿಕೆ ಇರಿಸಲಾಗಿದೆ. ಮಳೆಗಾಲದಲ್ಲಿ ರಾತ್ರಿ ವೇಳೆ ಓವರ್ ಲೈನ್‌ಮನ್‌ಗೆ ಹೆಚ್ಚುವರಿ ಕರ್ತವ್ಯಕ್ಕೆ ಅವಕಾಶ ಕಲ್ಪಿಸಲು ಶಿಫಾರಸು ಸಿದ್ಧಪಡಿಸಿ ಸಲ್ಲಿಸಲು ತೀರ್ಮಾನಿಸಲಾಗಿದೆ.

ವಿದ್ಯುತ್ ಸಮಸ್ಯೆಗೆ ಪರಿಹಾರ

ಕಾಸರಗೋಡು, ಕಣ್ಣೂರು ಹಾಗೂ ವಯನಾಡು ಜಿಲ್ಲೆಗಳ ವಿದ್ಯುತ್ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸಲು ಮಲಬಾರ್ ಪ್ರದೇಶಕ್ಕೆ ವಿಶೇಷ ಕಾರ್ಯಯೋಜನೆ ತಯಾರಿಸಲಾಗುವುದು. ಕಾಸರಗೋಡು ಜಿಲ್ಲೆಯ ನಾಲ್ಕು ಕಂದಾಯ ತಾಲೂಕುಗಳಲ್ಲಿ ಯಾವುದೇ ರೀತಿಯ ವಿದ್ಯುತ್ ಸಮಸ್ಯೆ ಎದುರಾದಲ್ಲಿ ತಕ್ಷಣ ಸ್ಪಂದಿಸುವಂತೆ ಕೆಎಸ್‌ಇಬಿಗೆ ವಿದ್ಯುತ್ ಇಲಾಖೆಯು ಸೂಚಿಸಿದೆ. ಮಾತ್ರವಲ್ಲದೆ ಜಿಲ್ಲೆಯಲ್ಲಿ ವೋಲ್ಟೇಜ್ ಸಮಸ್ಯೆ ಹಾಗೂ ವಿದ್ಯುತ್ ಕೊರತೆ ಎದುರಿಸುತ್ತಿರುವ ಪ್ರದೇಶಗಳಲ್ಲಿ ಪ್ರಥಮ ಹಂತದಲ್ಲಿ ಸೋಲಾರ್ ಪ್ಲಾಂಟ್ ಮೂಲಕ ಸೌರಶಕ್ತಿ ಒದಗಿಸಲು ನಿರ್ಧರಿಸಲಾಗಿದೆ. ಈ ಮೂಲಕ ಜನರಿಗೆ ದಿನದ 24 ಗಂಟೆಗಳ ಕಾಲವೂ ವಿದ್ಯುತ್ ಲಭ್ಯಗೊಳಿಸುವಂತೆ ಯೋಜನೆ ರೂಪಿಸಲಾಗುವುದು. ಮಾತ್ರವಲ್ಲದೆ ಮಳೆಗಾಲದಲ್ಲಿ ವಿದ್ಯುತ್ ಕಂಬ, ತಂತಿಗಳು, ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಸಂಬಂಧಿತ ಉಪಕರಣಗಳು ಹಾನಿಗೀಡಾದಲ್ಲಿ ತಕ್ಷಣ ವ್ಯವಸ್ಥೆ ಕೈಗೊಳ್ಳುವಂತೆ ಕೆಎಸ್‌ಇಬಿಗೆ ನಿರ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಕೆಎಸ್‌ಇಬಿ ಅಧಿಕಾರಿಗಳು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು, ವಿದ್ಯುತ್ ಗ್ರಾಹಕರಿಗೆ ಯಾವುದೇ ರೀತಿಯ ಅಡಚಣೆಗಳು ಸಂಭವಿಸದಂತೆ ಎಚ್ಚರ ವಹಿಸುತ್ತಿದ್ದಾರೆ.

ಪ್ರತಿ ಮನೆಯಲ್ಲೂ ಗ್ರಂಥಾಲಯ ಇರಬೇಕು: ಡಾ.ವಾಮನ್ ರಾವ್



ಕಾಸರಗೋಡು: ನಗರದ ಬಿಇಎಂ ಹೈಯರ್ ಸೆಕೆಂಡರಿ ಶಾಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ವಾಚನ ವಾರಾಚರಣೆಯ ಪ್ರಯುಕ್ತ ಜೀವನದಲ್ಲಿ ಪುಸ್ತಕದ ಮಹತ್ವ ಎಂಬ ಕಾರ್ಯಕ್ರಮದ ಭಾಗವಾಗಿ ಶುಕ್ರವಾರ ವಿಚಾರಗೋಷ್ಠಿ ನಡೆಯಿತು.

ನುಳ್ಳಿಪ್ಪಾಡಿ ಕನ್ನಡ ಭವನ ಗ್ರಂಥಾಲಯದ ಸ್ಥಾಪಕ ಸಂಚಾಲಕ ಡಾ.ವಾಮನ್ ರಾವ್ ಬೇಕಲ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ವಿಚಾರ ಮಂಡನೆ ಮಾಡಿದರು. ವಿದ್ಯಾಭ್ಯಾಸಕ್ಕಾಗಿ ಪಾಠಪುಸ್ತಕಗಳೊಂದಿಗೆ ಶ್ರೇಷ್ಠ ಜ್ಞಾನ ಪ್ರಾಪ್ತಿಗಾಗಿ ವಿದ್ವತ್ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪ್ರತಿ ಮನೆಯಲ್ಲಿ ಪುಟ್ಟ ಗ್ರಂಥಾಲಯವನ್ನು ಸ್ಥಾಪಿಸಬೇಕು ಎಂದು ವಿದ್ಯಾರ್ಥಿಗಳಿಗೆ ಅವರು ಕರೆ ನೀಡಿದರು.

ಬಿಇಎಂ ಹೈಯರ್ ಸೆಕೆಂಡರಿ ಶಾಲಾ ಪ್ರಾಂಶುಪಾಲ ಕೆ.ಪಿ.ರಾಜೇಶ್ಚಂದ್ರ ಅಧ್ಯಕ್ಷತೆ ವಹಿಸಿದ್ದರು.

ಗ್ರಂಥಾಲಯಕ್ಕೆ ಪುಸ್ತಕ ಕೊಡುಗೆ

ಕಾರ್ಯಕ್ರಮದಲ್ಲಿ ಕನ್ನಡ ಭವನ ಗ್ರಂಥಾಲಯದ ವತಿಯಿಂದ ಡಾ.ವಾಮನ್ ರಾವ್ ಬೇಕಲ್ ಸುಮಾರು 3000 ರೂ. ಮೊತ್ತದ ಪುಸ್ತಕಗಳನ್ನು ಬಿಇಎಂ ಶಾಲಾ ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದರು.

ಶಾಲಾ ವಿದ್ಯಾರ್ಥಿಗಳಿಗೆ ನುಳ್ಳಿಪ್ಪಾಡಿ ಗ್ರಂಥಾಲಯಕ್ಕೆ ಒಂದು ದಿನದ ಪುಸ್ತಕಗಳೊಂದಿಗೆ ಸಂವಾದ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಪ್ರಾಧ್ಯಾಪಕ ಶಾಜಿ ಕೆ.ಎ. ಸ್ವಾಗತಿಸಿ, ಶಾಲಾ ವಿದ್ಯಾರ್ಥಿ ನಾಯಕಿ ಅಂಜೆಲ್ ಮೇರಿ ಸಾಜನ್ ಧನ್ಯವಾದವಿತ್ತರು. ಸ್ಟಾಫ್ ಸೆಕ್ರೆಟರಿ ವೀಣಾ ಎಚ್. ಕಾರ್ಯಕ್ರಮ ನಿರೂಪಿಸಿದರು.

ಕುಂಡಂಗುಳಿ ಸಾವಿತ್ರಿಬಾಯಿ ಫುಲೆ ಶಾಲೆ ನೂತನ ಕಟ್ಟಡಕ್ಕೆ ಸ್ಥಳಾಂತರ



ಕಾಸರಗೋಡು: ಕುಂಡಂಗುಳಿ ಸಾವಿತ್ರಿ ಬಾಯಿ ಫುಲೆ ಶಾಲೆ ಕಾರ್ಯಾಚರಣೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶನ ನೀಡಿದ್ದಾರೆ. ಜು. 15ರೊಳಗೆ ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ಕ್ರಮಗಳು ಪೂರ್ತಿಗೊಳ್ಳಬೇಕೆಂದು ಅವರು ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳು ಶುಕ್ರವಾರ ಶಾಲೆಗೆ ಭೇಟಿ ನೀಡಿ ಶಾಲೆಯ ಚಟುವಟಿಕೆಗಳು ಮತ್ತು ನ್ಯೂನತೆಗಳನ್ನು ಪರಿಶೀಲಿಸಿದ ನಂತರ ಈ ಆದೇಶ ನೀಡಿದ್ದಾರೆ. ಮಕ್ಕಳಿಗೆ ವಸತಿ ಸೌಲಭ್ಯಗಳು ಸದ್ಯಕ್ಕೆ ಹಳೆಯ ಶಾಲಾ ಕಟ್ಟಡದಲ್ಲಿಯೇ ಮುಂದುವರಿಯುತ್ತಿವೆ. ಅಧ್ಯಯನ ಉದ್ದೇಶಕ್ಕಾಗಿ ಶಾಲೆಗೆ 10 ಲ್ಯಾಪ್‌ಟಾಪ್‌ಗಳು ಮತ್ತು ಸಂವಹನ ಮಂಡಳಿಯನ್ನು ಅನುಮತಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ನುಡಿದರು.

10 ತರಗತಿಗಳನ್ನು ಒಳಗೊಂಡ ಎರಡು ಮಹಡಿಗಳ ಕೆಲಸ ಪೂರ್ಣಗೊಂಡಿದೆ. ಆಡಳಿತಾತ್ಮಕ ಬ್ಲಾಕ್, ಸಿಬ್ಬಂದಿ ಕೊಠಡಿಗಳು, ಪ್ರಯೋಗಾಲಯ ಮತ್ತು ಐಟಿ ಕೊಠಡಿಗಳ ಕೆಲಸ ಪೂರ್ಣಗೊಂಡಿವೆ. ಹೈಯರ್ ಸೆಕೆಂಡರಿ ಕಟ್ಟಡ ಮತ್ತು ಸುತ್ತಮುತ್ತಲಿನ ಆವರಣಗೋಡೆಯ ಅಂದಾಜು ಸಿದ್ಧಪಡಿಸಿ ಸಲ್ಲಿಸಲು ಪಿಡಬ್ಲ್ಯುಡಿ ಸಹಾಯಕ ಇಂಜಿನಿಯರ್‌ಗೆ ಸೂಚಿಸಲಾಗಿದೆ ಎಂದರು.

ಬೇಡಡ್ಕ ಗ್ರಾ.ಪಂ. ಅಧ್ಯಕ್ಷ ಇ. ಕುಂಞರಾಮನ್, ಪಿಟಿಎ ಅಧ್ಯಕ್ಷ ಮುರಳಿ, ಪಿಡಬ್ಲ್ಯುಡಿ ಸಹಾಯಕ ಇಂಜಿನಿಯರ್ ರಂಜಿನಿ, ಕಾಸರಗೋಡು ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ವಿ.ರಾಘವನ್, ಸಹಾಯಕ ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ಎಂ.ಪ್ರಸನ್ನ, ಮುಖ್ಯೋಪಾಧ್ಯಾಯಿನಿ ಕೆ.ವೀಣಾ, ಹಿರಿಯ ಅಧೀಕ್ಷಕ ಗಿರೀಶ್, ಶಾಲಾ ವ್ಯವಸ್ಥಾಪಕ ಪ್ರಶಾಂತ್‌ಕುಮಾರ್ ಈ ವೇಳೆ ಹಾಜರಿದ್ದರು.

ಸಾಂಕ್ರಾಮಿಕ ರೋಗ ತಡೆ ಚಟುವಟಿಕೆ: ಪಿಲಿಕ್ಕೋಡಲ್ಲಿ ಜಿಲ್ಲಾಮಟ್ಟದ ಉದ್ಘಾಟನೆ



ಕಾಸರಗೋಡು: ವಿವಿಧ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ಶಾಲೆಗಳನ್ನು ಕೇಂದ್ರೀಕರಿಸಿ ನಡೆಸುತ್ತಿರುವ ವಿವಿಧ ಚಟುವಟಿಕೆಗಳ ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಪಿಲಿಕ್ಕೋಡು ಗ್ರಾಮ ಪಂಚಾಯತ್ ಅಧ್ಯಕ್ಷ ಇ.ಕುಂಞರಾಮನ್ ಅವರು ಪಿಲಿಕ್ಕೋಡು ಸರಕಾರಿ ಯುಪಿ ಶಾಲೆಯಲ್ಲಿ ಶುಕ್ರವಾರ ನೆರವೇರಿಸಿದರು.

ಕಾರ್ಯಕ್ರಮದ ಭಾಗವಾಗಿ ಮಕ್ಕಳು ಮತ್ತು ಪೋಷಕರಿಗೆ ಜಾಗೃತಿ ತರಗತಿಗಳು ಮತ್ತು ಶಾಲೆಯೊಳಗೆ ಕ್ಲೋರಿನೀಕರಣ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಬಿ.ಸಂತೋಷ್ ಮುಖ್ಯ ಭಾಷಣ ಮಾಡಿದರು.

ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎನ್.ರವೀಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಕೆ. ಹರಿದಾಸ್, ಜಿಲ್ಲಾ ಶಿಕ್ಷಣ ಮತ್ತು ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್, ಉಪ ಜಿಲ್ಲಾ ಶಿಕ್ಷಣ ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್, ಪಿಟಿಎ ಅಧ್ಯಕ್ಷ ಟಿ.ಪ್ರದೀಪ್, ಮಾತೃ ಪಿಟಿಎ ಅಧ್ಯಕ್ಷೆ ಅಶ್ವತಿ ಮಹೇಶ್ ಮಾತನಾಡಿದರು. ಶಾಲಾ ನಾಯಕಿ ಅಮೇಯಾ ಅವರು ತಂಬಾಕು ವಿರೋಧಿ ಪ್ರತಿಜ್ಞೆ ಬೋಧಿಸಿದರು. ಮುಖ್ಯೋಪಾಧ್ಯಾಯಿನಿ ವಿ.ಯಮುನಾ ಸ್ವಾಗತಿಸಿ, ಆರೋಗ್ಯ ನಿರೀಕ್ಷಕ ಪಿ.ವಿ.ಮಹೇಶ್‌ಕುಮಾರ್ ವಂದಿಸಿದರು.

ಧರ್ಮತ್ತಡ್ಕದಲ್ಲಿ ಮುಳ್ಳೇರಿಯ ಮಂಡಲಾಂತರ್ಗತ ಗುಂಪೆ ವಲಯ ಸಭೆ



ಕುಂಬಳೆ: ಮುಳ್ಳೇರಿಯ ಮಂಡಲಾಂತರ್ಗತ ಗುಂಪೆ ವಲಯದ ಜೂನ್ ತಿಂಗಳ ಸಭೆಯು ಧರ್ಮತ್ತಡ್ಕದ ಗುಂಪೆ ವಲಯ ಕಚೇರಿಯಲ್ಲಿ ನಡೆಯಿತು.

ವಲಯ ಅಧ್ಯಕ್ಷ ಕುಮಾರ ಸುಬ್ರಹ್ಮಣ್ಯ ಕೊಂದಲಕಾಡು ಅಧ್ಯಕ್ಷತೆ ವಹಿಸಿದ್ದರು. ಕೇಶವಪ್ರಸಾದ ಎಡಕ್ಕಾನ ಗತಸಭೆಯ ವರದಿ ನೀಡಿದರು. ಹಳ್ಳಕೋಡ್ಲು ಗೋವಿಂದ ಭಟ್ ಲೆಕ್ಕಪತ್ರ ಮಂಡಿಸಿದರು. ಪುತ್ತಿಗೆ ಕೃಷ್ಣ ಹೆಬ್ಬಾರ್ ಕುಟುಂಬ ವಾಸವಿದ್ದ ಮನೆಯು ತೀರಾ ಜೀರ್ಣಾವಸ್ಥೆಯಲ್ಲಿದ್ದ ಹಿನ್ನೆಲೆಯಲ್ಲಿ ಶ್ರೀ ಮಠದ ಆಶ್ರಯದಲ್ಲಿ ಸೋರುಗೊಂಡು ಸೂರು ಯೋಜನೆಯನ್ನು ಕೈಗೆತ್ತಿಕೊಂಡು ಪೂರ್ತಿಗೊಳಿಸಲಾಯಿತು. ದಾನಿಗಳಾದ ಎಡಕ್ಕಾನ ಮಹಾಬಲೇಶ್ವರ ಭಟ್, ಮಹಾಮಂಡಲದ ಪ್ರಮುಖರ ಉಪಸ್ಥಿತಿಯಲ್ಲಿ ಪ್ರವೇಶೋತ್ಸವ ನೆರವೇರಿಸಲಾಗಿತ್ತು. ಬಜಕೂಡ್ಲು ಅಮೃತಧಾರಾ ಗೋಶಾಲೆಯಲ್ಲಿ ನಡೆದ ಶನಿ ನಮನ, ತಾಪ ಶಮನ ಕಾರ್ಯಕ್ರಮ ಅದ್ಭುತಯಶಸ್ಸುಕಂಡಿದ್ದುಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಸಲಾಯಿತು. ಶ್ರೀ ಸುವರ್ಣ ಪಾದುಕಾ 3ನೇ ಆವೃತ್ತಿಯ ಸವಾರಿಯು ಮಡ್ವ ಘಟಕ ಶ್ರಾವಣಕೆರೆ ಕೇಶವ ಹೆಬ್ಬಾರ್ ಅವರ ಮನೆಗೆ ಜು.8ರಂದು ಆಗಮಿಸಿ 9ರಂದು ಮನೆ ಮನೆ ಸಂಚಾರ, ಗುರು ಪಾದುಕಾ ಭಿಕ್ಷಾ ಸೇವೆ ನಡೆಸುವ ಬಗ್ಗೆ ಸಮಾಲೋಚಿಸಿ ತೀರ್ಮಾನಿಸಲಾಯಿತು.

ಮುಳ್ಳೇರಿಯ ಮಂಡಲ ಗುಂಪೆ ವಲಯ ಘಟಕದ ವ್ಯಾಪ್ತಿಯ 8 ವಿದ್ಯಾರ್ಥಿಗಳಾದ ಆತ್ಮೀಕಾ ಗುಂಪೆ, ಮನೋಜ್ಞ ಮೇಪೋಡು, ಅರ್ಪಣ ನೆರಿಯ, ಮನೀಶ್ ಗುಂಪೆ, ಅಪೂರ್ವ ಎಡಕ್ಕಾನ, ಆದರ್ಶ ನಾರಾಯಣ ಪಿ.ಎ. ಪುತ್ತಿಗೆ, ತನುಷ್‌ಕುಮಾರ್ ಎನ್. ನೇರೋಳು, ಸಿಂಜಿತ ಕೆ. ನೆಕ್ಕಿಗುಳಿ ಅವರನ್ನು ಪುರಸ್ಕರಿಸಲಾಯಿತು.

ವಿ.ಡಿ. ಸತೀಶನ್ ಮಂಡಿಸಿದ ಬಜೆಟ್ ಜಿಲ್ಲೆಗೆ ನಿರಾಶೆ ತಂದಿದೆ: ಎಂ.ಎಲ್. ಅಶ್ವಿನಿ

- **ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡುವುದು ಬೇಜವಾಬ್ದಾರಿಯ ಪರಮಾವಧಿ**

ಕಾಸರಗೋಡು: 13 ವರ್ಷಗಳಿಂದ ಪೂರ್ಣಗೊಳ್ಳದ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು ಕಟ್ಟಡವನ್ನು ಸಂಪೂರ್ಣವಾಗಿ ಪೂರ್ತಿಗೊಳಿಸಲು ಅನುದಾನ ಒದಗಿಸದೆ ದಕ್ಷಿಣ ಕೇರಳದಲ್ಲಿ ಎರಡು ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದಾಗಿ ಯುಡಿಎಫ್ ಸರಕಾರವು ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿರುವುದು ಜಿಲ್ಲೆಯನ್ನು ನಿರ್ಲಕ್ಷಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಹೇಳಿದ್ದಾರೆ.




ಜಿಲ್ಲೆಯಲ್ಲಿ ಸಾರ್ವಜನಿಕ ಅಥವಾ ಖಾಸಗಿ ವಲಯದಲ್ಲಿ ಒಂದೇ ಒಂದು ವೈದ್ಯಕೀಯ ಕಾಲೇಜು ಇಲ್ಲದಿರುವಾಗ ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸುತ್ತಿರುವ ಸರಕಾರವು ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡುವುದು ಬೇಜವಾಬ್ದಾರಿಯ ಪರಮಾವಧಿಯಾಗಿದೆ. ಇಂದಿರಾ ಗ್ಯಾರಂಟಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣದ ಭರವಸೆಯನ್ನು ಮಾತ್ರ ಜಾರಿಗೆ ತರಲಾಗಿದೆ. ಅದು ಕೂಡಾ ಸಾಮಾನ್ಯ ಬಸ್‌ಗಳಿಗೆ ಸೀಮಿತವಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೇವಲ 10 ಕೋಟಿ ರೂ. ಮೊತ್ತದೊಂದಿಗೆ ಪ್ರತಿ ಕುಟುಂಬಕ್ಕೆ 25 ಲಕ್ಷ ರೂ.ಗಳ ಆರೋಗ್ಯ ವಿಮೆ ಒದಗಿಸಿರುವುದರಿಂದ ಹೆಚ್ಚಿನ ಯಾವುದೇ ಪ್ರಯೋಜನವಿಲ್ಲ. ಬಜೆಟ್ ಮಂಡಿಸಿದ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಹೊಸ ಹಣಕಾಸಿನ ಮೂಲಗಳನ್ನು ಹುಡುಕಲು ಅಥವಾ ವೆಚ್ಚವನ್ನು ಕಡಿತಗೊಳಿಸಲು ಸ್ಪಷ್ಟವಾದ ಕ್ರಿಯಾ ಯೋಜನೆಯನ್ನು ಮಂಡಿಸಲು ವಿಫಲರಾಗಿದ್ದಾರೆ ಎಂದು ಎಂ.ಎಲ್. ಅಶ್ವಿನಿ ಉಲ್ಲೇಖಿಸಿದ್ದಾರೆ.

ಜಿಲ್ಲೆಯಲ್ಲಿ ಆರೋಗ್ಯ, ಉನ್ನತ ಶಿಕ್ಷಣ, ಉದ್ಯೋಗ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಯಾವುದೇ ಹೊಸ ಸಂಸ್ಥೆಗಳಿಗೆ ಅವಕಾಶ ನೀಡಲಾಗಿಲ್ಲ, ಉನ್ನತ ಶಿಕ್ಷಣ, ಉತ್ತಮ ಚಿಕಿತ್ಸೆ ಮತ್ತು ಉದ್ಯೋಗಾವಕಾಶಗಳಿಗಾಗಿ ಕರ್ನಾಟಕದ ಸಂಸ್ಥೆಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಯುಡಿಎಫ್ ಆಡಳಿತದಲ್ಲೂ ಮುಂದುವರಿಯಲಿದೆ ಎಂಬುದು ವಿ.ಡಿ.ಸತೀಶನ್ ಅವರ ಚೊಚ್ಚಲ ಬಜೆಟ್‌ನಿಂದ ಸ್ಪಷ್ಟವಾಗಿದೆ. ಜಿಲ್ಲೆಯ ಯುಡಿಎಫ್ ಶಾಸಕರು ಈ ನಿರ್ಲಕ್ಷ್ಯಕ್ಕೆ ಸ್ಪಂದಿಸಲು ಮತ್ತು ಜಿಲ್ಲೆಯ ಜನರ ಕ್ಷಮೆಯಾಚಿಸಲು ಸಿದ್ಧರಾಗಿರಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಪ್ರತಿಕ್ರಿಯಿಸಿದ್ದಾರೆ.



ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಐಟಿಯಲ್ಲಿ ಗಣಿತ ವಿಭಾಗದಲ್ಲಿ ಪಿಎಚ್‌ಡಿ ಪದವಿಯನ್ನು ಪಡೆದ ಮಂಗಲ್ಪಾಡಿ ಪ್ರತಾಪನಗರದ ನಿತೀಶ್‌ಕುಮಾರ್‌ಗೆ ಬೂತ್‌ನ ಬಿಜೆಪಿ ಕಾರ್ಯಕರ್ತರ ಪರವಾಗಿ ವಾರ್ಡ್ ಸದಸ್ಯ, ಬಿಜೆಪಿ ಕುಂಬಳೆ ಮಂಡಲ ಪ್ರಧಾನ ಕಾರ್ಯದರ್ಶಿ ವಸಂತಕುಮಾರ್ ಮಯ್ಯ, ಗೌರವಿಸಿದರು. ಬೂತ್ ಸಮಿತಿ ಅಧ್ಯಕ್ಷ ಉದಯಶಂಕರ ಶೆಟ್ಟಿ, ಬೂತ್ ಪ್ರಧಾನ ಕಾರ್ಯದರ್ಶಿ ಪ್ರವೀಣ್, ದಯಾನಂದ, ಮೋಹನ ಪೂಜಾರಿ, ಓಂಪ್ರಕಾಶ್, ಅನಿಲ್ ಪೂಜಾರಿ, ಸುಚಿನ್, ಮನೀಶ್ ಇದ್ದರು.



ಶ್ರೀ ಕ್ಷೇತ್ರ, ಧರ್ಮಸ್ಥಳ ಯೋಜನೆ ಕುಂಬಳೆ ವಲಯದ ಕಿದೂರು ಗ್ರಾಮದ ಗಂಗಾಧರ ಅವರ ಪುತ್ರಿ ಅಕ್ಷಿತಾ ಅವರ ಚಿಕಿತ್ಸೆಗೆ ಮಂಜೂರು ಮಾಡಿರುವ 40,000 ರೂ. ಮೊತ್ತದ ಮಂಜೂರಾತಿ ಪತ್ರವನ್ನು ವಿತರಿಸಲಾಯಿತು. ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ಮಂಜುನಾಥ ಆಳ್ವ ಮಡ್ವ, ಯೋಜನಾಧಿಕಾರಿ ಶಶಿಕಲಾ ಸುವರ್ಣ, ವಲಯ ಜನಜಾಗೃತಿ ವೇದಿಕೆ ಅಧ್ಯಕ್ಷ ಮಹೇಶ್ ಪುಣಿಯೂರು, ಮೇಲ್ವಿಚಾರಕ ಅಭಿಷೇಕ್, ಸೇವಾ ಪ್ರತಿನಿಧಿ ಸರಿತಾ ಇದ್ದರು.

ಶ್ರೀ ಕ್ಷೇತ್ರವೊಂದಕ್ಕೆ ಭಕ್ತರೊಬ್ಬರು ಉಚಿತವಾಗಿ ನೀಡಿದ ಭೂಮಿ ತೆರಿಗೆ ಪಾವತಿ ವೇಳೆ ವಿಜಿಲೆನ್ಸ್ ದಾಳಿ

ಉಪ್ಪಳ ಗ್ರಾಮ ಕಚೇರಿಯಲ್ಲಿ ಲಂಚ ಸ್ವೀಕರಿಸುತ್ತಿದ್ದ ನೌಕರ ಸೆರೆ

ಮಂಜೇಶ್ವರ: ಐದು ಸಾವಿರ ರೂಪಾಯಿ ಲಂಚ ಪಡೆಯುತ್ತಿದ್ದ ವೇಳೆ ಗ್ರಾಮ ಕಚೇರಿ ನೌಕರರನ್ನು ವಿಜಿಲೆನ್ಸ್ ಅಧಿಕಾರಿಗಳು ಬಂಧಿಸಿದ ಘಟನೆ ನಡೆದಿದೆ. ಕೋಡಿಬೈಲು ನಿವಾಸಿ, ಉಪ್ಪಳ ಗ್ರೂಪ್ ಗ್ರಾಮ ಕಚೇರಿಯ ಕ್ಯಾಶ್ವಲ್ ಸ್ವೀಪರ್ ಕೆ.ಶಿವಪ್ರಸಾದ್ (42) ಸೆರೆಗೀಡಾದ ವ್ಯಕ್ತಿ.

ಈತನನ್ನು ಕಾಸರಗೋಡು ವಿಜಿಲೆನ್ಸ್ ಆ್ಯಂಡ್ ಆ್ಯಂಟಿ ಕರಪ್ಷನ್ ಬ್ಯೂರೋದ ಡಿವೈಎಸ್‌ಪಿ ಉಣ್ಣಿಕೃಷ್ಣನ್ ಮತ್ತು ತಂಡವು ಬಂಧಿಸಿದೆ. ಗುರುವಾರ ಉಪ್ಪಳ ಗ್ರಾಮ ಕಚೇರಿಯಲ್ಲಿ ವಿಜಿಲೆನ್ಸ್ ತಪಾಸಣೆ ನಡೆಯಿತು. ಶ್ರೀಕ್ಷೇತ್ರವೊಂದಕ್ಕೆ ಭಕ್ತರೊಬ್ಬರು ಉಚಿತವಾಗಿ ನೀಡಿದ ಭೂಮಿಯ ತೆರಿಗೆಯನ್ನು ಸಮಿತಿ ಹೆಸರಿನಲ್ಲಿ ಪಾವತಿಸಲು ಬಂದ ವ್ಯಕ್ತಿಯಿಂದ ಲಂಚ ಪಡೆಯುತ್ತಿದ್ದಾಗ ಆತನನ್ನು ಸೆರೆ



ಹಿಡಿಯಲಾಯಿತು.

ದೂರುದಾರ ಒಂದು ತಿಂಗಳ ಹಿಂದೆ ತೆರಿಗೆಯನ್ನು ಸಮಿತಿಯ ಹೆಸರಿಗೆ ಬದಲಾಯಿಸಲು ಗ್ರಾಮ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಸ್ಥಳದ ತೆರಿಗೆ ರಶೀದಿಯು ಈ ಹಿಂದಿನ ಮಾಲಕನ ಹೆಸರಿನಲ್ಲಿರುವುದರಿಂದ ತುಂಬಾ ಕೆಲಸವಿದೆ ಮತ್ತು ತಕ್ಷಣ ಪಾವತಿಸಲು ಸಾಧ್ಯವಿಲ್ಲವೆಂದು ವಿಶೇಷ ಗ್ರಾಮಾಧಿಕಾರಿ ಅರ್ಜಿದಾರನಲ್ಲಿ ತಿಳಿಸಿದ್ದರು.

ಇದರಿಂದಾಗಿ ಹೊರಗೆ ಹೋಗಲು ಸಿದ್ಧನಾದ ಅರ್ಜಿದಾರನನ್ನು ಗ್ರಾಮ ಕಚೇರಿ ನೌಕರ ಶಿವಪ್ರಸಾದ್ ಭೇಟಿಯಾಗಿದ್ದು, ವಿಶೇಷ ಗ್ರಾಮಾಧಿಕಾರಿಯವರಲ್ಲಿ ಕೂಡಲೇ ಮಾಡಿಸಿ ಕೊಡುವುದಾಗಿ ಮತ್ತು ಅದಕ್ಕೆ ಸಾಕಷ್ಟು ಖರ್ಚು ಇದೆ ಎಂದು ತಿಳಿಸಿದ್ದಾನೆ. ನಂತರ ಒಂದು ವಾರ ಕಳೆದು ಅರ್ಜಿದಾರ ಗ್ರಾಮ ಕಚೇರಿಗೆ ಆಗಮಿಸಿ ಶಿವಪ್ರಸಾದ್‌ನನ್ನು ಭೇಟಿಯಾಗಿದ್ದು, ಬಳಿಕ ಜೂ.11ರಂದು ವಿಶೇಷ ಗ್ರಾಮಾಧಿಕಾರಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು.

ಈ ಸಂದರ್ಭ 1500 ರೂ. ಪಡೆದ ಬಳಿಕ ಇನ್ನೂ 5000 ರೂ. ನೀಡಬೇಕೆಂದು ತಿಳಿಸಿ ಮರಳಿದ್ದರು. ಅದರಂತೆ ಗುರುವಾರ ಅರ್ಜಿದಾರ ಮತ್ತೆ ಗ್ರಾಮ ಕಚೇರಿಗೆ ಆಗಮಿಸಿದ್ದರು. ಈ ಸಂದರ್ಭ ಅವರ ಯಾವುದೇ ಕೆಲಸ ನಡೆದಿರಲಿಲ್ಲ, ಇದೇ ವೇಳೆ 5000 ರೂ. ನೀಡಬೇಕೆಂದು ಶಿವಪ್ರಸಾದ್ ದೂರುದಾರನಿಗೆ ಫೋನ್ ಕರೆ ಮಾಡಿ ತಿಳಿಸಿದ್ದನು. ಈ ವಿಷಯದ ಬಗ್ಗೆ ದೂರುದಾರ ವಿಜಿಲೆನ್ಸ್‌ಗೆ ನೇರವಾಗಿ ಮಾಹಿತಿ ನೀಡಿದರು. ಅದರಂತೆ ವಿಜಿಲೆನ್ಸ್ ತಂಡವು ಗ್ರಾಮ ಕಚೇರಿಗೆ ಆಗಮಿಸಿತ್ತು. ಹಣ ಲಂಚ ಪಡೆಯುತ್ತಿದ್ದ ವೇಳೆ ಶಿವಪ್ರಸಾದ್‌ನನ್ನು ವಿಜಿಲೆನ್ಸ್ ಅಧಿಕಾರಿಗಳು ಕಯ್ಯಾರೆಸೆರೆಹಿಡಿದಿದ್ದಾರೆ. ವಿಜಿಲೆನ್ಸ್‌ತಂಡದಲ್ಲಿ ಇನ್‌ಸ್ಪೆಕ್ಟರ್ ಪಿ.ನಾರಾಯಣನ್, ಎಸ್‌ಐ ರಾಧಾಕೃಷ್ಣನ್, ರಿಜೇಶ್, ಸಂತೋಷ್, ಜಯಚಂದ್ರನ್, ರಮೇಶನ್, ಸಜೇಶ್, ವಿಜೇಶ್, ಶ್ರೀಜಿತ್, ರತೀಶ್ ಬಾಬು, ಲಿಜಿನ್ ಮುಂತಾದವರಿದ್ದರು.

ಖಂಡಿಗೆ | ಮಾಣಿಲ ಸ್ವಾಮೀಜಿ ಮತ್ತಿತರರು ಭಾಗಿ

ಶ್ರೀಕೃಷ್ಣ ಮಂದಿರಕ್ಕೆ ಶಿಲಾನ್ಯಾಸ

ಪೆರ್ಲ: ಪೆರ್ಲ ಸಮೀಪದ ಖಂಡಿಗೆಯಲ್ಲಿ ನಿರ್ಮಾಣಗೊಳ್ಳಲಿರುವ ಶ್ರೀಕೃಷ್ಣ ಮಂದಿರದ ಶಿಲಾನ್ಯಾಸ ಕಾರ್ಯಕ್ರಮವನ್ನು ವೇದಮೂರ್ತಿ ಶಿವಸುಬ್ರಹ್ಮಣ್ಯ ಭಟ್ ಕುಳುವಾಳಮೂಲೆ ನೇತೃತ್ವದಲ್ಲಿ ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ನೆರವೇರಿಸಿದರು.



ಶಿಲ್ಪಿ ವಿಷ್ಣು ಆಚಾರ್ಯ ಪುತ್ತಿಗೆ, ನಿರ್ಮಾಣ ಸಮಿತಿ ಗೌರವಾಧ್ಯಕ್ಷ ಸುಧೀರ್‌ಕುಮಾರ್ ಶೆಟ್ಟಿ ಎಣ್ಮಕಜೆ, ಅಧ್ಯಕ್ಷ ಸದಾಶಿವ ಭಟ್ ಹರಿನಿಲಯ, ಪ್ರಧಾನ ಕಾರ್ಯದರ್ಶಿ ಶಂಕರ ಕುಲಾಲ್ ಖಂಡಿಗೆ, ಕೋಶಾಧಿಕಾರಿ ಉದಯ ಚೆಟ್ಟಿಯಾರ್ ಬಜಕೂಡ್ಲು, ಕಿಶೋರ್‌ಕುಮಾರ್ ಶೇಣಿ ಸಹಿತ ಹಲವು ಮಂದಿ ಗಣ್ಯರು ಈ ಸಂದರ್ಭದಲ್ಲಿ ಇದ್ದರು. ಶ್ರೀಕೃಷ್ಣ ನಿಧಿ ಯೋಜನೆಯ ಮೊದಲ ಅದೃಷ್ಟವಂತರಾದ ರೇವತಿ ಪೆರ್ಲ ಅವರಿಗೆ ಶ್ರೀಗಳು ಬಹುಮಾನವನ್ನು ಹಸ್ತಾಂತರಿಸಿದರು.

ಸುತ್ತಮುತ್ತ

ಇಂದು ವಿಶೇಷ ಗ್ರಾಮಸಭೆ

ಕಾಪು: ಬೆಳಪು ಗ್ರಾ.ಪಂ. ಇದರ 2026–27ನೇ ಸಾಲಿನ ಪ್ರಥಮ ಹಂತದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಮತ್ತು 15ನೇ ಹಣಕಾಸು ಆಯೋಗದ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನದಡಿ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳ ಸಾಮಾಜಿಕ ಪರಿಶೋಧನೆಯ ವಿಶೇಷ ಗ್ರಾಮಸಭೆ ಅಬ್ದುಲ್ ನಝೀರ್ ಸಾಬ್ ಸಭಾಂಗಣದಲ್ಲಿ ಜೂ.20ರ ಬೆಳಿಗ್ಗೆ ಗಂಟೆ 10ಕ್ಕೆ ನಡೆಯಲಿದೆ.

ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ ಪ್ರವೇಶಾತಿ: ಅರ್ಜಿ ಆಹ್ವಾನ

ಉಡುಪಿ: ಮೈಸೂರು ಸಿದ್ಧಾರ್ಥ ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ) ಇಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ಪದ್ಧತಿಯಂತೆ ಪ್ರಥಮ ವರ್ಷದ ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ಸ್ (ಬಿ.ವಿ.ಎ) – ಸ್ನಾತಕ ಪದವಿ ತರಗತಿಗಳ ಪ್ರವೇಶಾತಿಗಾಗಿ ದ್ವಿತೀಯ ಪಿಯುಸಿ / ಸಮಾನಾಂತರ ಕೋರ್ಸುಗಳಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಂದ ವೆಬ್‌ಸೈಟ್ https://uucms.karnataka.gov.in ನಲ್ಲಿ ಆನ್‌ಲೈನ್ ಮೂಲಕ ಜೂನ್ 22 ರ ವರೆಗೆ (ದಂಡ ಶುಲ್ಕದೊಂದಿಗೆ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್, ಅನ್ವಯಕಲೆ, ಕಲಾ ಇತಿಹಾಸ ಹಾಗೂ ಚಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ.

ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜೂನ್ 23 ರಂದು ನಡೆಸಲಾಗುವುದು. ಮಾಹಿತಿಗಾಗಿ ಕಾರ್ಯಾಲಯದ ದೂ.ಸಂಖ್ಯೆ: 0821–2438931 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಥಿ ಉಪನ್ಯಾಸಕರ ಹುದ್ದೆ: ಅರ್ಜಿ ಆಹ್ವಾನ

ಉಡುಪಿ: ಉಡುಪಿಯ ಉಪ್ಪೂರು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೋಮಾ ಇನ್ ಟೂಲ್ ಆಂಡ್ ಡೈ ಮೇಕಿಂಗ್ ಹಾಗೂ ಡಿಪ್ಲೋಮಾ ಇನ್ ಮೆಕಟ್ರಾನಿಕ್ಸ್ ತರಗತಿಗಳನ್ನು ನಡೆಸಲು ಎಂ.ಟೆಕ್ / ಬಿ.ಇ (ಮೆಕ್ಯಾನಿಕಲ್ ಇಂಜಿನಿಯರಿಂಗ್, ಇಇ, ಇ?ಸಿ) ಎಂ.ಎಸ್ಸಿ(ಎಲೆಕ್ಟ್ರಾನಿಕ್ಸ್, ಫಿಸಿಕ್ಸ್) ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರ ಅವಶ್ಯಕತೆ ಇದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆ ಹಾಗೂ ಮಾಹಿತಿಗಾಗಿ ಪ್ರಾಂಶುಪಾಲರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಸರ್ಕಾರಿ ಪ್ರೌಢಶಾಲೆ ಹತ್ತಿರ, ಕೊಳಲಗಿರಿ ಉಪ್ಪೂರು ಉಡುಪಿ, ದೂರವಾಣಿ ಸಂಖ್ಯೆ: 9880510585, 8618760169, ಇ–ಮೇಲ್: gttcudupi@gmail.com ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಟೆಂಡರ್ ಆಹ್ವಾನ

ಉಡುಪಿ: ಕಾರ್ಕಳದ ನ್ಯಾಯಾಲಯಗಳ ಸಂಕೀರ್ಣದಲ್ಲಿ ಕ್ಯಾಂಟೀನ್ ಅನ್ನು ನಡೆಸಲು ಅನುಭವವುಳ್ಳ ಹೋಟೆಲ್ ಉದ್ಯಮ / ಹೋಟೆಲ್ ಮಾಲೀಕರಿಂದ ಶರ್ತಬದ್ಧ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಲ್ಲಿ ಬಾಗವಹಿಸಲಿಚ್ಛಿಸುವ ಟೆಂಡರ್‌ದಾರರು ಟೆಂಡರ್ ನೋಟಿಫಿಕೇಶನ್ ನಮೂನೆಗಳನ್ನು ಕಾರ್ಕಳದ ಹಿರಿಯ ಸಿವಿಲ್ ನ್ಯಾಯಾಲಯದ ಕಚೇರಿಯಿಂದ ಜೂ. 23 ರಿಂದ ಜುಲೈ 14 ರ ಬೆಳಗ್ಗೆ 10 ರಿಂದ ಸಂಜೆ 4 ರ ವರೆಗೆ ಪಡೆಯಬಹುದಾಗಿದೆ. ಮೊಹರು ಮಾಡಿದ ಲಕೋಟೆಯೊಂದಿಗೆ ಟೆಂಡರ್ ಸಲ್ಲಿಸಲು ಜು. 15 ಕೊನೆ ದಿನ. ಜು.16 ರಂದು ಸಂಜೆ 5 ಗಂಟೆಗೆ ಟೆಂಡರ್ ತೆರೆಯಲಾಗುವುದು. ಮಾಹಿತಿಗೆ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಯವರ ಕಚೇರಿ, ಕಾರ್ಕಳ ಅನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಜೂನ್‌ನಲ್ಲಿ ಇಲ್ಲಿಯ ತನಕ ಒಬ್ಬರಲ್ಲಿ ಇಲಿಜ್ವರ ಪತ್ತೆಯಾಗಿದೆ. ಈ ವರ್ಷ ಇಲಿಜ್ವರ ಬಾಧಿಸಿದ ಒಟ್ಟು 12 ಮಂದಿಯಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ರೀತಿಯ ಸಾಂಕ್ರಾಮಿಕ ರೋಗಗಳ ಚಿಕಿತ್ಸೆಗೆ ಅಗತ್ಯದ ಸೌಲಭ್ಯಗಳಿವೆ. ಆದ್ದರಿಂದ ಸ್ವಯಂ ಚಿಕಿತ್ಸೆಗೆ ಮುಂದಾಗದೆ ಸಮಾಯೋಚಿತವಾಗಿ ತಜ್ಞ ವೈದ್ಯರ ಚಿಕಿತ್ಸೆಯನ್ನು ಪಡೆಯಬೇಕೆಂದು ಆರೋಗ್ಯ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ತಿಳಿಸಿದ್ದಾರೆ.

ಕುಂದಾಪುರದಲ್ಲಿ ಆರೋಗ್ಯ ರಕ್ಷಾ ಸಮಿತಿ ಸಾಮಾನ್ಯ ಸಭೆ | ಇಂಜಿನಿಯರ್‌ಗೆ ಶಾಸಕ ಕೊಡ್ಗಿ ಸೂಚನೆ

30 ಕೆಎಲ್‌ಡಿ ಸಾಮರ್ಥ್ಯದ ಎಸ್ಟಿಪಿ ಅಂದಾಜು ಪಟ್ಟಿ ಸಲ್ಲಿಸಿ

ಕುಂದಾಪುರ: ಕುಂದಾಪುರದ ಉಪವಿಭಾಗೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಅತೀ ಅಗತ್ಯವಿರುವ ಶಿಥಿಲಗೊಂಡ ಹಳೇ ಕಟ್ಟಡ ತೆರವು ಮಾಡಿ, ಹೊಸ ಕಟ್ಟಡ ನಿರ್ಮಾಣ ಹಾಗೂ ಹೆಚ್ಚುವರಿ ಅಗತ್ಯದ 30 ಕೆಎಲ್‌ಡಿ ಸಾಮರ್ಥ್ಯದ ಎಸ್ಟಿಪಿ ರಚನೆ ಸಂಬಂಧ ಸಂಬಂಧಪಟ್ಟ ಇಲಾಖೆಯ ಇಂಜಿನಿಯರ್‌ಗಳು ಪರಿಶೀಲಿಸಿ, ಅಂದಾಜು ಪಟ್ಟಿಯ ಕುರಿತಂತೆ ವರದಿ ಸಲ್ಲಿಸುವಂತೆ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಸೂಚನೆ ನೀಡಿದ್ದಾರೆ.

ಅವರು ಶುಕ್ರವಾರ ಕುಂದಾಪುರದ ಉಪ ವಿಭಾ ಗೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರೋಗ್ಯ ರಕ್ಷಾ ಸಮಿತಿಯ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಅಂದಾಜು 20 ಲಕ್ಷ ರೂ. ಅಗತ್ಯವಿದೆ

ರಾಜ್ಯ ಮಾಲಿನ್ಯ ಮಂಡಳಿ ಕಾರ್ಯಸೂಚಿ ಪ್ರಕಾರ 55 ಕೆಎಲ್‌ಡಿ ಸಾಮರ್ಥ್ಯದ ಎಸ್ಟಿಪಿ ಇರಬೇಕು. ಸದ್ಯ 25 ಕೆಎಲ್‌ಡಿ ನಿರ್ವಹಣೆಯಲ್ಲಿದೆ. ಅದಕ್ಕಿಂತ ಹಿಂದಿನ 30 ಕೆಎಲ್‌ಡಿಯ ಎಸ್ಟಿಪಿ ಕಾರ್ಯ ನಿರ್ವಹಿಸುತ್ತಿಲ್ಲ, ಅದರ ದುರಸ್ತಿ, ಮೋಟಾರು,



ಪೈಪ್‌ಲೈನ್‌ಗೆ ಅಂದಾಜು 20 ಲಕ್ಷ ರೂ. ಅಗತ್ಯವಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಚಂದ್ರ ಮರಕಾಲ ಸಭೆಗೆ ತಿಳಿಸಿದರು.

ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು

ಈ ಬಗ್ಗೆ ಎಂಜಿನಿಯರ್‌ಗಳು ವರದಿ ಸಲ್ಲಿಸಲಿ. ಆ ಬಳಿಕ ಅನುದಾನಕ್ಕಾಗಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕರು ತಿಳಿಸಿದರು. ಇದೇ ವೇಳೆ ಈಗ ಸಂಗ್ರಹ ಆಗುವ ಕೊಳಚೆ ನೀರನ್ನು ಯುಜಿಡಿ ಆಗುವವರೆಗೆ ಬೇರೆ ಕಡೆಗೆ ಬಿಡಲು ಪುರಸಭೆ ಸಹಕರಿಸಬೇಕು ಎಂದು ಸೂಚಿಸಿದರು.

ತಜ್ಞ ವೈದ್ಯರ ಕೊರತೆಯಿದೆ

ತಜ್ಞ ವೈದ್ಯರ ಕೊರತೆಯಿದ್ದು, ಮಂಜೂರಾದ ಹುದ್ದೆಗಳ ಪೈಕಿ ತಲಾ ಒಬ್ಬರು ಮಕ್ಕಳ ತಜ್ಞ, ಅರವಳಿಕೆ ತಜ್ಞ, ರೇಡಿಯೋಲಾಜಿಸ್ಟ್ ಹಾಗೂ ಇಬ್ಬರು ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಅತೀ ಅಗತ್ಯವಾಗಿ ಭರ್ತಿ ಆಗಬೇಕಾಗಿದೆ. ಭದ್ರತೆಯ ದೃಷ್ಟಿಯಿಂದ ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸಲು ತಲಾ ನಾಲ್ವರು ವಾಚ್ ಮೆನ್ ಹಾಗೂ ಗ್ರೂಪ್ –ಡಿ ನೌಕರರ ನೇಮಕಾತಿ ಆಗಬೇಕು. ಸರಕಾರದ ಮಟ್ಟದಲ್ಲಿ ಪ್ರಯತ್ನಿಸುವುದಾಗಿ ಶಾಸಕರು ಭರವಸೆ ನೀಡಿದರು.

> **ಹೊಸ ಕಟ್ಟಡ ರಚನೆಗೆ ಪ್ರಸ್ತಾವನೆ**
>
> ಆಸ್ಪತ್ರೆಯ ಹಳೆ ಕಟ್ಟಡ ಶಿಥಿಲಗೊಂಡಿದ್ದು, ಅದನ್ನು ಕೆಡವಿ ಹೊಸ ಕಟ್ಟಡ ರಚನೆಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಆದರೆ ಅದಕ್ಕಿಂತ ಮೊದಲು ಸಂಬಂಧಪಟ್ಟ ಇಲಾಖೆಯವರು ಡಿಪಿಆರ್ ಸಿದ್ಧಪಡಿಸಿ, ವರದಿ ನೀಡಲಿ. ಆ ಬಳಿಕ ಅನುದಾನ ಕೇಳಲಾಗುವುದು. ಈ ಬಗ್ಗೆ ಹಿಂದೆಯೂ ಮನವಿ ಸಲ್ಲಿಸಿದ್ದೆ. ಮತ್ತೆ ಆರೋಗ್ಯ ಸಚಿವರಿಗೆ, ಸಂಬಂಧಪಟ್ಟ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು.
>
> ● ಕಿರಣ್ ಕುಮಾರ್ ಕೊಡ್ಗಿ

ಸಿಎಸ್ಆರ್ ನಿಧಿ, ದಾನಿಗಳ ನೆರವು ಪಡೆಯಿರಿ ಆಸ್ಪತ್ರೆಗೆ ಅಗತ್ಯವಿರುವ ವಿವಿಧ ಉಪಕರಣಗಳು, ಸೋಲಾರ್ ವಾಟರ್ ಹೀಟರ್ ನಂತಹ ಸೌಲಭ್ಯಗಳಿಗಾಗಿ ಸಂಸ್ಥೆಗಳ ಸಿಎಸ್ಆರ್ ನಿಧಿ ಅಥವಾ ದಾನಿಗಳನ್ನು ಸಂಪರ್ಕಿಸಿ, ನೆರವು ಪಡೆಯಿರಿ ಎಂದರು.

ಪ್ರತೀ 3 ತಿಂಗಳಿಗೊಮ್ಮೆ ಸಭೆ ಕರೆಯಿರಿ

ಇನ್ನು ಆಸ್ಪತ್ರೆ ಸಿಬಂದಿ, ವೈದ್ಯರು ಇಲ್ಲಿಗೆ ಬರುವ ರೋಗಿಗಳು, ಸಾರ್ವಜನಿಕರ ಜತೆಗೆ ಸೌಜನ್ಯದಿಂದ ವರ್ತಿಸುವಂತೆ ಸಮಿತಿ ಸದಸ್ಯೆ ದೇವಕಿ ಸಣ್ಣಯ್ಯ ಒತ್ತಾಯಿಸಿದರು. ಪ್ರತೀ 3 ತಿಂಗಳಿಗೊಮ್ಮೆ ಆರೋಗ್ಯ ರಕ್ಷಾ ಸಮಿತಿ ಸಭೆ ಕರೆಯುವಂತೆ, ಆಸ್ಪತ್ರೆ ಆವರಣದಲ್ಲಿ ಕ್ಯಾಂಟೀನ್ ಆರಂಭಿಸುವಂತೆ ಸದಸ್ಯ ಶಿವರಾಮ ಪುತ್ರನ್ ಆಗ್ರಹಿಸಿದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಮಹೇಶ್ ಕೆ.ಜಿ., ತಾಲೂಕು ವೈದ್ಯಾಧಿಕಾರಿ ಡಾ. ಪ್ರೇಮಾನಂದ್, ಪುರಸಭೆ ಮುಖ್ಯಾಧಿಕಾರಿ ಆನಂದ ಜೆ., ಸಮಿತಿ ನಾಮನಿರ್ದೇಶಿತ ಸದಸ್ಯರಾದ ಬಲಾಡಿ ಸಂತೋಷ್ ಕುಮಾರ್ ಶೆಟ್ಟಿ, ಪ್ರಭು ಕೆನಡಿ ಪಿರೇರಾ, ಶಶಿಧರ್ ಜನ್ನಾಲೆ, ವೈದ್ಯರು, ವಿವಿಧ ಇಲಾಖೆ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ಪಡುಕೇರಿ: ಶ್ರೀ ನಾಗದೇವರ ಬನ ಎದುರು ನಿರ್ಮಿಸಿದ ಮೇಲ್ಛಾವಣಿಯ ಉದ್ಘಾಟನೆ



ಕುಂದಾಪುರ: ಯುವ ಮಿತ್ರ ವೃಂದ ಶ್ರೀ ಚಿಕ್ಕಮ್ಮ ದೇವಿ ದೇವಸ್ಥಾನ ಪಡುಕೇರಿ ಕುಂದಾಪುರ ಇದರ 31ನೇ ವರ್ಷದ ಕಾರ್ಯಕ್ರಮದ ಅಂಗವಾಗಿ ಶಾಶ್ವತ ಯೋಜನೆಯಾಗಿ ದೇವಸ್ಥಾನದ ಶ್ರೀ ನಾಗದೇವರ ಬನದ ಎದುರು ನಿರ್ಮಿಸಿದ ಮೇಲ್ಛಾವಣಿಯ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಹಾಗೂ ಪುಸ್ತಕ ವಿತರಣೆ ಕಾರ್ಯಕ್ರಮ ಗುರುವಾರ ನಡೆಯಿತು.

ಶ್ರೀ ಚಿಕ್ಕಮ್ಮ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗರಾಜ್ ಕಾಮಧೇನು ಅವರು ಶ್ರೀ ನಾಗದೇವರ ಬನದ ಎದುರು ನಿರ್ಮಿಸಿದ ಮೇಲ್ಛಾವಣಿಯ ಉದ್ಘಾಟಿಸಿ, ಯುವಕ ಮಂಡಳಿ ಕಾರ್ಯ ಶ್ಲಾಘಿಸಿದರು.

ಬೆಂಗಳೂರಿನಉದ್ಯಮಿದಿನೇಶ್‌ಕುಂದಾಪುರ, ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆ ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ, ಪುರಸಭಾ ಮಾಜಿ ಸದಸ್ಯ ರಮೇಶ್ ರಾವ್ ಶುಭ ಹಾರೈಸಿದರು.

> **ಗೌರವ**
>
> **ಶೇ. 90ಕ್ಕಿಂತ ಅಧಿಕ ಅಂಕ ಪಡೆದ ಎಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಹಾಗೂ ಗಣೇಶ್ ಕೆ., ನಾಗರಾಜ್ ಕೆಳಮನೆ, ಗುರುಪ್ರಸಾದ್ ಎನ್. ಹಾಗೂ ಲಕ್ಷ್ಮೀ ದೇವಾಡಿಗ ಅವರನ್ನು ಗುರುತಿಸಿ ಗೌರವಿಸಲಾಯಿತು.**

ಶಾಲಾ ವಿದ್ಯಾರ್ಥಿ ಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು. ಮಹಿಳಾ ಮಂಡಳಿ ಅಧ್ಯಕ್ಷೆ ರಾಜೀವಿ ಪ್ರಭಾಕರ್, ಕಾರ್ಯದರ್ಶಿ ಮಹೇಶ್ ನಾಯಕ್, ಯುವ ಮಿತ್ರ ವೃಂದದ ಸದಸ್ಯರು, ಮಹಿಳಾ ಮಂಡಳಿ ಸದಸ್ಯರು , ದೇವಸ್ಥಾನ ಆಡಳಿತ ಮಂಡಳಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಯುವಕ ಮಂಡಳಿ ಗೌರವಾಧ್ಯಕ್ಷ ಅಮರ್ ಕುಮಾರ್ , ಯುವ ಮಿತ್ರವೃಂದದ ಅಧ್ಯಕ್ಷ ಶ್ರೀನಿವಾಸ್ ಬೀರಿ ಸ್ವಾಗತಿಸಿದರು. ರತ್ನಾಕರ್ ಕುಂದಾಪುರ ನಿರೂಪಿಸಿದರು.

ಬಂಟಕಲ್: ವಿದ್ಯಾರ್ಥಿಗಳಿಂದ ಮೂತ್ರನಾಳ ಸೋಂಕು ಪತ್ತೆ ಹಚ್ಚುವ ವ್ಯವಸ್ಥೆಯ ಅಭಿವೃದ್ಧಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರಾದ ಪಲ್ಲವಿ ರಾಥೋಡ್, ಪೂಜಾ, ದೀಕ್ಷಾ , ಅನುಶ್ರಿತ ಇವರು ವಿಭಾಗದ ಪ್ರಾಧ್ಯಾಪಕರಾದ ಡಾ. ಗಣೇಶ್ ಪ್ರಸಾದ್ ಇವರ ಮಾರ್ಗದರ್ಶನದಲ್ಲಿ ಕೃತಕ ಬುದ್ಧಿಮತ್ತೆ ಬಳಸಿ ಮೂತ್ರನಾಳದ ಸೋಂಕು ಪತ್ತೆ ಹಚ್ಚುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

ಸೋಂಕನ್ನು ಶಿಘ್ರ ಪತ್ತೆಯ ಸಾಮರ್ಥ್ಯ

ಈ ತಂಡವು 80,000 ಕ್ಕೂ ಹೆಚ್ಚು ರೋಗಿಗಳ ಮೂತ್ರದ ಪರೀಕ್ಷೆ ದಾಖಲೆಗಳನ್ನು ಒಳಗೊಂಡ ವಿಶಾಲ ದತ್ತಾಂಶ ಬಳಸಿಕೊಂಡು ಸುಧಾರಿತ ಯಂತ್ರಕಲಿಕೆ ವಿಧಾನ ಮೂಲಕ ಮೂತ್ರನಾಳದ ಸೋಂಕನ್ನು ಅತ್ಯಂತ ನಿಖರವಾಗಿ ಪತ್ತೆ ಹಚ್ಚುವ ಸಾಮರ್ಥ್ಯ ಹೊಂದಿದೆ.

ಈ ವ್ಯವಸ್ಥೆಯಿಂದಾಗಿ ರೋಗಿಗಳಿಗೆ ವೈಯಕ್ತಿಕ ಆರೋಗ್ಯ ಮಾರ್ಗದರ್ಶನ, ಮುನ್ನೆಚ್ಚರಿಕೆ ಸಲಹೆಗಳು ಹಾಗೂ ಆರೋಗ್ಯ ಸಂಬಂಧಿತ ಮಾಹಿತಿಯನ್ನು ಒದಗಿಸುತ್ತದೆ. ಈ ವ್ಯವಸ್ಥೆಯು ಗ್ರಾಮೀಣ ಪ್ರದೇಶದ ಜನರಿಗೆ ತ್ವರಿತ ಸುಲಭ ಹಾಗೂ ಪರಿಣಾಮಕಾರಿ (ಯುಟಿಐ) ತಪಾಸಣೆ ಸೇವೆ ಒದಗಿಸುವ ಉದ್ದೇಶ ಹೊಂದಿದ್ದು ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಮೂಲಕ ಆರಂಭಿಕ ಹಂತದಲ್ಲಿ ರೋಗ ಪತ್ತೆ , ಆರೋಗ್ಯ ಜಾಗೃತಿ ಹೆಚ್ಚಿಸುವಲ್ಲಿ ಈ ಯೋಜನೆ ಕೊಡುಗೆ ನೀಡಲಿದೆ.

> - ರೋಗಿಗಳಿಗೆ ವೈಯಕ್ತಿಕ ಆರೋಗ್ಯ ಮಾರ್ಗದರ್ಶನ, ಮುನ್ನೆಚ್ಚರಿಕೆ ಸಲಹೆಗಳು , ಆರೋಗ್ಯ ಸಂಬಂಧಿತ ಮಾಹಿತಿ ಒದಗಿಸುತ್ತದೆ.
> - ರೋಗ ಪತ್ತೆ , ಆರೋಗ್ಯ ಜಾಗೃತಿ ಹೆಚ್ಚಿಸುವಲ್ಲಿ ಸಹಕಾರಿ

ಮಹಿಳೆಯರು ಆರೋಗ್ಯ ವಿಚಾರದಲ್ಲಿ ಹೆಚ್ಚು ಜಾಗೃತಿ ವಹಿಸುವುದು ಅತ್ಯಗತ್ಯ



ಕೋಟ: ಹೆಣ್ಣಾದವಳು ಗಂಡ–ಮಕ್ಕಳ ಆರೋಗ್ಯದ ಬಗ್ಗೆ ಜಾಗೃತಿ ಮಾಡುತ್ತಾಳೆ. ಆದರೆ ಒಮ್ಮೊಮ್ಮೆ ಮನೆಯ ಹೊಣೆಗಾರಿಕೆ, ಜವಾಬ್ದಾರಿ ಜಂಜಾಟದ ನಡುವೆ ತನ್ನದೇ ಆರೋಗ್ಯ ಬಗ್ಗೆ ಎಚ್ಚರಿಕೆ ವಹಿಸಲು ಮರೆಯುತ್ತಾಳೆ. ಹೆಣ್ಣಿಗೆ ಹಲವು ವಿಭಾಗಗಳಲ್ಲಿ ಆರೋಗ್ಯದ ಸಮಸ್ಯೆ ಆಗಾಗ ಕಾಡುತ್ತಿರುತ್ತೆ. ನಿರ್ಲಕ್ಷ್ಯ ಮಾಡಿದರೆ ಜೀವಹಾನಿಯಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಆರೋಗ್ಯ ವಿಚಾರದಲ್ಲಿ ಹೆಚ್ಚು ಜಾಗೃತಿ ವಹಿಸಬೇಕು ಎಂದು ಕೋಟ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಾಧವ ಪೈ ತಿಳಿಸಿದರು.

ಅವರು ಶುಕ್ರವಾರ ಕೋಟತಟ್ಟು ಗ್ರಾ.ಪಂ.ನಲ್ಲಿ ನಡೆದ ಮಹಿಳಾ ಗ್ರಾಮಸಭೆಯಲ್ಲಿ ಮಾತನಾಡಿದರು. ಸಾಮಾನ್ಯವಾಗಿ ನಮ್ಮ ಅನಾರೋಗ್ಯಕ್ಕೆ ಜೀವನಶೈಲಿ, ಆರೋಗ್ಯ ಶೈಲಿ ಕಾರಣವಾಗಿರುತ್ತದೆ. ಜೀವನ ಶೈಲಿ ಬದಲಾಯಿಸಿಕೊಂಡರೆ ಬದುಕು ಬದಲಾಗುತ್ತದ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಲಹೆಗಾರರಾದ ಭಾನುಮತಿ ಎಂ. ನಾಯರಿ , ಮಹಿಳಾ ಪರ ಕಾನೂನು, ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದರು.

ಗ್ರಾ.ಪಂ. ಆಡಳಿತಾಧಿಕಾರಿ ಮೆಸ್ಕಾಂ ಎ.ಇ.ಇ. ಪ್ರತಾಪಚಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಲಕ್ಷ್ಮೀ, ಮುಖ್ಯ ಶಿಕ್ಷಕಿ ಜಾನಕಿ ವಿವಿಧ ವಿಚಾರಗಳ ಕುರಿತು ಮಾಹಿತಿ ನೀಡಿದರು. ಸಂಜೀವಿನಿ ಸಂಘದ ಅಧ್ಯಕ್ಷೆ ಮಾಲಿನಿ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಸುಮತಿ ಅಂಚನ್ ಇದ್ದರು. ಪಿಡಿಒ ರವೀಂದ್ರ ರಾವ್ ನಿರೂಪಿಸಿದರು.

ರಿಲಯನ್ಸ್ ಫೌಂಡೇಶನ್‌ನಿಂದ ಪಡುಬೆಳ್ಳೆ ಆಂಗ್ಲ ಮಾಧ್ಯಮ ಶಾಲೆಗೆ ಬಸ್ ಕೊಡುಗೆ



ಶಿರ್ವ: ಪಡುಬೆಳ್ಳೆ ಶ್ರೀ ನಾರಾಯಣ ಗುರು ಆಂಗ್ಲ ಮಾಧ್ಯಮ ಶಾಲೆಗೆ ರಿಲಯನ್ಸ್ ಫೌಂಡೇಶನ್ ವತಿಯಿಂದ ಶುಕ್ರವಾರ ನೂತನ ಬಸ್ ಹಸ್ತಾಂತರ ಕಾರ್ಯಕ್ರಮ ಜರುಗಿತು. ಅಧ್ಯಕ್ಷತೆಯನ್ನು ಮುಂಬೈ ಬಿಲ್ಲವರ ಅಸೋಸಿಯೇಶನ್ ಉಪಾಧ್ಯಕ್ಷ ಮೋಹನ್ ಸಿ.ಕೊಟ್ಯಾನ್ ವಹಿಸಿದ್ದರು.

ಅತಿಥಿಗಳಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮುಂಬೈ ಕಸ್ಟಮ್ ಕ್ಲಿಯರೆನ್ಸ್ ವಿಭಾಗದ ಹಿರಿಯ ವ್ಯವಸ್ಥಾಪಕರಾದ ದಯಾನಂದ ಸಿ.ಕೊಟ್ಯಾನ್ ಉದ್ಘಾಟಿಸಿದರು. ಮುಂಬೈನ್ ಚಾರ್ಟಡ್ ಆಕೌಂಟೆಂಟ್ ಜಯಂತ ಪೂಜಾರಿ ಶುಭ ಹಾರೈಸಿದರು. ಶಾಲಾ ಆಡಳಿತ ಸಮಿತಿಯ ಸದಸ್ಯರಾದ ಶಿವಾಜಿ ಎಸ್.ಸುವರ್ಣ ಬೆಳ್ಳೆ, ಕಟಪಾಡಿ ಶಂಕರ ಪೂಜಾರಿ, ಪ್ರಕಾಶ್ ಪಾಲಮೆ, ಗೀತಾ ವಾಗ್ಲೆ ಸುರೇಶ್ ಪೂಜಾರಿ ಉಪಸ್ಥಿರಿದ್ದರು. ನಿರಂಜನ್ ಕಕೇರಾ ಹೆಜಮಾಡಿ, ನವೀನ್ ಕೊಟ್ಯಾನ್ ಹೆಜಮಾಡಿ, ಶರತ್ ಕುಮಾರ್, ನಿರಂಜನ್ ಪೂಜಾರಿ, ಕೃಷ್ಣಪ್ಪ ಪೂಜಾರಿ, ವಾರೀಜಾ ಸಾಲಿಯಾನ್, ಪ್ರಸಾದ್ ಭಂಡಾರಿ ಉಪಸ್ಥಿತರಿದ್ದರು.

> **ಸತ್ಪ್ರಜೆಗಳಾಗಿ ಬಾಳಿ**
>
> ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ತಮ್ಮ ಜವಾಬ್ದಾರಿಗಳನ್ನು ಅರಿತು ಬಾಳಿ ಮುಂದೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಿ ಗುರುಹಿರಿಯರಿಗೆ ಗೌರವ ನೀಡಿ ದೇಶದ ಸತ್ಪ್ರಜೆಗಳಾಗಿ ಬಾಳಿ.
>
> ● ದಯಾನಂದ ಸಿ.ಕೊಟ್ಯಾನ್

ಆಂಗ್ಲ ಮಾಧ್ಯಮದ ಮುಖ್ಯ ಶಿಕ್ಷಕ ರಾಘವೇಂದ್ರ ಸಾಲಿಯಾನ್ ಪ್ರಸ್ತಾವನೆಗೈದರು. ಶಿಕ್ಷಕಿಯರಾದ ವೀಣಾ ನಾಯಕ್, ದೀಕ್ಷಾ ನಿರೂಪಿಸಿದರು. ಕನ್ನಡ ಮಾಧ್ಯಮ ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಉಷಾ ಎಸ್ ವಂದಿಸಿದರು. ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಗಳು, ಪೋಷಕರು ಇದ್ದರು.

ಕನ್ನಡ ಪ್ರಥಮ ಭಾಷೆಯಲ್ಲಿ ಪೂರ್ಣ ಅಂಕ ಪಡೆದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ



ಹೆಬ್ರಿ: ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ಜಿಲ್ಲೆ, ಹೆಬ್ರಿ ತಾಲೂಕು ಘಟಕ ಹಾಗೂ ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆ ಹೆಬ್ರಿ ಇವರ ಜಂಟಿ ಆಶ್ರಯದಲ್ಲಿ ಇಲ್ಲಿನ ಎಸ್. ಆರ್. ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ಎಸ್ ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ಪ್ರಥಮ ಭಾಷೆಯಲ್ಲಿ ಪೂರ್ಣ ಅಂಕ ಪಡೆದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ಜೂ.18 ರಂದು ಜರುಗಿತು.

ಕಸಾಪ ಹೆಬ್ರಿ ತಾಲೂಕು ಘಟಕದ ಅಧ್ಯಕ್ಷ ಶ್ರೀನಿವಾಸ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್. ನಾಗರಾಜ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿ , ಮಾಧ್ಯಮ ಯಾವುದೇ ಇದ್ದರೂ ವಿದ್ಯಾರ್ಥಿಗಳು ಕನ್ನಡ ಭಾಷೆ ಮೇಲಿನ ಪ್ರೀತಿ ಬೆಳೆಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಮತ್ತಷ್ಟು ಬೆಳೆಯಬೇಕು. ಕನ್ನಡವು ಹೃದಯದ ಭಾಷೆಯಾಗಿದ್ದು ಅದು ಮಾತನಾಡಲು ಸರಾಗ , ಸರಳವಾಗಿದೆ. ವಿದ್ಯಾರ್ಥಿಗಳು ಜೀವನದಲ್ಲಿ ಗುರುಹಿರಿಯರಿಗೆ ಸದಾ ಗೌರವ ಸಲ್ಲಿಸಬೇಕು ಎಂದರು.

ಕಸಾಪ ಉಡುಪಿ ಜಿಲ್ಲಾಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಆಶಯ ನುಡಿಗಳನ್ನಾಡಿದರು. ಹೆಬ್ರಿ ತಾಲೂಕು ಆರನೆಯ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಶೇಡಿಮನೆಯ ಸುಧಾಕರ್ ಶೆಟ್ಟಿ, ಕಾರ್ಯಾಧ್ಯಕ್ಷ ಶಂಕರ ಪೂಜಾರಿ ಶೇಡಿಮನೆ, ಜಿಲ್ಲಾ ಮಾಧ್ಯಮ ಪ್ರತಿನಿಧಿ ನರಸಿಂಹಮೂರ್ತಿರಾವ್ , ಉಪನ್ಯಾಸಕರಾದ ದೀಪಕ್ ಎನ್. ಉಪಸ್ಥಿತರಿದ್ದರು.

ಎಸ್ಸೆಸೆಲ್ಸಿ ಮತ್ತು ಪಿಯುಸಿಯಲ್ಲಿ ಪೂರ್ಣ ಅಂಕಪಡೆದ18ವಿದ್ಯಾರ್ಥಿಗಳನ್ನುಅಭಿನಂದಿಸಲಾಯಿತು. ಉಪನ್ಯಾಸಕ ದೀಪಕ್‌ಎನ್. ಸ್ವಾಗತಿಸಿ, ಕಸಾಪ ಹೆಬ್ರಿ ಘಟಕದ ಗೌರವ ಕಾರ್ಯದರ್ಶಿ ಮಂಜುನಾಥ ಕೆ.ಶಿವಪುರ ನಿರೂಪಿಸಿ, ಮಹೇಶ ಹೈಕಾಡಿ ವಂದಿಸಿದರು.

ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡ ಕಾಮಗಾರಿ ವೀಕ್ಷಿಸಿದ ಕೊಡ್ಗಿ



ಕುಂದಾಪುರ: ಕುಂದಾಪುರದ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡ ಕಾಮಗಾರಿಗಳನ್ನು ಕುಂದಾಪುರ ಶಾಸಕರಾದ ಎ. ಕಿರಣ್ ಕುಮಾರ್ ಕೊಡ್ಗಿ ಅವರು ವೀಕ್ಷಣೆಯನ್ನು ಮಾಡಿದರು.

ಶಿಕ್ಷಣಕ್ಕೆ ಉತ್ತೇಜನ

ಈ ಸಂದರ್ಭ ಮಾತಾನಡಿದ ಶಾಸಕರು , ಹಾಸ್ಟೆಲ್‌ಗೆ ಸ್ವಂತ ನಿವೇಶನ ಒದಗಿಸಿ, ಸುಸಜ್ಜಿತ ನಿಲಯದಲ್ಲಿ ಮೂಲ ಸೌಕರ್ಯ, ಉತ್ತಮ ವ್ಯವಸ್ಥೆ ಕಲ್ಪಿಸಿ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಉತ್ತೇಜನ ನೀಡುವುದು ನಮ್ಮ ಉದ್ದೇಶ. ಬಡ ಕುಟುಂಬದ ವಿದ್ಯಾರ್ಥಿನಿಯರು ಡಿ.ದೇವರಾಜ ಅರಸು ವಸತಿ ನಿಲಯದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಉಡುಪಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹಾಕಪ್ಪ ಲಮಾಣಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಆಶಾದೇವಿ, ಶಾಸಕರ ಆಪ್ತ ಕಾರ್ಯದರ್ಶಿ ಮಹಿಮ ಶೆಟ್ಟಿ ಕೆ., ಗುತ್ತಿಗೆದಾರ ನಾಗರಾಜ ಸೋಮಯಾಜಿ ಮೊದಲಾದವರು ಉಪಸ್ಥಿತರಿದ್ದರು.

> **ಸದುಪಯೋಗಿಸಿ**
>
> ಬಡ ಕುಟುಂಬದ ವಿದ್ಯಾರ್ಥಿನಿಯರು ಡಿ.ದೇವರಾಜ ಅರಸು ವಸತಿ ನಿಲಯದ ಸದುಪಯೋಗ ಪಡೆದುಕೊಳ್ಳಬೇಕು.
>
> ● ಕಿರಣ್ ಕುಮಾರ್ ಕೊಡ್ಗಿ, ಶಾಸಕರು

ಅದಮಾರು ಪೂರ್ಣಪ್ರಜ್ಞ ಕಾಲೇಜಿನಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮ

ಸ್ನೇಹದ ಹೆಸರಲ್ಲಿ ಪ್ರಲೋಭನೆಗೆ ಒಳಗಾಗಬೇಡಿ: ಶಕ್ತಿವೇಲು

ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆಯ ಜಾಗೃತಿ ಕಾರ್ಯಕ್ರಮವನ್ನು ಶ್ರೀ ವಾಸುದೇವ ಸಭಾಂಗಣದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಮತ್ತು ಎಸ್ಸೆಸೆಲ್ಸಿಯ ಎಲ್ಲಾ ಮಕ್ಕಳಿಗೆ ಹಮ್ಮಿಕೊಳ್ಳಲಾಯಿತು.

ಪಡುಬಿದ್ರಿ ಪೊಲೀಸ್ ಠಾಣೆ ಪೊಲೀಸ್ ಉಪನಿರೀಕ್ಷಕರಾದ ಶಕ್ತಿವೇಲು , ಇಂದು ಮಾದಕ ವಸ್ತುಗಳಿಗೆ ಬಲಿಬೀಳುವವರಲ್ಲಿ ಹೆಚ್ಚಿನವರು ಹದಿಹರೆಯದ ಮಕ್ಕಳು. ಮಾದಕವಸ್ತು ಸೇವಿಸುವುದರಿಂದ ದೇಹಕ್ಕೆ ಭಾರೀ ಅಪಾಯವಿದೆ. ಒಮ್ಮೆ ಈ ವ್ಯಸನಕ್ಕೆ ಬಲಿ ಬಿದ್ದರೆ ಇದರಿಂದ ಹೊರಗೆ ಬರಲು ಸಾಧ್ಯವಿಲ್ಲ, ಸ್ನೇಹದ ಹೆಸರಲ್ಲಿ ಪ್ರಲೋಭನೆಗೆ ಒಳಗಾಗಬೇಡಿ. ಮಾದಕವಸ್ತು ಮಾರಾಟ ಮಾಡುವವರನ್ನು ಶಿಕ್ಷಿಸಲಾಗುತ್ತದೆ. ಶಾಲಾ ಕಾಲೇಜು ಮಕ್ಕಳು ಅತ್ಯಂತ ಜಾಗೃತೆಯಿಂದ ಇದ್ದು ಬೇರೆ ಯಾರಾದರೂ ಮಾದಕ ವಸ್ತು ಸೇವಿಸುವವರನ್ನು ಕಂಡರೆ ತಕ್ಷಣ ಸಂಬಂಧಪಟ್ಟವರಿಗೆ ತಿಳಿಸಿ ಎಂದು ಪಿಪಿಟಿ ಮೂಲಕ ಮಾದಕ ವಸ್ತು ಸೇವನೆ ಎಂತಹಾ ಅಪಾಯಕಾರಿ ಎಂದು ಜಾಗೃತಿ ಮೂಡಿಸಿದರು.



ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯ್ಕ ಮಾತನಾಡಿದರು. ವಿಜ್ಞಾನ ವಿಭಾಗದ ಸಂಯೋಜಕ ರಾಧಾಕೃಷ್ಣ ಕಿಣಿ , ವಾಣಿಜ್ಯ ವಿಭಾಗದ ಸಂಯೋಜಕಿ ಜಯಶ್ರೀ ಉಪಸ್ಥಿತರಿದ್ದರು. ದೈಹಿಕ ಶಿಕ್ಷಣ ಉಪನ್ಯಾಸಕರಾದ ಸುಜಿತ್ ಶೆಟ್ಟಿ ಅತಿಥಿಗಳಿಗೆ ಸ್ಮರಣಿಕೆ ನೀಡಿದರು. ಪ್ರತೀಕ್ಷಾ ಶೆಟ್ಟಿ ಸ್ವಾಗತಿಸಿ, ಅನನ್ಯ ವಂದಿಸಿ, ಶ್ರೀಶ ಜಯ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

> **ದುಶ್ಚಟದಿಂದ ದೂರವಿರಿ**
>
> ಇಂದು ಕೆಲವು ಚಾಕಲೇಟ್ ನಲ್ಲೂ ಮಾದಕ ವಸ್ತು ಬೆರೆಸಿ ಮಕ್ಕಳಿಗೆ ಮೋಸ ದಿಂದ ಕೊಡುವ ಕೃತ್ಯ ಬೆಳಕಿಗೆ ಬಂದಿದೆ. ಅವುಗಳ ಬಗ್ಗೆ ಎಚ್ಚರದಿಂದಿರಿ. ದುಶ್ಚಟಗಳಿಂದ ದೂರ ಇರಿ.
>
> ● ಸಂಜೀವ ನಾಯ್ಕ

> - ಮಾದಕವಸ್ತು ಅಪಾಯಕಾರಿಯಾಗಿದ್ದು, ಆರೋಗ್ಯಕ್ಕೂ ಭಾರೀ ಅಪಾಯವಿದೆ.
> - ಒಮ್ಮೆ ಮಾದಕ ವ್ಯಸನಕ್ಕೆ ಬಲಿ ಬಿದ್ದರೆ ಇದರಿಂದ ಹೊರಗೆ ಬರಲು ಸಾಧ್ಯವಿಲ್ಲ, ಆದ್ದರಿಂದ ಚಟಕ್ಕೆ ಬಲಿಯಾಗಬೇಡಿ

ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ನೂತನ ಬೆಳ್ಳಿಯ ಧ್ವಜಸ್ತಂಭ ನಿರ್ಮಾಣಕ್ಕೆ ಧ್ವಜಮರದ ಮೆರವಣಿಗೆ

ಪಡುಬಿದ್ರಿ : ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ನೂತನ ಬೆಳ್ಳಿಯ ಧ್ವಜಸ್ತಂಭ ನಿರ್ಮಾಣಕ್ಕಾಗಿ ಧ್ವಜಮರವನ್ನು ವೈಭವ ಪೂರ್ಣ ಸಾಂಪ್ರದಾಯಿಕ ಮೆರವಣಿಗೆಯೊಂದಿಗೆ ಶ್ರೀ ದೇವಳಕ್ಕೆ ತರಲಾಯಿತು.

ಎರ್ಮಾಳು ತೆಂಕದಿಂದ ತಾಲೀಮು, ವಿವಿಧ ಕುಣಿತ ಭಜನಾ ತಂಡಗಳು, ವಾದ್ಯ, ಚೆಂಡೆಯ ವೈಭವದೊಂದಿಗೆ ಭಕ್ತಾದಿಗಳ ಗಡಣವು ಅದ್ದೂರಿ ಮೆರವಣಿಗೆ ಮೂಲಕ ಸಾಗಿ ಬಂದು ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನಕ್ಕೆ ಸಮರ್ಪಿಸಲಾಯಿತು.

ಈ ಸಂದರ್ಭ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಎರ್ಮಾಳು ಬೀಡು ಅಶೋಕರಾಜರು, ಅರ್ಚಕರಾದ ವೇ.ಮೂ. ಕೆ.ವಿ. ವಿಷ್ಣುಮೂರ್ತಿ ಉಪಾಧ್ಯಾಯ, ನೂತನ ಬೆಳ್ಳಿಯ ಧ್ವಜಸ್ಥಂಭ ಸಮಿತಿಯ ಅಧ್ಯಕ್ಷರಾದ ಪುಚ್ಚೊಟ್ಟು ಬೀಡು ಚಂದ್ರಹಾಸ ಶೆಟ್ಟಿ, ಪ್ರಮುಖರಾದ ಎರ್ಮಾಳು ರೋಹಿತ್ ಹೆಗ್ಡೆ, ಸುರೇಶ್ ಶೆಟ್ಟಿ, ಸೀತಾರಾಮ ಶೆಟ್ಟಿ, ಜಿನ್‌ರಾಜ್ ಎರ್ಮಾಳು, ಜಗಜೀವನ್ ಎನ್. ಚೌಟ, ಕಿಶೋರ್ ಶೆಟ್ಟಿ ಪೇಟೆಮನೆ, ಬಾಲಚಂದ್ರ ಶೆಟ್ಟಿ, ನಾರಾಯಣ ಕೆ. ಶೆಟ್ಟಿ, ಎರ್ಮಾಳು ಉದಯ ಕೆ. ಶೆಟ್ಟಿ, ವೆಂಕಟೇಶ್ ನಾವಡ, ಬರ್ಪಾಣಿ ಸಂತೋಷ್ ಶೆಟ್ಟಿ, ವಿನಯ ಕೆ. ಶೆಟ್ಟಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

